ISSN: 2249-2429 A Quarterly Education and Research Journal Annual Subscription ₹. 500/-

# ಶಿಕ್ಷಣ ಸೌಧ

ತ್ರೈಮಾಸಿಕ ಶಿಕ್ಷಣ ಮತ್ತು ಸಂಶೋಧನಾ ಪತ್ರಿಕೆ

**SHIKSHAN SOUDHA**

ವೇದೋತ್ತರ ಕಾಲದಲ್ಲಿ ಸ್ತ್ರೀ ಶಿಕ್ಷಣ

ಶಾಲಾ ಮಟ್ಟದಲ್ಲಿ ಮಾರ್ಗದರ್ಶನ ಕಾರ್ಯಕ್ರಮದ ಸಂಘಟನೆ

ಶಿಕ್ಷಣ ಮತ್ತು ಮಾನವ ಸಂಪನ್ಮೂಲ ಅಭಿವೃದ್ಧಿ

ಕರ್ನಾಟಕದಲ್ಲಿ HIV/AIDS ಸಮಸ್ಯೆಗಳು ಮತ್ತು ಭವಿಷ್ಯದಲ್ಲಿಯ ಅಗತ್ಯತೆಗಳು

ಕರ್ನಾಟಕದಲ್ಲಿ ರಾಜಕೀಯ ನಾಯಕತ್ವ

ಹಿಂದುಳಿದ ವರ್ಗದ ಮಕ್ಕಳ ಕಲಿಕಾ ಪ್ರಗತಿ : ಅಕ್ಷರ ದಾಸೋಹ

ಪ್ರಾಥಮಿಕ ಶಿಕ್ಷಣವನ್ನು ಯಶಸ್ವಿಗೊಳಿಸುವಲ್ಲಿ ರಾಜ್ಯ ಸರಕಾರವು ಕೈಗೊಂಡ ಕಾರ್ಯಕ್ರಮಗಳು

ಲಿಯೊ ಟಾಲಸ್ಟಾಯ್



Volume : 3, Issue : 1, Pages 52, 7th June, 2013

# ಶಿಕ್ಷಣ ಸೌಧ

ತ್ರೈಮಾಸಿಕ ಶಿಕ್ಷಣ ಮತ್ತು ಸಂಶೋಧನ ಪತ್ರಿಕೆ

7ನೇ ಜೂನ್ 2013 ಸಂಪುಟ : 3 ಸಂಚಿಕೆ : 1



ಪ್ರಕಾಶಕರು :

**ಜಯದೇವ ಮೈ. ಮೆಣಸಗಿ**

ಸಿಂಡಿಕೇಟ ಸದಸ್ಯರು,
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಸಂಪಾದಕರು :

**ಡಾ. ಎನ್. ಬಿ. ಕೊಂಗವಾಡ**

ಸಹಸಂಪಾದಕರು :

**ಡಾ. ಎಸ್. ಬಿ. ಯಾದವಾಡ**

ಸಂಪಾದಕ ಮಂಡಳಿ :

- **ಡಾ. ಶ್ರೀಮತಿ ಎನ್. ಲಕ್ಷ್ಮಿ**
  ಡೀನ್ ಶಿಕ್ಷಣ ನಿಖಾಯ ಕರಾಮುವಿ, ಮೈಸೂರು.
- **ಡಾ. ಎಸ್. ಎಸ್. ಪಾಟೀಲ**
  ಡೀನ್ ಶಿಕ್ಷಣ ನಿಖಾಯ ಕುವೆಂಪು ವಿ.ವಿ. ಶಿವಮೊಗ್ಗ
- **ಡಾ. ಜೆ. ಜಿ. ರೊಡ್ಡಣ್ಣವರ**
  ಕ.ವಿ.ವಿ. ಶಿಕ್ಷಣ ಮಹಾವಿದ್ಯಾಲಯ, ಧಾರವಾಡ
- **ಡಾ. ಎ. ವ್ಹಿ ಬಮಗೊಂಡ**
  ಬಿ.ಎಲ್.ಡಿ.ಇ. ಶಿಕ್ಷಣ ಮಹಾವಿದ್ಯಾಲಯ, ಬಿಜಾಪೂರ
- **ಡಾ. ಶ್ರೀಮತಿ ಶೋಭಾ ನಾಯ್ಕರ**
  ಡಯಟ್, ಧಾರವಾಡ.
- **ಡಾ. ಬಿ. ಎಸ್. ಲಕ್ಕಣ್ಣವರ**
  ಕರ್ನಾಟಕ ಮಹಿಳಾ ವಿಶ್ವವಿದ್ಯಾಲಯ, ಬಿಜಾಪೂರ



**ಶಿಕ್ಷಣ ಸೌಧ**

ತ್ರೈಮಾಸಿಕ ಶಿಕ್ಷಣ ಮತ್ತು ಸಂಶೋಧನ ಪತ್ರಿಕೆ
ವಿದ್ಯಾನಿಧಿ ಪ್ರಕಾಶನ
ಸ್ಟೇಶನ್ ರೋಡ, ಮಹೇಂದ್ರಕರ ಸರ್ಕಲ್ ಹತ್ತಿರ
ಗದಗ – 582101. ಕರ್ನಾಟಕ ರಾಜ್ಯ
ಫೋನ್ : 08372–237527
email : shikshansoudha@gmail.com



The views expressed in the articles side are the individual opinions of the authors and they in no way represent or reflect the opinion of SHIKSHAN SOUDHA nor does SHIKSHAN SOUDHA subscribe to these views in no way. All disputes are subject to the jurisdiction of Gadag court only.


**ಶಿಕ್ಷಣ ಸೌಧ**

## ಅಂತರಂಗ
## Inside

### ಸೈದ್ಧಾಂತಿಕ (Articles)


05 ವೇದೋತ್ತರ ಕಾಲದಲ್ಲಿ ಸ್ತ್ರೀ ಶಿಕ್ಷಣ – ಡಾ.ಎನ್.ಎನ್. ಗನಿಹಾರ, ಡಾ. ಲಿಂಗರಾಜ ಪೂಜಾರ

09 ಮಾರ್ಗದರ್ಶನ – ರಾಧಿಕಾ ಎಂ. ಕುಲಕರ್ಣಿ

11 ರಾಷ್ಟ್ರೀಯ ಪಠ್ಯಕ್ರಮ ನೆಲೆಗಟ್ಟು (ಚೌಕಟ್ಟು) – 2005 – ಎಸ್.ಎಸ್. ಭೂಮಣ್ಣವರ

14 ಶಾಲಾ ಮಟ್ಟದಲ್ಲಿ ಮಾರ್ಗದರ್ಶನ ಕಾರ್ಯಕ್ರಮದ ಸಂಘಟನೆ –

17 ಶಿಕ್ಷಣ ಮತ್ತು ಮಾನವ ಸಂಪನ್ಮೂಲ ಅಭಿವೃದ್ಧಿ – ಡಾ. ವರದರಾಜು ಎಸ್.

22 ಶಿರಹಟ್ಟಿ ತಾಲೂಕಿನ ಪ್ರೌಢ ಶಾಲೆಗಳಲ್ಲಿನ ಭೂಗೋಳಶಾಸ್ತ್ರ ಬೋಧನೆಗೆ ಸಂಬಂಧಿಸಿದ ಸಮಸ್ಯೆಗಳು – ಡಾ. ಎ.ವಿ. ಕರಬಸನಗೌಡ್ರ, ವೀರಣ್ಣ ಹೋ. ಗಣವಾರಿ

26 ಕರ್ನಾಟಕದಲ್ಲಿ HIV/AIDS ಸಮಸ್ಯೆಗಳು ಮತ್ತು ಭವಿಷ್ಯದಲ್ಲಿಯ ಅಗತ್ಯತೆಗಳು – ವೀಣಾ ಕೆ. ಮರಕಟ್ಟಿ, ಡಾ.ಡಿ.ಆರ್. ಅಳಬಾಳ

30 ಕರ್ನಾಟಕದಲ್ಲಿ ರಾಜಕೀಯ ನಾಯಕತ್ವ – ಶ್ರೀನಿವಾಸ ಎಚ್. ಕೊಪ್ಪಳ, ಎಂ. ಜಿ. ಖಾನ

32 ಕರ್ನಾಟಕ ಚರಿತ್ರೆಯಲ್ಲಿ ಸೂಳೆ ಸಮಾಜ – ಪ್ರೊ. ಬಿ. ಎನ್. ತಾರಾ, ಡಾ. ಆರ್. ಸುನಂದಮ್ಮ

34 ಪ್ರಾಥಮಿಕ ಶಿಕ್ಷಣವನ್ನು ಯಶಸ್ವಿಗೊಳಿಸುವಲ್ಲಿ ರಾಜ್ಯ ಸರಕಾರವು ಕೈಗೊಂಡ ಕಾರ್ಯಕ್ರಮಗಳು – ವಿನೋದ ಹೂಲಿ


### ಸಂಶೋಧನೆಗಳು (Research Articles)


36 ಪ್ರಾಥಮಿಕ ಶಾಲಾ ಶಿಕ್ಷಣದ ಗುಣಮಟ್ಟವನ್ನು ಸುಧಾರಿಸುವಲ್ಲಿ ಕ್ಷೇತ್ರ ಹಾಗೂ ಸಮೂಹ ಸಂಪನ್ಮೂಲ ವ್ಯಕ್ತಿಗಳು ನಿರ್ವಹಿಸುತ್ತಿರುವ ಕಾರ್ಯಗಳ ಬಗ್ಗೆ ಪ್ರಾಥಮಿಕ ಶಾಲಾ ಮುಖ್ಯೋಪಾಧ್ಯಾಯರು ಹೊಂದಿರುವ ಅಭಿಪ್ರಾಯ ಕುರಿತು ಅಧ್ಯಯನ – ಪ್ರಶಾಂತ ಅ. ರುದ್ರಗೌಡರ, ಹನುಮಂತಪ್ಪ. ಎ.

40 ಹಿಂದುಳಿದ ವರ್ಗದ ಮಕ್ಕಳ ಕಲಿಕಾ ಪ್ರಗತಿ : ಅಕ್ಷರ ದಾಸೋಹ – ಭಾಗ್ಯಮ್ಮ ಎನ್. ಡಾ. ಎಂ. ಪೂರ್ವಾಚಾರ್


### ಶಿಕ್ಷಣ ತಜ್ಞರು (Educationists)


49 ಲಿಯೊ ಟಾಲಸ್ಟಾಯ್ – ಡಾ. ಜೆ. ಜಿ. ರೊಡ್ಡಣ್ಣವರ

ಶಿಕ್ಷಣ ಸೌಧ 7ನೇ ಜೂನ್ 2013 ಸಂಪುಟ : 3 ಸಂಚಿಕೆ : 1

## ಸಂಪಾದಕೀಯ

# ವಿಚಾರಣೆ ಮತ್ತು ಸಮಸ್ಯಾ ಕೇಂದ್ರಿತ ಕಲಿಕೆ

**(Inquiry and Problem Based Learning)**

ಒಂದು ವರ್ಗಕೋಣೆಯಲ್ಲಿ ಕಲಿಕೆಯ ವಿದ್ಯಾರ್ಥಿಗಳಿಗೆ ಪರಿಣಾಮಕಾರಿ ಅನ್ವಯೀಕರಣ ಹೊಂದಬೇಕಾದರೆ ಬೋಧನಾ ಕೌಶಲ್ಯಗಳು, ಮಾಹಿತಿ ಪೂರ್ವ ಲಕ್ಷಣಗಳು ಅವಶ್ಯಕವಾಗಿರುತ್ತವೆ. ಕಲಿಕೆಯು ಅತ್ಯಂತ ನಿಧಾನಗತಿಯಲ್ಲಿ ಸಾಗಬೇಕಾದರೆ ಅಥವಾ ಕಲಿಕೆಯು ಅತ್ಯಂತ ವೇಗವಾಗಿ ಸಾಗಬೇಕಾದರೆ ಪ್ರಮುಖ ಕಾರಣಗಳು ಯಾವುವು ಎನ್ನುವುದನ್ನು ತನಿಖಾ ಮಟ್ಟದಲ್ಲಿ ಅನುಸರಿಸಬೇಕಾಗುತ್ತದೆ. ಕಲಿಕೆಯ ಮೇಲೆ ಅವಧಾನದ ಪ್ರಭಾವ ಮತ್ತು ಸಂಘಟನೆಯ ಅಂಶಗಳನ್ನು ಗುರುತಿಸಬೇಕಾಗುತ್ತದೆ. ಅವುಗಳನ್ನು ಗುರುತಿಸುವ ಕ್ರಮವೇ ಸಮಸ್ಯಾ ಕೇಂದ್ರಿತ ವಿಧಾನದ ಕಲಿಕೆಯಾಗಿದೆ.

ಪರಿಸರವು ನಮಗೆ ಅತ್ಯಂತ ಅಧಿಕವಾದ ಮಾಹಿತಿ ನೀಡುತ್ತದೆ. ನಾವು ಅವುಗಳನ್ನು ಗ್ರಹಿಸುವುದಿಲ್ಲ, ವಾಸ್ತವಿಕತೆಯ ಲಕ್ಷಣಗಳನ್ನು ತಿಳಿಯುವುದಿಲ್ಲ, ಅದನ್ನು ಕುರಿತು ಹಲವಾರು ದೃಷ್ಠಿಯಲ್ಲಿ ಚಿಂತನೆ ಮಾಡುವುದಿಲ್ಲ, ನಿರ್ದಿಷ್ಟ ಪ್ರಚೋದನೆಗಳಿಗೆ ನಾವು ಸಮೀಕರಿಸುವುದಿಲ್ಲ, ಅಂಥ ಸಂದರ್ಭಗಳಲ್ಲಿ ಮಾಹಿತಿಯನ್ನು ಗ್ರಹಿಸುವುದು ಕಷ್ಟವಾಗುತ್ತದೆ. ಸಂಗ್ರಹಿಸಿದ ಮಾಹಿತಿಯು ಸ್ಮೃತಿ ಪಟಲದ ಮೇಲೆ ಅಲ್ಪ ಪ್ರಮಾಣದ ಅಂಶವಾಗಿ ನಿಲ್ಲುತ್ತದೆ. ಹಾಗೂ ನೆನಪಿಟ್ಟುಕೊಳ್ಳುವಂತ ಸಾಧ್ಯತೆ ಕಡಿಮೆ, ಕಾರಣ ನಿರ್ದಿಷ್ಟ ಸನ್ನಿವೇಶಗಳನ್ನು ತಿಳಿಯದೇ ಇರುವುದು ಮತ್ತು ಪರಸ್ಪರ ಮಾಹಿತಿಯನ್ನು ಸ್ವೀಕರಿಸುವಿಕೆಯಲ್ಲಿತೊಡಕುಂಟಾಗುತ್ತದೆ.

ಇಂಥ ಸಮಸ್ಯೆಗಳನ್ನು ತನಿಖಾ ಮಟ್ಟದಲ್ಲಿ ಗುರುತಿಸಿ ಅದಕ್ಕೆ ಪರಿಹಾರ ಕಂಡುಕೊಳ್ಳಲು ವಿದ್ಯಾರ್ಥಿಗಳಿಗೆ ಸತತಪರಿಶ್ರಮ, ಕಂಠಪಾಠ ವಿಧಾನ ಅನುಸರಿಸಲು ಹೇಳಬೇಕು ತತ್‌ಕ್ಷಣದ ಉದ್ದೇಶಗಳನ್ನು ಸಫಲಗೊಳಿಸುವುದರಿಂದ ಮಾಹಿತಿಯನ್ನು ಶಾಶ್ವತವಾಗಿ ಸ್ಮೃತಿ ಪಟಲದಲ್ಲಿಟ್ಟು ಕೊಳ್ಳಬಹುದಾಗಿದೆ. ಜಟಿಲ ಮತ್ತು ಕಷ್ಟವಾದ ಅಮೂರ್ತ ಮಾಹಿತಿಯನ್ನು ಸಂಗ್ರಹಿಸಬಹುದಾಗಿದೆ. ಸಮಸ್ಯೆಗೆ ಪರಿಹಾರವನ್ನು ಕಂಡುಹಿಡಿದು ತನಿಖೆಗೆ ಎಲ್ಲಾ ಮಾಹಿತಿಯನ್ನು ಸಂಘಟಿಸಬಹುದು. ಇದರಿಂದಾಗಿ ವಿಷಯದ ಇತರ ಭಾಗಗಳನ್ನು ನೆನಪಿಸಿಕೊಳ್ಳಲು ಸಹಾಯಕಾರಿಯಾಗುತ್ತದೆ.

- ಡಾ. ಎನ್.ಬಿ. ಕೊಂಗವಾಡ
ಸಂಪಾದಕರು

ಸೈದ್ಧಾಂತಿಕ ISSN : 2249-2429

# ವೇದೋತ್ತರ ಕಾಲದಲ್ಲಿ ಸ್ತ್ರೀ-ಶಿಕ್ಷಣ

✍ **ಡಾ. ಎಸ್. ಎಸ್. ಗನಿಹಾರ,** ಡೀನರು, ಕರ್ನಾಟಕ ವಿಶ್ವವಿದ್ಯಾಲಯ, ಶಿಕ್ಷಣಶಾಸ್ತ್ರ ವಿಭಾಗ, ಧಾರವಾಡ.
✍ **ಡಾ. ಲಿಂಗರಾಜ ಗ. ಪೂಜಾರ,** ಪ್ರಾಚಾರ್ಯರು, ಶ್ರೀ ಜಗದ್ಗುರು ರೇಣುಕಾಚಾರ್ಯ ಶಿಕ್ಷಣ ಮಹಾವಿದ್ಯಾಲಯ, ನೂಲ್ವಿ, ತಾ. ಹುಬ್ಬಳ್ಳಿ, ಜಿಲ್ಲಾ. ಧಾರವಾಡ. ಫೋನ್: 9480751670

## ಸ್ತ್ರೀ-ಶಿಕ್ಷಣದ ಗುರಿಗಳು

ವೇದೋತ್ತರ ಕಾಲದ ಸ್ತ್ರೀ-ಶಿಕ್ಷಣದಲ್ಲಿ ಸಾಮಾಜಿಕ ಪರಿಸ್ಥಿತಿಯು ಪ್ರಭಾವ ಬೀರಿರುವುದು ಕಂಡು ಬರುತ್ತದೆ. ಆದರೆ ಈ ಕಾಲದಲ್ಲಿಯೂ ಸ್ತ್ರೀ-ಪುರುಷರಿಗೆ ಸಮಾನತೆ ಕಲ್ಪಿಸಿದ ಕಾರಣ ಸ್ತ್ರೀ-ಪುರುಷರ ಶಿಕ್ಷಣದ ಗುರಿಗಳಲ್ಲಿ ವ್ಯತ್ಯಾಸವಿರಲಿಲ್ಲ. ಸ್ತ್ರೀಯರಿಗೆ ಪ್ರೌಢ ಹಂತದವರೆಗಿನ ಶಿಕ್ಷಣ ಕಡ್ಡಾಯವಾಗಿತ್ತು. ಈ ಶಿಕ್ಷಣವನ್ನು ಉದಾತ್ತ ಗುರಿಗಳಡಿಯಲ್ಲಿ ನೀಡಲಾಗುತ್ತಿತ್ತು.

## ಬ್ರಹ್ಮಜ್ಞಾನ ಪ್ರಾಪ್ತಿಯೊಂದಿಗೆ ಆತ್ಮಸಾಕ್ಷಾತ್ಕಾರ

ಅಂತಿಮ ಸತ್ಯದ ಸಾಕ್ಷಾತ್ಕಾರಕ್ಕೆ ಸಂಬಂಧಪಟ್ಟ ಆತ್ಮಸಾಕ್ಷಾತ್ಕಾರ ಪ್ರಾಪ್ತ ಮಾಡಿಕೊಳ್ಳುವ ಧ್ಯೇಯದಲ್ಲಿ ಸ್ತ್ರೀಪುರುಷರೆಂಬ ಭೇದವಿರಲಿಲ್ಲ. ಸ್ತ್ರೀಯರಿಗೆ ಶಿಕ್ಷಣ ನೀಡುವಲ್ಲಿಯೂ ಭೌತಿಕ ಜ್ಞಾನದಿಂದ ಆಧ್ಯಾತ್ಮಿಕ ಜ್ಞಾನವನ್ನರಸುತ್ತ ಕಠಿಣ ತಪಸ್ಸಿನಿಂದ ಬ್ರಹ್ಮಜ್ಞಾನಗಳಿಸಿಕೊಳ್ಳುವ ಅವಕಾಶವಿತ್ತು.

ಅಂದಿನ ಕಾಲದಲ್ಲಿ ಪುರುಷನಂತೆ ಉಪನಯನ ಸಂಸ್ಕಾರಪಡೆದು ತನ್ನ 8-9 ನೇ ವಯಸ್ಸಿನಲ್ಲಿ ಶಿಕ್ಷಣ ಪ್ರಾರಂಭಿಸಿದ ಕುಮಾರಿಯು ಹದಿನಾರು ವರ್ಷದವರೆಗೆ ವೇದಾಭ್ಯಾಸ ಹಾಗೂ ಇತರ ಲೌಕಿಕ ಶಾಸ್ತ್ರಗಳ ಅಭ್ಯಾಸದ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣದ ಬಳಿಕ ಶಿಕ್ಷಣ ಮುಂದುವರೆಸಲು ಅವಕಾಶವಿತ್ತು. ಇದಕ್ಕೆ ಸಾಕ್ಷಿಯಾಗಿ ಈ ವೇದೋತ್ತರ ಕಾಲದಲ್ಲಿ ಬ್ರಹ್ಮವಾದಿನಿಯರಾದ ಸಾಕಷ್ಟು ಸ್ತ್ರೀಯರ ಉಲ್ಲೇಖಗಳು ದೊರಕುತ್ತವೆ. ಆದರೆ ಇಲ್ಲಿ ಗಮನಿಸಬೇಕಾದ ಅಂಶವೆಂದರೆ ವೇದಕಾಲದಲ್ಲಿ ಋಗ್ವೇದ, ಇತರ ವೇದಗಳ ಕಾಲ, ಉಪನಿಷತ್ಕಾಲ ಹೀಗೆ ಒಂದೊಂದು ಕಾಲದಲ್ಲಿಯೂ ಆಗಿ ಹೋದ ಬ್ರಹ್ಮವಾದಿನಿಯರ ಉಲ್ಲೇಖಗಳು ಸಿಗುವಷ್ಟರಮಟ್ಟಿಗೆ ಸೂತ್ರ-ಸ್ಮೃತಿ ಕಾಲ, ಆರ್ಷಮಹಾಕಾವ್ಯಗಳ ಕಾಲ, ಹಾಗೂ ಕಾವ್ಯಗಳ ಕಾಲಗಳಲ್ಲಿ ದೊರೆಯುವುದಿಲ್ಲ. ಅಲ್ಲದೇ ವೇದಕಾಲದ ಬ್ರಹ್ಮವಾದಿನಿಯರ ಕೊಡುಗೆಗೆ ಹೋಲಿಸಿದ್ದಲ್ಲಿ ವೇದೋತ್ತರ ಕಾಲದ ಬ್ರಹ್ಮವಾದಿನಿಯರ ಕೊಡುಗೆ ಗೌಣವಾಗುತ್ತದೆ. ವೇದಕಾಲದ ಋಗ್ವೇದ ಸೂಕ್ತ, ಋಕ್‌ಗಳನ್ನು ಕಂಡುಕೊಂಡು ಮಂತ್ರದ್ರಷ್ಟಾರರಾದ ಘೋಷಾ, ಗೋಧಾ ಇರಬಹುದು ಇಲ್ಲವೇ ವಿಶ್ವಸಾಹಿತ್ಯದಲ್ಲಿಯೇ ಅಜರಾಮರಳಾದ ಗಾರ್ಗಿ ಇರಬಹುದು, ಮೈತ್ರೇಯಿ ಇರಬಹುದು, ಇವರಂತಹ ಸಾಹಿತ್ಯಿಕ, ಸಾಂಸ್ಕೃತಿಕ ಕೊಡುಗೆ ನೀಡಿದ ಬ್ರಹ್ಮವಾದಿನಿಯರು ವೇದೋತ್ತರ ಕಾಲದಲ್ಲಿ ದೊರಕುವುದಿಲ್ಲ.

ಇದಕ್ಕೆ ಕಾರಣ ಶಿಕ್ಷಣದಲ್ಲಿ ಸ್ತ್ರೀಯರಿಗೆ ಬ್ರಹ್ಮಜ್ಞಾನ ಪ್ರಾಪ್ತಿಯ ಧ್ಯೇಯವಿದ್ದರೂ ಭೌತಿಕ ವ್ಯವಹಾರಗಳಿಗೆ, ನಿತ್ಯಜೀವನದ ಸಾಮಾಜಿಕ ಆಗುಹೋಗುಗಳಿಗೆ ಮಹತ್ವ ನೀಡಿದ ವೇದೋತ್ತರ ಕಾಲದಲ್ಲಿ ಸ್ತ್ರೀಯರ ಇತರ ಸಾಮಾಜಿಕ ಜವಾಬ್ದಾರಿಗಳಿಗೆ ಒತ್ತಡ ಬಂದುದಾಗಿರಬೇಕು.

ವೇದೋತ್ತರ ಯುಗಗಳಲ್ಲಿ ಸ್ತ್ರೀಯರ ಬ್ರಹ್ಮಜ್ಞಾನ ಪ್ರಾಪ್ತಿಗೆ ನೇರವಾಗಿ ನಿಷೇಧ ಹೇರಲಿಲ್ಲ. ಆದರೆ ವೇದಕಾಲದಲ್ಲಿ ಬ್ರಹ್ಮ ಜ್ಞಾನದಂತಹ ಅತ್ಯುಚ್ಚ ಜ್ಞಾನ ಸಂಪಾದಿಸುವಲ್ಲಿ ಸಾಮಾಜಿಕವಾಗಿ ಸಿಕ್ಕ ಪ್ರೋತ್ಸಾಹ ವೇದೋತ್ತರ ಕಾಲಗಳಲ್ಲಿ ಸಿಗಲಿಲ್ಲವೆಂಬುದನ್ನು ಇಲ್ಲಿ ಗಮನಿಸಬೇಕು. ಆದರೂ ಸ್ವಯಂ ಪ್ರೇರಣೆಯಿಂದ ಸ್ತ್ರೀಯರು ಬ್ರಹ್ಮಜ್ಞಾನ ಸಂಪಾದಿಸಲು ಸಾಮಾಜಿಕವಾಗಿ ತಡೆಯುಂಟಾಗಲಿಲ್ಲ.

ಆದ್ದರಿಂದ ವೇದೋತ್ತರ ಕಾಲಗಳಲ್ಲಿಯೂ ಬ್ರಹ್ಮಜ್ಞಾನ ಪ್ರಾಪ್ತಿಯು ಸ್ತ್ರೀ ಶಿಕ್ಷಣದ ಗುರಿಗಳಲ್ಲಿ ಒಂದು ಮಹತ್ವದ ಗುರಿಯಾಗಿತ್ತು.

## ಪುರುಷಾರ್ಥಗಳ ಸಾಧನೆ

ಪುರುಷಾರ್ಥಗಳ ಸಾಧನೆ ವೇದೋತ್ತರ ಕಾಲಗಳಲ್ಲಿ ಪುರುಷರ ಶಿಕ್ಷಣದಲ್ಲಿ ಪ್ರಧಾನವಾದಂತೆ ಸ್ತ್ರೀ- ಶಿಕ್ಷಣದಲ್ಲಿಯೂ ಪ್ರಧಾನ ಗುರಿಯಾಗಿತ್ತು. ಧರ್ಮ, ಅರ್ಥ, ಕಾಮ, ಮೋಕ್ಷಗಳನ್ನು ಧರ್ಮಬದ್ಧವಾಗಿ ಪುರುಷರಿಗೆ ಕಟ್ಟುನಿಟ್ಟುಗಳಿದ್ದಂತೆ ಸ್ತ್ರೀಯರಿಗೂ ಕಟ್ಟುನಿಟ್ಟುಗಳಿದ್ದವು.

ಧರ್ಮ ಪರಿಪಾಲನೆ, ಅರ್ಥಗಳಿಕೆ, ಧರ್ಮಬದ್ಧ ಕಾಮ ಹಾಗೂ ಮೋಕ್ಷ ಸಾಧನೆಯ ಗಳಿಕೆಗಾಗಿ ವಿದ್ಯಾರ್ಥಿಗೆ ಪ್ರವೇಶಾತಿಯಿಂದಲೇ ಹಾಕಲ್ಪಟ್ಟ ಕಟ್ಟುಪಾಡುಗಳಿಗೆ ಸ್ತ್ರೀಯೂ ಹೊರತಾಗಿರಲಿಲ್ಲ. ತಮ್ಮ ಹದಿನಾರನೇ ವರ್ಷದವರೆಗಿನ ವೇದಾಭ್ಯಾಸ ಹಾಗೂ ಇತರ ಶಾಸ್ತ್ರಗಳ ಅಭ್ಯಾಸ ಪುರುಷರಂತೆ ಕಡ್ಡಾಯವಾಗಿದ್ದ ವೇದೋತ್ತರ ಕಾಲದಲ್ಲಿ ಸ್ತ್ರೀಯೂ ಬ್ರಹ್ಮಚರ್ಯಪಾಲನೆಯಂತಹ ಕಟ್ಟುಪಾಡಿಗೆ ಒಳಗಾಗಿದ್ದಳು. ಈ ಬ್ರಹ್ಮಚರ್ಯ ಪಾಲನೆಯಲ್ಲಿ ಚತುರ್ವಿಧ ಪುರುಷಾರ್ಥಗಳಿಗೆ ಸಂಬಂಧಪಟ್ಟಂತೆ ಇವುಗಳ ಸಾಧನೆಯ ದೃಷ್ಟಿಕೋನವಿಟ್ಟುಕೊಂಡು ನಿರ್ಬಂಧಗಳು ಹೇರಲ್ಪಟ್ಟಿದ್ದವು. ಈ ನಿರ್ಬಂಧಗಳಿಗೆ ಚ್ಯುತಿ ಬರದಂತೆ ನಡೆದುಕೊಳ್ಳುವುದು ಸ್ತ್ರೀಯರ ವಿದ್ಯಾರ್ಥಿ ಧರ್ಮವಾಗಿತ್ತು. ಇದರಿಂದ ಪುರುಷರಂತೆ ಸ್ತ್ರೀಯೂ ಕೂಡಾ ಸಾಮಾಜಿಕವಾಗಿ, ಧಾರ್ಮಿಕವಾಗಿ, ನೈತಿಕವಾಗಿ, ರಾಜಕೀಯವಾಗಿ ಹಾಗೂ ಸಾಂಸ್ಕೃತಿಕವಾಗಿ ಹೀಗೆ ಪ್ರತಿಯೊಂದು ಕ್ಷೇತ್ರದಲ್ಲಿಯೂ ಪುರುಷರಿಗೆ ಸರಿಸಮಾನವಾಗಿ ಸಾಧನೆ ಕೈಗೊಳ್ಳಲು ಸಹಾಯಕವಾಗುತ್ತಿತ್ತು.

ಧರ್ಮ, ಅರ್ಥದಂತೆ ಕಾಮ ಪರಿಪಾಲನೆಯ ಕುರಿತೂ ಸಹ ವಿಧಿ ನಿಯಮಗಳಿದ್ದವು. ಸೂತ್ರಸ್ಮೃತಿಗಳು ವಿವಾಹಪೂರ್ವ ಕಾಮವನ್ನು ನಿಷೇಧಿಸಿದ್ದವು. ವಿವಾಹೋತ್ತರ ಕಾಮವೂ ಕೂಡಾ ಧರ್ಮಯುತವಾಗಿ ನಡೆಯುವಲ್ಲಿ ಸೂತ್ರ ಸ್ಮೃತಿಗಳು ನಿಯಮಗಳನ್ನು ವಿಧಿಸಿದ್ದವು. ಪುರುಷ ಹಾಗೂ ಸ್ತ್ರೀಯರು ಇವುಗಳನ್ನು ಪಾಲಿಸಬೇಕಾದುದು ಕಡ್ಡಾಯವಾಗಿತ್ತು. ಸೂತ್ರ ಸ್ಮೃತಿಗಳ ಕಡ್ಡಾಯ ವಿಧಿಗಳು ಕಾವ್ಯಯುಗದಲ್ಲಿಯೂ ಮುಂದುವರೆಯಿತು. 'ಕಾಮ'ದ ಇನ್ನೊಂದು ಅರ್ಥವಾದ 'ಇಂದ್ರಿಯನಿಗ್ರಹ'ಕ್ಕೂ ಬ್ರಹ್ಮಚರ್ಯ ಪಾಲನೆಯೊಂದಿಗೆ ವಿದ್ಯಾರ್ಥಿಜೀವನದಿಂದಲೇ ಕಟ್ಟುನಿಟ್ಟಾದ ನಿರ್ಬಂಧಗಳಿದ್ದವು. ಹೀಗೆ

ISSN : 2249-2429


ಚತುರ್ವಿಧ ಪುರುಷಾರ್ಥ ಸಾಧನೆಯಲ್ಲಿ ಸ್ತ್ರೀ–ಪುರುಷರ ಶಿಕ್ಷಣದಲ್ಲಿ ಬೇಧವಿರಲಿಲ್ಲ.

## ಧರ್ಮಾಚರಣೆಯೊಂದಿಗೆ ಭೌತಿಕ ಬೆಳವಣಿಗೆ

ಜನರ ನಿತ್ಯ ಜೀವನಕ್ಕೆ ಸಂಬಂಧಪಟ್ಟ ಭೌತಿಕ ಆಗುಹೋಗುಗಳ ಅಭಿವೃದ್ಧಿಯ ಮೂಲಕ ಆದರ್ಶ ಸಮಾಜದ ನಿರ್ಮಾಣಕ್ಕೆ ಹೆಜ್ಜೆ ಇಟ್ಟ ವೇದೋತ್ತರ ಕಾಲ. ಇದಕ್ಕಾಗಿ ಸ್ತ್ರೀಯರ ಕೊಡುಗೆಯನ್ನು ಚೆನ್ನಾಗಿ ಮನಗಂಡಿತ್ತು. ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ ಹಾಗೂ ಒಟ್ಟಾರೆಯಾಗಿ ಉದಾತ್ತ ರಾಷ್ಟ್ರನಿರ್ಮಾಣದಲ್ಲಿ ಸ್ತ್ರೀಯರು ಕೊಡುಗೆ ಸಲ್ಲಿಸಬೇಕಾದ್ದಲ್ಲಿ ಸ್ತ್ರೀಯರಿಗೂ ಭೌತಿಕ ಬೆಳವಣಿಗೆಯಲ್ಲಿ ಪಾತ್ರಧಾರಿಗಳನ್ನಾಗಿ ಮಾಡಿಕೊಳ್ಳಬೇಕಾಗಿತ್ತು. ಇದಕ್ಕೆ 'ಶಿಕ್ಷಣ'ವೇ ಪರಿಣಾಮಕಾರಿಯಾದ ಅಸ್ತ್ರವಾಗಿತ್ತು.

ಆದ್ದರಿಂದ ಪುರುಷರಿಗೆ ವರ್ಣಧರ್ಮಗಳಿಗನುಗುಣವಾಗಿ ವೇದಾಭ್ಯಾಸವನ್ನು ಪ್ರಾರಂಭಿಕವಾಗಿ ಕೊಟ್ಟು ಬಳಿಕ ಇತರ ನಿರ್ದಿಷ್ಟ ಶಾಸ್ತ್ರಗಳಿಗೆ ಹಾಗೂ ವೇದಾಂಗಗಳ ಅಭ್ಯಾಸಕ್ಕೆ ಅನುವು ಮಾಡಿಕೊಟ್ಟಂತೆ ಸ್ತ್ರೀಯರಿಗೂ ಮೂರು ವರ್ಣದವರಿಗೆ ಅಂದರೆ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ವಿದ್ಯಾರ್ಥಿನಿಯರಿಗೆ ಪ್ರತ್ಯೇಕವಾಗಿ ವಿಷಯಾಭ್ಯಾಸಗಳ ಆಯ್ಕೆಗೆ ಅವಕಾಶ ಕಲ್ಪಿಸಲಾಗಿತ್ತು. ಆದರೆ ಸ್ತ್ರೀಯರಿಗೂ ಪ್ರಾರಂಭಿಕವಾಗಿ ವೇದಾಭ್ಯಾಸ ಕಡ್ಡಾಯವಾಗಿತ್ತು.

ಸಮಾಜದ ಬೆಳವಣಿಗೆಯಲ್ಲಿ ಸಮಾಜದ ಎಲ್ಲಾ ಕ್ಷೇತ್ರಗಳು ಬೆಳವಣಿಗೆಯಾದಲ್ಲಿ ಮಾತ್ರ ಸೂಕ್ತ ಪ್ರಗತಿ ಸಾಧ್ಯ. ಆದ್ದರಿಂದ ಎಲ್ಲಾ ಕ್ಷೇತ್ರಗಳಿಗೂ ತಜ್ಞರ, ಪಂಡಿತರಾದವರ ಅವಶ್ಯಕತೆ ಇರುತ್ತದೆ. ಆದ ಕಾರಣ ಆಗ ವರ್ಣಾಶ್ರಮಧರ್ಮವೂ ಅವರವರ ಕರ್ತವ್ಯಗಳಿಗೆ ಅನುಸಾರವಾಗಿ ಮಾಡಲ್ಪಟ್ಟಿತ್ತು ಎಂಬುದು ಗಮನಿಸಬೇಕಾದ ಅಂಶ, ಆಯಾ ವರ್ಗದವರು ಸಮಾಜದಲ್ಲಿ ತಮಗೆ ಸಂಬಂಧಪಟ್ಟ ಕ್ಷೇತ್ರಕ್ಕೆ ಕಾಣಿಕೆ ಸಲ್ಲಿಸಬೇಕೆಂಬ ದೃಷ್ಟಿಯಿಂದಲೇ ಶಿಕ್ಷಣದಲ್ಲಿ ವರ್ಣಾಶ್ರಮ ಧರ್ಮಪಾಲನೆಗೆ ಮಹತ್ವ ಕೊಡಲಾಗಿತ್ತು. ಇದಕ್ಕೆ ಸ್ತ್ರೀ ಶಿಕ್ಷಣವೂ ಹೊರತಾಗಿರಲಿಲ್ಲ.

## ವ್ಯಕ್ತಿತ್ವ ವಿಕಸನ

ಪುರುಷರಿಗೆ ನೀಡುವ ಶಿಕ್ಷಣದಲ್ಲಿ ಪುರುಷರನ್ನು ಭೌತಿಕವಾಗಿ, ಮಾನಸಿಕವಾಗಿ, ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ ಪರಿಪೂರ್ಣರನ್ನಾಗಿ ಮಾಡುವ ಧ್ಯೇಯವನ್ನು ಹೇಗೆ ಶಿಕ್ಷಣವು ಅಳವಡಿಸಿಕೊಂಡಿತ್ತೋ ಹಾಗೆಯೇ ಸ್ತ್ರೀ ಶಿಕ್ಷಣದಲ್ಲಿಯೂ ಸ್ತ್ರೀಯರನ್ನು ಪರಿಪೂರ್ಣೆಯನ್ನಾಗಿ ಮಾಡಿ ಸಾಮಾಜಿಕ, ಸಾಂಸ್ಕೃತಿಕ ಮುನ್ನಡೆಯಲ್ಲಿ ಅವಳನ್ನು ಭಾಗೀದಾರಳನ್ನಾಗಿ ಮಾಡುವ ಧ್ಯೇಯ ಶಿಕ್ಷಣದ್ದಾಗಿತ್ತು.

ಸ್ತ್ರೀ ಕೂಡ ಪುರುಷರಂತೆ ಇಂದ್ರೀಯ ನಿಗ್ರಹ, ಭಾವಶುದ್ಧಿ ಇತ್ಯಾದಿಗಳ ಮೂಲಕ ಕಲುಷಿತ ಮನಸ್ಸಿನಿಂದ ಶುದ್ಧೀಕರಿಸಲ್ಪಟ್ಟು ತನ್ನ ಜೀವನದಲ್ಲಿ ಆತ್ಮ ಗೌರವ, ಧರ್ಮನಿಷ್ಠೆ, ವ್ಯವಹಾರಿಕ ಜ್ಞಾನ, ಸದ್ಭಾವನೆ, ಸದ್ವಿಚಾರಗಳೊಂದಿಗೆ ಸಾಮಾಜಿಕ ಗೌರವಾದರಗಳನ್ನು ಸರಿಪಡಿಸಿಕೊಂಡು ಬಾಳಲು ಅನುಕೂಲವಾಗುವಂತಹ ಶಿಕ್ಷಣ ಕೊಡಲು ಅಂದಿನ ಸ್ತ್ರೀ ಶಿಕ್ಷಣ ಕಟಿಬದ್ಧವಾಗಿತ್ತು.

ಸೂತ್ರ–ಸ್ಮೃತಿಗಳು ಶಿಕ್ಷಣದಲ್ಲಿ ಪುರುಷರಂತೆ ಸ್ತ್ರೀಯರಿಗೂ ವಿಧಿಸಿದ್ದ ನಿಯಮಗಳನ್ನು ಪರಿಪಾಲಿಸುವುದು ಸ್ತ್ರೀಯರಿಗೂ ಕಡ್ಡಾಯವಾಗಿತ್ತು. ಶಿಕ್ಷಣ ಎಂದಿಗೂ ಇಂತಹ ವಿಷಯಗಳೊಂದಿಗೆ ಒಪ್ಪಂದ ಮಾಡಿಕೊಂಡು ಸ್ತ್ರೀಯರ ವಿಷಯದಲ್ಲಿ ಕನಿಕರ ತೋರಿಸಲಿಲ್ಲ. ಸ್ತ್ರೀಯರೂ ಉನ್ನತ ಜ್ಞಾನ ಸಂಪಾದಿಸಬೇಕು. ಪುರುಷರಂತೆ ಸಮಾಜದಲ್ಲಿ ಬೆಳಗಬೇಕು, ಸರ್ವಾಂಗೀಣ ಪ್ರಗತಿಯಿಂದ ಸಮಾಜದ ಪ್ರಗತಿಯಲ್ಲಿ ಪಾತ್ರ ಧಾರಳಾಗಬೇಕೆಂಬುದೇ ಇದಕ್ಕೆ ಕಾರಣವಾಗಿತ್ತು.

## ಗೃಹಿಣಿ ಧರ್ಮಪಾಲನೆ ಹಾಗೂ ಸಾಧನೆಗಾಗಿ ಶಿಕ್ಷಣ

ಸಾಮಾಜಿಕ ಬದಲಾವಣೆಗಳಿಗುಣವಾಗಿ ಆ ಕಾಲದಲ್ಲಿ ಪುರುಷರ ಗೃಹಸ್ಥಜೀವನಕ್ಕೆ ಮಹತ್ವಕೊಟ್ಟಂತೆ ಸ್ತ್ರೀಯರ ಗೃಹಿಣಿಧರ್ಮಕ್ಕೆ ಮಹತ್ವಕೊಡಲಾಯಿತು. **'ಗೃಹಿಣಿ ಗೃಹಂ ಉಚ್ಯತೇ'** (ಮಹಾ ಭಾರತ ಶಾಂತಿ 144.6) ಗೃಹಿಣಿಯೇ ಮನೆಯಿಂದ ಆ ಕಾಲದಲ್ಲಿ ಗೃಹಿಣಿ ಧರ್ಮ ಶ್ರೇಷ್ಠಧರ್ಮವೆನಿಸಿತು.

ಅಲ್ಲದೇ ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ ಉದ್ಭವವಾದಕ ಕೆಲವು ಸಮಸ್ಯೆಗಳಿಂದ ಸ್ತ್ರೀಯರಿಗೆ ಆಜನ್ಮಪರ್ಯಂತ ತಪಶ್ಚರ್ಯ ವನ್ನಾಚರಿಸುತ್ತ ಗಳಿಸುವ ಬ್ರಹ್ಮವಾದಿನಿಯರಾಗುವ ಶಿಕ್ಷಣಕ್ಕಿಂತ ಗೃಹಿಣೀಯಶ ಮನೆಯೆಂದು ಹೇಳಲ್ಪಡುತ್ತಾಳೆ. ಅಂದರೆ ಗೃಹಿಣಿ ಇಲ್ಲದ ಮನೆಗೆ ಅಸ್ತಿತ್ವವೇ ಇಲ್ಲ ಎಂಬ ಭಾವನೆಯಿಂದ ಆ ಕಾಲದಲ್ಲಿ ಗೃಹಿಣಿ ಧರ್ಮ ಶ್ರೇಷ್ಠಧರ್ಮವೆನಿಸಿತು.

ಅಲ್ಲದೇ ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ ಉದ್ಭವವಾದ ಕೆಲವು ಸಮಸ್ಯೆಗಳಿಂದ ಸ್ತ್ರೀಯರಿಗೆ ಆಜನ್ಮಪರ್ಯಂತ ತಪಶ್ಚರ್ಯವನ್ನಾಚರಿಸುತ್ತ ಗಳಿಸುವ ಬ್ರಹ್ಮವಾದಿನಿಯರಾಗುವ ಶಿಕ್ಷಣಕ್ಕಿಂತ ಗೃಹಿಣೀ ಧರ್ಮಪಾಲನೆಯೇ ಶಿಕ್ಷಣಕ್ಕೆ ಹೆಚ್ಚಿನ ಮಹತ್ವನೀಡುವ ಪರಿಸ್ಥಿತಿ ಬಂದಿತು. ಆಗ ಭಾರತಕ್ಕೆ ವಲಸೆ ಬಂದ 'ದಸ್ಯು'ಗಳು ಆರ್ಯರಲ್ಲಿ ಒಂದಾಗ ತೊಡಗಿದ್ದರು. (ಅನಂತ ರಂಗಾಚಾರ್, 2001, ಪು.29) ಆರ್ಯ ಸ್ತ್ರೀಯರು ದಸ್ಯುಗಳ ಕಾಟಕ್ಕೆ ಒಳಗಾಗುವ ಭಯ ಉಂಟಾಯಿತು. ಅಲ್ಲದೇ ದಸ್ಯುಗಳ ಪುರುಷ–ಸ್ತ್ರೀಯರೊಂದಿಗೆ ಆರ್ಯ ಸ್ತ್ರೀ–ಪುರುಷರ ಸಂಬಂಧವೇರ್ಪಡುವ ಭೀತಿಯೂ ಇತ್ತು. ಆ ಕಾಲದಲ್ಲಿ ವಿವಾಹ ಸಂಸ್ಕಾರದ ವಿಷಯದಲ್ಲಿಯೂ ವರ್ಣಾಶ್ರಮ ಧರ್ಮಪಾಲನೆ ವಿಧಿಸಲ್ಪಟ್ಟಿತ್ತು. ದಸ್ಯು ಹಾಗೂ ಆರ್ಯರ ಸಂಬಂಧದಿಂದ 'ವರ್ಣ ಸಂಕರ'ಕ್ಕೆ ಅವಕಾಶವಾಗಬಹುದೆಂಬ ಕಾರಣದಿಂದ ಸ್ತ್ರೀಯರಿಗೆ ಸಾಮಾಜಿಕ ಕಟ್ಟುಪಾಡುಗಳನ್ನು ವಿಧಿಸುವ ಅವಶ್ಯಕತೆ ಒದಗಿ ಬಂದಿರಬೇಕು. ಈ ದಸ್ಯುಗಳ ಆಗಮನ ವೇದಕಾಲದಲ್ಲಿಯೇ ಆಗಿರಬೇಕು. ಇವರ ಕುರಿತು ಋಗ್ವೇದದಲ್ಲಿಯೇ ಉಲ್ಲೇಖವಿದೆ. ವೇದೋತ್ತರ ಕಾಲದಲ್ಲಿ ಇವರ ಕಾಟ ಹೆಚ್ಚಾಗಿರಬೇಕು. ಆದ್ದರಿಂದ ಮನು ಆ ಕಾಲದಲ್ಲಿ ಸಾಮಾಜಿಕ ಪರಿಸ್ಥಿತಿಯನ್ನು ಕಾಯ್ದುಕೊಳ್ಳಲು, ಸಾಮಾಜಿಕವಾಗಿ ಸ್ತ್ರೀಯರಿಗೆ ರಕ್ಷಣೆಕೊಡಲು ನಿರ್ಬಂಧಗಳನ್ನು ಹೇರಿದ್ದಿರಬೇಕು. ಗೃಹಿಣೀ ಧರ್ಮಪಾಲನೆಗೆ ಮನು ಅತ್ಯಂತ ಗೌರವಯುತ ಸ್ಥಾನಮಾನ ಕೊಟ್ಟಿರುವುದನ್ನೂ ಇಲ್ಲಿ ನೆನೆಯಬಹುದು.

ಮನುವಿನ ನಂತರದ ಮಹರ್ಷಿ ಯಾಜ್ಞವಲ್ಕ್ಯರು ಸ್ತ್ರೀಯರಿಗೆ ಸಾಮಾಜಿಕ ಕಟ್ಟುಪಾಡುಗಳನ್ನು ಸಡಿಲಿಸಿರುವುದನ್ನೂ, ಅನಂತರದ ಸ್ಮೃತಿಕಾರ ನಾರದ ಇನ್ನೂ ಸಡಿಲಿಸಿರುವುದನ್ನು ಕಾಣಬಹುದು. ಅಂದರೆ ಆಯಾಕಾಲದ ಸಾಮಾಜಿಕ ಪರಿಸ್ಥಿತಿಗೆ ಹೊಂದಿಕೊಂಡು ಸ್ತ್ರೀಯರಿಗೆ ಇಂತಹ ಕಟ್ಟುನಿಟ್ಟುಗಳು ವಿಧಿಸಲ್ಪಟ್ಟಿರಬೇಕು.

ಆದರೆ ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಆಗಿನ ಕಾಲದಲ್ಲಿ ಬ್ರಹ್ಮವಾದಿನಿಯರಿಗಿಂತ ಹೆಚ್ಚಾಗಿ ಆದರ್ಶ ಗೃಹಿಣಿಯರೇ ಸಮಾಜದ ಗೌರವಕ್ಕೆ ಪಾತ್ರರಾಗಿ ಅಜರಾಮರರಾಗಿರುವುದು.

 ISSN : 2249-2429

ಇಲ್ಲಿ ಈ ಗೃಹಿಣಿ ಧರ್ಮಪಾಲನೆ ಹಾಗೂ ಸಾಧನೆಗಾಗಿಯೂ ಸ್ತ್ರೀಯರಿಗೆ ಶಿಕ್ಷಣ ಕೊಡಲ್ಪಡುತ್ತಿತ್ತು ಎಂಬುದು ಉಲ್ಲೇಖನಾರ್ಹ. ಗೃಹಿಣಿ ಧರ್ಮಪಾಲನೆ ಅತ್ಯಂತ ಕ್ಲಿಷ್ಟಕರ ಇದಕ್ಕೆ ಶಿಕ್ಷಣ ಅಗತ್ಯ ಎಂಬುದಾಗಿ ಅಂದು ಇದ್ದ ಭಾವನೆಯೇ ಶಿಕ್ಷಣದಲ್ಲಿ ಈ ಧ್ಯೇಯವಿರಲು ಕಾರಣವಾಗಿತ್ತು.

## ಸಂಸ್ಕೃತಿ ಸಂರಕ್ಷಣೆ ಹಾಗೂ ಸಂವರ್ಧನೆ

ಈಗಾಗಲೇ ವಿವರಿಸಿದಂತೆ ರಾಷ್ಟ್ರದ ಸಂಸ್ಕೃತಿಯ ಸಂರಕ್ಷಣೆ ಮತ್ತು ಸಂವರ್ಧನೆಯಲ್ಲಿ ಸ್ತ್ರೀಯರ ಕೊಡುಗೆಯನ್ನು ಅಂದಿನ ಶಿಕ್ಷಣ ಸರಿಯಾಗಿ ನಮಗಂಡಿತ್ತು. ಆದ್ದರಿಂದ ಇದಕ್ಕೆ ತಕ್ಕಂತೆ ಸ್ತ್ರೀ–ಪುರುಷರಿಗೆ ಸರಿಸಮವಾಗಿ ಶಿಕ್ಷಣ ಕೊಡಲ್ಪಡುತ್ತಿತ್ತು.

ಕೌಟುಂಬಿಕವಾಗಿ ಸ್ತ್ರೀಯರಿಗೆ ಉನ್ನತ ಮಟ್ಟದ ಸ್ಥಾನಮಾನ ಗಳಿದ್ದವು. ವೇದ ಕಾಲದಂತೆ ಧಾರ್ಮಿಕ ಆಚರಣೆಗಳಲ್ಲಿ ಪುರುಷರೊಂದಿಗೆ ಸ್ತ್ರೀಯರಿಗೆ ಸರಿಸಮಾನವಾದ ಮಾನ್ಯತೆ ಕೊಡಲಾಗಿತ್ತು. ಧಾರ್ಮಿಕ ನಡತೆ, ಸಾಮಾಜಿಕ ಮೌಲ್ಯಗಳ ಬೆಳವಣಿಗೆ, ರಾಜಕೀಯ ಅಭಿವೃದ್ಧಿ, ಆರ್ಥಿಕ ಬೆಳವಣಿಗೆ, ಸಾಂಸ್ಕೃತಿಕ ಸಂಪದೀಕರಣ ಇವುಗಳಲ್ಲಿ ಅಂದಿನ ಸ್ತ್ರೀಯರ ಕೊಡುಗೆ ಅದ್ಭುತ.

ಸುಶಿಕ್ಷಿತ ಉನ್ನತ ಮಟ್ಟದ ಗೃಹಿಣಿಯರಾಗಿ ಸ್ತ್ರೀಯರು ಅಂದಿನ ಕಾಲದಲ್ಲಿ ಹಿಂದಿನ ಪರಂಪರೆ, ಸಂಪ್ರದಾಯ, ಆಚಾರ–ವಿಚಾರಗಳು, ಮೌಲ್ಯಗಳು ಈ ಮುಂತಾದವುಗಳನ್ನು ಸಂರಕ್ಷಿಸಿಕೊಂಡು ಬಂದು ಸ್ತ್ರೀಧರ್ಮ, ಮಾತೃಧರ್ಮ, ಗೃಹಿಣಿ ಧರ್ಮಗಳನ್ನು ಸರಿಸಮಾನವಾಗಿ ಪಾಲಿಸಿಕೊಂಡು ಹಿಂದಿನ ಪರಂಪರೆಗಳನ್ನು ಸಮಾಜದ ಹೊಸ ಬೇಡಿಕೆಗಳಿಗನುಗುಣವಾಗಿ ಮುಂದಿನ ಪೀಳಿಗೆಗೆ ವರ್ಗಾಯಿಸಿ ಆ ಕಾಲದ ಸಂಸ್ಕೃತಿಯನ್ನು ಬೆಳಗಿಸುವುದರಲ್ಲಿ ಆಗಿನ ಸ್ತ್ರೀಯರ ತ್ಯಾಗ ಅವರ್ಣನೀಯ.

ಇದಕ್ಕೆ ಸ್ತ್ರೀಯರಿಗೆ ಅಂದಿನ ಶಿಕ್ಷಣದಲ್ಲಿ ಸಮಾಜದ ತನ್ಮೂಲಕ ರಾಷ್ಟ್ರದ ಸಂಸ್ಕೃತಿಯ ಸಂರಕ್ಷಣೆ ಮತ್ತು ಸಂವರ್ಧನೆಯ ಕುರಿತು ಶಿಕ್ಷಣ ದೊರೆಯುತ್ತಿದ್ದುದೇ ಕಾರಣವಾಗಿದೆ.

## ವೇದೋತ್ತರ ಕಾಲದ ಸುಶಿಕ್ಷಿತ ಸ್ತ್ರೀಯರು ಹಾಗೂ ಅವರ ಕೊಡುಗೆಗಳು

ವೇದ ಕಾಲದಂತೆ ವೇದೋತ್ತರ ಕಾಲಗಳಲ್ಲಿಯೂ ಸ್ತ್ರೀಯು ಆಗಿನ ಸಾಮಾಜಿಕ, ಆರ್ಥಿಕ, ರಾಜಕೀಯ ಹಾಗೂ ಸಾಂಸ್ಕೃತಿಕ ಪರಿಸ್ಥಿತಿಗಳಿಗನುಗುಣವಾಗಿ ಶ್ರೇಷ್ಠಮಟ್ಟದ ಕೊಡುಗೆ ನೀಡಿ ಸಮಾಜದ ಗೌರವಾದರಗಳಿಗೆ ಪಾತ್ರಳಾಗಿದ್ದಳು. ರಾಷ್ಟ್ರನಿರ್ಮಾಣ ಕಾರ್ಯದಲ್ಲಿ ತನ್ನ ಕೊಡುಗೆಯಿಂದ ಗುರುತಿಸಿಕೊಂಡಿದ್ದಳು.

ವೇದಕಾಲದಂತೆ ವೇದೋತ್ತರ ಕಾಲಗಳಲ್ಲಿಯೂ ಅಂದಿನ ಉತ್ಕೃಷ್ಟವಾದ, ಉದಾತ್ತವಾದ, ಸಾಮಾಜಿಕ, ಸಾಂಸ್ಕೃತಿಕ ಮೌಲ್ಯಗಳ ಮುನ್ನಡೆಯಲ್ಲಿ ಸ್ತ್ರೀಯ ಕೊಡುಗೆ ಅಪಾರ ಹಾಗೂ ಅದ್ಭುತ.

ಇದಕ್ಕೆ ಅಂದಿನ ಕಾಲದಲ್ಲಿ ಸ್ತ್ರೀ–ಪುರುಷರಲ್ಲಿ ಬೇಧವೆಣಿಸದೇ ಸಮಾನತೆ ಕಲ್ಪಿಸಿರುವುದೇ ಕಾರಣವಾಗಿದೆ.

ಸ್ತ್ರೀ–ಪುರುಷರಿಬ್ಬರೂ ಸಂಸಾರದ ಸಮಸ್ತ ಕಾರ್ಯಕಲಾಪಗಳಲ್ಲಿ ಸಮಾನ ಭಾಗೀದಾರರಾಗಿದ್ದರು. ಸಂಸಾರಸ್ಥ ಸ್ತ್ರೀ, ಪುರುಷನ ಅರ್ಧಾಂಗಿಯಾಗಿದ್ದಳು. ಪುರುಷನ ಪೂರ್ಣತೆಯಲ್ಲಿ ಅರ್ಧಾಂಗಿಯ ಪಾತ್ರ ಶ್ರೇಷ್ಠಮಟ್ಟದ್ದಾಗಿತ್ತು. ಧರ್ಮಸೂತ್ರದಲ್ಲಿ ಪ್ರತಿಪಾದಿಸಿದಂತೆ –

**ಜಾಯಾ ಪತ್ಯೋರ್ನ ವಿಭಾಗೋ ದೃಶ್ಯತೇ ಪಾಣಿಗ್ರಹಣಾದ್ಧಿಸಹತ್ವಂ ।**
**ಕರ್ಮಸು ತಥಾ ಪುಣ್ಯಫಲೇಷು ದ್ರವ್ಯ ಪರಿಗ್ರಹೇಶು ಚ ॥**

**(ಆಪ, ಧ.ಸೂ. II. 14)**

ಪತಿಪತ್ನಿಯರಲ್ಲಿ ಯಾವುದೇ ರೀತಿಯ ಅಂತರ ಕಂಡುಬರುವುದಿಲ್ಲ. ಪಾಣಿಗ್ರಹಣದ ಬಳಿಕ ಎಲ್ಲ ಕರ್ಮಗಳಲ್ಲಿಯೂ ಅದರಂತೆ ಪುಣ್ಯಫಲಗಳಲ್ಲಿ ಮತ್ತು ದ್ರವ್ಯ ಸಂಗ್ರಹದಲ್ಲಿಯೂ ಇಬ್ಬರ ಸಹಭಾಗಿತ್ವ ಇರುತ್ತದೆ.

ಪುಣ್ಯ ಫಲಪ್ರಾಪ್ತಿಗಾಗಿ ಕೈಕೊಳ್ಳುವ ಧಾರ್ಮಿಕ ಆಚರಣೆಯನ್ನು ಪತ್ನಿಯ ಸಹಭಾಗಿತ್ವ ಇಲ್ಲದೇ ಮಾಡುವಂತೆಯೇ ಇರಲಿಲ್ಲ ಎಂಬುದಕ್ಕೆ ಭವಭೂತಿಯ 'ಉತ್ತರ ರಾಮ ಚರಿತೆ'ಯ ಕೊನೆಯ ಸಂಮೇಲನ ಅಂಕದಲ್ಲಿಯ ಒಂದು ಸನ್ನಿವೇಶ ಉತ್ತಮ ಉದಾಹರಣೆಯಾಗಿದೆ.

ಆರುಂಧತಿಯು ರಾಮನಿಗೆ ಸೀತೆಯನ್ನು ಒಪ್ಪಿಸುವಾಗ

**ಜಗತ್ಪತೇ ರಾಮಚಂದ್ರ, ನಿಯೋಜಯ ಯಥಾಧರ್ಮಂ ಪ್ರಿಯಾಂ ತ್ವಂ ಧರ್ಮಚಾರಿಣೇಂ । ಹಿರಣ್ಮಯ್ಯಾಃ ಪ್ರತಿಕೃತೇಃ ಪುಣ್ಯಪ್ರಕೃತಿಮಧ್ವರೇ ॥**

**(ಅಂಕ VII. 19)**

ನಿನ್ನ ಯಾಗದಲ್ಲಿ ನೀನಿಟ್ಟುಕೊಂಡ ಇವಳ ಚಿನ್ನದ ಮೂರ್ತಿಯ ಬದಲಾಗಿ ಧರ್ಮಾನುಸಾರ ಸಹಧರ್ಮಚಾರಿಣಿಯಾದ ಇವಳನ್ನೇ ಇಟ್ಟುಕೊ ಎಂದು ಹೇಳಿ ಒಪ್ಪಿಸುತ್ತಾಳೆ.

ಈ ರೀತಿಯಲ್ಲಿ ಧರ್ಮ ಕ್ರಿಯೆಗಳಿಗೆಲ್ಲ ಸ್ವಪತ್ನಿಯ ಸಹಚರ್ಯ ಅತಿ ಅವಶ್ಯಕವಾಗಿತ್ತು.

**ವೈಯಾಕರಣಿ ಪಾಣಿನಿಯ ಪ್ರಕಾರ 'ಪತ್ನಿ' ಶಬ್ದಕ್ಕೆ ಮೂಲ ಅರ್ಥ, 'ಪತಿಯ ಧಾರ್ಮಿಕ ಕಾರ್ಯಗಳಲ್ಲಿ ಭಾಗವಹಿಸುವವಳು'**

**(ಆಪ.ಧ.ಸೂ II. 14.16–19)**

ಪುರುಷರಂತೆ ಸ್ತ್ರೀಯೂ ಮಹಾತ್ಮರಿಂದಲೂ ಗೌರವಿಸಲ್ಪಡುತ್ತಿದ್ದಳು. ಇಲ್ಲಿ ಸ್ತ್ರೀ–ಪುರುಷರೆಂಬ ಭೇದ ಸರ್ವಥಾ ಇರಲಿಲ್ಲ.

ಕಾವ್ಯಗಳಲ್ಲಿ ಈ ಕುರಿತು ಉಲ್ಲೇಖ ದೊರಕುತ್ತದೆ. ಕಾಳಿದಾಸನ ಕುಮಾರ ಸಂಭವದ ಒಂದು ಪ್ರಸಂಗವನ್ನು ಇಲ್ಲಿ ಉದಾಹರಿಸಬಹುದು.

ಶಿವನು ತನ್ನ ಹಾಗೂ ಪಾರ್ವತಿಯ ವಿವಾಹಕ್ಕೆ ಪರ್ವತ ರಾಜನ ಒಪ್ಪಿಗೆ ಪಡೆಯಲು ಮಧ್ಯವರ್ತಿಗಳಾಗಿ ಪರ್ವತ ರಾಜನ ಬಳಿ ಹೋಗುವುದಕ್ಕೆ ಪೂರ್ವಭಾವಿಯಾಗಿ ತನ್ನ ಬಳಿಗೆ ಆಗಮಿಸಿದ ಸಪ್ತ ಋಷಿಗಳನ್ನೂ, ಆರುಂಧತಿಯನ್ನೂ ಹೇಗೆ ಬರಮಾಡಿಕೊಳ್ಳುತ್ತಾನೆಂದರೆ.

**ತಾಮಗೌರವಭೇದೇನ ಮುನೀಂಶ್ಚಾಪಶ್ಯದೀಶ್ವರಃ ॥**
**ಸ್ತ್ರೀ ಪುಮಾನಿತ್ಯನಾಸ್ಥೈಷಾ ವೃತ್ತಂ ಹಿ ಮಹಿತಂ ಸತಾಮ್ ॥**

**(ಕಾಳಿ, ಕು.ಸಂ. VI 12)**

ಅವಳನ್ನೂ, ಮುನಿಗಳನ್ನೂ ಗೌರವಭೇದವಿಲ್ಲದೇ ಶಿವನು ಗೌರವಿಸಿದನು. ಮಹಾತ್ಮರ ಚರಿತ್ರೆಯೇ ಪ್ರಧಾನವಾಗಿರಲು ಹೆಣ್ಣು–ಗಂಡೆಂಬ ಭೇದವು ಅಪ್ರಸ್ತುತ.

ಈ ರೀತಿಯಲ್ಲಿ ಅಂದಿನ ಕಾಲದಲ್ಲಿ ಸ್ತ್ರೀ–ಪುರುಷರಲ್ಲಿ ಸಮಾನತೆ ಇದ್ದ ಕುರಿತು ಅನೇಕ ಉಲ್ಲೇಖಗಳು ದೊರಕುತ್ತವೆ. ಇದಕ್ಕೆ ಸ್ತ್ರೀಯು ಪುರುಷರಂತೆ ಎಲ್ಲಾ ಕ್ಷೇತ್ರಗಳಲ್ಲಿ ಜ್ಞಾನಗಳಿಸಿಕೊಂಡು ಸಮಾಜರಕ್ಷಣೆ, ಧರ್ಮರಕ್ಷಣೆ ಮತ್ತು ರಾಷ್ಟ್ರರಕ್ಷಣೆಯಲ್ಲಿ ತನ್ನನ್ನು ತೊಡಗಿಸಿ ಕೊಂಡಿರುವುದೇ ಕಾರಣವಾಗಿದೆ.

ಇದಕ್ಕೆ ಮೂಲಭೂತವಾಗಿ ಪುರುಷರಂತೆ ಸ್ತ್ರೀಯರಿಗೂ ಉನ್ನತಮಟ್ಟದ ಶಿಕ್ಷಣ ದೊರಕುತ್ತಿತ್ತು ಎಂಬುದನ್ನು ಇಲ್ಲಿ ಮರೆಯುವಂತಿಲ್ಲ.

ISSN : 2249-2429


ವೇದಕಾಲದಂತೆ ವೇದೋತ್ತರ ಕಾಲದಲ್ಲಿಯೂ ಇಂತಹ ಸುಶಿಕ್ಷಿತ ಸ್ತ್ರೀಯರಲ್ಲಿ ಎರಡು ವಿಧಗಳನ್ನು ಕಾಣುತ್ತೇವೆ. ಬ್ರಹ್ಮವಾದಿನಿಯರು ಹಾಗೂ ಸದ್ಯೋವಧುಗಳು, ಈ ಎರಡೂ ರೀತಿಯ ಸುಶಿಕ್ಷಿತ ಸ್ತ್ರೀಯರ ಉಲ್ಲೇಖಗಳು ವೇದೋತ್ತರ ಕಾಲದ ಸೂತ್ರ, ಸ್ಮೃತಿ, ಕಾವ್ಯಗಳಲ್ಲಿ ನಮಗೆ ಸಿಗುತ್ತವೆ.

ಇಲ್ಲಿ ಬ್ರಹ್ಮವಾನಿಯರುರಿಗಿಂತ ಹೆಚ್ಚಿನ ಉಲ್ಲೇಖಗಳು ಸದ್ಯೋವಧುಗಳಾಗಿ ಸಾಮಾಜಿಕ ಉನ್ನತಿಗೆ ಕಾರಣಕರ್ತೆಯಾದವರ ಕುರಿತು ಸಿಗುವುದಷ್ಟೇ ಅಲ್ಲದೇ ಬ್ರಹ್ಮವಾದಿನಿಯರು ಆಜನ್ಮ ತಪಶ್ಚರ್ಯದಿಂದ ಗಳಿಸಿದ ಫಲಗಳೂ; ಸದ್ಯೋವಧುಗಳು ತಮ್ಮ ಗೃಹಿಣೀಧರ್ಮ, ಮಾತೃಧರ್ಮ, ಪಾತಿವ್ರತ್ಯದಿಂದ ಗಳಿಸಿದ ಫಲಗಳಿಗೂ ಸಮಾನ ಮಹತ್ವ ಕಲ್ಪಿಸಿರುವುದು ಉಲ್ಲೇಖನೀಯ.

ಈಗ ವೇದೋತ್ತರ ಕಾಲದ ಬ್ರಹ್ಮವಾದಿನಿಯರು ಮತ್ತು ಸದ್ಯೋವಧುಗಳು ಹಾಗೂ ಅವರ ಕೊಡುಗೆಗಳ ಕುರಿತು ವಿವರವಾಗಿ ತಿಳಿಯೋಣ.

## ಬ್ರಹ್ಮವಾದಿನಿಯರು

ಈ ಹಿಂದೆಯೇ ಪ್ರತಿಪಾದಿಸಿದಂತೆ ನಿಗದಿತ ವಯಸ್ಸಿನಲ್ಲಿ ಅಥವಾ ತನ್ನ ವರ್ಣಾಶ್ರಮ ಧರ್ಮಕ್ಕನುಗುಣವಾಗಿ ಉಪನಯನ ಸಂಸ್ಕಾರಪಡೆದು ವೇದಾಧಿಕಾರ ಪಡೆದುಕೊಂಡ ಕುಮಾರಿಯು ವೇದಾಭ್ಯಾಸವನ್ನೂ, ದರ್ಶನಸಾಹಿತ್ಯದ ಪೂರ್ವಮೀಮಾಂಸೆ ಹಾಗೂ ವಿಧಿಸಿದ ಇತರ ಲೌಕಿಕ ಶಾಸ್ತ್ರಗಳನ್ನು ಅಭ್ಯಸಿಸಿ ಇಲ್ಲಿಗೆ ತನ್ನ ಅಧ್ಯಯನವನ್ನು ಮೊಟಕುಗೊಳಿಸದೇ ಮುಕ್ತಿಮಾರ್ಗ ತೋರುವ ಬ್ರಹ್ಮಜ್ಞಾನಪ್ರಾಪ್ತಿಗಾಗಿ ಆಜನ್ಮ ಸನ್ಯಾಸತ್ವವನ್ನು ಸ್ವೀಕರಿಸಿ ಆಧ್ಯಾತ್ಮಿಕ ನೆಲೆಗಟ್ಟಿನ ದಾರ್ಶನಿಕ ಅಧ್ಯಯನವನ್ನು ಮುಂದುವರೆಸುತ್ತ ಧ್ಯಾನ, ಯೋಗ, ತಪಸ್ಸು ಮುಂತಾದವುಗಳೊಂದಿಗೆ ಚಿತ್ತವೃತ್ತಿ ನಿರೋಧ ಸಾಧಿಸಿ ಬ್ರಹ್ಮಜ್ಞಾನ ಪ್ರಾಪ್ತಿ ಮಾಡಿಕೊಂಡ ಬ್ರಹ್ಮವಾದಿನಿಯೆನಿಸಿಕೊಳ್ಳುತ್ತಿದ್ದಳು.

ಇಂತಹ ಬ್ರಹ್ಮವಾದಿನಿಯರ ಉಲ್ಲೇಖಗಳು ಸೂತ್ರ, ಮಹಾಕಾವ್ಯ, ಕಾವ್ಯಗಳಲ್ಲಿ ದೊರಕುತ್ತವೆ.

ಪಾಣಿನಿಯು ತನ್ನ ಸೂತ್ರಗಳಲ್ಲಿ ಸ್ತ್ರೀಪ್ರತ್ಯಯಗಳನ್ನು ಹೇಳುವಾಗ 'ಆಚಾರ್ಯ' ಮತ್ತು 'ಉಪಾಧ್ಯಾಯ' ಈ ಎರಡು ಶಬ್ದಗಳಿಂದ ಎರಡೆರಡು ತರಹದ ಸ್ತ್ರೀ ರೂಪಗಳಾಗುತ್ತವೆಂದು ಹೇಳಿದ್ದಾನೆ. 'ಆಚಾರ್ಯ' ಮತ್ತು 'ಆಚಾರ್ಯಾನಿ' ಹಾಗೂ 'ಉಪಾಧ್ಯಾಯಾ' ಮತ್ತು 'ಉಪಾಧ್ಯಾಯಾನಿ', ಇವುಗಳಲ್ಲಿ 'ಆಚಾರ್ಯ' ಮತ್ತು 'ಉಪಾಧ್ಯಾಯ' ಎಂದರೆ 'ಶಿಕ್ಷಕಿ' ಎಂದರ್ಥ; 'ಆಚಾರ್ಯಾನಿ' ಎಂದರೆ ಆಚಾರ್ಯನ ಹೆಂಡತಿ ಮತ್ತು 'ಉಪಾಧ್ಯಾಯಾನಿ' ಎಂದರೆ ಉಪಾಧ್ಯಾಯನ ಹೆಂಡತಿ.

ಅದರಂತೆ ತನ್ನ ಸಿದ್ಧಾಂತ ಕೌಮುದಿಯಲ್ಲಿ ಭಟ್ಟೋಜಿ ದೀಕ್ಷಿತನು 'ಆಚಾರ್ಯಾ' ಮತ್ತು 'ಉಪಾಧ್ಯಾಯ' ಎನ್ನುವ ಪದಗಳಿಗೆ 'ಯಾತು ಸ್ವಯಂ ಏವ ಅಧ್ಯಾಪಿಕಾ' (ಯಾರು ತಾನೇ ಸ್ವತಃ ಉಪಾಧ್ಯಾಯಳೋ ಅವಳು) ಎಂದು ಸ್ಪಷ್ಟಪಡಿಸಿದ್ದಾನೆ. ಸಿದ್ಧಾಂತ ಕೌಮುದಿಯ ಮೇಲಿನ ಭಾಷ್ಯವಾದ 'ಬಾಲಮನೋರಮಾ' ಎಂಬ ತನ್ನ ಗ್ರಂಥದಲ್ಲಿ ವಾಸುದೇವ ದೀಕ್ಷಿತನು ಭಟ್ಟೋಜಿ ದೀಕ್ಷಿತನ ಮಾತನ್ನು ಸಮರ್ಥಿಸಿದ್ದಾನೆ.

ಈ ಮೇಲಿನ ಉಲ್ಲೇಖಗಳಿಂದ ವೇದೋತ್ತರ ಕಾಲದಲ್ಲಿ ಅತ್ಯಂತ ಶ್ರೇಷ್ಠಮಟ್ಟದ ಜ್ಞಾನ ಗಳಿಸುವ 'ಆಚಾರ್ಯ' 'ಉಪಾಧ್ಯಾಯ'ರು ಇದ್ದರೆಂಬುದಾಗಿ ವಿದ್ವಾಂಸರು ಊಹಿಸಿದ್ದಾರೆ.

## ಆಕರ ಗ್ರಂಥಗಳು


- **Aiyangar, K.T.B.** (1928) Women in Hindu Law. Madras: S. Ganeshan Publications.
- **Chanana, K**. (1989) Women's Work Education and Family Strategies in the Context of Social Change and Mobility. In Fifth Survey of Educational Research. New Delhi: NCERT.
- **Majumdar, R. C. (Ed).** (1953). Great Women of India. Madras: Advaita Ashrama Publication.
- **ಆಚಾರ್**. ವಿ. (1968) ಸ್ತ್ರೀ ಮತ್ತು ಶಿಕ್ಷಣ. ಧಾರವಾಡ : ಕರ್ನಾಟಕ ವಿಶ್ವವಿದ್ಯಾಲಯ
- **ಕೃಷ್ಣರಾಯ, ಅ. ನ.** (1962) ಭಾರತೀಯ ಸಂಸ್ಕೃತಿ ದರ್ಶನ. ಬೆಂಗಳೂರು : ಸಾಹಿತ್ಯ ಮತ್ತು ಸಂಸ್ಕೃತಿ ಅಭಿವೃದ್ಧಿ ಇಲಾಖೆ ಮೈಸೂರು ಸರ್ಕಾರ.
- **ಪುಟ್ಟಪ್ಪ, ಕೆ. ವಿ.** (ಪ್ರ. ಸಂ.). (1971) ಯುಗಯಾತ್ರೀ ಭಾರತೀಯ ಸಂಸ್ಕೃತಿ, ಮೈಸೂರು: ಪ್ರಸಾರಾಂಗ ಮೈಸೂರು ವಿಶ್ವವಿದ್ಯಾಲಯ, ಸಂಪುಟ 2.
- **ರಂಗಚಾರ್, ಎಸ್**. (1969) ಸಂಸ್ಕೃತ ಸಾಹಿತ್ಯದ ಸಂಕ್ಷಿಪ್ತ ಇತಿಹಾಸ. ಮೈಸೂರು : ಸಂಸ್ಕೃತ ಸಾಹಿತ್ಯ ಸದನ.


## ಅನುಬಂಧ
## ಗ್ರಂಥ ಸೂಚಿ

| | | |
|---|---|---|
| ಕೌಶಿ, ಉ | – | ಕೌಶೀತಕಿ ಉಪನಿಷತ್ |
| ಕೌಶೀ. ಬ್ರಾ | – | ಕೌಶೀತಕಿ ಬ್ರಾಹ್ಮಣ |
| ಛಾಂದ, ಉ | – | ಛಾಂದೋಗ್ಯೋಪನಿಷತ್ |
| ಮಹಾ, ಭಾ.ಶಾಂತಿ | – | ಮಹಾಭಾರತ ಶಾಂತಿಪರ್ವ |
| ಕಾಳಿ, ಕು, ಸಂ. | – | ಕಾಳಿದಾಸ, ಕುಮಾರಸಂಭವ |
| ಆಪ, ಧ. ಸೂ | – | ಆಪಸ್ತಂಭ ಮಂತ್ರಬ್ರಾಹ್ಮಣ |

■■


*ಮಾನ್ಯ ಶಿಕ್ಷಣ ಪ್ರೇಮಿಗಳೇ,*

**ಪ್ರಶಿಕ್ಷಣಾರ್ಥಿ, ಶಿಕ್ಷಕರಲ್ಲಿ, ಶಿಕ್ಷಣಾಸಕ್ತರಲ್ಲಿ ವಿಜ್ಞಾಪನೆ, ರಾಜ್ಯದಲ್ಲಿ ಮೂರು ವಸಂತಗಳಿಂದ ಕನ್ನಡ ಮತ್ತು ಇಂಗ್ಲಿಷನಲ್ಲಿ ತ್ರೈಮಾಸಿಕ ಪತ್ರಿಕೆಯ ರೂಪದಲ್ಲಿ ಹೊರಬರುತ್ತಿದೆ. ತಮ್ಮೆಲ್ಲರ ಪ್ರೋತ್ಸಾಹವೇ ಅದಕ್ಕೆ ಕಾರಣ. ತಾವುಗಳು ಪತ್ರಿಕೆಯನ್ನು ಪ್ರೋತ್ಸಾಹಿಸಿ ಬೆಳೆಸಬೇಕಾದರೆ ಒಳ್ಳೆಯ ಪ್ರಬಂಧ ಹಾಗೂ ಲೇಖನಗಳನ್ನು ಕಳಿಸಬೇಕು ಮತ್ತು ಚಂದಾದಾರರಾಗಿ ಪತ್ರಿಕೆಯನ್ನು ಬೆಳೆಸಬೇಕು. ತಮ್ಮ ಪ್ರೋತ್ಸಾಹವೇ ಪತ್ರಿಕೆ.**

**– ಸಂಪಾದಕರು**

ಸೈದ್ಧಾಂತಿಕ ISSN : 2249-2429

# ಮಾರ್ಗದರ್ಶನ
# (Guidance)

✍ ರಾಧಿಕಾ ಎಂ. ಕುಲಕರ್ಣಿ, ಶ್ರೀ ಮಂಜುನಾಥೇಶ್ವರ ಶಿಕ್ಷಣ ಮಹಾವಿದ್ಯಾಲಯ, ಧಾರವಾಡ.

ಮಾರ್ಗದರ್ಶನವೆಂಬುದು ಪ್ರಾಚೀನ ಕಾಲದಿಂದಲೂ ನಡೆದ ಪ್ರಕ್ರಿಯೆಯಾಗಿದೆ. ಪ್ರಪ್ರಥಮವಾಗಿ 1938ರಲ್ಲಿ ಮನೋವಿಜ್ಞಾನ ಪ್ರಾಧ್ಯಾಪಕ ಡಾ. ಬೋಸ್ ಅವರು ಪಾಶ್ಚಿಮಾತ್ಯ ದೇಶದ ಮನೋವಿಜ್ಞಾನ ಪರೀಕ್ಷೆಗಳನ್ನು ಭಾರತೀಯ ಪರಿಸರಕ್ಕನುಗುಣವಾಗಿ ಅಳವಡಿಸಿದರು ಹಾಗೂ ಕಲ್ಕತ್ತಾ ವಿಶ್ವವಿದ್ಯಾಲಯವು ಮಾರ್ಗದರ್ಶನಕ್ಕೆ ಚಾಲನೆ ನೀಡಿತು.

ತದನಂತರ ಶ್ರೀ ಬಾಟ್ಲಿಬಾಯಿ ಮತ್ತು ಶ್ರೀಮುಖರ್ಜಿಯವರು ಮುಂಬಯಿಯಲ್ಲಿ 1941ರಲ್ಲಿ ವೃತ್ತಿಮಾರ್ಗದರ್ಶನ ಆರಂಭಿಸಿದರು. 1947 ರಲ್ಲಿ ಆಚಾರ್ಯ ನರೇಂದ್ರದೇವ ಸಮಿತಿಯ ಶಿಫಾರಸ್ಸಿನ ಅನ್ವಯವಾಗಿ ಅಲಹಾಬಾದಿನಲ್ಲಿ ಶೈಕ್ಷಣಿಕ ಮತ್ತು ವೃತ್ತಿಮಾರ್ಗದರ್ಶನ ಆರಂಭಿಸಲಾಯಿತು. 1954ರಲ್ಲಿ ಕೇಂದ್ರ ಶೈಕ್ಷಣಿಕ ಮತ್ತು ವೃತ್ತಿಮಾರ್ಗದರ್ಶನ ಕಚೇರಿ ಕಾರ್ಯಾರಂಭ ಮಾಡಿತು. 1956ರಲ್ಲಿ ಅಖಿಲಭಾರತ ಮಾರ್ಗದರ್ಶನ ಕೇಂದ್ರ ಪ್ರಾರಂಭವಾಯಿತು. ದ್ವಿತೀಯ ಪಂಚವಾರ್ಷಿಕ ಯೋಜನೆಯಲ್ಲಿ ರಾಷ್ಟ್ರೀಯ ಉದ್ಯೋಗ ವಿನಿಮಯ ಸೇವಾ ವಿಭಾಗವು ವೃತ್ತಿ ಮಾರ್ಗದರ್ಶನವನ್ನು ನೀಡಲಾರಂಭಿಸಿತು.

''ಮಾರ್ಗದರ್ಶನ ಎಂದರೆ ಸಮಸ್ಯೆಯ ಪರಿಹಾರಕ್ಕೆ ಸಹಾಯ ನೀಡುವ ಮಾರ್ಗವಾಗಿದೆ''

**ಆರ್ಥರಜೋನ್ಸನ ಪ್ರಕಾರ** –''ಮಾರ್ಗದರ್ಶನವು ಒಬ್ಬನು ಇನ್ನೊಬ್ಬನಿಗೆ ಆಯ್ಕೆಗಳನ್ನು ಮಾಡಿಕೊಳ್ಳಲು ಸಮಸ್ಯೆ ಪರಿಹರಿಸಿಕೊಳ್ಳಲು ನೀಡುವ ಸಹಾಯವಾಗಿದೆ.''

**ಕ್ಯಾನ್ಸನ ಪ್ರಕಾರ** –''ಮಾರ್ಗದರ್ಶನವೆಂದರೆ ವಿದ್ಯಾರ್ಥಿಯೊಬ್ಬನ ಬಗ್ಗೆ ಅರ್ಥಮಾಡಿಕೊಂಡು ಅವನಲ್ಲಿ, ಅವನ ಪರಿಸರದಲ್ಲಿ ಬದಲಾವಣೆ ತರಲು ಹಾಗೂ ಅವನ ಬೆಳವಣಿಗೆ ರೂಪಿಸಲು ಸಹಾಯ ಮಾಡುವದಾಗಿದೆ.

**ಸಿ. ಇ. ಸ್ಕಿನ್ನರ್ ಪ್ರಕಾರ** –''ಎಳೆಯ ವ್ಯಕ್ತಿಗಳು ತಮ್ಮಷ್ಟಕ್ಕೆ ತಾವೇ ಬೇರೆಯವರ ಜೊತೆ ಮತ್ತು ಇತರ ಸಂದರ್ಭಗಳ ಬಗ್ಗೆ ಹೊಂದಿಕೊಳ್ಳಲು ಸಹಾಯ ಮಾಡುವ ಪ್ರಕ್ರಿಯೆಯನ್ನು ಮಾರ್ಗದರ್ಶನ ಎನ್ನುವರು''

## ಮಾರ್ಗದರ್ಶನದ ಲಕ್ಷಣಗಳು (Charcterstics of Guidance)

- ಮಾರ್ಗದರ್ಶನವು ಮಗುವಾದಾಗಿನಿಂದ ವೃದ್ಧಾಪ್ಯದವರೆಗೆ ನಡೆಯುವ ನಿರಂತರ ಕ್ರಿಯೆಯಾಗಿದೆ.
- ಮಾರ್ಗದರ್ಶನವೆಂದರೆ ವೈಯಕ್ತಿಕ ಸಹಾಯವಾಗಿದೆ.
- ಆಯ್ಕೆ ಮತ್ತು ಸಮಸ್ಯೆ ಪರಿಹಾರಗಳು ಮಾರ್ಗದರ್ಶನದ ಪ್ರಮುಖ ಅಂಶಗಳಾಗಿವೆ.
- ಸೂಕ್ತ ತರಬೇತಿಯುಳ್ಳ ವ್ಯಕ್ತಿಗಳು ಮಾತ್ರ ಮಾರ್ಗದರ್ಶನ ಮಾಡಬಲ್ಲರು.
- ಮಾರ್ಗದರ್ಶನವು ಹೊಂದಾಣಿಕೆಗೆ ಸಹಾಯಮಾಡುತ್ತದೆ.

ವಿದ್ಯಾರ್ಥಿಗಳು ಮತ್ತು ಮಾರ್ಗದರ್ಶನ (Students of Guidance) ಶಾಲೆಯಲ್ಲಿ ವಿದ್ಯಾರ್ಥಿ ಎದುರಿಸಬಹುದಾದ ಸಮಸ್ಯೆಗಳ ಪರಿಹಾರಕ್ಕೆ ಮಾರ್ಗದರ್ಶನ ಅತ್ಯವಶ್ಯಕವಾಗಿದೆ.

ವಿದ್ಯಾರ್ಥಿಯ ಮಾರ್ಗದರ್ಶನದ ಅವಶ್ಯಕತೆಗಳನ್ನು –

1. ಶೈಕ್ಷಣಿಕ ಅವಶ್ಯಕತೆ,
2. ವೃತ್ತಿ ಮಾರ್ಗದರ್ಶನದ ಆವಶ್ಯಕತೆ,
3. ವ್ಯಕ್ತಿತ್ವ ಬೆಳವಣಿಗೆಯ ಮಾರ್ಗದರ್ಶನದ ಅವಶ್ಯಕತೆ.

– ಎಂದು ವಿಂಗಡಿಸಬಹುದಾಗಿದೆ.

## ವೈಯಕ್ತಿಕ ಮತ್ತು ಮನೋವೈಜ್ಞಾನಿಕ ಅವಶ್ಯಕತೆಗಳು

ಶಾಲೆಯಲ್ಲಿ (ಶಿಕ್ಷಣರಂಗದಲ್ಲಿ) ಅಭ್ಯಾಸಕ್ರಮದ ಆಯ್ಕೆ, ಪುಸ್ತಕಗಳ ಆಯ್ಕೆ, ಸಹಪಠ್ಯ ಚಟುವಟಿಕೆಗಳ ಆಯ್ಕೆ ಮುಂತಾದ ಸಂದರ್ಭಗಳಲ್ಲಿ ಶೈಕ್ಷಣಿಕ ಮಾರ್ಗದರ್ಶನದ ಅವಶ್ಯಕತೆ ಇದೆ. ವಿದ್ಯಾರ್ಥಿಗಳ ಒಲವು, ಆಸೆ, ಆಕಾಂಕ್ಷೆ, ಯೋಗ್ಯತೆ ಮತ್ತು ಅರ್ಹತೆಗಳಿಗನುಗುಣವಾಗಿ ವೃತ್ತಿಯನ್ನು ಆಯ್ಕೆ ಮಾಡುವ ಸಂದರ್ಭದಲ್ಲಿ ಮಾರ್ಗದರ್ಶನ ಅವಶ್ಯಕತೆ ಇದೆ. ವಿದ್ಯಾರ್ಥಿಗಳು ಸನ್ಮಾರ್ಗದಲ್ಲಿ ನಡೆಯುವಂತೆ ಮಾಡಲು ವ್ಯಕ್ತಿತ್ವದ ಬೆಳವಣಿಗೆಗಾಗಿ ಮಾರ್ಗದರ್ಶನದ ಅವಶ್ಯಕತೆ ಇದೆ. ಬದಲಾಗುತ್ತಿರುವ ಕೈಗಾರಿಕಾ ಕ್ಷೇತ್ರಗಳಿಂದಾಗಿ ಆಕ್ಷೇತ್ರದ ಅಗತ್ಯಕ್ಕೆ ತಕ್ಕಂತೆ ವಿದ್ಯಾರ್ಥಿ ಸಿದ್ಧವಾಗಲು ಮಾರ್ಗದರ್ಶನದ ಅವಶ್ಯಕತೆ ಇದೆ.

ಮಾರ್ಗದರ್ಶನವು ಅನೇಕ ಕ್ಷೇತ್ರಗಳಲ್ಲಿ ಅವಶ್ಯವಾಗಿದ್ದು ಅವುಗಳಲ್ಲಿ–

1. ಶೈಕ್ಷಣಿಕ ಮಾರ್ಗದರ್ಶನ
2. ವೃತ್ತಿ ಮಾರ್ಗದರ್ಶನ
3. ವೈಯಕ್ತಿಕ ಮಾರ್ಗದರ್ಶನ

– ಈ ಕ್ಷೇತ್ರಗಳು ಪ್ರಮುಖ ಕ್ಷೇತ್ರಗಳಾಗಿವೆ.

## 1. ಶೈಕ್ಷಣಿಕ ಮಾರ್ಗದರ್ಶನ (Educational Guidance)

ಶೈಕ್ಷಣಿಕ ಮಾರ್ಗದರ್ಶನವು ವಿದ್ಯಾರ್ಥಿಗಳಿಗೆ ನೀಡುವ ಮಾರ್ಗದರ್ಶನವಾಗಿದೆ. ಶಾಲಾ ಅಭ್ಯಾಸಕ್ರಮ, ವಿಷಯಗಳು, ಶಾಲಾ ಜೀವನದ ಹೊಂದಾಣಿಕೆಗಾಗಿ ನೀಡುವ ಸಹಾಯವಾಗಿದೆ. ಶೈಕ್ಷಣಿಕ ಮಾರ್ಗದರ್ಶನವು ಹೊಸದಾಗಿ ಶಿಕ್ಷಣ ಸಂಸ್ಥೆಗೆ ಸೇರಿದ ವಿದ್ಯಾರ್ಥಿಗಳು ಎದುರಿಸುವ ಸಮಸ್ಯೆಗಳ ನಿವಾರಣೆಗೆ ಸಹಾಯ ಮಾಡುತ್ತದೆ.

## ಶೈಕ್ಷಣಿಕ ಮಾರ್ಗದರ್ಶನದ ಉದ್ದೇಶಗಳು

ವಿದ್ಯಾರ್ಥಿಗಳಿಗೆ –

– ಉತ್ತಮ ಶೈಕ್ಷಣಿಕ ಯೋಜನೆಯನ್ನು ರೂಪಿಸಿಕೊಳ್ಳಲು ಸಹಕರಿಸುವುದು.
– ಶಿಕ್ಷಣ ಸಂಸ್ಥೆಯಲ್ಲಿರುವ ವಿವಿಧ ಸಂಪನ್ಮೂಲಗಳ ಸದುಪಯೋಗಕ್ಕೆ ಅವಕಾಶ ನೀಡುವದು.
– ವೈಯಕ್ತಿಕ ಸಾಮರ್ಥ್ಯ ಅಭಿರುಚಿ ಮುಂತಾದವುಗಳನ್ನು ರೂಪಿಸಿಕೊಳ್ಳಲು ಸಹಾಯಮಾಡುವದು.
– ಶೈಕ್ಷಣಿಕ ಆಯ್ಕೆಯಲ್ಲಿ ಸಹಾಯ ನೀಡುವದು.
– ನಿರ್ದಿಷ್ಟ ಸಮಸ್ಯೆಗಳಿಗೆ ಸಹಾಯ ನೀಡುವದು.
– ಅಪಸಾಮಾನ್ಯ ವಿದ್ಯಾರ್ಥಿಗಳಿಗೆ ಸಹಾಯ ನೀಡುವದು.

ISSN : 2249-2429


### ಶೈಕ್ಷಣಿಕ ಮಾರ್ಗದರ್ಶನದ ಅವಶ್ಯಕತೆ

ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಮಾರ್ಗದರ್ಶನ ಅತ್ಯವಶ್ಯಕವಾಗಿದೆ. ಏಕೆಂದರೆ –

- ಶಿಕ್ಷಣದಲ್ಲಿ ಅಪವ್ಯಯ ತಡೆಗಟ್ಟುವದಕ್ಕಾಗಿ
- ವಿದ್ಯಾರ್ಥಿಗಳಲ್ಲಿ ಅಡಗಿರುವ ಸಾಮರ್ಥ್ಯದ ಪೂರ್ಣವಿಕಾಸಕ್ಕಾಗಿ
- ಶಿಕ್ಷಣದಲ್ಲಿ ಲಭ್ಯವಿರುವ ವಿವಿಧ ವಿಷಯಗಳಲ್ಲಿ ಸೂಕ್ತವಾದದನ್ನು ಆಯ್ಕೆ ಮಾಡಲು
- ಸರಿಯಾದ ಶೈಕ್ಷಣಿಕ ಹೊಂದಾಣಿಕೆಗಾಗಿ

### ಶೈಕ್ಷಣಿಕ ಮಾರ್ಗದರ್ಶನವು ಕೆಳಗಿನ ಪ್ರಮುಖ ಹಂತಗಳನ್ನು ಹೊಂದಿದೆ.

**ದತ್ತಾಂಶಗಳ ಸಂಗ್ರಹಣೆ** : ವ್ಯಕ್ತಿತ್ವದ ಪರೀಕ್ಷೆ ಸಾಧನಾ ಪರೀಕ್ಷೆ, ಬುದ್ಧಿಶಕ್ತಿ ಪರೀಕ್ಷೆ, ಆಸಕ್ತಿ ಪರೀಕ್ಷೆ, ಪ್ರಶ್ನಾವಳಿ ಪರೀಕ್ಷೆ, ಸಂದರ್ಶನ ಮುಂತಾದ ವಿಧಾನಗಳಿಂದ ವಿದ್ಯಾರ್ಥಿಯ ಬಗ್ಗೆ ಪರಿಪೂರ್ಣ ಮಾಹಿತಿಯನ್ನು ಸಂಗ್ರಹಿಸಬಹುದಾಗಿದೆ.

**ದತ್ತಾಂಶಗಳ ಆಧಾರದಮೇಲೆ ಮಾರ್ಗದರ್ಶನ ನೀಡುವುದು :** ಸಂಗ್ರಹಿಸಿದ ದತ್ತಾಂಶಗಳನ್ನು ಪೂರ್ಣವಾಗಿ ವಿಶ್ಲೇಷಿಸಿ, ವಿದ್ಯಾರ್ಥಿಗಳ ವ್ಯಕ್ತಿತ್ವ ಹೊಂದಾಣಿಕೆಗಳ ಬಗೆಗೆ ತಿಳಿದುಕೊಂಡು ಆತನ ಪರಿಸರಕ್ಕೆ ತಕ್ಕಂತೆ ಸೂಕ್ತ ಮಾರ್ಗದರ್ಶನ ನೀಡಲಾಗುವದು.

**ಕಾರ್ಯಚರಣೆ :** ಮಾರ್ಗದರ್ಶನ ನೀಡಿದ ನಂತರ ವಿದ್ಯಾರ್ಥಿಯು ಯಾವ ರೀತಿಯಲ್ಲಿ ಅದನ್ನು ಉಪಯೋಗಿಸಿಕೊಂಡು ಲಾಭ ಪಡೆದುಕೊಂಡನು ಎಂಬುದನ್ನು ತಿಳಿದುಕೊಳ್ಳುವದು ಕಾರ್ಯಚರಣೆ ಎನ್ನಿಸಿಕೊಳ್ಳುವುದು. ಆಗಾಗ ವಿದ್ಯಾರ್ಥಿಯ ಮೌಲ್ಯಮಾಪನ ಮಾಡುತ್ತಿರಬೇಕು. ವಿದ್ಯಾರ್ಥಿಗಳು ತಮ್ಮ ಸಮಸ್ಯೆಗಳನ್ನು ಗುರುತಿಸಿಕೊಂಡು ಅವುಗಳ ಪರಿಹಾರಕ್ಕಾಗಿ ಶಕ್ತನಾಗುವಂತೆ ಮಾಡಬೇಕು.

### 2. ವೃತ್ತಿ ಮಾರ್ಗದರ್ಶನ (Vocational Guidance)

– ವೃತ್ತಿಗೆ ಸಂಬಂಧಿಸಿದ ಸಮಸ್ಯೆಗಳಿಗೆ ಪರಿಹಾರ ನೀಡುವುದನ್ನು ವೃತ್ತಿ ಮಾರ್ಗದರ್ಶನ ಎನ್ನುವರು.

– ವೃತ್ತಿ ಮಾರ್ಗದರ್ಶನವು ಶೈಕ್ಷಣಿಕ ಮಾರ್ಗದರ್ಶನದೊಡನೆ ನಿಕಟ ಸಂಬಂಧವನ್ನು ಹೊಂದಿದೆ.

– ವೃತ್ತಿ ಮಾರ್ಗದರ್ಶನದಲ್ಲಿ ವ್ಯಕ್ತಿ ಮಾಹಿತಿ, ಆಯ್ಕೆ ಮತ್ತು ಹೊಂದಾಣಿಕೆಗಳಿಗೆ ಪರಿಹಾರಗಳನ್ನು ನೀಡಲಾಗುತ್ತದೆ.

– ''ವೃತ್ತಿ ಮಾರ್ಗದರ್ಶನವು ವ್ಯಕ್ತಿಗಳ ವೃತ್ತಿ ಅವಶ್ಯಕತೆ ಮತ್ತು ಸಮಸ್ಯೆಗಳಿಗೆ ಮಾರ್ಗದರ್ಶನ ನೀಡಿ ಸೂಕ್ತ ವೃತ್ತಿಯನ್ನು ಆಯ್ಕೆ ಮಾಡಲು ಸಹಾಯಕವಾಗುವ ಪೂರ್ಣ ಮಾಹಿತಿ ನೀಡುತ್ತದೆ.

### ವೃತ್ತಿ ಮಾರ್ಗದರ್ಶನದ ಸ್ವರೂಪ ಮತ್ತು ಉದ್ದೇಶಗಳು

1. ವೃತ್ತಿಯ ಅನುಭವ ಒದಗಿಸುವಂತಹ ಪರಿಸರ ನಿರ್ಮಾಣ ಮಾಡುವದು.
2. ಸಮಂಜಸವಾದ ವೃತ್ತಿ ಆಯ್ಕೆಯ ಕೆಲವು ಸೂಚಿಗಳಾದ ಆಸಕ್ತಿ, ಸಾಮರ್ಥ್ಯ, ಮನೋಧೋರಣೆ ಮುಂತಾದವುಗಳನ್ನು ತಿಳಿದುಕೊಳ್ಳಲು ಸಹಕರಿಸುವದು.
3. ಔದ್ಯೋಗಿಕ ವಿಷಯಗಳ ವಿಶ್ಲೇಷಣೆಯಲ್ಲಿ ಸಹಕರಿಸುವದು.
4. ಪ್ರತಿಯೊಬ್ಬ ವ್ಯಕ್ತಿ ತನ್ನ ಇಚ್ಛೆಗನುಗುಣವಾಗಿ ವೃತ್ತಿ ಪಡೆಯಲು ಸಹಕರಿಸುವದು.
5. ವೃತ್ತಿ ತರಬೇತಿ ನೀಡುವ ಶೈಕ್ಷಣಿಕ ಸಂಸ್ಥೆಗಳಲ್ಲಿನ ಪ್ರವೇಶಕ್ಕೆ ಬೇಕಾದ ಶೈಕ್ಷಣಿಕ ಅವಧಿ, ಅರ್ಹತೆ ಮುಂತಾದ ವಿಷಯದ ಬಗ್ಗೆ ಮಾಹಿತಿ ಒದಗಿಸುವದು.

### ವೃತ್ತಿ ಮಾರ್ಗದರ್ಶನದ ಅವಶ್ಯಕತೆ

1. ವ್ಯಕ್ತಿಗಳು ಅನುವಂಶೀಕರಲ್ಲ, ವೃತ್ತಿಯ ವ್ಯಾಪ್ತಿಯು ವಿಶಾಲವಾಗಿದೆ. ಅನೇಕಾನೇಕ ಹೊಸ–ಹೊಸ ವೃತ್ತಿಗಳು ಸೃಷ್ಟಿಯಾಗಿವೆ ಮತ್ತು ಅವುಗಳ ಮಾಹಿತಿಯ ಅವಶ್ಯಕತೆಯಿದೆ.
2. ವಿದ್ಯಾರ್ಥಿಗಳಿಗೆ ಸೂಕ್ತ ವೃತ್ತಿಗಳ ಆಯ್ಕೆಯಲ್ಲಿ ಮಾರ್ಗದರ್ಶನದ ಅವಶ್ಯಕತೆಯಿದೆ.
3. ಅಪಸಮಾಯೋಜನೆಯ ಸಮಸ್ಯೆಯನ್ನು ಕಡಿಮೆ ಮಾಡಬೇಕಾದರೆ ವಿದ್ಯಾರ್ಥಿಗಳಿಗೆ ಶಾಲಾ ಅವಧಿಯಲ್ಲಿಯ ವೃತ್ತಿ ಮಾರ್ಗದರ್ಶನ ನೀಡಬೇಕು.

### ವೃತ್ತಿ ಮಾರ್ಗದರ್ಶನವನ್ನು ಕೂಡ ಮೂರು ಅವಸ್ಥೆಗಳಲ್ಲಿ ನೀಡಬಹುದು

1. **ದತ್ತಾಂಶಗಳ ಸಂಗ್ರಹ :** ವ್ಯಕ್ತಿಯ ಸ್ವಭಾವ, ಅವನ ಅರ್ಹತೆ, ಆಸಕ್ತಿ ಆಕಾಂಕ್ಷೆ, ಮನೋವೃತ್ತಿ, ಮನೋಧೋರಣೆ, ವ್ಯಕ್ತಿತ್ವ ಮತ್ತು ಜೀವನದ ಸ್ಥಿತಿಗತಿ ಮುಂತಾದ ವಿವರಗಳನ್ನು ಸಂಗ್ರಹಿಸುವಲ್ಲಿ ಎಚ್ಚರಿಕೆಯಿಂದ ಇರಬೇಕು.
2. **ದತ್ತಾಂಶಗಳ ಸಂಗ್ರಹದ ಆಧಾರದ ಮೇಲೆ ಮಾರ್ಗದರ್ಶನ :** ವಿದ್ಯಾರ್ಥಿಗಳಿಗೆ ವೃತ್ತಿಯ ಅವಕಾಶಗಳು ಮತ್ತು ಕೆಲಸದ ಬಗ್ಗೆ ಮಾಹಿತಿ ನೀಡಲಾಗುವದು.
3. **ಕಾರ್ಯಾಚರಣೆ**

### 3. ವೈಯಕ್ತಿಕ ಮಾರ್ಗದರ್ಶನ (Individual Guidance)

ವೈಯಕ್ತಿಕ ಮಾರ್ಗದರ್ಶನವು ವ್ಯಕ್ತಿತ್ವದ ಸಮಸ್ಯೆಗಳನ್ನು ಭಾವನಾತ್ಮಕ ಸಮಸ್ಯೆಗಳನ್ನು ಪರಿಹರಿಸುವಲ್ಲಿ; ಮಹತ್ವದ ಪಾತ್ರ ವಹಿಸುತ್ತದೆ.

''ವ್ಯಕ್ತಿಗೆ ತನ್ನ ಸ್ವ–ಸಮಸ್ಯೆಗಳನ್ನು ಬಿಡಿಸಲು ನೆರವಾಗುವ ಮಾರ್ಗ ದರ್ಶನಕ್ಕೆ ವೈಯಕ್ತಿಕ ಮಾರ್ಗದರ್ಶನ ಎನ್ನುವರು.'' ವ್ಯಕ್ತಿಯ ಅಭಿವೃದ್ಧಿ ಮತ್ತು ಹೊಂದಾಣಿಕೆಗೆ ಸಂಬಂಧಿಸಿದಂತೆ ಅವನಿಗೆ ನೀಡುವ ಎಲ್ಲ ಮಾರ್ಗದರ್ಶನವು ವೈಯಕ್ತಿಕ ಮಾರ್ಗದರ್ಶನ ಎನಿಸುತ್ತದೆ. ಅಲ್ಲದೆ ಭಾವನಾತ್ಮಕ ಹಾಗೂ ಸಾಮಾಜಿಕ ಹೊಂದಾಣಿಕೆಗೆ ಸಹಾಯಕವಾಗುವುದು.

### ವೈಯಕ್ತಿಕ ಮಾರ್ಗದರ್ಶನಗಳನ್ನು ಈ ಕೆಳಗಿನಂತೆ ನೀಡಬಹುದು.

**1. ದತ್ತಾಂಶಗಳ ಸಂಗ್ರಹ :** ಮೊದಲನೆಯದಾಗಿ ಈ ರೀತಿಯ ಮಾರ್ಗದರ್ಶನವನ್ನು ಬಯಸುವ ವ್ಯಕ್ತಿಯ ಅವಶ್ಯಕ ಮಾಹಿತಿಯನ್ನು ಸಂಗ್ರಹಿಸಬೇಕು. ಅಂದರೆ ಆತನ ದೈಹಿಕ, ಮಾನಸಿಕ, ಸಾಮಾಜಿಕ ಹಾಗೂ ಸಂವೇಗಾತ್ಮಕ ಬೆಳವಣಿಗೆಗೆ ಸಂಬಂಧಪಟ್ಟ ಮಾಹಿತಿ, ಶೈಕ್ಷಣಿಕ ಸಾಧಿಸಿ, ವ್ಯಕ್ತಿತ್ವದ ಲಕ್ಷಣಗಳು, ಅಭಿರುಚಿ, ಆಸಕ್ತಿ ಮನೋಧೋರಣೆ, ಕುಟುಂಬ, ಶಾಲೆಯ ಹಿನ್ನಲೆ ಮತ್ತು ಇತರ ಪರಿಸರದ ಸ್ಥಿತಿಗಳ ಬಗ್ಗೆ ಮಾಹಿತಿ ಸಂಗ್ರಹಿಸಬೇಕು.

**2. ಸಮಸ್ಯೆಗೆ ಕಾರಣ ಪತ್ತೆ ಹಚ್ಚಿ ಪರಿಹಾರೋಪಾಯ ನೀಡುವದು :** ಸಂಗ್ರಹಿಸಿದ ದತ್ತಾಂಶಗಳ ಆಧಾರದ ಮೇಲೆ ವ್ಯಕ್ತಿಯ ಸಮಸ್ಯೆಯನ್ನು ವಿಶ್ಲೇಷಿಸಬೇಕು. ವ್ಯಕ್ತಿಯ ಪರಿಸರದಲ್ಲಿ ಇರಬಹುದಾದ ಕಾರಣಗಳನ್ನು ಪಟ್ಟಿ ಮಾಡಬೇಕು. ಸಮಂಜಸ ಕಾರಣಗಳನ್ನು ಕಂಡು ಹಿಡಿಯಲು ವೈಯಕ್ತಿಕ

– 50 ನೇ ಪುಟಕ್ಕೆ ಮುಂದುವರೆದುದು

ಸೈದ್ಧಾಂತಿಕ

ISSN : 2249-2429

# ಶಾಲಾ ಮಟ್ಟದಲ್ಲಿ ಮಾರ್ಗದರ್ಶನ ಕಾರ್ಯಕ್ರಮದ ಸಂಘಟನೆ
# (Organisation of Guidance Programme at School Level)

ಎಸ್. ಎಲ್. ಹಿರೇಕೆರೂರ, ಉಪನ್ಯಾಸಕರು, ಜಗದ್ಗುರು ಪಂಚಾಚಾರ್ಯ ಶಿಕ್ಷಣ ಮಹಾವಿದ್ಯಾಲಯ, ಗದಗ.

## ಪೀಠಿಕೆ

ವೈಜ್ಞಾನಿಕ ಕ್ರಾಂತಿಯಿಂದ ತೀವ್ರಗತಿಯಲ್ಲಿ ಬದಲಾಗುತ್ತಿರುವ ಆಧುನಿಕ ಸಮಾಜದಲ್ಲಿ ವಿದ್ಯಾರ್ಥಿಗಳಿಗೆ ಅಗತ್ಯವಾಗಿ ಮಾರ್ಗದರ್ಶನ ನೀಡಬೇಕಾಗಿದೆ. ಈ ರೀತಿಯಲ್ಲಿ ಮಾರ್ಗದರ್ಶನ ಚಟುವಟಿಕೆಗಳು (Guidance Activities) ವ್ಯವಸ್ಥಿತವಾಗಿ ಸಂಘಟನೆಯಾಗಬೇಕು. ಅಲ್ಲದೇ ಒಂದು ಉತ್ತಮ ಶಾಲೆಯು ಮಕ್ಕಳ ಸರ್ವತೋಮುಖ ಬೆಳವಣಿಗೆಗಾಗಿ ಹಾಗೂ ಶಿಕ್ಷಣದ ಗುಣಾತ್ಮಕ ಮತ್ತು ಪರಿಮಾಣಾತ್ಮಕ ಅಭಿವೃದ್ಧಿಗಾಗಿ ಉತ್ತಮ ರೀತಿಯಲ್ಲಿ ಮಾರ್ಗದರ್ಶನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಬೇಕು. ನಿರ್ದಿಷ್ಟ ಉದ್ದೇಶಗಳೊಂದಿಗೆ ಮಾರ್ಗದರ್ಶನ ಕಾರ್ಯಕ್ರಮದ ಸುವ್ಯವಸ್ಥಿತ ಯೋಜನೆಯನ್ನು ಪೂರ್ವಭಾವಿಯಾಗಿ ತಯಾರಿಸಿಕೊಳ್ಳಬೇಕು. ಕಾರ್ಯಕ್ರಮದ ಮೇಲ್ವಿಚಾರಣೆ, ಮಾರ್ಗದರ್ಶನ ನೀಡಲು ಸಮರ್ಥ ನಾಯಕರನ್ನು ನಿರ್ಮಾಣ ಮಾಡಿ, ಕರ್ತವ್ಯ ಪ್ರಜ್ಞೆ, ಹೊಣೆಗಾರಿಕೆ ಹಾಗೂ ಪರಸ್ಪರ ಸಹಕಾರ ಮನೋಭಾವವನ್ನು ಎಲ್ಲ ವಿದ್ಯಾರ್ಥಿಗಳಲ್ಲಿ ಮೂಡಿಸುವದು.

## ಸಂಘಟನೆಯ ವ್ಯಾಖ್ಯೆಗಳು

1. **ಚಸ್ಟರ್ ಐ. ಬರ್ನಾರ್ಡ್ :** ಅವರ ಪ್ರಕಾರ ''ಎರಡು ಅಥವಾ ಎರಡಕ್ಕಿಂತ ಹೆಚ್ಚು ವ್ಯಕ್ತಿಗಳಲ್ಲಿರುವ ಸಹಕಾರದ ಕಾರ್ಯ ವ್ಯವಸ್ಥೆಯೇ ಸಂಘಟನೆಯಾಗಿದೆ.
2. **ಮೂನೆ ಮತ್ತು ರೈಲೆ :** ''ನಿರ್ದಿಷ್ಟವಾದ ಉದ್ದೇಶಗಳನ್ನು ಸಾಧಿಸಲು ಹಲವಾರು ವ್ಯಕ್ತಿಗಳ ಒಂದು ಕೂಟವೇ ಸಂಘಟನೆಯಾಗಿದೆ''.
3. **ಲೂಯಿಸ್ ಎ. ಅಲೆನ್ :** ''ಸಂಸ್ಥೆಯ ಉದ್ದೇಶಗಳನ್ನು ಸಾಧಿಸಲು, ಸಂಸ್ಥೆಯ ಕಾರ್ಯಗಳನ್ನು ಗುರುತಿಸಿ ಗುಂಪುಗಳಲ್ಲಿ ವಿಂಗಡಿಸುವ, ಅಧಿಕಾರವನ್ನು ಹಸ್ತಾಂತರಿಸಿ ಹೊಣೆಗಾರಿಕೆಯನ್ನು ನಿರ್ಧರಿಸುವ ಮತ್ತು ವ್ಯಕ್ತಿಗಳು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಲು ಅವರಲ್ಲಿ ಪರಸ್ಪರ ಸಂಬಂಧವನ್ನು ಸ್ಥಾಪಿಸುವ ಪ್ರಕ್ರಿಯೆಯೇ ಸಂಘಟನೆಯಾಗಿದೆ.''
4. **ವ್ಹೀಲರ್ :** ಅವರ ಪ್ರಕಾರ ''ಒಂದು ಸಂಸ್ಥೆಯು ನಿರ್ಧರಿಸಿದ ಉದ್ದೇಶಗಳನ್ನು ಸಾಧಿಸಲು ಅಗತ್ಯವಿರುವ ಕಾರ್ಯಗಳನ್ನು ಕೈಗೊಳ್ಳಲು ಅನುಕೂಲ ಮಾಡಿಕೊಡುವ ಏರ್ಪಾಡಿನ ರೂಪರೇಷೆಯೇ ಸಂಘಟನೆ.''
5. **ಪ್ರೊ. ಹೆನಿ :** ''ಸಾಮಾನ್ಯ ಉದ್ದೇಶಗಳನ್ನು ಪೂರ್ತಿಗೊಳಿಸಲು ಸಂಸ್ಥೆಯ ವಿವಿಧ ವಿಭಾಗಗಳಲ್ಲಿ ಸಾಮರಸ್ಯವಾಗಿ ಹೊಂದಾಣಿಕೆ ಮಾಡುವದೇ ಸಂಘಟನೆಯಾಗಿದೆ.''


## ಮಾರ್ಗದರ್ಶನ ಕಾರ್ಯಕ್ರಮದಲ್ಲಿ ಸಂಘಟನಾ ತತ್ವಗಳು (Principles of Organisation in Guidance Programme)

1. ಶಾಲೆಯಲ್ಲಿ ಸಂಘಟಿಸುವ ಯಾವದೇ ಶೈಕ್ಷಣಿಕ ಮಾರ್ಗದರ್ಶನ ಸೇವೆಯ ಕಾರ್ಯಕ್ರಮವು ಸೇವೆಯನ್ನು ಬಯಸುವ ವಿದ್ಯಾರ್ಥಿಗಳ ಆಸಕ್ತಿ, ಅವಶ್ಯಕತೆ ಮತ್ತು ಉದ್ದೇಶಗಳನ್ನು ಆಧರಿಸಿರಬೇಕು.
2. ಎಲ್ಲರಿಗೂ ಸಮಾನ ಅವಕಾಶಗಳನ್ನು ಒದಗಿಸುವ ತತ್ವದ ಆಧಾರದ ಮೇಲೆ ಸಂಘಟನೆಯನ್ನು ಹಮ್ಮಿಕೊಳ್ಳಬೇಕು.
3. ಮಗುವಿನ ನಿರ್ದಿಷ್ಟ ಸಮಸ್ಯೆಗಳನ್ನು, ಸಂಪೂರ್ಣ ಪರಿಸರವನ್ನು ಗುರುತಿಸಬೇಕು.
4. ವೃತ್ತಿಪರ ಮತ್ತು ಶೈಕ್ಷಣಿಕ ಅವಶ್ಯಕತೆಗಳಿಗೆ ಸಂಬಂಧಿಸಿದಂತೆ ಸೂಕ್ತ ಮಾಹಿತಿ ಸಂಗ್ರಹಿಸಬೇಕು.
5. ಪ್ರತಿಯೊಂದು ಸಂಸ್ಥೆಯು ಸೂಕ್ತವಾದ ಅನುಸರಣಾ ಸೇವೆ (Follow up Service) ಯನ್ನು ಹೊಂದಿರಬೇಕು.
6. ಮಾರ್ಗದರ್ಶನ ಸೇವೆಯಲ್ಲಿ ಮೌಲ್ಯಮಾಪನ ಸಾಧನಗಳಿಗೆ ಸೂಕ್ತ ಅವಕಾಶಗಳಿರಬೇಕು. ಇವುಗಳನ್ನು ಅವಶ್ಯವಿದ್ದಲ್ಲಿ ಮಾತ್ರ ಬಳಸಬೇಕು.
7. ಮಾರ್ಗದರ್ಶನ ಸೇವೆಯಲ್ಲಿ ಸಹಾಯ ಮಾಡಲು ಪ್ರತಿಯೊಬ್ಬ ಸಿಬ್ಬಂದಿಯು ಆಸಕ್ತಿ ಮತ್ತು ಪ್ರಯತ್ನ ಮಾಡಬೇಕು.
8. ಶಾಲೆಯಲ್ಲಿ ಲಭ್ಯವಿರುವ ಸಾಧನ ಸಂಪನ್ಮೂಲಗಳನ್ನು, ತಂತ್ರಗಳನ್ನು ಬಳಸಬೇಕು.
9. ಸಂಘಟನೆಯಲ್ಲಿ ದಕ್ಷತೆಯನ್ನು ಕಾಪಾಡಬೇಕು.
10. ವಿದ್ಯಾರ್ಥಿಗಳಿಗೆ ತಂಡಸ್ಫೂರ್ತಿ (Team Spirit) ಯನ್ನು ತರುವಂತೆ ಮಾರ್ಗದರ್ಶನ ಕಾರ್ಯಕ್ರಮ ಸಂಘಟನೆ ಮಾಡಬೇಕು.
11. ಮಾರ್ಗದರ್ಶನ ನೀಡುವ ವಿದ್ಯಾರ್ಥಿಗಳ ಸಂಪೂರ್ಣ ಮಾಹಿತಿಯನ್ನು ಪಡೆದಿರಬೇಕು.

## ಮಾರ್ಗದರ್ಶನ ಕಾರ್ಯಕ್ರಮ ಸಂಘಟನೆ ಮಾಡುವ ಮುನ್ನ ಗಮನಿಸಬೇಕಾದ ಅಂಶಗಳು

1. ನಿರ್ದಿಷ್ಟವಾದ ಉದ್ದೇಶ ಮತ್ತು ಗುರಿಗಳನ್ನು ಹೊಂದಿರಬೇಕು.
2. ಮಕ್ಕಳ ಸರ್ವತೋಮುಖ ಬೆಳವಣಿಗೆಯ ದೃಷ್ಟಿಯಿಂದ ಮುಖ್ಯೋಪಾಧ್ಯಾಯ ಮತ್ತು ಶಿಕ್ಷಕರ ನಡುವೆ ಪರಸ್ಪರ ಸ್ನೇಹ, ಸಹಕಾರ, ಗೌರವ, ವಿಶ್ವಾಸ ಹೊಂದಾಣಿಕೆ ಮನೋಭಾವ ಇರಬೇಕು.
3. ಮಾರ್ಗದರ್ಶನದಲ್ಲಿ ತರಬೇತಿ ಪಡೆದ ಸಲಹೆಗಾರರಿಗೆ ಅಥವಾ ಶಿಕ್ಷಕರಿಗೆ ಉಳಿದ ಪೂರ್ಣ ನೆರವು ನೀಡುವುದರ ಮೂಲಕ ವಿದ್ಯಾರ್ಥಿಗಳ ಬಗ್ಗೆ ಮಾಹಿತಿ ಸಂಗ್ರಹಣೆ ಮಾಡಿ ಸಮೂಹ ಅಥವಾ ವೈಯಕ್ತಿಕ ಮಾರ್ಗದರ್ಶನ ನೀಡುವ ಸಾಮರ್ಥ್ಯ ನಾಯಕತ್ವವನ್ನು ಹೊಂದಿರಬೇಕು.
4. ವಿದ್ಯಾರ್ಥಿಗಳ ಬಗ್ಗೆ ಸಂಗ್ರಹಿಸಿದ ಮಾಹಿತಿಗಳನ್ನೊಳಗೊಂಡ ಸಂಚಿತ ದಾಖಲೆಗಳನ್ನು ವ್ಯವಸ್ಥಿತ ಮತ್ತು ಕ್ರಮಬದ್ಧವಾಗಿಡುವುದು.
5. ಮಾರ್ಗದರ್ಶನ ಕಾರ್ಯಕ್ರಮ ಪರಿಣಾಮಕಾರಿಯಾಗಿ ಸಂಘಟನೆ ಆಗಬೇಕಾದರೆ ಪೋಷಕರು ಸಹ ಇಂತಹ ಕಾರ್ಯಕ್ರಮಗಳಲ್ಲಿ ಭಾಗವಹಿಸಬೇಕು. ಅದಕ್ಕಾಗಿ ಶಾಲೆಗಳಲ್ಲಿ ಶಿಕ್ಷಕ–ಪೋಷಕ ಸಂಘಗಳನ್ನು ರಚಿಸಿಕೊಂಡು ಆ ಮೂಲಕ ಅವರಿಂದ ಸಲಹೆ, ಸೂಚನೆ ಮತ್ತು ಅಗತ್ಯ ಸಹಕಾರಗಳನ್ನು ಪಡೆಯಬೇಕು.
6. ಶಾಲಾ ವೇಳಾಪಟ್ಟಿಯಲ್ಲಿ ಮಾರ್ಗದರ್ಶನ ಬೋಧನೆಗೆ ಇಲ್ಲವೆ ಕಾರ್ಯಕ್ರಮಕ್ಕೆ ಸೂಕ್ಷ್ಮ ಅವಕಾಶ ನೀಡಬೇಕು.

ISSN : 2249-2429


7. ಶಾಲಾ ಸಂಪನ್ಮೂಲಕ್ಕನುಸಾರವಾಗಿ ಅದರ ಸದ್ವಿನಿಯೋಗಕ್ಕೆ ವ್ಯವಸ್ಥಿತ ಯೋಜನೆಯನ್ನು ತಯಾರಿಸಿಕೊಳ್ಳಬೇಕು.
8. ಮಾರ್ಗದರ್ಶನ ಕಾರ್ಯಕ್ರಮದ ಅಶ್ರಯದಲ್ಲಿ ತಜ್ಞರ ಉಪನ್ಯಾಸಗಳನ್ನು ವೃತ್ತಿವಿಚಾರ ಸಂಕೀರ್ಣಗಳನ್ನು ಏರ್ಪಡಿಸುವದು.
9. ವಿದ್ಯಾರ್ಥಿಗಳೊಂದಿಗೆ ಕೈಗಾರಿಕೆ ಮತ್ತು ಕಾರ್ಖಾನೆ ಕೇಂದ್ರಗಳಿಗೆ ಭೇಟಿ ನೀಡುವುದು. ಚಲನ ಚಿತ್ರಗಳ ಇಲ್ಲವೆ ಫಿಲಂ ಸ್ಟ್ರಿಪ್ಸಗಳ ಪ್ರದರ್ಶನ ಮುಂತಾದ ಚಟುವಟಿಕೆಗಳನ್ನು ಕೈಗೊಳ್ಳುವುದರ ಮೂಲಕ ವಿದ್ಯಾರ್ಥಿಗಳಿಗೆ ವೈಯಕ್ತಿಕ ಮಾರ್ಗದರ್ಶನ ನೀಡುವುದು.
10. ಶಾಲಾ ಮುಖ್ಯಸ್ಥರು ಸಲಹೆಗಾರರು, ಶಿಕ್ಷಕರು, ಸಾಮೂಹಿಕವಾಗಿ ತೆಗೆದುಕೊಂಡ ತಿರ್ಮಾನಗಳನ್ನು ಕಾರ್ಯರೂಪಕ್ಕೆ ತರುವುದು ಒಂದು ವೇಳೆ ಅಗತ್ಯವಾದರೆ ಅಲ್ಪ ಸ್ವಲ್ಪ ಬದಲಾವಣೆಗಳನ್ನು ಮಾಡಿಕೊಳ್ಳಬಹುದು.
11. ಮಾರ್ಗದರ್ಶನ ಕಾರ್ಯಕ್ರಮದ ಬಗೆಗಿನ ಸಾಧಕ-ಬಾಧಕಗಳನ್ನು ಕುರಿತು ಮೌಲ್ಯಮಾಪನ ಮಾಡಬೇಕು.
12. ಮಾರ್ಗದರ್ಶನ ಕಾರ್ಯಕ್ರಮವು ಮಕ್ಕಳ ಹಿತ ದೃಷ್ಟಿಯಿಂದ ಚಲನಾತ್ಮಕವಾಗಿರಬೇಕು.

## ಶಾಲಾಮಟ್ಟದಲ್ಲಿ ಮಾರ್ಗದರ್ಶನದ ಸಂಘಟನೆ (Guidance Programme of Institutional Level)

ವಿಜ್ಞಾನ ಹಾಗೂ ತಂತ್ರಜ್ಞಾನದ ತೀವ್ರ ಪ್ರಗತಿಯಿಂದಾಗಿ ಕೆಲಸದ ಜಗತ್ತು (The World of Work) ಅತ್ಯಂತ ವಿಶಾಲವಾಗಿದೆ. ಪರಿಣಾಮವಾಗಿ ವಿದ್ಯಾರ್ಥಿಗಳು ಬಹು ಆಯ್ಕೆಗಳಿಂದಾಗಿ ಗೊಂದಲಕ್ಕೀಡಾಗು ತ್ತಾರೆ. ಅದರಿಂದ ಪಾರಾಗಲು ಆತನು ತನ್ನ ಸ್ನೇಹಿತರಿಂದ, ಶಿಕ್ಷಕರಿಂದ, ಪಾಲಕರಿಂದ ಮತ್ತು ಪರಿಚಿತರಿಂದ ಸಹಾಯ ಪಡೆಯುತ್ತಾನೆ. ಆದರೆ ಈ ಎಲ್ಲಾ ಮೂಲಗಳಿಂದ ಆತನಿಗೆ ಪರಿಪೂರ್ಣ ಮತ್ತು ನಂಬಲರ್ಹವಾದ ಮಾಹಿತಿ ಲಭ್ಯವಾಗಲಾರದು. ಈ ಸಮಸ್ಯೆ ನಿವಾರಣೆಗಾಗಿ ಶಾಲೆಗಳಲ್ಲಿ ಮಾರ್ಗದರ್ಶನ ಸೇವೆಯನ್ನು ಆರಂಭಿಸಲಾಗಿದೆ. ವಿದ್ಯಾರ್ಥಿಗಳಿಗೆ ಸರಿಯಾದ ಮಾರ್ಗವನ್ನು ಕಂಡುಕೊಳ್ಳುವಲ್ಲಿ ಇದು ವ್ಯವಸ್ಥಿತ ರೀತಿಯ ಮಾರ್ಗದರ್ಶನ ಸೇವೆ ನೀಡುತ್ತದೆ.

## ಗಮನಿಸಬೇಕಾದ ಅಂಶಗಳು

**ಶಾಲಾ ಮಟ್ಟದಲ್ಲಿ ಮಾರ್ಗದರ್ಶನ ಸಂಘಟನೆ**

| ಮುಖ್ಯೋಪಾಧ್ಯಾಯರ ಪಾತ್ರ | ಸಮಿತಿಯ ಪಾತ್ರ | ಶಿಕ್ಷಕರ ಪಾತ್ರ | ಕ್ಷೇತ್ರ ಸಲಹೆಗಾರ | ಮನೋ ವಿಜ್ಞಾನಿಗಳ ಪಾತ್ರ | ಆರೋಗ್ಯ ತಜ್ಞರ ಪಾತ್ರ |
|---|---|---|---|---|---|

## ಮುಖ್ಯೋಪಾಧ್ಯಾಯರ ಪಾತ್ರ

ಶಿಕ್ಷಣ ಮಂತ್ರಾಲಯದ ಪ್ರಕಟಣೆಯಾದ ''ಶೈಕ್ಷಣಿಕ ಮತ್ತು ವೃತ್ತಿ ಮಾರ್ಗದರ್ಶನದ ಕೈಪಿಡಿಯ' ಪ್ರಕಾರ ಮುಖ್ಯೋಪಾಧ್ಯಾಯರು/ ಪ್ರಾಚಾರ್ಯರು ಶಾಲಾಮಟ್ಟದ ಮಾರ್ಗದರ್ಶನ ಸಂಘಟನೆಯ ಕೇಂದ್ರ ವ್ಯಕ್ತಿಯಾಗಿದ್ದಾರೆ. ಅವರು ಮಾರ್ಗದರ್ಶನ ಸಂಘಟನೆಯ ಉದ್ದೇಶಗಳ ಕುರಿತು ಸಹಾನುಭೂತಿ ಹೊಂದಿರಬೇಕು ಮತ್ತು ಹೃತ್ಪೂರ್ವಕ ಬೆಂಬಲವನ್ನು ನೀಡಬೇಕು.''

ಶಾಲಾ ಮಟ್ಟದಲ್ಲಿ ಮಾರ್ಗದರ್ಶನ ಸೇವೆಯನ್ನು ಯಶಸ್ವಿಗೊಳಿಸಲು ಮುಖ್ಯೋಪಾಧ್ಯಾಯರು ಈ ಮುಂದಿನ ಕರ್ತವ್ಯ ನಿರ್ವಹಿಸಬೇಕು.

**1. ನೈತಿಕ ಪಾತ್ರ :** ಮಾರ್ಗದರ್ಶನ ಸೇವೆಯ ಕುರಿತು ಆತನು ಧನಾತ್ಮಕ ಮನೋಭಾವವನ್ನು ಹೊಂದಿರಬೇಕು ಮಾರ್ಗದರ್ಶನ ಸೇವೆಯ ಧನಾತ್ಮಕ ಪಾತ್ರವನ್ನು ಗುರುತಿಸಿ ಅದರ ಸಾಧನೆಗಾಗಿ ಸಮಯವನ್ನು ನಿರ್ದಿಷ್ಟಗೊಳಿಸಬೇಕು.

**2. ಆಡಳಿತಾತ್ಮಕ ಪಾತ್ರ :** ಶಾಲೆಯ ಮುಖ್ಯಸ್ಥನಾಗಿ ಮಾರ್ಗದರ್ಶನ ಸೇವಾ ಸಂಘಟನೆಗೆ ಸಂಬಂಧಿಸಿದ ಎಲ್ಲ ಚಟುವಟಿಕೆಗಳ ಆಡಳಿತ ನಿರ್ವಹಣೆ ಮತ್ತು ಮೇಲ್ವಿಚಾರಣೆ ಮುಖ್ಯೋಪಾಧ್ಯಾಯನ ಹೊಣೆಯಾಗಿರುತ್ತದೆ. ಮೊದಲು ತಮ್ಮ ಶಾಲೆಯಲ್ಲಿ ಮಾರ್ಗದರ್ಶನ ಘಟಕವನ್ನು ಆರಂಭಿಸಲು ಸಮ್ಮತಿಯನ್ನು ಪಡೆದುಕೊಳ್ಳಬೇಕು. ಮತ್ತು ಅದಕ್ಕಾಗಿ ಸಲಹೆಗಾರರನ್ನು ನೇಮಿಸಬೇಕು. ಶಾಲೆಯಲ್ಲಿನ ಇತರ ಸಹ ಶಿಕ್ಷಕರನ್ನು ಒಳಗೊಂಡಂತೆ ಮಾರ್ಗದರ್ಶನ ಸಮಿತಿಯನ್ನು ರಚಿಸಬೇಕು. ಅವರೆಲ್ಲರಿಗೂ ಸೂಕ್ತ ಕರ್ತವ್ಯವನ್ನು ವಹಿಸಿಕೊಡಬೇಕು.

ISSN : 2249-2429

## ಮಾರ್ಗದರ್ಶನದಲ್ಲಿ ಶಿಕ್ಷಕರ ಪಾತ್ರ

ಶಿಕ್ಷಕರು ಪ್ರತ್ಯಕ್ಷವಾಗಿ ಹಾಗೂ ನಿಕಟವಾಗಿ ವರ್ಗಕೋಣೆಯ ಚಟುವಟಿಕೆಯಲ್ಲಿ ಹಾಗೂ ಮಾರ್ಗದರ್ಶನ ಕಾರ್ಯದಲ್ಲಿ ಪಾಲ್ಗೊಳ್ಳುವರು

''ಪ್ರತಿಯೊಬ್ಬ ಶಿಕ್ಷಕ ಮಾರ್ಗದರ್ಶಕನಾಗಿದ್ದಾನೆ. ಮತ್ತು ಪ್ರತಿಯೊಬ್ಬ ಮಾರ್ಗದರ್ಶಕ ಶಿಕ್ಷಕನಾಗಿದ್ದಾನೆ.'' ಇವೆರಡು ಒಂದೇ ಶೈಕ್ಷಣಿಕ ಪ್ರಕ್ರಿಯೆಯ ಅಂಶಗಳಾಗಿವೆ.

## ಕಾರ್ಯಗಳು

ಶಿಕ್ಷಕರು ಪ್ರಾಥಮಿಕವಾಗಿ ವಿದ್ಯಾರ್ಥಿಗಳ ಸಮಸ್ಯೆಗಳು ಮತ್ತು ಅಗತ್ಯಗಳಿಗೆ ಸಂಬಂಧಿಸಿರುತ್ತಾರೆ. ಅವರ ಹೊಂದಾಣಿಕೆ ಮತ್ತು ಅವರ ಬೆಳವಣಿಗೆ ಇತ್ಯಾದಿ ವಿಶೇಷ ಸಮಸ್ಯೆಗಳನ್ನು ಪರಿಹರಿಸುವುದು ಅವರ ಮೂಲಭೂತ ಕರ್ತವ್ಯವಾಗಿದೆ.

a. ವಿದ್ಯಾರ್ಥಿಗಳಿಗೆ ಸಂಬಂಧಿಸಿದ ಕರ್ತವ್ಯ.

b. ವರ್ಗಕೋಣೆಯ ಬೋಧನೆಗೆ ಸಂಬಂಧಿಸಿದ ಕರ್ತವ್ಯ.

c. ವಿದ್ಯಾರ್ಥಿಗಳ ಸಲಹೆಗೆ ಸಂಬಂಧಿಸಿದ ಕರ್ತವ್ಯ.

d. ವಿದ್ಯಾರ್ಥಿಗಳ ಮೌಲ್ಯಮಾಪನ

ಶಿಕ್ಷಕರು ತಮ್ಮ ವಿದ್ಯಾರ್ಥಿಗಳನ್ನು ಕೆಲವು ವೇಳೆ ಅವರ ಪಾಲಕರಿಗಿಂತ ಉತ್ತಮವಾಗಿ ಅರಿತಿರುತ್ತಾರೆ. ಶಿಕ್ಷಕರು ವಿದ್ಯಾರ್ಥಿಗಳ ಶೈಕ್ಷಣಿಕ ಸಾಮರ್ಥ್ಯ, ಶೈಕ್ಷಣಿಕ ಹಿನ್ನೆಲೆ, ಆತನ ಕುಟುಂಬ, ಶೈಕ್ಷಣಿಕ ಗುರಿಗಳು, ವೃತ್ತಿಯೋಜನೆಗಳು, ಆತನ ಆರೋಗ್ಯ ಸಮವಯಸ್ಕರ ಗುಂಪು, ಹವ್ಯಾಸಗಳು ಮತ್ತು ವಿರಾಮ ಕಾಲದ ಚಟುವಟಿಕೆಗಳು ಮತ್ತು ಆತನ ವರ್ತನೆಗಳನ್ನು ತಿಳಿದಿರುತ್ತಾರೆ.

## ಮಾರ್ಗದರ್ಶನ ಕಾರ್ಯಕರ್ತ (ಶಿಕ್ಷಕ) ರ ಪಾತ್ರ

ಮಾರ್ಗದರ್ಶನ ಕಾರ್ಯಕ್ರಮದಲ್ಲಿ ಕ್ರಿಯಾತ್ಮಕವಾಗಿ ಭಾಗವಹಿಸಿದ ಎಲ್ಲಾ ಶಿಕ್ಷಕರು ಮಾರ್ಗದರ್ಶನ ಕಾರ್ಯಕರ್ತರೆಂದು ಭಾವಿಸಲಾಗುತ್ತದೆ. ಎಲ್ಲಿ ಖಾಯಂ ಸಲಹೆಗಾರರನ್ನು ನೇಮಿಸಲಾಗುವುದಿಲ್ಲವೋ ಅಲ್ಲಿರುವ ಶಿಕ್ಷಕರಲ್ಲಿ ಒಬ್ಬರಿಗೆ ಆ ಕಾರ್ಯವನ್ನು ವಹಿಸಿಕೊಡಲಾಗಿರುತ್ತದೆ. ಅವರನ್ನು ಮಾರ್ಗದರ್ಶನ ಕಾರ್ಯಕರ್ತರೆಂದು ಕರೆಯಲಾಗುತ್ತದೆ. ವಿಶಾಲ ಅರ್ಥದಲ್ಲಿ ಮಾರ್ಗದರ್ಶನ ವೃತ್ತಿಗಾಗಿ ನಿಯಮಿತವಾಗಿ ತರಬೇತಿ ಹೊಂದಿದ ವ್ಯಕ್ತಿಯನ್ನು ಸಲಹೆಗಾರನ ಕರ್ತವ್ಯಗಳನ್ನು ನೋಡಿಕೊಳ್ಳಲು ನೇಮಿಸಲಾಗುತ್ತದೆ. ಆದಾಗ್ಯೂ ಕೆಲವು ಶಿಕ್ಷಕರು ತಮ್ಮ ಸಾಮರ್ಥ್ಯಗಳು ಮತ್ತು ಅರ್ಹತೆಗಳು ಸಹಜ ಬುದ್ಧಿವಂತಿಕೆಯಿಂದ ಮಾರ್ಗದರ್ಶನ ಕಾರ್ಯವನ್ನು ನಿರ್ವಹಿಸುವರು.

ವಿದ್ಯಾರ್ಥಿಗಳ ಜೀವನದ ಮಹಾತ್ವಾಕಾಂಕ್ಷೆಯನ್ನು ತಿಳಿಯಲು ವೃತ್ತಿ ಮಾಹಿತಿಯನ್ನು ಶಿಕ್ಷಕರು ನೀಡುವರು ಇತರರನ್ನು ಮಾರ್ಗದರ್ಶನ ಕ್ಷೇತ್ರದಲ್ಲಿ ತರಬೇತಿಗೊಳಿಸುವ ಮುಂತಾದ ಕೆಲವು ಮಹತ್ವದ ಅಂಶಗಳನ್ನು ನಿರ್ವಹಿಸುವನು.

**1. ಎಲ್ಲ ವಿದ್ಯಾರ್ಥಿಗಳನ್ನು ಅರ್ಥ ಮಾಡಿಕೊಳ್ಳುವದು :** ವರ್ಗಕೋಣೆಯ ಒಳಗೆ ಮತ್ತು ಹೊರಗೆ ಎರಡರಲ್ಲೂ ವಿದ್ಯಾರ್ಥಿಗಳನ್ನು ವೀಕ್ಷಿಸುವದು ಈ ಕಾರ್ಯವನ್ನು ಮೌಲ್ಯಮಾಪನ ವಿದ್ಯಾರ್ಥಿಗಳಿಂದ ಮಾಹಿತಿ ಪಡೆಯುವದು, ಅವರ ಸ್ನೇಹಿತರು ಮತ್ತು ಪಾಲಕರು ಹಾಗೂ ಇತರೆ ಶಿಕ್ಷಕರಿಂದ ಸಾಧ್ಯವಾದಲ್ಲಿ ಅವರ ಅವರ ಮನೆಗೆ ಭೇಟಿ ನೀಡುವ ಮೂಲಕ ನಿರ್ವಹಿಸಬೇಕು.

**2. ವೈಯಕ್ತಿಕ ಗೌರವ ಹೊಂದಿರುವದು :** ವಿದ್ಯಾರ್ಥಿಗಳಲ್ಲಿ ವೈಯಕ್ತಿಕ ಭಿನ್ನತೆ ಇರುತ್ತದೆ. ಪ್ರತಿಯೊಬ್ಬರು ತಮ್ಮದೇಯಾದ ಗುಣ ಮತ್ತು ದೌರ್ಬಲ್ಯಗಳನ್ನು ಹೊಂದಿರುತ್ತಾರೆ. ಯಾವಾಗಲೂ ವಿದ್ಯಾರ್ಥಿಗಳ ದೃಷ್ಟಿಕೋನವನ್ನು ತಿಳಿಯಬೇಕು. ಕೆಲವು ಪ್ರಶ್ನೆಗಳನ್ನು ಕೇಳುವದರಿಂದ ಮೌಲ್ಯಮಾಪನ ಮಾಡಬೇಕು.

3. ವಿದ್ಯಾರ್ಥಿಗಳಿಗೆ ಅವಶ್ಯಕ ಅನುಭವಗಳನ್ನು ಒದಗಿಸಿ ಕೊಡಬೇಕು.

4. ವಿದ್ಯಾರ್ಥಿಗಳು ಸ್ವ ಪ್ರಜ್ಞೆಯನ್ನು ಬೆಳೆಸಿಕೊಳ್ಳಲು ಸಹಾಯ ಮಾಡುವದು.

## ಕ್ಷೇತ್ರ ಸಲಹೆಗಾರ

ಶಿಕ್ಷಣ ಮಂತ್ರಾಲಯ ನಿಯತಕಾಲಿಕೆಯಲ್ಲಿ ಮಾಧ್ಯಮಿಕ ಶಾಲೆಗಳಿಗೆ ಅಥವಾ ಪ್ರತಿ ಜಿಲ್ಲೆಗೆ ಇಬ್ಬರು ತಾಂತ್ರಿಕ ಸಹಾಯಕರನ್ನೊಳಗೊಂಡ ಒಬ್ಬ ಕ್ಷೇತ್ರ ಸಲಹೆಗಾರರನ್ನು ಅಥವಾ ಪ್ರಾದೇಶಿಕ ಸಲಹೆಗಾರರನ್ನು ಹೊಂದಿರಬೇಕೆಂದು ಸೂಚಿಸುತ್ತದೆ. ಪ್ರತಿಯೊಂದು ಮಾಧ್ಯಮಿಕ ಶಾಲೆ ಖಾಯಂ ಸಲಹೆಗಾರರನ್ನು ಹೊಂದುವವರೆಗೆ ಕ್ಷೇತ್ರ ಸಲಹೆಗಾರನ ಪ್ರಮುಖ ಕಾರ್ಯ ಎಂದರೆ, ಶಿಕ್ಷಕರಿಗೆ, ಸಲಹೆಗಾರರಿಗೆ ಸಾಧ್ಯವಾದ ಎಲ್ಲ ಸಹಾಯ ಸಹಕಾರ ನೀಡುವದಾಗಿದೆ ಮತ್ತು ರಾಜ್ಯ ಕಛೇರಿಗೆ ಸಂಶೋಧನಾ ಕೆಲಸದಲ್ಲಿ ಸಹಕಾರ ನೀಡುವದು ಹಾಗೂ ಪ್ರಾದೇಶಿಕ ಉದ್ಯೋಗ ವಿನಿಯಮಗಳಿಗೆ ವೃತ್ತಿ ಮತ್ತು ಶೈಕ್ಷಣಿಕ ಮಾಹಿತಿ ಸಂಗ್ರಹಿಸಲು ಸಹಾಯ ಮಾಡುವದು.

## ಮನೋವಿಜ್ಞಾನಿಗಳ ಪಾತ್ರ

ಈತನು ಸಲಹಾ ಸೇವೆಯ ತಾಂತ್ರಿಕ ಸಿಬ್ಬಂದಿಯಾಗಿರುತ್ತಾನೆ. ಸಲಹೆಗಾರನ ಮೇಲಿನ ಸ್ಥಾನದಲ್ಲಿ ಕಾರ್ಯನಿರ್ವಹಿಸುವ ಈತನು ವಿದ್ಯಾರ್ಥಿಗಳ ಸಂವೇಗಾತ್ಮಕ ಸಮಸ್ಯೆಗಳೊಂದಿಗೆ ವ್ಯವಹರಿಸುವನು ಈತನು ಶಿಕ್ಷಕರೊಂದಿಗೆ, ಮಕ್ಕಳೊಂದಿಗೆ ಸಂಬಂಧ ಹೊಂದಿದ್ದು ಮಕ್ಕಳ ಸಮಸ್ಯೆಗಳನ್ನು ಹೊರಗೆಳೆಯುತ್ತಾನೆ. ಮತ್ತು ಅವುಗಳನ್ನು ಪರಿಹರಿಸಲು ಪ್ರಯತ್ನಿಸುತ್ತಾನೆ. ಈತನು ಮನೋವೈಜ್ಞಾನಿಕ ತಂತ್ರಗಳನ್ನು ಬಳಸುವನು ಮತ್ತು ಪರೀಕ್ಷಾ ರಹಿತ ತಂತ್ರ ಬಳಸುವನು.

## ಮಾರ್ಗದರ್ಶನ ಕಾರ್ಯಕ್ರಮದ ಮೌಲ್ಯಮಾಪನ (Evaluation of Guidance Programme)

ಮಾರ್ಗದರ್ಶನ ಕಾರ್ಯಕ್ರಮವನ್ನು ಈ ಕೆಳಗಿನ ಅಂಶಗಳಿಂದ ಮೌಲ್ಯಮಾಪನ ಮಾಡುವದು.

1. ಮೌಲ್ಯಮಾಪನ ಕಾರ್ಯಕ್ರಮದ ಸಂಘಟನೆ ಮತ್ತು ಆಡಳಿತಾತ್ಮಕ ಪ್ರಕ್ರಿಯೆಯನ್ನು ವಿಮರ್ಶಾತ್ಮಕವಾಗಿ ಪರಿಶೀಲಿಸುವದು.
2. ಪುನಶ್ಚೇತನ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವದು.
3. ವಿದ್ಯಾರ್ಥಿಗಳ ವೈಯಕ್ತಿಕ ಭಿನ್ನತೆಗಳ ಅಧ್ಯಯನಕ್ಕೆ ಅವಕಾಶ ಒದಗಿಸುವದು.
4. ಮಾಹಿತಿ ಕಾರ್ಯಕ್ರಮವನ್ನು ವಿಸ್ತರಿಸುವದು.
5. ಔದ್ಯೋಗಿಕ ಸೇವೆಗಳನ್ನು ವಿವೇಚಿಸುವದು.
6. ಶಾಲೆ ಬಿಟ್ಟವರ ಬಗ್ಗೆ ಅಧ್ಯಯನ ಕೈಗೊಳ್ಳುವದು.
7. ಮಾರ್ಗದರ್ಶನ ಮತ್ತು ಪಠ್ಯಕ್ರಮಗಳ ನಡುವಿನ ಸಂಬಂಧವನ್ನು ತಿಳಿಯುವದು.
8. ಮಾರ್ಗದರ್ಶನ ಮತ್ತು ಸಮುದಾಯಗಳ ನಡುವಿನ ಸಂಬಂಧವನ್ನು ತಿಳಿಯುವದು.

## ಉಪಸಂಹಾರ

ಕಾಲಕಾಲಕ್ಕೆ ಬದಲಾಗುತ್ತಿರುವ ಸಾಮಾಜಿಕ, ಆರ್ಥಿಕ, ತಾಂತ್ರಿಕ ಮತ್ತು ವೈಜ್ಞಾನಿಕ ಪ್ರಗತಿಗನುಸಾರವಾಗಿ ವಿದ್ಯಾರ್ಥಿಗಳಿಗೆ ಅಗತ್ಯ ಮಾರ್ಗದರ್ಶನ ನೀಡುವ ಜವಾಬ್ದಾರಿ ಶಾಲೆಗಳಿಗೆ ಸೇರಿದೆ. ಆದ್ದರಿಂದ ಮಾರ್ಗದರ್ಶನ ಚಟುವಟಿಕೆಗಳು ಶಾಲಾ ಆಡಳಿತ ಮತ್ತು ಸಂಘಟನೆಯ ಅವಿಭಾಜ್ಯ ಅಂಗವಾಗಬೇಕು. ಅಲ್ಲದೆ ಒಂದು ಉತ್ತಮ ಶಾಲೆಯು ಮಕ್ಕಳ

– 50 ನೇ ಪುಟಕ್ಕೆ ಮುಂದುವರೆದುದು

ISSN : 2249-2429
ಸೈದ್ಧಾಂತಿಕ

# ರಾಷ್ಟ್ರೀಯ ಪಠ್ಯಕ್ರಮ ನೆಲೆಗಟ್ಟು (ಚೌಕಟ್ಟು)-2005

ಎಸ್. ಎಸ್. ಭೂಮಣ್ಣವರ, ಉಪನ್ಯಾಸಕರು, ಬಿ. ವ್ಹಿ. ವ್ಹಿ. ಎಸ್. ಶಿಕ್ಷಣ ಮಹಾವಿದ್ಯಾಲಯ, ಬಾಗಲಕೋಟ.

## ಪೀಠಿಕೆ

ಬದಲಾವಣೆಯೇ ಜಗದ ನಿಯಮ ಎಂಬಂತೆ ಶಿಕ್ಷಣ ವ್ಯವಸ್ಥೆಯನ್ನು ನೋಡಿದಾಗ ಐತಿಹಾಸಿಕವಾಗಿ ಹೊಸ ಹೊಸ ಬದಲಾವಣೆ, ಮಾರ್ಪಾಡುಗಳು ಜರುಗುತ್ತಾ ಬಂದಿವೆ, ಮೆಕಾಲೆ ವರದಿಯಿಂದ ಇಂದಿನ ಆಧುನಿಕ ಆಯೋಗಗಳ ಶಿಫಾರಸ್ಸುಗಳವರೆಗೆ ಬದಲಾಗುತ್ತಾ ಬಂದಿವೆ. ಇದರ ತಳಹದಿಯಂತೆ ಮಾನ್ಯ ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವರು ಲೋಕ ಸಭೆಯಲ್ಲಿ ನೀಡಿದ ಹೇಳಿಕೆಯ ನಂತರ ಎನ್. ಸಿ. ಇ. ಆರ್. ಟಿ. ಯು ಪಠ್ಯಕ್ರಮ ಪರಿಷ್ಕರಣೆಯ ಕೆಲಸವನ್ನು ಕೈಗೆತ್ತಿಕೊಳ್ಳಬೇಕೆಂದು ತಿಳಿಸಿದ ಮೇಲೆ ಮಂಡಳಿಯ ಕಾರ್ಯಕಾರೀ ಸಮಿತಿಯು 2004 ಜುಲೈ ತಿಂಗಳ ದಿನಾಂಕ 14 ರಿಂದ 19ರ ವರೆಗೆ ನಡೆದ ಸಭೆಯಲ್ಲಿ ರಾಷ್ಟ್ರೀಯ ಪಠ್ಯಕ್ರಮ ನೆಲೆಗಟ್ಟನ್ನು ಪರಿಷ್ಕರಿಸಲು ತಿರ್ಮಾನಿಸಿತು. ಇದಾದ ನಂತರ 'ಲರ್ನಿಂಗ್ ವಿತೌಟ್ ಬರ್ಡನ್' (1993) ವರದಿಯನ್ನು ಆಧರಿಸಿ ರಾಷ್ಟ್ರೀಯ ಶಾಲಾ ಶಿಕ್ಷಣ ಪಠ್ಯಕ್ರಮದ ನೆಲೆಗಟ್ಟನ್ನು (ರಾ. ಶಾ. ಶಿ. ಪ. ನೆ. 2000) ಪರಿಷ್ಕರಿಸುವದು ಅಗತ್ಯವೆಂದು ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯದ ಶಿಕ್ಷಣ ಕಾರ್ಯದರ್ಶಿಗಳು ಎನ್. ಸಿ. ಇ. ಆರ್. ಟಿ. ಯು ನಿರ್ದೇಶಕರಿಗೆ ತಿಳಿಸಿದರು. ಈ ತೀರ್ಮಾನಗಳ ಹಿನ್ನೆಲೆಯಲ್ಲಿ ಪ್ರೊ. ಯಶಪಾಲ್ ರವರ ಅಧ್ಯಕ್ಷತೆಯಲ್ಲಿ ಒಂದು ರಾಷ್ಟ್ರೀಯ ಚಾಲನಾ ಸಮಿತಿ ಮತ್ತು 21 ರಾಷ್ಟ್ರೀಯ ಕೇಂದ್ರ ಗುಂಪುಗಳ ರಚನೆ ಆಯಿತು. ಈ ಸಮಿತಿಗಳು ಉನ್ನತ ಶಿಕ್ಷಣ ಸಂಸ್ಥೆಗಳ ಸದಸ್ಯರು ಎನ್. ಸಿ. ಇ. ಆರ್. ಟಿ. ಯು ಬೋಧನಾ ಸಿಬ್ಬಂದಿ, ಶಾಲಾ ಶಿಕ್ಷಕರು ಮತ್ತು ಸರಕಾರೇತರ ಸಂಸ್ಥೆಗಳ ಸದಸ್ಯರುಗಳನ್ನು ಒಳಗೊಂಡಿದ್ದವು. ಎನ್. ಸಿ. ಇ. ಆರ್. ಟಿ. ಯು ಮೈಸೂರ, ಅಜ್ಮೀರ್, ಭೂಪಾಲ್, ಭುವನೇಶ್ವರ, ಮತ್ತು ಶಿಲ್ಲಾಂಗ್‌ಗಳಲ್ಲಿರುವ ಪ್ರಾದೇಶಿಕ ಶಿಕ್ಷಣ, ಸಂಸ್ಥೆಗಳಲ್ಲದೆ ರಾಷ್ಟ್ರದ ಎಲ್ಲೆಡೆ ವಿಚಾರ, ವಿಮರ್ಶೆಗಳನ್ನು ಏರ್ಪಡಿಸಲಾಯಿತು. ರಾಜ್ಯಗಳ ಕಾರ್ಯದರ್ಶಿಗಳು, ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಸಂಸ್ಥೆಗಳು ಮತ್ತು ಪರೀಕ್ಷಾ ಮಂಡಳಿಗಳೊಡನೆಯೂ ವಿಚಾರ ವಿಮರ್ಶೆ ನಡೆಸಲಾಯಿತು. ಗ್ರಾಮೀಣ ಶಿಕ್ಷಕರ ಸಲಹೆಗಳನ್ನು ಪಡೆಯಲು ರಾಷ್ಟ್ರಮಟ್ಟದ ವಿಚಾರ ಸಂಕಿರಣವೊಂದನ್ನು ಏರ್ಪಡಿಸಲಾಯಿತು. ಸಾರ್ವಜನಿಕರ ಅಭಿಪ್ರಾಯಗಳನ್ನು ಆಹ್ವಾನಿಸಲು ರಾಷ್ಟ್ರಮಟ್ಟದ ಹಾಗೂ ಪ್ರಾದೇಶಿಕ ದಿನಪತ್ರಿಕೆಗಳಲ್ಲಿ ಜಾಹಿರಾತುಗಳನ್ನು ನೀಡಿ ಅವರಿಂದ ಅನೇಕ ಪ್ರತಿಕ್ರಿಯೆಗಳನ್ನು ಪಡೆಯಲಾಯಿತು.

ಪರಿಷ್ಕೃತ ರಾಷ್ಟ್ರೀಯ ಪಠ್ಯಕ್ರಮ ನೆಲೆಗಟ್ಟು (ರಾ. ಪ. ನೆ.) ರವೀಂದ್ರನಾಥ ಟ್ಯಾಗೋರರ 'ಸಿವಿಲಿಜೇಶನ್ ಆಂಡ್ ಪ್ರೋಗ್ರೆಸ್' ಎಂಬ ಪ್ರಬಂಧದಿಂದ ತೆಗೆದುಕೊಂಡ ಉದ್ಧರಣೆಯೊಂದಿಗೆ ಪ್ರಾರಂಭವಾಗುತ್ತದೆ. ಹಿರಿಯರ ಪ್ರಪಂಚವು ಸ್ವಲ್ಪವೂ ಚಿಂತಿಸದೆ ಹಾಳುಗೆಡವಬಹುದಾದ 'ಸೃಜನಶೀಲ ಚೈತನ್ಯ' 'ಧಾರಳ ಸಂತಸ' ಇವೆರಡೂ ಬಾಲ್ಯದ ಕೀಲಿಕೈಗಳಾಗಿವೆ ಎಂದು ಅವರು ನೆನಪಿಸುತ್ತಾರೆ.

ಸ್ವಾತಂತ್ರ್ಯಾ ನಂತರ ನಡೆದ ಪಠ್ಯಕ್ರಮ ಪರಿಷ್ಕರಣೆಯ ಪ್ರಯತ್ನಗಳನ್ನು ಮೊದಲನೆಯ ಅಧ್ಯಾಯ ಚರ್ಚಿಸುತ್ತದೆ. ನಮ್ಮ ಸಂವಿಧಾನದಲ್ಲಿ ಅಡಕಗೊಂಡಿರುವ ರಾಷ್ಟ್ರೀಯ ವಿಕಾಸದ ದೃಷ್ಟಿಯನ್ನು ಮುಖ್ಯ ಅಂಶವೆಂದು ಶಿಫಾರಸ್ಸು ಮಾಡುತ್ತಾ ರಾಷ್ಟ್ರೀಯ ಶಿಕ್ಷಣ ವ್ಯವಸ್ಥೆಯನ್ನು ರೂಪಿಸಲು ಅದು ಸಾಧನವಾಗಬೇಕೆಂದು ಇದು ಒತ್ತಿ ಹೇಳುತ್ತದೆ.

ಈ ರಾಷ್ಟ್ರೀಯ ಪಠ್ಯಕ್ರಮ ನೆಲೆಗಟ್ಟು 2005ರ ಒಟ್ಟು ವರದಿಯ ಎಲ್ಲಾ ಅಂಶಗಳನ್ನು ಚರ್ಚಿಸದೇ ಅದರಲ್ಲಿನ ಮುಖ್ಯವಾದ ಅಂಶಗಳನ್ನು ಅಧ್ಯಾಯಗಳವಾರು ಪಟ್ಟಿಮಾಡಲಾಗಿದೆ.

## ಅಧ್ಯಾಯ - 1

- ಬಹು ಭಾಷೆಗಳು ಮತ್ತು ಬಹು ಸಂಸ್ಕೃತಿಗಳುಳ್ಳ ಈ ದೇಶದಲ್ಲಿ ಒಂದು ರಾಷ್ಟ್ರೀಯ ಶಿಕ್ಷಣ ವ್ಯವಸ್ಥೆಯನ್ನು ಬಲಪಡಿಸುವುದು.
- 'ಲರ್ನಿಂಗ್ ವಿತೌಟ್ ಬರ್ಡನ್ (Learning without borden) ವರದಿಯಲ್ಲಿ ಒದಗಿಸಿರುವ ಒಳನೋಟಗಳ ಆಧಾರದ ಮೇಲೆ ಪಠ್ಯಕ್ರಮದ ಹೊರೆಯನ್ನು ಕಡಿಮೆ ಮಾಡುವುದು.
- ಪಠ್ಯಕ್ರಮದ ಸುಧಾರಣೆಗೆ ಸರಿಹೊಂದುವಂತೆ ವ್ಯವಸ್ಥೆಯ ಬದಲಾವಣೆ ತರುವುದು.
- ಸಂವಿಧಾನದಲ್ಲಿ ಅಡಕಗೊಂಡಿರುವ ಸಾಮಾಜಿಕ ನ್ಯಾಯ ಮತ್ತು ಸಮಾನತೆ, ಮತ್ತು ಧರ್ಮ ನಿರಪೇಕ್ಷತೆ ಇವುಗಳನ್ನಾಧರಿಸಿದ ಪಠ್ಯಕ್ರಮ ವಿಧಾನ.
- ಎಲ್ಲರಿಗೂ ಉತ್ತಮ ಗುಣಮಟ್ಟದ ಶಿಕ್ಷಣದ ಭರವಸೆ.
- ಪ್ರಜಾಪ್ರಭುತ್ವದ ಅನುಷ್ಠಾನಕ್ಕೆ ಬದ್ಧವಾದ ನಾಗರಿಕ ಸಮಾಜದ ನಿರ್ಮಾಣ, ಮೌಲ್ಯಗಳು, ಲಿಂಗ ನ್ಯಾಯಕ್ಕೆ ಸ್ಪಂದಿಸುವಿಕೆ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳು ಎದುರಿಸುತ್ತಿರುವ ಸಮಸ್ಯೆಗಳು, ಅಂಗವಿಕಲರ ಅಗತ್ಯತೆಗಳು, ಮತ್ತು ಆರ್ಥಿಕ ಮತ್ತು ರಾಜಕೀಯ ಪ್ರಕ್ರಿಯೆಯಲ್ಲಿ ಭಾಗವಹಿಸುವ ಸಾಮರ್ಥ್ಯದ ಬೆಳವಣಿಗೆ.

## ಅಧ್ಯಾಯ - 2

- ಕಲಿಕೆ ಹಾಗೂ ಕಲಿಯುವವರ ಬಗ್ಗೆ ನಮ್ಮ ದೃಷ್ಟಿಕೊನದ ಬದಲಾವಣೆ.
- ಕಲಿಕೆ ಹಾಗೂ ಕಲಿಯುವವರ ಬೆಳವಣಿಗೆಗಳ ಬಗೆಗಿನ ವರ್ತನೆ ಕುರಿತಂತೆ ಒಂದು ಸಮಗ್ರ ಚಿಂತನೆ ಮಾಡುವುದು.
- ಮಾಹಿತಿ ಆಧಾರಿತ ಹಾಗೂ ಅಗತ್ಯ ನಿರ್ದಿಷ್ಟ ಕಾರ್ಯಕ್ರಮಗಳ ಮೂಲಕ ಕಲಿಕೆಯ ಅಸಮರ್ಥತೆಯ ಅಗತ್ಯಗಳನ್ನು ಪೂರೈಸುವದು.
- ಸೃಜನಶೀಲತೆ ಮತ್ತು ಜ್ಞಾನದ ರಚನೆಗೆ ವಿದ್ಯಾರ್ಥಿಗಳನ್ನು ರೂಪಿಸುವುದು.
- ಅನುಭವದ ಮೂಲಕ ಸಕ್ರಿಯ ಕಲಿಕೆ.
- ಮಕ್ಕಳ ಚಿಂತನಾ ಶಕ್ತಿ, ಕುತೂಹಲ ಹಾಗೂ ಪಠ್ಯಕ್ರಮ ಕುರಿತ ಪ್ರಶ್ನೆಗಳನ್ನು ಧ್ವನಿ ಕೊಡಲು ಸಾಕಷ್ಟು ಅವಕಾಶ ಕಲ್ಪಿಸುವುದು.
- ಒಳನೋಟ ಹೊಂದಿದ ಜ್ಞಾನದ ರಚನೆಗೆ ವಿವಿಧ ಶಾಸ್ತ್ರಗಳ ಮೇರೆಗಳನ್ನು ಸಡಿಲಿಸಿ ಜ್ಞಾನವನ್ನು ಸಮ್ಮಿಳಿಸುವುದು.

ISSN : 2249-2429

- ಜ್ಞಾನದ ವಸ್ತುವಿನಷ್ಟೇ ಮುಖ್ಯವಾದ ಸೂಕ್ಷ್ಮದೃಷ್ಟಿ ಅನ್ವೇಷಣೆ ಕಂಡುಹಿಡಿಯುವುದು ವಿಶ್ಲೇಷಣೆ, ವಿಮರ್ಶಾತ್ಮಕ ಆತ್ಮ ಚಿಂತನೆ ಮುಂತಾದ ವಿವಿಧ ರೀತಿಯ ಭಾಗವಹಿಸುವಿಕೆಯಿಂದ

### ವಿದ್ಯಾರ್ಥಿಯನ್ನು ಕ್ರಿಯಾಶೀಲನನ್ನಾಗಿ ಮಾಡುವುದು

- ಪಠ್ಯಕ್ರಮದಲ್ಲಿ ಸಾಮಾಜಿಕ – ಸಾಂಸ್ಕೃತಿಕ ವಸ್ತುಗಳ ಸ್ಥಿತಿಗಳ ಬಗ್ಗೆ ವಿಮರ್ಶಾತ್ಮಕ ದೃಷ್ಟಿಕೋನವನ್ನು ಬೆಳೆಸಲು ಚಟುವಟಿಕೆಗಳನ್ನು ರೂಪಿಸುವುದು.
- ಸ್ಥಳೀಯ ಭಾಷೆ ಮತ್ತು ಮಕ್ಕಳ ಅನುಭವಗಳು ಪಠ್ಯಪುಸ್ತಕ ಮತ್ತು ಶಿಕ್ಷಣಶಾಸ್ತ್ರ ಪದ್ಧತಿಗಳ ಅತ್ಯಂತ ಅಗತ್ಯ ಅಂಗಗಳಾಗಿ ಪರಿಗಣಿಸುವುದು.
- ಶಾಲಾ ದಿನಗಳು ಅತ್ಯಂತ ಶೀಘ್ರ ಬೆಳವಣಿಗೆಗಳನ್ನು ಕಾಣುವ ದಿನಗಳು. ಈ ಕಾಲದಲ್ಲಿ ಸಾಮರ್ಥ್ಯಗಳು, ಧೋರಣೆಗಳು ಮತ್ತು ಆಸಕ್ತಿಗಳಲ್ಲಿ ಸಾಕಷ್ಟು ಬದಲಾವಣೆಗಳನ್ನು ಗಮನಿಸಬಹುದು. ಇವು ಜ್ಞಾನದ ವಸ್ತು ಮತ್ತು ಪ್ರಕ್ರಿಯೆಗಳ ಆಯ್ಕೆ ಮತ್ತು ಸಂಯೋಜನಗಳ ಮೇಲೆ ಪ್ರಭಾವ ಬಿರುತ್ತವೆ.

## ಅಧ್ಯಾಯ - 3

### A. ಭಾಷೆ

- ಭಾಷಾ ಕೌಶಲಗಳಾದ ಮಾತು ಮತ್ತು ಕೇಳುವಿಕೆ, ಓದು, ಬರವಣಿಗೆ, ಇವು ಎಲ್ಲ ಪಠ್ಯ ವಿಷಯಗಳಿಗೂ ಎಲ್ಲ ಶಾಸ್ತ್ರಗಳಿಗೂ ಅನ್ವಯವಾಗುತ್ತದೆ. ಪ್ರಾಥಮಿಕ ಹಂತದಿಂದ ಹಿಡಿದು ಉಚ್ಚ ಮಾಧ್ಯಮಿಕ ಹಂತದವರೆಗೂ ಮಕ್ಕಳ ಜ್ಞಾನ ರಚನೆಯಲ್ಲಿ ಅವುಗಳ ಮೂಲ ಸ್ವರೂಪದ ಪಾತ್ರವನ್ನು ಗಮನಿಸಬೇಕು.
- ಮಗುವಿನ ಮಾತೃಭಾಷೆಯನ್ನು ಶಿಕ್ಷಣದ ಅತ್ಯಂತ ಪರಿಣಾಮಕಾರೀ ಮಾಧ್ಯಮವೆಂದು ಪರಿಗಣಿಸುವುದಲ್ಲದೆ ತ್ರಿಭಾಷಾ ಸೂತ್ರವನ್ನು ಅನುಷ್ಠಾನಗೊಳಿಸಲು ಪುನರ ಪ್ರಯತ್ನ ನಡೆಸಬೇಕು.
- ಇಂಗ್ಲೀಷ್ ಭಾಷೆಯಲ್ಲಿ ಯಶಸ್ಸನ್ನು ಗಳಿಸುವುದು, ಸದೃಢ ಶಿಕ್ಷಣ ಶಾಸ್ತ್ರ ಆಧಾರಿತ ಮಾತೃಭಾಷಾ ಕಲಿಕೆಯ ಮೇಲೆ ಅವಲಂಬಿತವಾಗಿದೆ.
- ಶಾಲಾ ಅವಧಿಯ ಬದುಕನ್ನು ಸಮೃದ್ಧಗೊಳಿಸಲು ಭಾರತೀಯ ಸಮಾಜದ ಬಹುಭ್ರಾತೃತ್ವವನ್ನು ಸಂಪನ್ಮೂಲವೆಂದು ಪರಿಗಣಿಸಬೇಕು.

### B. ಗಣಿತ

- ಗಣಿತವನ್ನು ಕಲಿಸುವ ಉದ್ದೇಶ ಕೇವಲ ಲೆಕ್ಕದ 'ಜ್ಞಾನ' (ಸೂತ್ರಗಳು ಮತ್ತು ಯಾಂತ್ರಿಕ ವಿಧಿ ವಿಧಾನಗಳು) ಕಲಿಸುವುದು ಅದರ ಬದಲು ಗಣೀತಿಕರಣದ (ತಾರ್ಕಿಕ ಚಿಂತನೆ, ಸೂತ್ರೀಕರಿಸುವದು ಮತ್ತು ಅಮೂರ್ತ ವಿಚಾರಗಳನ್ನು ವ್ಯವಹರಿಸುವುದು ಜ್ಞಾನ ಪಡೆಯುವುದು.
- ಲೆಕ್ಕವನ್ನು ಕಲಿಸುವುದರಿಂದ ಮಗುವಿನ ವಿವೇಚನೆ ಮತ್ತು ತಾರ್ಕಿಕತೆಗಳ ವರ್ಧನೆ, ಅಮೂರ್ತ ರೂಪಗಳನ್ನು ಚಿತ್ರಿಸಿ ಕೊಳ್ಳುವುದು ಮತ್ತು ಅವುಗಳೊಡನೆ ವ್ಯವಹರಿಸುವುದು ಸಮಸ್ಯೆ ಗಳನ್ನು ಬಿಡಿಸುವುದು ಮತ್ತು ಸೂತ್ರೀಕರಿಸುವುದು ಇವೆಲ್ಲ ಸಾಧ್ಯವಾಗಬೇಕು. ಉತ್ತಮ ಗುಣಮಟ್ಟದ ಗಣಿತ ಶಿಕ್ಷಣ ಪಡೆಯುವುದು ಪ್ರತಿ ಮಗುವಿನ ಹಕ್ಕು ಅದನ್ನು ಸಾಕಾರಗೊಳಿಸುವುದು.

### C. ವಿಜ್ಞಾನ

- ವಿಜ್ಞಾನ ಶಿಕ್ಷಣದ ವಸ್ತು, ವಿಧಾನ ಮತ್ತು ಭಾಷೆ ಕಲಿಯುವವರ ವಯೋಮಾನ ಮತ್ತು ಗ್ರಹಣ ಶಕ್ತಿ ಇವುಗಳಿಗೆ ಸರಿಹೊಂದುವಂತೆ ಇರಬೇಕು.
- ಮಕ್ಕಳ ಕುತೂಹಲ ಮತ್ತು ಸೃಜನಶೀಲತೆ, ವಿಶೇಷವಾಗಿ ಪರಿಸರಕ್ಕೆ ಸಂಬಂಧಿಸಿದಂತೆ, ಇವುಗಳನ್ನು ಪೋಷಿಸಲು ಅಗತ್ಯವಾದ ವಿಧಾನಗಳನ್ನು ಮತ್ತು ಪ್ರಕ್ರಿಯೆಗಳನ್ನು ವಿದ್ಯಾರ್ಥಿ ವಿಜ್ಞಾನ ಶಿಕ್ಷಣದ ಮೂಲಕ ಕಲಿಯುವಂತಾಗಬೇಕು.
- ಮಕ್ಕಳ ವಿಶಾಲ ಪರಿಸರವನ್ನು ಗಣನೆಗೆ ತೆಗೆದುಕೊಂಡು ವಿಜ್ಞಾನ ಶಿಕ್ಷಣವನ್ನು ರೂಪಿಸಬೇಕು. ಅದು ಅವರ ಕಾರ್ಯನಿರ್ವಹಿಸಲು ಸೂಕ್ತ ಜ್ಞಾನ ಮತ್ತು ಕೌಶಲಗಳನ್ನು ಒದಗಿಸಿಕೊಡಬೇಕು.
- ಶಾಲಾ ಪಠ್ಯಕ್ರಮದ ಎಲ್ಲ ಹಂತಗಳಲ್ಲೂ ಪರಿಸರದ ಬಗ್ಗೆ ಕಾಳಜಿ ವ್ಯಕ್ತವಾಗಬೇಕು.

### D. ಸಮಾಜ ವಿಜ್ಞಾನ

- ಸ್ವತಂತ್ರವಾಗಿ ಚಿಂತನೆ ಮಾಡುವ ಸಾಮರ್ಥ್ಯ ಮತ್ತು ಸಾಮಾಜಿಕ ಸಂಗತಿಗಳ ಕುರಿತು ವಿಮರ್ಶಾತ್ಮಕ ಚಿಂತನೆ ನಡೆಸಲು ಅಗತ್ಯವಾದ ನೈತಿಕ ಮತ್ತು ಮಾನಸಿಕ ಶಕ್ತಿಯನ್ನು ಸಮಾಜ ವಿಜ್ಞಾನ ಬೋಧನೆ ಒದಗಿಸಬೇಕು.
- ಅಂತರಾಷ್ಟ್ರೀಯ, ಅಂತರ್ ಶಾಸ್ತ್ರೀಯ ದೃಷ್ಟಿಕೋನ, ಲಿಂಗ ನಿಷ್ಪಕ್ಷಪಾತತೆ, ಮಾನವ ಹಕ್ಕುಗಳು, ಸಮಾಜದ ಮುಖ್ಯವಾಹಿನಿ ಯಿಂದ ಹೊರಗುಳಿದ ಹಾಗೂ ಅಲ್ಲಿ ಅಲ್ಪಸಂಖ್ಯಾತರ ಬಗ್ಗೆ ಸಂವೇದನೆ ಇವೇ ಮುಂತಾದ ರಾಷ್ಟ್ರೀಯ ವೈಚಾರಿಕ ಚಿಂತನೆಗಳನ್ನು ಪ್ರೋತ್ಸಾಹಿಸುವುದು.
- ನಾಗರಿಕ ಧರ್ಮಶಾಸ್ತ್ರವನ್ನು ರಾಜಕೀಯ ವಿಜ್ಞಾನವೆಂದು ರೂಪಾಂತರ ಮಾಡಬೇಕು. ಭೂತಕಾಲದ ಬಗ್ಗೆ ಮಗುವಿನ ಕಲ್ಪನೆ ಮತ್ತು ನಾಗರಿಕ ಅನನ್ಯತೆ ಇವುಗಳ ಮೇಲೆ ಉತ್ತಮ ಪ್ರಭಾವ ಬೀರುವ ಚರಿತ್ರೆಯ ಪ್ರಾಮುಖ್ಯವನ್ನು ಗಮನಿಸಬೇಕು.

### E. ಕೆಲಸ

- ಪ್ರಾಥಮಿಕ ಹಂತದಿಂದ ಹಿಡಿದು ಎಲ್ಲ ಹಂತಗಳಲ್ಲೂ ಎಲ್ಲ ವಿಷಯಗಳಲ್ಲೂ ಕಾರ್ಯಶೀಲತೆಯನ್ನು ಅಳವಡಿಸಬೇಕು.
- ಶಾಲೆಯ ಹೊರಗೆ ಕೆಲಸದ ಅವಕಾಶಗಳನ್ನು ಒದಗಿಸುವ ಕಾರ್ಯ ಸಂಸ್ಥೆಗಳನ್ನು ಮತ್ತು ಸ್ಥಳಗಳನ್ನು ಔಪಚಾರಿಕವಾಗಿ ಗುರುತಿಸಬೇಕು.
- 10–12 ವರ್ಷಗಳ ಕಾರ್ಯಾದಾರಿತ ಶಿಕ್ಷಣದ ದೃಷ್ಟಿಕೋನ ಇಟ್ಟುಕೊಂಡು ಉದ್ಯೋಗ ಆಧಾರಿತ ಶಿಕ್ಷಣ ಮತ್ತು ತರಬೇತಿಗಳನ್ನು ವಿನ್ಯಾಸಗೊಳಿಸಬೇಕು. ಅದು ಈ ಕೆಳಕಂಡ ಅಂಶಗಳನ್ನು ಒಳಗೊಂಡಿರಬೇಕು.
- ವಿವಿಧ ಅವಧಿಗಳ ಹೊಂದಾಣಿಕೆಯುಳ್ಳ ಮತ್ತು ಪ್ರಮಾಣದ ವ್ಯಾಸಂಗಕ್ರಮಗಳು.
- ಅನೇಕ ಪ್ರವೇಶಾವಕಾಶ ಮತ್ತು ನಿರ್ಗಮನ ಮಾರ್ಗಗಳು.
- ಗ್ರಾಮ, ಹೋಬಳಿ ಮಟ್ಟದಿಂದ ಹಿಡಿದು ಜಿಲ್ಲಾ ಮಟ್ಟದವರೆಗೆ ಪ್ರವೇಶಾಧಿಕಾರ ನೀಡುವುದು.
- ಶಾಲೆಯ ಹೊರಗಿನ ಕಾರ್ಯಸಂಸ್ಥೆಗಳಿಗೆ ವಿಕೇಂದ್ರಿಕೃತ ಯೋಗ್ಯತಾ ಪತ್ರ ಮತ್ತು ತತ್ಸಮಾನ ವಿಧಾನ ಕಲೆ.

ISSN : 2249-2429


- ಕಲೆ (ಜಾನಪದ ಮತ್ತು ಶಾಸ್ತ್ರಿಯ ಸಂಗೀತ ಮತ್ತು ನೃತ್ಯ ರೂಪಗಳು), ದೃಶ್ಯ ಕಲೆಗಳು, ಗೊಂಬೆಯೂಟ, ಮಣ್ಣಿನಿಂದ ಮಾಡುವಸ ಕೆಲಸಗಳು, ರಂಗಕಲೆ ಮುಂತಾದವು) ಮತ್ತು ಪಾರಂಪರಿಕ ಕರಕುಶಲ ಕಲೆಗಳನ್ನು ಶಾಲಾ ಪಠ್ಯಕ್ರಮದ ಅಭಿನ್ನ ಅಂಗವೆಂದು ಪರಿಗಣಿಸಬೇಕು.
- ಪೋಷಕರಲ್ಲಿ, ಶಾಲಾ ಅಧಿಕಾರಿಗಳಲ್ಲಿ ಮತ್ತು ಆಡಳಿತಾಧಿಕಾರಿಗಳಲ್ಲಿ ವೈಯಕ್ತಿಕ, ಸಾಮಾಜಿಕ, ಆರ್ಥಿಕ ಮತ್ತು ಕಲಾರಾಧನೆಯ ಅಗತ್ಯಗಳಿಗೆ ಅವು ಅವಶ್ಯಕವೆಂಬ ಅಂಶವನ್ನು ಜಾಗೃತಗೊಳಿಸ ಬೇಕು.
- ಶಾಲಾ ಶಿಕ್ಷಣದ ಎಲ್ಲಾ ಹಂತಗಳಲ್ಲೂ ಕಲಿಕೆಯನ್ನು ಒಂದು ವಿಷಯವಾಗಿ ಅಳವಡಿಸಬೇಕು.

## F. ಶಾಂತಿ

- ಶಾಲಾ ಶಿಕ್ಷಣದ ಎಲ್ಲ ವರ್ಷಗಳಲ್ಲಿ ವಿವಿಧ ಬಗೆಯ ಚಟುವಟಿಕೆಗಳ ಮೂಲಕ ಶಾಂತಿ ಸಂಬಂಧಿತ ಮೌಲ್ಯಗಳನ್ನು ಪ್ರೋತ್ಸಾಹಿಸಬೇಕು.
- ಶಾಂತಿ ಶಿಕ್ಷಣ ಶಿಕ್ಷಕರ ತರಬೇತಿಯ ಒಂದು ಅಂಗವಾಗಬೇಕು.

## G. ಆರೋಗ್ಯ ಮತ್ತು ದೈಹಿಕ ಶಿಕ್ಷಣ

- ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆಗೆ ಆರೋಗ್ಯ ಮತ್ತು ದೈಹಿಕ ಶಿಕ್ಷಣ ಅತ್ಯಂತ ಅವಶ್ಯಕ ಆರೋಗ್ಯ ಮತ್ತು ದೈಹಿಕ ಶಿಕ್ಷಣದ ಮೂಲಕ ಶಾಲಾ ದಾಖಲಾತಿ, ಶಾಲೆಯಲ್ಲಿ ಉಳಿಸುವಿಕೆ ಮತ್ತು ಶಾಲಾ ಮತ್ತು ಶಾಲಾ ಶಿಕ್ಷಣವನ್ನು ಮುಗಿಸುವುದು ಇವೇ ಮೊದಲಾದ ಅಂಶಗಳನ್ನು ಯಶಸ್ವಿಯಾಗಿ ನಿರ್ವಹಿಸಬಹುದು.

## ಅಧ್ಯಾಯ - 4

- ಶಿಕ್ಷಕರ ಕಾರ್ಯಕ್ಷಮತೆಯನ್ನು ಹೆಚ್ಚಿಸಲು ಕನಿಷ್ಠ ಮೂಲ ಸೌಲಭ್ಯ ಮತ್ತು ಸಾಮಗ್ರಿಗಳ ಲಭ್ಯತೆ ಹಾಗೂ ಬಿಗಿಯಿಲ್ಲದ ದೈನಂದಿನ ಕಾರ್ಯಕ್ರಮ ಅತೀ ಮುಖ್ಯ
- ಕಲಿಯುವ ಮಕ್ಕಳನ್ನು ಶಿಕ್ಷಣಾರ್ಥಿಗಳೆಂದು ಪರಿಗಣಿಸಿ ಅವರ ಬೆಳೆವಣಿಗೆಯನ್ನು ಗಮನಿಸುವ ಶಾಲಾ ಸಂಸ್ಕೃತಿ ಪ್ರತಿ ಮಗುವಿನ ಕ್ಷಮತೆ ಮತ್ತು ಅಭಿರುಚಿಗಳನ್ನು ವರ್ಧಿಸುತ್ತದೆ.
- ಎಲ್ಲ ಮಕ್ಕಳೂ – ಸಾಮಾನ್ಯ ಹಾಗೂ ವಿಕಲಾಂಗರು – ಭಾಗವಹಿಸುವಂತೆ ನಿರ್ದಿಷ್ಟ ಚಟುವಟಿಕೆಗಳನ್ನು ಹಮ್ಮಿಕೊಳ್ಳುವುದು ಎಲ್ಲ ಮಕ್ಕಳ ಕಲಿಕೆಗೆ ಅಗತ್ಯ ನಿಬಂಧನೆಯಾಗಿದೆ.
- ಪ್ರಜಾತಂತ್ರದ ಪ್ರಕ್ರಿಯೆಗಳನ್ನು ಅನುಸರಿಸುತ್ತಲೇ ಕಲಿಯುವುದು ಆತ್ಮಶಿಸ್ತನ್ನು ರೂಢಿಸಿಕೊಳ್ಳುವುದು ಎಂದೆಂದಿಗೂ ಅತ್ಯಗತ್ಯ.
- ನಿರ್ದಿಷ್ಟ ವಿಷಯ ಕ್ಷೇತ್ರದಲ್ಲಿ ಸಮುದಾಯದ ಸದಸ್ಯರು ಭಾಗವಹಿಸಿ ತಮ್ಮ ಜ್ಞಾನ ಮತ್ತು ಅನುಭವಗಳನ್ನು ಹಂಚಿಕೊಳ್ಳುವುದರಿಂದ ಶಾಲೆ ಮತ್ತು ಸಮುದಾಯಗಳ ಬೆಸುಗೆ ಸಾಧ್ಯವಾಗುತ್ತದೆ.

## ಕಲಿಕಾ ಸಂಪನ್ಮೂಲಗಳ ಬಳಕೆ

- ಪರಿಕಲ್ಪನೆಗಳನ್ನು ವಿಶದಪಡಿಸುವತ್ತ ಗಮನಹರಿಸುವ ಪಠ್ಯಪುಸಕಗಳು, ಚಟುವಟಿಕೆಗಳು, ಸಮಸ್ಯೆಗಳು ಮತ್ತು ಗುಂಪುಕಾರ್ಯ ಮತ್ತು ಚಿಂತನೆಗಳನ್ನು ಪ್ರೋತ್ಸಾಹಿಸುವಂತಹ ಅಭ್ಯಾಸಗಳನ್ನು ಬಳಸಬೇಕು.
- ಹೊಸ ಚಿಂತನೆ ಮತ್ತು ಹೊಸ ದೃಷ್ಟಿಕೋನವನ್ನು ಆಧರಿಸಿದ ಪೂರಕ ಗ್ರಂಥಗಳು, ಅಭ್ಯಾಸ ಪುಸ್ತಕಗಳು, ಶಿಕ್ಷಕರ ಕೈಪಿಡಿಗಳ/ಪೂರೈಕೆ/ಬಳಕೆ.
- ಏಕ ಮಾರ್ಗದ ಶಿಕ್ಷಣ ಕ್ರಿಯೆಯ ಬದಲು ಎರಡು ಮಾರ್ಗಗಳ ಪರಸ್ಪರ ವಿನಿಮಯ ಕ್ರಿಯೆಗೆ ಸೂಕ್ತವಾಗುವಂತಹ ಮಲ್ಟಿಮೀಡಿಯಾ ಮತ್ತು ಐ. ಸಿ. ಟಿ. ಗಳ ಬಳಕೆ.
- ಶಿಕ್ಷಕರಿಗೆ, ವಿದ್ಯಾರ್ಥಿಗಳಿಗೆ ಮತ್ತು ಸಮುದಾಯದ ಸದಸ್ಯರಿಗೆ ತಮ್ಮ ಜ್ಞಾನವನ್ನು ಹೆಚ್ಚಿಸಿಕೊಳ್ಳಲು ಮತ್ತು ಹೊರಗಿನ ವಿಶಾಲ ಪ್ರಪಂಚದೊಡನೆ ಸಂಬಂಧ ಸಾಧಿಸಲು ಶಾಲಾ ಗ್ರಂಥಾಲಯವನ್ನು ಜ್ಞಾನದ ತಾಣವೆಂದು ಪರಿಗಣಿಸುವುದು.
- ಉತ್ತಮ ಕಲಿಕಾ ಪರಿಸರವನ್ನು ಸೃಷ್ಟಿಸಲು ಶಾಲಾ ಕಾರ್ಯನಿರ್ದೇಶನ ಪಟ್ಟಿ ಮತ್ತು ದೈನಿಕ ವೇಳಾಪಟ್ಟಿಗಳನ್ನು ವಿಕೇಂದ್ರೀಕರಿಸುವುದು ಮತ್ತು ಶಿಕ್ಷಕರ ವೃತ್ತಿಪರ ಬೋಧನಾ ವಿಧಾನಗಳನ್ನು ಅನುಸರಿಸಲು ಸ್ವಾತಂತ್ರ್ಯ ನೀಡುವುದು.

## ಅಧ್ಯಾಯ - 5

- ಗುಣಮಟ್ಟಕ್ಕೆ ವಿಶೇಷ ಗಮನ ಕೊಡುವುದು ವ್ಯವಸ್ಥೆಯ ಸುಧಾರಣೆಯ ಪ್ರಮುಖ ಅಂಗ. ಇದು ಲೋಪದೋಷಗಳನ್ನು ತಿದ್ದಿಕೊಳ್ಳಲು ಮತ್ತು ಹೊಸ ಸಾಮರ್ಥ್ಯಗಳನ್ನು ಬೆಳೆಸಿಕೊಳ್ಳಲು ತನ್ನ ಸಾಮರ್ಥ್ಯವನ್ನು ಸುಧಾರಿಸಿಕೊಳ್ಳುವುದನ್ನು ಸೂಚಿಸುತ್ತದೆ.
- ಶಾಲೆಗಳಿಂದ ಪ್ರಾರಂಭಿಸಿ ಕ್ಲಸ್ಟರ್ ಮತ್ತು ಬ್ಲಾಕ್ ಹಂತಗಳಲ್ಲಿ ಮುಂದಿನ ಯೋಜನೆಗಳಿಗೆ ಒಂದು ವಿಸ್ತೃತ ಚೌಕಟನ್ನು ತಯಾರಿಸಿ ಇದರಿಂದ ಜಿಲ್ಲೆಯ ಹಂತದಲ್ಲಿ ವಿಕೇಂದ್ರೀಕರಣವನ್ನು ಸಾಧಿಸಬಹುದು.
- ಮುಖ್ಯೋಪಾಧ್ಯಾಯರು ಮತ್ತು ಇತರ ಶಿಕ್ಷಕರ ಸಹಾಯದಿಂದ ಸಾರ್ಥಕವಾದ ಶೈಕ್ಷಣಿಕ ಯೋಜನೆಯ ವಿಕಾಸವಾಗುವಂತೆ ಮಾಡುವುದು.
- ಬೋಧನೆ ಮತ್ತು ಕಲಿಕೆಯ ಪ್ರಕ್ರಿಯೆಗಳ ಹಿನ್ನೆಲೆಯಲ್ಲಿ ಶಾಲೆಗಳ ನಡುವಿನ ಪರಸ್ಪರ ವಿನಿಮಯದಿಂದ ಗುಣಮಟ್ಟದ ಮೇಲೆ ಕಣ್ಣಿಡಬಹುದು.
- ಶಿಕ್ಷಕರ ವೃತ್ತಿಪರ ತರಬೇತಿಯನ್ನು ಬಲಪಡಿಸುವುದು (ವಿಷಯಕ್ಕನುಸಾರ)
- ಶಿಕ್ಷಣದ ಸಂದರ್ಭಗಳಲ್ಲಿ ಶಿಕ್ಷಣಾರ್ಥಿಗಳನ್ನು ಬೆರೆಯುವಂತೆ ವ್ಯವಹರಿಸುವುದು ಮತ್ತು ಜ್ಞಾನ, ಕಲಿಕೆ, ಲಿಂಗ, ಜಾತಿ, ಸಮತಾವಾದ ಮತ್ತು ನ್ಯಾಯ ಇವುಗಳನ್ನು ಕುರಿತಂತೆ ತಮ್ಮ ಅನಿಸಿಕೆಗಳನ್ನು ವಿಮರ್ಶೆಗೆ ಒಳಪಡಿಸುವುದು.
- ಶುದ್ಧ ಶಾಸ್ತ್ರೀಯ ಜ್ಞಾನದಿಂದ ದೃಷ್ಟಿಯನ್ನು ವಿದ್ಯಾರ್ಥಿ ಮತ್ತು ಅವನ/ಳ ಸಂದರ್ಭಕ್ಕೆ ಬದಲಾಯಿಸುವುದು.
- ಶಾಲಾ ವಿಧಾನಗಳನ್ನು ಬದಲಾಯಿಸಲು ಸೇವಾ – ಪೂರ್ವ ತರಬೇತಿಯನ್ನು ಒಂದು ವೇಗವರ್ಧಕವೆಂದು ಪರಿಗಣಿಸಬೇಕು.
- ಹಳ್ಳಿಗಳ ಮಟ್ಟದಲ್ಲಿ ಸಮಾನಾಂತರ ಸಂಸ್ಥೆಗಳ ಕಾರ್ಯಸ್ವರೂಪವನ್ನು ನಿಯಂತ್ರಿಸುವ ವಿಧಾನಗಳನ್ನು ರೂಪಿಸಿ ಪಂಚಾಯತಿ ರಾಜ್ ಸಂಸ್ಥೆಗಳನ್ನು ಬಲಪಡಿಸಬೇಕು. ಇದರಿಂದ ವಿಕಾಸದಲ್ಲಿ ಪ್ರಜಾತಾಂತ್ರಿಕ ಪಾಲುಗಾರಿಕೆ ಸಾಧ್ಯ.

## ಪರೀಕ್ಷಾ ಪದ್ಧತಿಯಲ್ಲಿ ಸುಧಾರಣೆ

- ವಸ್ತು ಆಧಾರಿತ ಪರೀಕ್ಷೆಗೆ ಬದಲು ಸಮಸ್ಯೆ ಬಿಡಿಸುವ ಮತ್ತು ಅರಿವನ್ನು ಪಡೆಯುವತ್ತ ಗಮನ ಬದಲಾಯಿಸುವುದು, ಇದು ಸಾಧ್ಯವಾಗಲು ಈಗಿರುವ ಪ್ರಶ್ನೆಪತ್ರಿಕೆಯ ಮಾದರಿ ಬದಲಾಗಬೇಕು.

– 21 ನೇ ಪುಟಕ್ಕೆ ಮುಂದುವರೆದುದು

ಸೈದ್ಧಾಂತಿಕ ISSN : 2249-2429

# ಶಿಕ್ಷಣ ಮತ್ತು ಮಾನವ ಸಂಪನ್ಮೂಲ ಅಭಿವೃದ್ಧಿ

✍ **ಡಾ. ವರದರಾಜು ಎಸ್.,** ಸಹ ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು, ಶಿಕ್ಷಣಶಾಸ್ತ್ರ ವಿಭಾಗ,
ಶ್ರೀ ಮೃ. ಶಿ. ಪ್ರಥಮ ದರ್ಜೆ ಕಲಾ ಮತ್ತು ವಾಣಿಜ್ಯ ಕಾಲೇಜು, ಹೊನ್ನಾಳಿ-577217.

## ಪೀಠಿಕೆ

ಮಾನವನ ಜೀವನದ ಎಲ್ಲಾ ಅಂಶಗಳಿಗೂ ಶಿಕ್ಷಣ ಅತ್ಯಾವಶ್ಯಕ. ಅಂತೆಯೇ ಮಾನವ ಸಂಪನ್ಮೂಲವು ದೇಶಕ್ಕೆ ಅಷ್ಟೇ ಅತ್ಯಾವಶ್ಯಕ. ಒಂದು ದೇಶದಲ್ಲಿ ಉಳಿದೆಲ್ಲಾ ಸಂಪನ್ಮೂಲಗಳಿಗಿಂತಲೂ ಮಾನವ ಸಂಪನ್ಮೂಲವು ಅತ್ಯಂತ ಬೆಲೆ ಬಾಳುವಂತಹದ್ದು, ಆದ್ದರಿಂದಲೆ ಇಂದು ಮಾನವ ಸಂಪನ್ಮೂಲಕ್ಕೆ ಹೆಚ್ಚು ಒತ್ತು ನೀಡಲಾಗುತ್ತಿದೆ. ಶಿಕ್ಷಣವು ವ್ಯಕ್ತಿಯನ್ನು ಉತ್ಕೃಷ್ಟ ಮಟ್ಟಕ್ಕೆ ಕೊಂಡೊಯ್ಯಲು ಪ್ರಯತ್ನಿಸುತ್ತದೆ. ಅಂತಹ ಶಿಕ್ಷಣವನ್ನು ಪಡೆದ ವ್ಯಕ್ತಿಗಳು ಸಮಾಜಕ್ಕೆ ಬಹು ದೊಡ್ಡ ಆಸ್ತಿಯಾಗಬಲ್ಲರು. ಆಗ ಅವರು ಪಡೆದ ಜ್ಞಾನದ ಬಲದಿಂದ ಸಮಾಜ ವಿವಿಧ ಕ್ಷೇತ್ರಗಳಲ್ಲಿ ಪ್ರಗತಿ ಸಾಧಿಸಿದ್ದೇ ಆದರೆ ಅದು ಬೆಲೆ ಕಟ್ಟಲಾರದಂತಹ ಸಂಪನ್ಮೂಲವಾಗುತ್ತದೆ. ಪ್ರಸ್ತುತ ಸನ್ನಿವೇಶದಲ್ಲಿ ಶಿಕ್ಷಣವು ವ್ಯಕ್ತಿಗಳಲ್ಲಿ ವಿವಿಧ ಕೌಶಲಗಳನ್ನು ಬೆಳೆಸುವುದರ ಮೂಲಕ ಉತ್ಪಾದನೆಯನ್ನು ಹೆಚ್ಚಿಸಲು ಸಹಾಯಕವಾಗುತ್ತಿದೆ ಎನ್ನಬಹುದು. ಇತ್ತೀಚಿನ ಒಂದು ಮೂಲದ ಪ್ರಕಾರ "ಮಾನವ ಸಂಪನ್ಮೂಲ ಅಭಿವೃದ್ಧಿ" ಎಂಬ ಪರಿಕಲ್ಪನೆಯು ನೂತನ ಶಿಕ್ಷಣದ ಬಹುಮುಖ್ಯ ಕೊಡುಗೆಗಳಲ್ಲಿ ಒಂದಾಗಿದೆ ಎನ್ನಬಹುದು.

ಯಾವುದೇ ನೈಸರ್ಗಿಕ ಸಂಪನ್ಮೂಲಗಳು ದೇಶದಲ್ಲಿ ಯಥೇಚ್ಛವಾಗಿ ದೊರಕಿ, ಅವುಗಳನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳುವಂತಹ ಮಾನವ ಸಂಪನ್ಮೂಲ ಇಲ್ಲದಿದ್ದರೆ ಅದು ಏನೂ ಪ್ರಯೋಜನಕ್ಕೆಬಾರದು, ಒಂದು ದೇಶದ ಪ್ರಗತಿ ಮತ್ತು ಅಭಿವೃದ್ಧಿಗೆ 'ಮಾನವ ಸಂಪನ್ಮೂಲ' ವೆಂಬುದು ಒಂದು ವರದಾನವಾಗಿದೆ. ಜಪಾನಿನಂತಹ ಚಿಕ್ಕ ರಾಷ್ಟ್ರದಲ್ಲಿ ಇರುವ ಮಾನವ ಸಂಪನ್ಮೂಲವನ್ನು ಅತ್ಯಂತ ಪರಿಣಾಮಕಾರಿಯಾಗಿ ಬಳಸಿ ಕೊಳ್ಳಲಾಗುತ್ತಿದೆ. ಅದ್ದರಿಂದಲೇ ಅದು ಇಂದು ಬಲಿಷ್ಠ ರಾಷ್ಟ್ರವಾಗಿ ಬೆಳೆದು ನಿಂತಿದೆ. ಆದರೆ ಭಾರತದಂತಹ ಹೆಚ್ಚು ಜನಸಂಖ್ಯೆಯನ್ನು ಹೊಂದಿರುವ ದೇಶದಲ್ಲಿ ಹೇರಳವಾಗಿ ನೈಸರ್ಗಿಕ ಸಂಪನ್ಮೂಲವು ಸದ್ಬಳಕೆಯಾಗಬೇಕಾದರೆ ಜಪಾನ್ ದೇಶದ ಮಾದರಿಯಲ್ಲಿ ಮಾನವ ಸಂಪನ್ಮೂಲ ಅಭಿವೃದ್ಧಿ ಕಾರ್ಯ ತ್ವರಿತವಾಗಿ ಆಗಬೇಕಾಗಿದೆ.

## ಮಾನವ ಸಂಪನ್ಮೂಲ ಅಭಿವೃದ್ಧಿಯ ಐತಿಹಾಸಿಕ ಹಿನ್ನೆಲೆ

ಮಾನವ ಸಂಪನ್ಮೂಲ ಅಭಿವೃದ್ಧಿ ವಿಷಯವನ್ನು ಪ್ರಥಮವಾಗಿ ಪರಿಚಯಿಸಿದ ಕೀರ್ತಿ **'ಪ್ರೊ. ಎನ್. ಷಿಲ್ಡರ್'** ಎಂಬುವವರಿಗೆ ಸಲ್ಲುತ್ತದೆ. ಅವರು 1948ರಲ್ಲಿ ಅಮೇರಿಕಾದ ಸಭೆಯೊಂದರಲ್ಲಿ "ಮಾನವ ಸಂಪನ್ಮೂಲ ಅಭಿವೃದ್ಧಿ" ಎಂಬ ಪದವನ್ನು ಕೇವಲ "ತರಬೇತಿ ಅಭಿವೃದ್ಧಿ" ಎಂಬ ಅರ್ಥಕ್ಕೆ ಅನ್ವಯಿಸಿ ಮಾತನಾಡಿದ್ದು, ಅದೇ ವರ್ಷ ಅಮೇರಿಕಾ ದೇಶದ ಅಧ್ಯಕ್ಷ **'ನಿಕ್ಸನ್'** ಇವರು ಇದನ್ನು ಪುನರ್ ಉಚ್ಚರಿಸಿ ಮಾನವ ಸಂಪನ್ಮೂಲ ಅಭಿವೃದ್ಧಿಗೆ ಹೊಸ ಆಯಾಮವನ್ನು ತಂದು ಕೊಟ್ಟರು. ಅಂದಿನಿಂದ ಈ ವಿಷಯದ ಪರಿಕಲ್ಪನೆ ಎಲ್ಲಾ ಕ್ಷೇತ್ರಗಳಲ್ಲೂ ಜನಪ್ರಿಯಗೊಂಡಿತು. ಇದಾದ ನಂತಹ 1980 ರಲ್ಲಿ "ಜಾನ್ ಹಿಂಜಲ್ಸ್" ಎಂಬುವವರು 'ಮಾನವ ಸಂಪನ್ಮೂಲದ ಅಭಿವೃದ್ಧಿ' ಹೊಸ ರೂಪವನ್ನು ನೀಡಿದರು. ನಂತರ 1986 ರಿಂದ ಭಾರತ ಸರ್ಕಾರ 'ಮಾನವ ಸಂಪನ್ಮೂಲ ಅಭಿವೃದ್ಧಿ' ಶಾಖೆಯನ್ನು ಸ್ಥಾಪಿಸಿ, ಕೇಂದ್ರದಲ್ಲಿ ಪ್ರತ್ಯೇಕವಾದ ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯವನ್ನು ಸ್ಥಾಪಿಸಿತು. ಅಂದಿನಿಂದ ಇಂದಿನವರೆಗೂ ಭಾರತ ದೇಶದಲ್ಲಿ ಅಭಿವೃದ್ಧಿಯ ದೃಷ್ಟಿಯಿಂದ ಮಾನವ ಸಂಪನ್ಮೂಲ ಅಭಿವೃದ್ಧಿ ಕಾರ್ಯವನ್ನು ಪ್ರಮುಖವಾದ ಅಂಶವನ್ನಾಗಿ ಪರಿಗಣಿಸಿದೆ. ಇದರಿಂದಾಗಿ ದೇಶದ ಎಲ್ಲಾ ಕ್ಷೇತ್ರಗಳಲ್ಲಿಯೂ ಹೆಚ್ಚುತ್ತಿರುವ ಸ್ಪರ್ಧಾತ್ಮಕ ಪರಿಸ್ಥಿತಿ ಮತ್ತು ತಾಂತ್ರಿಕ ಜಗತ್ತಿನಲ್ಲಾಗುತ್ತಿರುವ ತ್ವರಿತ ಅಭಿವೃದ್ಧಿಗಳು ದೇಶದ ಒಟ್ಟಾರೆ ಅಭಿವೃದ್ಧಿಯಲ್ಲಿ ಮಾನವ ಸಂಪನ್ಮೂಲದ ಅಂಶಗಳಾಗಲು ಕಾರಣೀಭೂತವಾಗಿವೆ. ಆದ್ದರಿಂದಲೇ ಮಾಜಿ ಪ್ರಧಾನಿ ದಿ. ರಾಜೀವ್ ಗಾಂಧಿಯವರು "ದೇಶದ ನಿಜವಾದ ಶಕ್ತಿ ಎಂದರೆ, ಪ್ರಜೆಗಳು. ಅಂತಹ ಪ್ರಜೆಗಳ ಮನಸ್ಸು ಮತ್ತು ದೇಹವನ್ನು ಅಭಿವೃದ್ಧಿ ಪಡಿಸುವುದೇ ನಿಜವಾದ ಮಾನವ ಸಂಪನ್ಮೂಲ ಅಭಿವೃದ್ಧಿ" ಎಂದು ಹೇಳಿದ್ದನ್ನು ಇಲ್ಲಿ ಸ್ಮರಿಸಬಹುದಾಗಿದೆ.

## ಮಾನವ ಸಂಪನ್ಮೂಲ ಅಭಿವೃದ್ಧಿಯ ಅರ್ಥ ಮತ್ತು ವ್ಯಾಖ್ಯೆಗಳು

ಮಾನವ ಸಂಪನ್ಮೂಲ ಅಭಿವೃದ್ಧಿ ಎಂದರೇನು ? ಎಂಬುದನ್ನು ತಿಳಿಯುವ ಮುಂಚೆ "ಮಾನವ ಸಂಪನ್ಮೂಲ" ಎಂದರೇನು ಎಂಬುದನ್ನು ತಿಳಿಯುವುದು ಸೂಕ್ತ.

**ಮಾನವ ಸಂಪನ್ಮೂಲ** ಎಂದರೇನು?

**ಮಾ** – ಮಾದರಿಗೊಳಿಸುವುದು.

**ನ** – ನಾವಿನ್ಯತೆಗೊಳಿಸುವುದು/ನವೀನತೆಗೊಳಿಸುವುದು.

**ವ** – ವ್ಯವಸ್ಥೆಗೊಳಿಸುವುದು.

**ಸಂ** – ಸಂಪದ್ಭರಿತಗೊಳಿಸುವುದು/ಸಮೃದ್ಧ/ಸಂತೃಪ್ತಗೊಳಿಸುವುದು.

**ಪ** – ಪರಿಣಿತಗೊಳಿಸುವುದು.

**ನ್ಮೂ** – ನೂರ್ಮಡಿಗೊಳಿಸುವುದು.

**ಲ** – ಲಕ್ಷವಿಟ್ಟು ಸಾಧಿಸುವುದು.

ಒಟ್ಟಾರೆ ಯೋಗ್ಯ ಗುಣಾತ್ಮಕ ಮತ್ತು ಯೋಗ್ಯ ಪ್ರಮಾಣಾತ್ಮಕ ಮಾನವ ಸಂಪತ್ತನ್ನು ಅಥವಾ ಮಾನವ ಆಸ್ತಿಯನ್ನು ಮಾನವ ಸಂಪನ್ಮೂಲ ಅಭಿವೃದ್ಧಿ ಎಂದು ಕರೆಯುತ್ತಾರೆ.

**ಮಾನವ ಸಂಪನ್ಮೂಲ ಅಭಿವೃದ್ಧಿ ಎಂದರೇನು? ಅಭಿವೃದ್ಧಿ ಎಂದರೆ –**

**ಅ** – ಅನುಕೂಲತೆ ಕಲ್ಪಿಸುವುದು.

**ಭಿ** – ಭಿನ್ನತೆಯನ್ನು ತೊಲಗಿಸಿ ಬಲಿಷ್ಠತೆಯನ್ನು ಸಾಧಿಸುವುದು.

ISSN : 2249-2429


**ವೃ** – ವೃದ್ಧಿಸುವುದು (ಗುಣಾತ್ಮಕತೆಯನ್ನು ವೃದ್ಧಿಸುವುದು)
**ದ್ಧಿ** – ಧೀಮಂತ (ಸದೃಢ) ರಾಗುವುದು.

ಒಟ್ಟಾರೆ ಒಂದು ಜನಾಂಗವೇ ಇರಲಿ ಅಥವಾ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ, ರಾಜಕೀಯ ಮತ್ತು ತಾಂತ್ರಿಕ ರಂಗವೇ ಇರಲಿ, ಆ ಕ್ಷೇತ್ರದಲ್ಲಿ ಇಚ್ಛಿತ ಬದಲಾವಣೆಯನ್ನು ಮತ್ತು ಇಚ್ಛಿತ ಪ್ರಗತಿಯನ್ನು ತರುವುದೇ ಅಭಿವೃದ್ಧಿ ಎಂದು ಹೇಳಬಹುದು.

ಮಾನವ ಸಂಪನ್ಮೂಲ ಅಭಿವೃದ್ಧಿ ಎನ್ನುವುದನ್ನು ಸರಳವಾದ ಅರ್ಥದಲ್ಲಿ ಹೇಳುವುದಾದರೆ **"ವ್ಯಕ್ತಿ ತಾನು ಶಿಕ್ಷಣ ಪಡೆಯುವುದರ ಜೊತೆಗೆ, ಜ್ಞಾನ ಸಂಪತ್ತನ್ನು ಹೆಚ್ಚಿಸಿಕೊಂಡು ಅದನ್ನು ಸಮಾಜದ ವಿವಿಧ ಕ್ಷೇತ್ರಗಳಲ್ಲಿ ಸದ್ಬಳಕೆ ಮಾಡಿಕೊಳ್ಳುವುದು"** ಎಂದು ಹೇಳಬಹುದು.

ಮಾನವ ಸಂಪನ್ಮೂಲವು ಮಾನವ ಶಕ್ತಿಗಿಂತ ಭಿನ್ನವಾಗಿರುತ್ತದೆ. ಮನುಷ್ಯನನ್ನು ಒಂದು ಯಂತ್ರದ ಶಕ್ತಿಗೆ ಹೋಲಿಸಬಹುದು. ತಾನು ಪಡೆದ ವಿವಿಧ ಕೌಶಲಗಳ ನೆರವಿನಿಂದ ಕಾರ್ಯನಿರ್ವಹಿಸುವುದನ್ನು ಮಾನವ ಸಂಪನ್ಮೂಲ ಎನ್ನಬಹುದು. ವ್ಯಕ್ತಿಯು ಮಾನವ ಸಂಪನ್ಮೂಲದ ಒಂದು ಅವಿಭಾಜ್ಯ ಅಂಗವಾಗಿರುವುದರಿಂದ ಇದರ ಅಭಿವೃದ್ಧಿಗೆ ಹೆಚ್ಚು ಒತ್ತು ನೀಡುವುದು ಅನಿವಾರ್ಯವಾಗಿದೆ. ಮಾನವ ಸಂಪನ್ಮೂಲ ಅಭಿವೃದ್ಧಿ ಕುರಿತಂತೆ **"ಹೆನ್ರಿ ಪೋಲಾರ್ಡ್** ರವರು ಈ ರೀತಿ ಹೇಳಿದ್ದಾರೆ – ನನ್ನ ಎಲ್ಲಾ ಕಟ್ಟಡಗಳನ್ನು ತೆಗೆದುಕೊಳ್ಳಿ, ನನ್ನ ಎಲ್ಲಾ ಯಂತ್ರೋಪಕರಣಗಳನ್ನು ಕೊಂಡುಹೋಗಿ, ಆದರೆ ನನ್ನ ಜನರನ್ನು ಮತ್ತು ನನ್ನ ನೌಕರರನ್ನು ನನ್ನೊಡನೆ ಬಿಡಿ, ಪುನಃ ನಾನು ಅದೇ ಮೊದಲಿನ ಹೆನ್ರಿ ಪೋಲಾರ್ಡ್ ಆಗ ಬಲ್ಲೆ" ಎಂಬ ಮಾತು ಮಾನವ ಸಂಪನ್ಮೂಲ ಅಭಿವೃದ್ಧಿಯನ್ನೇ ತಿಳಿಸುತ್ತದೆ. ಮಾನವ ಸಂಪನ್ಮೂಲವು "ಸರ್ವ ದೇಶಗಳ ಅಭಿವೃದ್ಧಿಯ ಬೆನ್ನೆಲುಬು, ಎಲ್ಲಾ ದೇಶಗಳ ಎಲ್ಲಾ ಕ್ಷೇತ್ರಗಳ ಬೆನ್ನೆಲುಬು" ಎಂಬುದಾಗಿ ಹೇಳಲಾಗುತ್ತದೆ.

ಸಾಮಾಜಿಕ ದೃಷ್ಟಿಯಿಂದ ಹೇಳುವುದಾದರೆ "ಮಾನವ ಸಂಪನ್ಮೂಲ ಬೆಳವಣಿಗೆಯು ಶ್ರೀಮಂತ ಬದುಕನ್ನು ನಡೆಸಲು ಸಹಾಯಕವಾಗುವಂತಹದ್ದಾಗಿದೆ".

## ಮಾನವ ಸಂಪನ್ಮೂಲ ಅಭಿವೃದ್ಧಿಯ ವ್ಯಾಖ್ಯೆಗಳು

ಹಲವು ತಜ್ಞರು ಮಾನವ ಸಂಪನ್ಮೂಲ ಅಭಿವೃದ್ಧಿಗಾಗಿ ಶಿಕ್ಷಣ ಎಂಬ ಪರಿಕಲ್ಪನೆಗೆ ಸಂಬಂಧಿಸಿದಂತೆ ತಮ್ಮದೇ ಆದ ಅಭಿಪ್ರಾಯಗಳನ್ನು ಮಂಡಿಸಿದ್ದಾರೆ.

ಶಿಕ್ಷಣ ಎಂಬುದು ಪ್ರತಿಭಾ ತರಬೇತಿ ಮತ್ತು ಕೌಶಲಗಳ ಬೆಳವಣಿಗೆಯ ಪ್ರಧಾನ ಮೂಲವಾಗಿ ಪರಿಣಮಿಸಿದೆ. ನಿಜವಾಗಿ ಒಂದು ದೃಷ್ಟಿಕೋನದಿಂದ ಹೇಳುವುದಾದರೆ "ಶಿಕ್ಷಣವು ತಾರ್ಕಿಕವಾದ ಆರ್ಥಿಕ ಪಾತ್ರವನ್ನು ಒಳಗೊಂಡಿದೆ ಮತ್ತು ಜನತೆ ಉತ್ತಮ ಶಿಕ್ಷಣ ಪಡೆಯುತ್ತಾ ಹೋದಂತೆ ಅವರು ಸಂಪಾದಿಸುವ ಶಕ್ತಿಯು ಉತ್ತಮಗೊಳ್ಳುವಂತೆ ಮಾಡುತ್ತದೆ" ಎಂಬುದಾಗಿ ವೈ. ಜಿ. ಜಾನ್ ರವರು ಹೇಳಿದ್ದಾರೆ.

**ಹೆಚ್. ಕೆ. ಫಿಲಿಪ್** ರವರು "ಪ್ರಸ್ತುತದಲ್ಲಿ ಮಾನವ ಸಂಪನ್ಮೂಲ ಬೆಳವಣಿಗೆ ಆಗದಿದ್ದರೆ, ಕೈಗಾರೀಕರಣ ಮತ್ತು ಆಧುನೀಕರಣ ಪ್ರಕ್ರಿಯೆ ಉಂಟಾಗಲಾರದು ಎಂದು ಹೇಳಿದ್ದಾರೆ".

**ಸ್ಲೀಮ್** ರವರು ಹೇಳಿರುವಂತೆ "ಮಾನವ ಸಂಪನ್ಮೂಲವೆಂದರೆ – ಜನರ ವೈಯಕ್ತಿಕ ಬೆಳವಣಿಗೆ ಮತ್ತು ಅಭಿವೃದ್ಧಿಯ ಜೊತೆಗೆ ಸಂಸ್ಥೆಗಳ ಅವಶ್ಯಕತೆಗಳೊಡನೆ ಸಮತೋಲನ ಉಂಟುಮಾಡುವುದರ ಕಡೆಗೆ ಹೆಜ್ಜೆ ಇರುವುದೇ ಮಾನವ ಸಂಪನ್ಮೂಲ ಅಭಿವೃದ್ಧಿ" ಎಂದಿದ್ದಾರೆ.

**ಪ್ರೊ. ಪಿ. ವಿ. ರಾವ್** ರವರು "ಮಾನವ ಸಂಪನ್ಮೂಲ ಅಭಿವೃದ್ಧಿಯು ಒಂದು ಸಂಘ–ಸಂಸ್ಥೆಯ ನೌಕರರು ಸತತವಾಗಿ ಒಂದು ವ್ಯವಸ್ಥಿತ ರೀತಿಯಲ್ಲಿ ಸಹಾಯ ಪಡೆಯುವತ್ತ ಸಾಗುವ ಗುರಿಗಳನ್ನು ಹೊಂದಿದೆ" ಎಂದು ಹೇಳಿದ್ದಾರೆ.

ಈ ಎಲ್ಲಾ ಹೇಳಿಕೆಗಳನ್ನು ಗಮನಿಸಿದಾಗ ಮಾನವ ಸಂಪನ್ಮೂಲ ಅಭಿವೃದ್ಧಿ ಎಂಬುದು ಸಮಾಜಕ್ಕೆ ಒಂದು ಗರಿಷ್ಠ ಮಟ್ಟದ ಸೇವೆ ಸಲ್ಲಿಸುವುದಕ್ಕಾಗಿಯೇ ಅಸ್ತಿತ್ವದಲ್ಲಿರುವಂತಹದ್ದಾಗಿದ್ದು, ನೈತಿಕ, ಮಾನಸಿಕ, ಆರ್ಥಿಕ, ಸಾಮಾಜಿಕ ಮಟ್ಟಗಳು ಅಧಿಕಗೊಳ್ಳಲು ಕೈಗೊಳ್ಳುವ ಸಾಮೂಹಿಕ ಚಟುವಟಿಕೆಗಳ ವಿಧಾನವೇ ಮಾನವ ಸಂಪನ್ಮೂಲ ಅಭಿವೃದ್ಧಿ ಎಂಬುದಾಗಿ ಹೇಳಬಹುದಾಗಿದೆ.

ಒಟ್ಟಿನಲ್ಲಿ ಮಾನವ ಸಂಪನ್ಮೂಲ ಅಭಿವೃದ್ಧಿ ಎಂದರೆ "ಒಂದು ಸಂಘ–ಸಂಸ್ಥೆ ಅಥವಾ ಕ್ಷೇತ್ರದ ಕೆಲಸಗಾರರ ಒಟ್ಟು ಜ್ಞಾನ ಚಾತುರ್ಯ, ರಚನಾತ್ಮಕ ಚತುರತೆ, ಪ್ರತಿಭೆ ಮತ್ತು ಯೋಗ್ಯತೆಗಳಷ್ಟೇ ಅಲ್ಲದೆ ಆ ವ್ಯಕ್ತಿಗಳ ಮೌಲ್ಯಗಳು ಮನೋಭಾವ ಹಾಗೂ ನಂಬಿಕೆಗಳನ್ನು ಒಳಗೊಂಡ ಒಂದು ವ್ಯವಸ್ಥೆ" ಎಂದು ಹೇಳಬಹುದಾಗಿದೆ.

## ಮಾನವ ಸಂಪನ್ಮೂಲ ಅಭಿವೃದ್ಧಿಯ ಗುರಿ–ಉದ್ದೇಶಗಳು

ಯಾವುದೆ ಕಾರ್ಯದ ಯಶಸ್ಸಿನ ಹಿಂದೆ ನಿರ್ದಿಷ್ಟ ಗುರಿ ಮತ್ತು ಉದ್ದೇಶಗಳು ಇದ್ದೆ ಇರುತ್ತವೆ. ಗುರಿ ಉದ್ದೇಶಗಳಿಲ್ಲದೆ ಕೈಗೊಳ್ಳುವ ಯಾವುದೆ ಕಾರ್ಯಗಳು ಯಶಸ್ವಿಯಾಗಲಾರವು ಎಂಬ ಮಾತೊಂದಿದೆ. ಮಾನವ ಸಂಪನ್ಮೂಲ ಅಭಿವೃದ್ಧಿಕಾರ್ಯವು ಇಡೀ ರಾಷ್ಟ್ರದ ಎಲ್ಲಾ ಕ್ಷೇತ್ರದ ಅಭಿವೃದ್ಧಿಯನ್ನು ಅವಲಂಬಿಸಿರುವುದರಿಂದ ಅದು ಕೆಲವಾರು ನಿರ್ದಿಷ್ಟ ಧ್ಯೇಯೋದ್ದೇಶಗಳನ್ನು ಹೊಂದಿರಲೇ ಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ತಜ್ಞರು ಸೂಚಿಸಿರುವ ಅತಿ ಪ್ರಮುಖವಾದ ಗುರಿ–ಉದ್ದೇಶಗಳೆಂದರೆ –

- ಪ್ರತಿಯೊಬ್ಬ ವ್ಯಕ್ತಿಯಲ್ಲಿ ಅಂತರ್ಗತವಾಗಿರುವ ಸುಪ್ತಪ್ರತಿಭೆಗಳನ್ನು ಅಭಿವೃದ್ಧಿ ಪಡಿಸುವುದು ಇದರ ಪ್ರಮುಖ ಗುರಿಯಾಗಿದೆ.
- ಪ್ರತಿಯೊಬ್ಬರ ಸುಪ್ತ ಸಾಮರ್ಥ್ಯಗಳನ್ನು ಅವರವರ ಪ್ರಸಕ್ತ ಪಾತ್ರಗಳಿಗೆ ಅನುಗುಣವಾಗಿ ಅಭಿವೃದ್ಧಿಪಡಿಸುವುದು.
- ಮುಖ್ಯಸ್ಥರ ಮತ್ತು ಕೆಲಸಗಾರರ ವ್ಯವಸ್ಥೆಯಲ್ಲಿ ಅವರವರ ಪರಸ್ಪರ ಸಂಬಂಧಗಳನ್ನು ಅಭಿವೃದ್ಧಿ ಪಡಿಸುವುದು (ಭಾವನಾತ್ಮಕ ಬೆಸುಗೆಯನ್ನು ಉಂಟುಮಾಡುವುದು).
- ಸಮಾಜದ ವಿವಿಧ ಉತ್ಪಾದಕ ಕ್ಷೇತ್ರಗಳ ನಡುವೆ ಸೌಹಾರ್ದಯುತ ಸಂಬಂಧವನ್ನು ಹೆಚ್ಚಿಸುವುದು (ಬೆಳೆಸುವುದು)
- ಸಂಘ–ಸಂಸ್ಥೆಗಳ ನೌಕರರಲ್ಲಿ ತಂಡ ಸ್ಫೂರ್ತಿಯನ್ನು ಬೆಳೆಸುವುದು.
- ರಾಷ್ಟ್ರ ಮತ್ತು ಸಮಾಜದ ಎಲ್ಲಾ ದೇಶಗಳ ಉತ್ಪಾದನೆಯನ್ನು ಹೆಚ್ಚಿಸುವುದು ಇದರ ಪ್ರಮುಖ ಗುರಿಯಾಗಿದೆ.
- ನೌಕರರ ಮತ್ತು ಕಾರ್ಮಿಕರ ನೈತಿಕತೆ ಸುಧಾರಿಸುವುದು.

 ISSN : 2249-2429

- ಮಾನವನಲ್ಲಿ ಇರುವ ವಿವಿಧ ಪ್ರತಿಭೆಗಳನ್ನು ಗುರುತಿಸಿ ಅವುಗಳನ್ನು ಸುಧಾರಿಸಲು ಸೂಕ್ತ ಕ್ರಮಗಳನ್ನು ಕೈಗೊಳ್ಳುವುದು.
- ಮಾನವ ಸಂಪನ್ಮೂಲ ಅಭಿವೃದ್ಧಿಗೆ ಅಗತ್ಯವಿರುವ ಮಾನವ ಸಂಪನ್ಮೂಲ ಅಭಿವೃದ್ಧಿಯ ಮಾಹಿತಿಯನ್ನು ಒದಗಿಸುವುದು.
- ನೌಕರರ ಗೈರು ಹಾಜರಿಯನ್ನು ಕಡಿಮೆಗೊಳಿಸುವುದು.
- ಆದಷ್ಟು ಖರ್ಚು ವೆಚ್ಚಗಳನ್ನು ಕಡಿಮೆ ಮಾಡುವುದು.
- ಕಾಲ–ಕಾಲಕ್ಕೆ ಅನುಗುಣವಾಗಿ ಯೋಜಿತ ಸಂಪನ್ಮೂಲ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳುವುದು.

ಹೀಗೆ ಮೇಲ್ಕಂಡ ಅತೀ ಪ್ರಮುಖವಾದ ಹಲವು ಉದ್ದೇಶಗಳನ್ನು ಮಾನವ ಸಂಪನ್ಮೂಲ ಅಭಿವೃದ್ಧಿಯ ಧ್ಯೇಯೋದ್ದೇಶಗಳೆನ್ನುತ್ತಾರೆ. ಇದಕ್ಕೆ ಅನುಗುಣವಾಗಿ ಸಂಬಂಧಪಟ್ಟ ಸಚಿವಾಲಯವು ಇಲಾಖೆಗಳ ಮುಖಾಂತರ ಇವುಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವುದರ ಮೂಲಕ ಇದರ ಮಹತ್ವವನ್ನು ಅರಿಯಬಹುದಾಗಿದೆ.

## ಮಾನವ ಸಂಪನ್ಮೂಲ ಅಭಿವೃದ್ಧಿ ಕಾರ್ಯಗಳು

ಯಾವುದೇ ಒಂದು ದೇಶದಲ್ಲಿ ಒಂದಲ್ಲಾ ಒಂದು ಕಾರಣದಿಂದ ದೇಶದ ಎಲ್ಲಾ ಸಂಪನ್ಮೂಲಗಳು ಬರಿದಾಗಬಹುದು. ಆದರೆ ಎಂದೆಂದಿಗೂ ಬರಿದಾಗದ ಸಂಪನ್ಮೂಲವೆಂದರೆ "ಮಾನವ ಸಂಪನ್ಮೂಲವಾಗಿದೆ". ಮಾನವ ಸಂಪನ್ಮೂಲವೇ ನಮ್ಮ ಸಾಮಾಜಿಕ ಸಂಪತ್ತಿಗೆ ಪರಿಹಾರವನ್ನು ಹುಡುಕಬಲ್ಲದು. ಇಂತಹ ದಿನಮಾನಗಳಲ್ಲಿ ಶೈಕ್ಷಣಿಕ ರಂಗ, ತಂತ್ರಜ್ಞಾನ ಮತ್ತು ಮಾರುಕಟ್ಟೆಯ ವಾತಾವರಣದಲ್ಲಿ ಆಗುತ್ತಿರುವ ತ್ವರಿತವಾದ ಬದಲಾವಣೆಯ ವಾತಾವರಣವನ್ನು ಗಮನದಲ್ಲಿಟ್ಟುಕೊಂಡು ಮಾನವ ಸಂಪನ್ಮೂಲ ಅಭಿವೃದ್ಧಿಪಡಿಸುವುದು ನಿಜವಾದ ಮಾನವ ಸಂಪನ್ಮೂಲವಾಗಿದೆ. ಆದರೆ ಅತ್ಯಧಿಕ ಸಂಖ್ಯೆಯಲ್ಲಿರುವ ಭಾರತೀಯ ಜನಸಂಖ್ಯೆಯನ್ನು ಸಂಪನ್ಮೂಲವಾಗಿ ಪರಿವರ್ತಿಸುವುದಾಗಲಿ ಅಥವಾ ಮೌಲ್ಯಮಾಡುವುದಾಗಲಿ ಅತ್ಯಂತ ಕಠಿಣವಾದ ಕೆಲಸವಾಗಿದೆ. ಆದ್ದರಿಂದ ನಮ್ಮ ಮುಂದೆ ಇರುವ ಪ್ರಮುಖ ಪ್ರಶ್ನೆ ಎಂದರೆ ? ಈ ವೈವಿಧ್ಯಮಯವಾದ ಭಾರತೀಯ ಜನರ ಹಾಗೂ ಉನ್ನತ ಮಟ್ಟದ ಆಶೋತ್ತರಗಳನ್ನು, ಮಹತ್ವಾಕಾಂಕ್ಷೆಗಳನ್ನು ಹೊಂದಿರುವ ಜನರನ್ನು ಸಂಪನ್ಮೂಲ ವ್ಯಕ್ತಿಗಳನ್ನಾಗಿ ಮಾರ್ಪಡಿಸುವ ಕಾರ್ಯವನ್ನು "ಮಾನವ ಸಂಪನ್ಮೂಲ ಅಭಿವೃದ್ಧಿಕಾರ್ಯ" ಎನ್ನುವರು. ಇದನ್ನು ಅರಿತ ಭಾರತ ಸರ್ಕಾರವು 1986 ರಲ್ಲಿ ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯವನ್ನು ಸ್ಥಾಪಿಸಿತು, ಇದು ಬೇರೆ ಆಗಿರದೆ ಕೇಂದ್ರ ಶಿಕ್ಷಣ ಇಲಾಖೆಯೇ ಆಗಿದ್ದು ಇದನ್ನು "ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯವನ್ನಾಗಿ" ಪರಿವರ್ತಿಸಲಾಗಿದೆ.

ಹೀಗೆ ದಿವಂಗತ ರಾಜೀವ್ ಗಾಂಧಿಯವರ ಅವಧಿಯಲ್ಲಿ ಅಸ್ತಿತ್ವಕ್ಕೆ ಬಂದ ಮಾನವ ಸಂಪನ್ಮೂಲ ಅಭಿವೃದ್ಧಿ ಪ್ರಥಮ ಸಚಿವರಾಗಿ ಶ್ರೀಮಾನ್. ಪಿ. ವಿ. ನರಸಿಂಹರಾವ್ ರವರು ಕಾರ್ಯನಿರ್ವಹಿಸಿದರು. ಅವರ ನಂತರ 1989ರಲ್ಲಿ ಶ್ರೀಮಾನ್ ಶಂಕರ್‌ರಾವ್ ರವರು, ಅದೇ ಅವಧಿಯಲ್ಲಿ ಶ್ರೀಮಾನ್ ರಾಮಲಿಂಗರವರು ನಂತರ 1991 ರಲ್ಲಿ ಶ್ರೀಮಾನ್ ಅರ್ಜುನ್‌ಸಿಂಗ್ ರವರು, 1994 ರಲ್ಲಿ ಶ್ರೀಮಾನ್ ಮಾಧವರಾವ್ ಸಿಂಧ್ಯಾರವರು, 1996 ರಲ್ಲಿ ಶ್ರೀಮಾನ್ ಎಸ್. ಆರ್. ಬೊಮ್ಮಾಯಿಯವರು, ನಂತರ ಶ್ರೀಮಾನ್ ಮುರಳಿಮನೋಹರ ಜೋಷಿಯವರು, ಪುನ್ಹ ಶ್ರೀಮಾನ್ ಅರ್ಜುನ್‌ಸಿಂಗ್ ರವರು, ಪ್ರಸ್ತುತವಾಗಿ 2008 ರಿಂದ ಶ್ರೀಮಾನ್ ಕಪಿಲ್ ಸಿಬಾಲ್‌ರವರು ಮಾನವ ಸಂಪನ್ಮೂಲ ಸಚಿವರಾಗಿ ಅಭಿವೃದ್ಧಿ ಕಾರ್ಯಗಳನ್ನು ನಿರ್ವಹಿಸುತ್ತಿದ್ದಾರೆ.

ಹೀಗೆ ಕೇಂದ್ರದಲ್ಲಿ ಪ್ರತ್ಯೇಕವಾದ ಅಭಿವೃದ್ಧಿ ಸಚಿವಾಲಯವನ್ನು ಸ್ಥಾಪಿಸಿಕೊಂಡಿರುವ ಈ ಶಾಖೆಯು ದೇಶದಲ್ಲಿರುವ ಮಾನವ ಸಂಪತ್ತನ್ನು ಸಂಪನ್ಮೂಲ ಸಂಪತ್ತನ್ನಾಗಿ ಪರಿವರ್ತಿಸುವ ಪ್ರಯತ್ನಕ್ಕೆ ಮುಂದಾಗಿದೆ. ಇದಕ್ಕೆ ಅನುಗುಣವಾಗಿ ಮಾನವ ಸಂಪನ್ಮೂಲ ಅಭಿವೃದ್ಧಿ ಕೈಗೊಳ್ಳಬಹುದಾದ ಪ್ರಮುಖ ಕಾರ್ಯಗಳನ್ನು ಈ ಕೆಳಗಿನಂತೆ ಕಾಣಬಹುದಾಗಿದೆ.

## ಮಾನವ ಸಂಪನ್ಮೂಲ ಅಭಿವೃದ್ಧಿಯ ಪ್ರಮುಖ ಕಾರ್ಯಗಳು

1. ಕ್ರಿಯಾತ್ಮಕ ಮತ್ತು ಕಾರ್ಯನಿರ್ವಹಣಾ ಮಟ್ಟವನ್ನು ಹೆಚ್ಚಿಸಿ ಮಾನವ ಸಂಪನ್ಮೂಲ ಅಭಿವೃದ್ಧಿ ಇಲಾಖೆಯು ಅತ್ಯುತ್ತಮವಾಗಿ ಕಾರ್ಯನಿರ್ವಹಿಸುವಂತೆ ಸಹಕರಿಸುವುದು.
2. ವಿವಿಧ ಸಂಸ್ಥೆಗಳಲ್ಲಿರುವ ಮಾನವ ಸಂಪನ್ಮೂಲವನ್ನು ಕ್ರೂಢೀಕರಿಸಿ ಅವುಗಳನ್ನು ವಿವಿಧ ಕ್ಷೇತ್ರಗಳಲ್ಲಿ ಉಪಯೋಗಿಸಿ ಕೊಂಡು ದೇಶದ ಶ್ರೇಯೋಭಿವೃದ್ಧಿಗೆ ಪ್ರಯತ್ನಿಸುವುದು.
3. ಅಭಿವೃದ್ಧಿ ಮತ್ತು ಸಂಶೋಧನಾ ವ್ಯವಸ್ಥೆಗಳಲ್ಲಿ ಮಹತ್ತರವಾದ ಬದಲಾವಣೆಗಳನ್ನು ತರುವ ಪಾತ್ರವನ್ನು ವಹಿಸುವುದು.
4. ಭವಿಷ್ಯತ್ತಿನಲ್ಲಿ ಬೇಕಾಗುವ ಮಾನವ ಶಕ್ತಿಯ ಅವಕಾಶಗಳನ್ನು ರಚನಾತ್ಮಕವಾಗಿ ಉತ್ಪಾದಿಸಲು ಅಡಿಪಾಯವನ್ನು ಹಾಕುವುದು.
5. ಅತ್ಯುತ್ತಮ ಅರ್ಹತೆಯುಳ್ಳ ವ್ಯಕ್ತಿಗಳ ಲಭ್ಯತೆಯನ್ನು ಪೂರೈಸುವುದು, ಇಂತಹ ಕಾರ್ಯವನ್ನು "ಆಯ್ಕೆ ಮತ್ತು ಭರ್ತಿ ವಿಧಾನದ" ಮೂಲಕ ಎಲ್ಲಾ ಕ್ಷೇತ್ರಗಳಲ್ಲಿ ದೊರೆಯುವಂತೆ ಮಾಡುವುದು.
6. ಒಂದು ನಿರ್ದಿಷ್ಟ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುವ ಸಾಮರ್ಥ್ಯ ಮಾನವ ಸಂಪನ್ಮೂಲವನ್ನು ಅಲ್ಲಿಯೇ ಉಳಿಸಿಕೊಳ್ಳಲು ಪ್ರಯತ್ನಿಸುವುದಲ್ಲದೆ ಅವರ ಬೌದ್ಧಿಕ ಸಂಪನ್ಮೂಲ ಇತರರಿಗೆ ವಿಸ್ತರಿಸುವಂತೆ ಪ್ರಯತ್ನಿಸುವುದು.
7. ವಿಶೇಷ ಕೊಡುಗೆಗಳನ್ನು ನೀಡಿ ಉನ್ನತ ಮಾನವ ಸಂಪನ್ಮೂಲಗಳನ್ನು ಮೌಲ್ಯೀಕರಣ ಮಾಡಿ ಅವರವರ ಅರ್ಹತೆಗಳಿಗೆ ಅನುಗುಣವಾಗಿ ಅವರನ್ನು ಪುರಸ್ಕರಿಸಿ ಅವರ ಕಾರ್ಯಶೀಲತೆಯನ್ನು ಮತ್ತಷ್ಟು ಪುರಸ್ಕರಿಸುವುದು.
8. ನೌಕರರ ಸರ್ವತೋಮುಖ ಬೆಳವಣಿಗೆಗೆ ಅವಕಾಶ ನೀಡಲು ವಿವಿಧ ಜೀವನ ಕ್ರಮ ಯೋಜನೆಗಳು ಮತ್ತು ವಿಶೇಷ ಪ್ರಾಧಾನ್ಯತೆ ಇತ್ಯಾದಿಗಳನ್ನು ಕಲ್ಪಿಸಿಕೊಡುವುದು.
9. ಉತ್ತಮ ಉದ್ಯೋಗ ನಿರ್ಮಾಣ ಮಾಡುವುದಕ್ಕೋಸ್ಕರ ಅವಶ್ಯಕವೂ ಮತ್ತು ಆರೋಗ್ಯಕರವೂ ಆಗಿರುವ ಪರಿಸರವನ್ನು ನಿರ್ಮಾಣ ಮಾಡುವುದು.
10. ಉದ್ಯೋಗ ವಿಶ್ಲೇಷಣೆ ಮತ್ತು ಉದ್ಯೋಗ ಮೌಲ್ಯೀಕರಣ ಇಂತಹ ಕಾರ್ಯನಿರ್ವಹಣೆಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸುವುದು.
11. ಆಯ್ಕೆಯಾಗಿರುವ ಅಭ್ಯರ್ಥಿಗಳನ್ನು ಸಮರ್ಪಕವಾಗಿ ಉಪಯೋಗ ಮಾಡಿಕೊಳ್ಳಲು ಸಹಾಯಕವಾಗುವ ಯೋಜನೆಗಳನ್ನು ಜಾರಿಗೊಳಿಸಬೇಕು.
12. ಮಾನವ ಸಂಪನ್ಮೂಲ ಅಭಿವೃದ್ಧಿಯು ತಾಂತ್ರಿಕ ನಿರ್ವಹಣೆ ಮತ್ತು ಅದಕ್ಕೆ ಪೂರಕವಾದ ಅರ್ಹತೆಗಳನ್ನು ಅಭಿವೃದ್ಧಿಪಡಿಸಿ

ISSN : 2249-2429


ಅದರ ಅಭಿವೃದ್ಧಿಯನ್ನು ಪರಿಣಾಮಕಾರಿಯಾಗಿ ಮಾಡುವುದಾಗಿದೆ.

13. ಮಾನವ ಸಂಪನ್ಮೂಲ ಅಭಿವೃದ್ಧಿ ಕ್ಷೇತ್ರದಲ್ಲಿ ಉತ್ತಮ ಸಾಂಸ್ಕೃತಿಕ ವಾತಾವರಣ ನಿರ್ಮಿಸಿ ಅದರ ಮಹತ್ವವನ್ನು ತಿಳಿಸುವುದು.
14. ವಿವಿಧ ಉತ್ಪಾದನಾ ಕ್ಷೇತ್ರಗಳಲ್ಲಿನ ಸಮಸ್ಯೆಗಳನ್ನು ಗುರುತಿಸಿ ಮಾನವ ಸಂಪನ್ಮೂಲ ಅಭಿವೃದ್ಧಿಯ ದೃಷ್ಟಿಯಿಂದ :ಸಮಸ್ಯಾ ಸಂಶೋಧನಾ ಕಾರ್ಯಗಳನ್ನು" ಕೈಗೊಳ್ಳುವುದು.
15. ಮಾನವ ಸಂಪನ್ಮೂಲ ಅಭಿವೃದ್ಧಿಯಲ್ಲಿ ಅನೇಕ ಸಮಸ್ಯೆಗಳನ್ನು ಬಗೆಹರಿಸುವುದಕ್ಕೆ ಸಂಬಂಧಿಸಿದಂತೆ ಅಭಿವೃದ್ಧಿ ಸಚಿವಾಲಯವು ಮಧ್ಯಪ್ರವೇಶಿಸಿ ಪರಿಹಾರ ಕಾರ್ಯಗಳನ್ನು ನೀಡುವುದು ಇದರ ಪ್ರಮುಖ ಕಾರ್ಯವಾಗಿದೆ.

ಹೀಗೆ ಮಾನವ ಸಂಪನ್ಮೂಲ ಶಾಖೆಯು ಈ ಮೇಲ್ಕಂಡ ಕಾರ್ಯಗಳನ್ನು ಜಾರಿಗೊಳಿಸಿ ಕಾಲ-ಕಾಲಕ್ಕೆ ಅನುಗುಣವಾಗಿ ಜಗತ್ತಿನ ಬದಲಾವಣೆಗೆ ಪೂರಕವಾಗಿ ಸಂಪನ್ಮೂಲ ಅಭಿವೃದ್ಧಿಗೆ ಹೆಚ್ಚು ಒತ್ತು ನೀಡುವುದು ಅನಿವಾರ್ಯವಾಗಿದೆ. ಈ ಮೂಲಕ ವ್ಯಕ್ತಿಯು ಸಮಾಜ ಮತ್ತು ದೇಶದ ಅಭಿವೃದ್ಧಿಗೆ ಪೂರಕವಾಗಿ ಸಂಪನ್ಮೂಲಗೊಳ್ಳಲು ಸಾಧ್ಯವಾಗುತ್ತದೆ ಎಂದು ಹೇಳಬಹುದು.

## ಮಾನವ ಸಂಪನ್ಮೂಲ ಅಭಿವೃದ್ಧಿ ಮಾಡುವ ವಿಧಾನ

ಪ್ರಸ್ತುತ ಸನ್ನಿವೇಶದಲ್ಲಿ ಮಾನವ ಸಂಪನ್ಮೂಲ ಅಭಿವೃದ್ಧಿಗೊಳಿಸುವುದು ಒಂದು ಅನಿವಾರ್ಯ ಪ್ರಕ್ರಿಯೆ ಆಗಿದೆ. ಕಾರಣ ದೇಶದ ಎಲ್ಲಾ ಕ್ಷೇತ್ರಗಳ ಅಭಿವೃದ್ಧಿಯನ್ನು ಮಾನವ ಸಂಪನ್ಮೂಲ ಅಭಿವೃದ್ಧಿ ಅವಲಂಬಿಸಿರುವುದರಿಂದ ಈ ಕಾರ್ಯವನ್ನು ತೀರ್ವವಾಗಿ ಕೈಗೊಳ್ಳುವ ಅಗತ್ಯತೆ ಇದೆ. ಈ ಹಿನ್ನೆಲೆಯಲ್ಲಿ ಮಾನವ ಸಾಮರ್ಥ್ಯ, ಜ್ಞಾನ ಮತ್ತು ಕೌಶಲ್ಯಗಳನ್ನು ಅಭಿವೃದ್ಧಿ ಪಡಿಸುವ ನಿಟ್ಟಿನಲ್ಲಿ ಈ ಕೆಳಗಿನ ಕೆಲವು ವಿಧಾನಗಳನ್ನು ಕೈಗೊಳ್ಳುವುದು ಅನಿವಾರ್ಯವಾಗಿದೆ. ಇವುಗಳನ್ನು ಮಾನವ ಸಂಪನ್ಮೂಲ ಅಭಿವೃದ್ಧಿಯ ವಿಧಾನಗಳೆಂದು ಹೇಳಬಹುದಾಗಿದೆ.

## 1. ಆರೋಗ್ಯ ಸೌಲಭ್ಯಗಳನ್ನು ವಿಸ್ತರಿಸುವುದು

ಆರೋಗ್ಯವೇ ಭಾಗ್ಯ ಎಂಬ ಮಾತು ಸರ್ವಕಾಲಿಕವಾದುದು. ದೇಶದ ಮಾನವ ಸಂಪತ್ತು ಸಮರ್ಪಕವಾಗಿ ಸದ್ಬಳಕೆಯಾಗಬೇಕೆಂದರೆ ಎಲ್ಲಾ ಪ್ರಜೆಗಳು ಆರೋಗ್ಯವಂತರಾಗಿರಬೇಕು. ಎಲ್ಲಿ ಆರೋಗ್ಯವಂತ ಪ್ರಜೆಗಳು ಇರುತ್ತಾರೋ, ಅಲ್ಲಿ ಮಾನವ ಸಂಪನ್ಮೂಲ ಅಭಿವೃದ್ಧಿ ಸಾಧ್ಯ. ಆದ್ದರಿಂದ ದೇಶದಲ್ಲಿ ಪ್ರತಿಹಂತದಲ್ಲಿಯೂ ಆರೋಗ್ಯಕ್ಕೆ ಸಂಬಂಧಪಟ್ಟ ಮುನ್ನೆಚ್ಚರಿಕೆ ಕ್ರಮಗಳನ್ನು ಮತ್ತು ಜಾಗೃತಿಯನ್ನು ಉಂಟು ಮಾಡುವ ಮೂಲಕ ಪ್ರಯತ್ನಿಸಲಾಗುತ್ತಿದೆ. ಈ ಹಿನ್ನೆಲೆಯಲ್ಲಿ ಉತ್ತಮ ಚಿಕಿತ್ಸೆಗಳು. ಪೌಷ್ಠಿಕ ಆಹಾರ ಪಾಲನೆ-ಪೋಷಣೆ ಮತ್ತು ಆರೋಗ್ಯಕ್ಕೆ ಪೂರಕವಾದ ಪರಿಸರ ನಿರ್ಮಾಣಕ್ಕೆ ಹೆಚ್ಚಿನ ಮಹತ್ವ ನೀಡಲಾಗುತ್ತಿದೆ. ಈ ಮೂಲಕ ಆರೋಗ್ಯ ಸೌಲಭ್ಯಗಳನ್ನು ವಿಸ್ತರಿಸಿ ಮಾನವ ಸಂಪನ್ಮೂಲ ಅಭಿವೃದ್ಧಿಯನ್ನು ಉತ್ತಮ ಪಡಿಸಲು ಪ್ರಯತ್ನಿಸಲಾಗುತ್ತಿದೆ.

## 2. ಉತ್ತಮ ಶೈಕ್ಷಣಿಕ ಸೌಲಭ್ಯದ ವಿಸ್ತರಣೆ

ಮಾನವನಿಗೆ ಆರೋಗ್ಯ ಎಷ್ಟು ಮುಖ್ಯವೋ, ಬೌದ್ಧಿಕ ವಿಕಾಸವೂ ಅಷ್ಟೇ ಮುಖ್ಯ. ಸದೃಢವಾದ ಶರೀರವನ್ನು ಆರೋಗ್ಯದಿಂದ ಬಲಗೊಳಿಸಿದರೆ, ಸದೃಢವಾದ ಮನಸ್ಸನ್ನು ಶಿಕ್ಷಣದಿಂದ ಬಲಗೊಳಿಸಬಹುದು. ಆದ್ದರಿಂದ ಒಂದು ದೇಶದಲ್ಲಿ ಮಾನವ ಸಂಪನ್ಮೂಲ ಅಭಿವೃದ್ಧಿಯಾಗಬೇಕಾದರೆ ಅಲ್ಲಿ ಉತ್ತಮ ಗುಣಮಟ್ಟದ ಶಿಕ್ಷಣ ಜಾರಿಗೆ ಬರಬೇಕು. ಮಗುವಿನ ಪ್ರಾಥಮಿಕ ಶಿಕ್ಷಣದಿಂದ ಹಿಡಿದು ಅವನ ಭವಿಷ್ಯ ಜೀವನವನ್ನು ಉಜ್ವಲವಾಗಿ ರೂಪಿಸಿ ಕೊಳ್ಳುವಂತಹ ಅತ್ಯುನ್ನತಮಟ್ಟದ ಶಿಕ್ಷಣವನ್ನು ವ್ಯವಸ್ಥೆ ಮಾಡುವುದು ಅತ್ಯವಶ್ಯಕವಾಗಿದೆ. ಇಂತಹ ಕಾರ್ಯಗಳು ಮಾನವ ಸಮಾಜದಲ್ಲಿ ಅಥವಾ ಯಾವ ದೇಶದಲ್ಲಿ ಸಮರ್ಪಕವಾಗಿ ಜಾರಿ ಗೊಂಡಿರುತ್ತವೆಯೋ ಅಂತಹ ರಾಷ್ಟ್ರದಲ್ಲಿ ಹೇರಳವಾದ ಮಾನವ ಸಂಪನ್ಮೂಲ ಅಭಿವೃದ್ಧಿಯಾಗುತ್ತದೆ. ಆದ್ದರಿಂದ ಮಾನವ ಆರೋಗ್ಯದ ನಿರ್ವಹಣೆಗೆ ನೀಡಿದಷ್ಟು ಆದ್ಯತೆಯನ್ನು ಉತ್ತಮ ಗುಣಮಟ್ಟದ ಶಿಕ್ಷಣ ನಿರ್ವಹಣೆಗೂ ಆದ್ಯತೆ ನೀಡುವ ಮೂಲಕ ಮಾನವ ಸಂಪನ್ಮೂಲವನ್ನು ಅಭಿವೃದ್ಧಿಪಡಿಸಬಹುದಾಗಿದೆ.

## 3. ವೃತ್ತಿ ತರಬೇತಿ ಶಿಕ್ಷಣದ ವ್ಯವಸ್ಥೆ

ಸಾಮಾನ್ಯ ಶಿಕ್ಷಣದಿಂದ ವಿದ್ಯಾವಂತ ಜನತೆಯನ್ನು ಸೃಷ್ಟಿಸಬಹುದು, ಕೇವಲ ವಿದ್ಯಾವಂತ ಜನರು ಮಾತ್ರ ಮಾನವ ಸಂಪನ್ಮೂಲ ವ್ಯಕ್ತಿಗಳಾಗಲಾರರು. ಇಂತಹ ವಿದ್ಯಾವಂತ ಜನತೆಯನ್ನು ವಿವಿಧ ವಲಯಗಳಲ್ಲಿ ಅಥವಾ ಕ್ಷೇತ್ರಗಳಲ್ಲಿ ಸಮರ್ಥ ನಾಗರಿಕರನ್ನಾಗಿ ರೂಪಿಸಿದಾಗ ಅಥವಾ ತರಬೇತಿ ನೀಡಿದಾಗ ಮಾತ್ರ ಅವರು ಸಂಪನ್ಮೂಲ ವ್ಯಕ್ತಿಗಳಾಗಬಲ್ಲರು. ಕಾರ್ಯದಕ್ಷತೆ, ಕೌಶಲ್ಯ, ನೈಪುಣ್ಯತೆ ಇತ್ಯಾದಿಗಳೆಲ್ಲವೂ ವೃತ್ತಿ ತರಬೇತಿಯಿಂದ ವೃದ್ಧಿಸಲ್ಪಟ್ಟಿರುತ್ತವೆ. ಆದ್ದರಿಂದ ಇಂದಿನ ಜಗತ್ತಿನ ಶಿಕ್ಷಣ ರಂಗದಲ್ಲಿ ವೈಜ್ಞಾನಿಕತೆ ಮತ್ತು ತಾಂತ್ರಿಕತೆ ಔದ್ಯೋಗಿಕತೆಯ ಮೂಲಕ ಸೂಕ್ತ ಶಿಕ್ಷಣವನ್ನು ಆಯೋಜಿಸಬೇಕಾಗಿದೆ. ಯಾವ ದೇಶದಲ್ಲಿ ಶ್ರೇಷ್ಠ ಮಟ್ಟದ ವೃತ್ತಿಶಿಕ್ಷಣ ನೀಡಲಾಗುತ್ತದೆಯೋ ಆ ದೇಶದಲ್ಲಿ ಮಾನವ ಸಂಪನ್ಮೂಲ ಅಭಿವೃದ್ಧಿ ಹೇರಳವಾಗಿ ಆಗುತ್ತದೆ.

## 4. ವಿವಿಧ ವಿಸ್ತರಣಾ ಸೇವೆಗಳು

ಆಧುನೀಕರಣ, ಜಾಗತೀಕರಣ, ಕೈಗಾರೀಕರಣಗಳ ಹೆಸರಿನಲ್ಲಿ ರಾಷ್ಟ್ರ-ರಾಷ್ಟ್ರಗಳ ನಡುವೆ ಉತ್ತಮ ಬಾಂಧವ್ಯಗಳು ಏರ್ಪಟ್ಟು, ವಿವಿಧ ಕ್ಷೇತ್ರಗಳಲ್ಲಿನ ಸೇವಾ ಕಾರ್ಯಗಳನ್ನು ವಾಣಿಜ್ಯೋದ್ಯಮವಾಗಿ ಮಾರ್ಪಡಿಸಿಕೊಳ್ಳಲಾಗುತ್ತಿದೆ. ವಿವಿಧ ವಿದೇಶಿ ಕಂಪನಿಗಳು ಮಾರುಕಟ್ಟೆಗಳಿಗೆ ಮಾತ್ರ ಲಗ್ಗೆ ಇಡದೆ, ಶಿಕ್ಷಣದ ವಿಸ್ತರಣಾ ಸೇವೆಯಲ್ಲೂ ಅಪೇಕ್ಷಿತ ಬದಲಾವಣೆಯೊಂದಿಗೆ ಭಾರತವನ್ನು ಪ್ರವೇಶಿಸುತ್ತಿವೆ. ಅದೇ ರೀತಿ ಭಾರತವೂ ಕೂಡ ತನ್ನ ವಿಶೇಷ ಪ್ರತಿಭೆಗಳನ್ನು ವಿದೇಶಗಳಲ್ಲಿ ಸ್ಥಾಪಿಸಬಹುದಾಗಿದೆ. ಅದರಂತೆ ಇದು ದೇಶದ ಸಂಪನ್ಮೂಲ ಅಭಿವೃದ್ಧಿಗೆ ಪೂರಕ ಎಂದು ಹೇಳಬಹುದಾಗಿದೆ. ಈ ರೀತಿಯ ವಿಸ್ತರಣಾ ಸೇವೆಗಳನ್ನು ಹೆಚ್ಚಿಸಿಕೊಳ್ಳುವ ಮೂಲಕ ದೇಶದ ಮಾನವ ಸಂಪನ್ಮೂಲವನ್ನು ಅಭಿವೃದ್ಧಿ ಪಡಿಸಬಹುದಾಗಿದೆ.

## 5. ವಲಸೆಯನ್ನು ತಡೆಗಟ್ಟುವುದು

ಜನರು ಒಂದು ದೇಶದ ಆಸ್ತಿ, ಆ ಜನತೆಯನ್ನು ಸಂಪನ್ಮೂಗೊಳಿಸಲು ಪ್ರತಿರಾಷ್ಟ್ರಗಳು ತಮ್ಮ ರಾಷ್ಟ್ರೀಯ ಆದಾಯದಲ್ಲಿ ಅತ್ಯಧಿಕ ಪ್ರಮಾಣದ ಹಣವನ್ನು ವಿನಿಯೋಗಿಸಿ ಅವರನ್ನು ಸಂಪನ್ಮೂಲ ವ್ಯಕ್ತಿಗಳನ್ನಾಗಿ ಪರಿವರ್ತಿಸುತ್ತವೆ. ಹೀಗೆ ನಮ್ಮ ದೇಶದ

ಸೈದ್ಧಾಂತಿಕ ISSN : 2249-2429

ಆದಾಯದಲ್ಲಿ ರೂಪಿಸಲ್ಪಟ್ಟ ಮಾನವ ಸಂಪನ್ಮೂಲವು ತನ್ನ ಕೌಟುಂಬಿಕ ಸುಖಕ್ಕಾಗಿ ಬೇರೊಂದು ದೇಶಕ್ಕೆ ವಲಸೆ ಹೋದರೆ ಅದು ನಮ್ಮ ರಾಷ್ಟ್ರಕ್ಕೆ ತುಂಬಲಾರದ ನಷ್ಟವನ್ನು ಉಂಟುಮಾಡಿದಂತೆ. ಇದನ್ನು "ಪ್ರತಿಭಾ ಪಲಾಯನ" ಎಂಬುದಾಗಿಯೂ ಕರೆಯಲಾಗುತ್ತದೆ. ಇಂತಹ ಪ್ರತಿಭಾ ಪಲಾಯನವು ನಮ್ಮ ದೇಶದಲ್ಲಿ ಅತ್ಯಧಿಕವಾಗಿ ನಡೆಯುತ್ತಿರುವುದರಿಂದ ದೇಶದ ಪ್ರಗತಿ ನಿಧಾನಗತಿಯಲ್ಲಿದೆ ಎಂದರೆ ತಪ್ಪಾಗಲಾರದು. ಆದ್ದರಿಂದ ಇಲ್ಲಿ ಉತ್ಪಾದಿಸಲಾದ ಮಾನವ ಸಂಪನ್ಮೂಲವು ಇಲ್ಲಿಯೇ ಸದ್ಬಳಕೆಯಾಗುವಂತೆ ಮಾಡಬೇಕಾದ ಅನಿವಾರ್ಯತೆ ಇದೆ. ಹಾಗಾಗಿ ಮಾನವ ಸಂಪನ್ಮೂಲ ವಿಧಾನದಲ್ಲಿ ಪ್ರತಿಭಾ ವಲಸೆಯನ್ನು ತಡೆಗಟ್ಟುವುದು ಒಂದು ಅತ್ಯುತ್ತಮ ವಿಧಾನವಾಗಿದೆ ಎಂದು ಹೇಳಬಹುದು.

ಹೀಗೆ ಮೇಲ್ಕಾಣಿಸಿದ ಅತೀ ಪ್ರಮುಖವಾದ ವಿಧಾನಗಳನ್ನು ಪರಿಣಾಮಕಾರಿಯಾಗಿ ಕೈಗೊಳ್ಳುವ ಮೂಲಕ ದೇಶದಲ್ಲಿ ಮಾನವ ಸಂಪನ್ಮೂಲ ಅಭಿವೃದ್ಧಿಪಡಿಸಲಾಗುತ್ತಿದೆ. "ಯಾವುದೇ ದೇಶದಲ್ಲಿ ಶಿಕ್ಷಣದ ಮೇಲೆ ಎಷ್ಟೇ ಅಧಿಕ ಹಣವನ್ನು ಖರ್ಚು ಮಾಡಿದರೂ ಭವಿಷ್ಯತ್ ಕಾಲದಲ್ಲಿ ಅದು ಉತ್ತಮ ಲಾಭಾಂಶವನ್ನು ತಂದುಕೊಡಬಲ್ಲದು" ಎಂಬುದಾಗಿ ವಿ.ಕೆ.ಆರ್.ವಿ ರಾವ್ ರವರು ಅಭಿಪ್ರಾಯಪಟ್ಟಿದ್ದಾರೆ. ಆದ್ದರಿಂದ ದೇಶಕ್ಕೆ ಮಾನವ ಸಂಪನ್ಮೂಲ ಅಭಿವೃದ್ಧಿ ದೊಡ್ಡ ಆಸ್ತಿ ಎಂಬುದಾಗಿ ಹೇಳಬಹುದಾಗಿದೆ.

## ಮಾನವ ಸಂಪನ್ಮೂಲ ಅಭಿವೃದ್ಧಿಯ ಮಹತ್ವ/ಅಗತ್ಯತೆ/ಪ್ರಾಮುಖ್ಯತೆ

1. ರಾಷ್ಟದ ಭೌಗೋಳಿಕ/ಭೌತಿಕ ಕ್ಷೇಮಾಭಿವೃದ್ಧಿಯನ್ನು ಸಾಧಿಸುವುದು.
2. ರಾಷ್ಟ್ರೀಯ ಏಕತೆಯನ್ನು ಸಾಧಿಸುವುದಕ್ಕಾಗಿ.
3. ಆಧುನಿಕ ರಾಷ್ಟ್ರದ ನಿರ್ಮಾಣಕ್ಕಾಗಿ/ಬೆಳವಣಿಗೆಗಾಗಿ.
4. ಸ್ವಂತ ಮತ್ತು ಸ್ಥಿರ ಅಭಿವೃದ್ಧಿಯ ಸಾಧನೆಗಾಗಿ.
5. ಬೌದ್ಧಿಕ ವಿಕಾಸದ ಸಾಧನೆಗಾಗಿ.
6. ಹೊಸ-ಹೊಸ ಸಂಶೋಧನೆಗಳಿಗೆ ಆದ್ಯತೆ ನೀಡುವುದಕ್ಕಾಗಿ.
7. ವಿವಿಧ ಕ್ಷೇತ್ರಗಳಲ್ಲಿರುವ ಪ್ರಸಕ್ತ ಸಮಸ್ಯೆಗಳಿಗೆ ಪರಿಹಾರ ಮಾರ್ಗಗಳನ್ನು ಕಂಡುಹಿಡಿಯುವುದಕ್ಕಾಗಿ.
8. ರಾಷ್ಟ್ರದ ಮಹತ್ತರವಾದ ಸಾಧನೆಗಳ ಅಭಿವೃದ್ಧಿಗಾಗಿ.
9. ಮಾನವ ವಿಕಾಸದ ಸಾಕ್ಷಾತ್ಕಾರಕ್ಕಾಗಿ.
10. ಸ್ಪರ್ಧಾತ್ಮಕ ಜಗತ್ತಿಗೆ/ಯುಗಕ್ಕೆ ಇಡೀ ಯುವ ಸಮುದಾಯ ವನ್ನು ಸನ್ನದ್ದುಗೊಳಿಸುವುದಕ್ಕಾಗಿ.
11. ರಾಷ್ಟ್ರದ ಪ್ರತಿಷ್ಠೆಯನ್ನು ಅಂತರಾಷ್ಟ್ರೀಯ ಮಟ್ಟದಲ್ಲಿ ಗುರುತಿಸುವುದಕ್ಕಾಗಿ.
12. ಬಲಿಷ್ಠ ಸಮಾಜ/ಬಲಿಷ್ಠ ರಾಷ್ಟ್ರಗಳ ಸಾಲಿನಲ್ಲಿ ನಿಲ್ಲುವುದಕ್ಕಾಗಿ.

## ಮಾನವ ಸಂಪನ್ಮೂಲ ಅಭಿವೃದ್ಧಿಯಲ್ಲಿ ಶಿಕ್ಷಣದ ಪಾತ್ರ

1. ಭವಿಷ್ಯದ ದೃಷ್ಟಿಯಿಂದ ಐಚ್ಛಿಕ ವಿಷಯಗಳ ಆಯ್ಕೆ.
2. ಪ್ರತಿಭೆಗಳ ಅಭಿವೃದ್ಧಿಗೆ ಆದ್ಯತೆ ನೀಡುವುದು.
3. ಗುಣಮಟ್ಟದ ಪರೀಕ್ಷೆಗಳಿಗೆ ಆದ್ಯತೆ ನೀಡುವುದು.
4. ವೃತ್ತಿ ಆಧಾರಿತ ಶಿಕ್ಷಣವನ್ನು/ಶಿಕ್ಷಣಕ್ಕೆ ಆದ್ಯತೆ ನೀಡುವುದು.
5. ಮೌಲ್ಯಯುತ ಜೀವನದ ಅಭಿವೃದ್ಧಿಗೆ ಒತ್ತು ನೀಡುವುದು.
6. ರಾಷ್ಟ್ರೀಯ ಸಂಪತ್ತಿನ ಸದ್ಬಳಕೆ ಮಾಡಿಕೊಳ್ಳುವುದು.
7. ಸಮಾಜ ಸೇವೆಗೆ ಜನತೆಯನ್ನು ಸಿದ್ಧಗೊಳಿಸುವುದು.

ಈ ರೀತಿ ಮಾನವ ಸಂಪನ್ಮೂಲ ಅಭಿವೃದ್ಧಿಯಲ್ಲಿ ಶಿಕ್ಷಣವು ತನ್ನದೇ ಆದ ಪಾತ್ರವನ್ನು ನಿರ್ವಹಿಸುವ ಮೂಲಕ ದೇಶದ ಅಭಿವೃದ್ಧಿಗೆ ಪಣತೊಟ್ಟಿದೆ ಎಂದು ಹೇಳಬಹುದು.

## ಆಕರ ಗ್ರಂಥಗಳು


- **ಡಾ. ಜಿ. ಬಿ. ಬಳಿಗಾರ** : ಮಾನವ ಸಂಪನ್ಮೂಲ ನಿರ್ವಹಣೆ, ಅಶೋಕ ಪ್ರಕಾಶನ, ಹುಬ್ಬಳ್ಳಿ.
- **ಹೆಚ್. ಆರ್. ಕೆ.** : ಅಭಿವೃದ್ಧಿ ಅರ್ಥಶಾಸ್ತ್ರ, ಸಪ್ನ ಬುಕ್ ಹೌಸ್ ಬೆಂಗಳೂರು,
- **ಹೆಚ್. ಆರ್. ಕೃಷ್ಣಯ್ಯಗೌಡ** : ಅಭಿವೃದ್ಧಿ ಅರ್ಥಶಾಸ್ತ್ರ, ವಿದ್ಯಾನಿಧಿ ಪ್ರಕಾಶನ, ಗದಗ.
- **ಮುನಿ ಮತ್ತು ರಾಮು** : ಉದಯೋನ್ಮುಖ ಭಾರತದಲ್ಲಿ ಶಿಕ್ಷಣ.
- **ಡಾ. ಎಸ್. ಬಿ. ಯಾದವಾಡ** : ಪ್ರಗತಿಶೀಲ ಭಾರತದಲ್ಲಿ ಶಿಕ್ಷಣ, ವಿದ್ಯಾನಿಧಿ ಪ್ರಕಾಶನ, ಗದಗ.
- **ಡಾ. ಶಿವಯ್ಯ** : ಉದಯೋನ್ಮುಖ ಭಾರತದಲ್ಲಿ ಶಿಕ್ಷಣ.


■■

– 16 ನೇ ಪುಟದಿಂದ ಮುಂದುವರೆದುದು

- ಕಿರು ಪರೀಕ್ಷೆಗಳಿಗೆ ಹೆಚ್ಚಿನ ಆದ್ಯತೆ ನೀಡಬೇಕು. ಇದರಿಂದ ಒತ್ತಡ ನಿರ್ವಹಣೆ ಮತ್ತು ಯಶಸ್ಸಿನ ವರ್ದನೆ ಸಾಧ್ಯ.
- ಪ್ರವೇಶ ಪರೀಕ್ಷೆಗಳ ವಿನ್ಯಾಸ ಮತ್ತು ಕಾರ್ಯವನ್ನು ಸಂಘಟಿಸಲು ಒಂದೇ ಕೇಂದ್ರ ಕಾರ್ಯಕಚೇರಿಯನ್ನು ರೂಪಿಸುವುದು.

## ಉಪಸಂಹಾರ

ಪಠ್ಯಕ್ರಮಕ್ಕೆ ಈ ಚೌಕಟ್ಟು ನಮ್ಮ ಮಕ್ಕಳಿಗೆ ಏನು ಬೇಕಾಗುತ್ತದೆಂಬುದರ ಬಗ್ಗೆ ಒಂದು ನೋಟವನ್ನು ಬೀರುತ್ತದೆ. ಮಕ್ಕಳೊಡನೆ ಬೆರೆಯುವ ಮತ್ತು ಅವರ ಓದುವಿಕೆಯನ್ನು ಅದರ ಮೂಲದಲ್ಲಿ ಆಯ್ಕೆ ಮಾಡಿದ್ದು ಪಠ್ಯಕ್ರಮವನ್ನು ನಿರ್ಧರಿಸಲು ಸಶಕ್ತರನ್ನಾಗಿಸುತ್ತದೆ. ಮಕ್ಕಳ ಕಲಿಕೆಗೆ ಸಂಬಂಧಪಟ್ಟ ಸಮಸ್ಯೆಗಳಿಗೆ ಜ್ಞಾನದ ಸ್ವಭಾವ ಮತ್ತು ಶಾಲೆ ಒಂದು ಸಂಸ್ಥೆಯಾಗಿ ಹೇಗಿದೆ ಎಂಬುದನ್ನು ಅರ್ಥ ಮಾಡಿಸುತ್ತದೆ. ಪಠ್ಯಕ್ರಮಕ್ಕೆ ಈ ವಿಧಾನವು ಶಾಲೆಯ ಸಂಸ್ಕೃತಿಯ ಬಗ್ಗೆ ಶಾಲೆಯ ಉಪಾಧ್ಯಾಯರ ಆಚರಣೆ ಮತ್ತು ಶಾಲೆಯ ಹೊರಗಿರುವ ತಾಣಗಳಿಗೆ ಪ್ರಾಮುಖ್ಯ ಕೊಡುವುದರ ಮೂಲಕ ಗಮನ ಸೆಳೆಯುತ್ತದೆ. ಕಲಿಕೆಯ ಸಂಪನ್ಮೂಲಗಳು, ವ್ಯವಸ್ಥೆಯ ವಿವಿಧ ಮುಖಗಳ ಮೇಲೆ ಪ್ರತ್ಯಕ್ಷ ಮತ್ತು ಪರೋಕ್ಷ ಪ್ರಭಾವವನ್ನು ಬೀರುತ್ತದೆ. ವಿಶಾಲ ಮಟ್ಟದ ಪಠ್ಯಕ್ರಮವನ್ನು ವಿನ್ಯಾಸಗೊಳಿಸುವುದು. ಪಾಠಗಳನ್ನು ತಯಾರಿಸುವುದು. ಪಠ್ಯಪುಸ್ತಕಗಳನ್ನು ಮಾಡುವುದು ಇವತ್ತು ಪರೀಕ್ಷಣಾ ಸುಧಾರಣೆ ಇವೆಲ್ಲವೂ ಒಂದರೊಂದಿಗೆ ಸಮತೋಲನದಿಂದರಬೇಕು. ನಮ್ಮ ಮಕ್ಕಳಿಗೆ ವಿದ್ಯಾಭ್ಯಾಸದ ಅಭಿವೃದ್ಧಿಗೆ, ಗುಣಮಟ್ಟದಲ್ಲಿ ಮೇಲುಗೈ ಸಾಧಿಸಲು ಈ ರಾಷ್ಟ್ರೀಯ ಪಠ್ಯಕ್ರಮ ನೆಲೆಗಟ್ಟು 2005, ಹೊಸ ಆಯಾಮವಾಗಿದೆ.

■■

ISSN : 2249-2429



# ಶಿರಹಟ್ಟಿ ತಾಲೂಕಿನ ಪ್ರೌಢಶಾಲೆಗಳಲ್ಲಿನ ಭೂಗೋಳಶಾಸ್ತ್ರ ಬೋಧನೆಗೆ ಸಂಬಂಧಿಸಿದ ಸಮಸ್ಯೆಗಳು

**ಡಾ. ಎ. ವಿ. ಕರಬಸನಗೌಡ್ರ,** ಸಹಾಯಕ ಪ್ರಾಧ್ಯಾಪಕರು, ಶಿಕ್ಷಣಶಾಸ್ತ್ರ ವಿಭಾಗ, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ವಿದ್ಯಾಸಂಗಮ, ಬೆಳಗಾವಿ

**ಶ್ರೀ ವೀರಣ್ಣ ಹೋ. ಗಣವಾರಿ,** ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ, ಶಿಕ್ಷಕ ತರಬೇತಿ ಕೇಂದ್ರ, ಬೆಳಗಾವಿ.

## 1. ಪ್ರಸ್ತಾವನೆ

ಶಿಕ್ಷಣವು ಒಂದು ನಿರಂತರವಾದ ಪ್ರಕ್ರಿಯೆಯಾಗಿದೆ. ಇದು ವ್ಯಕ್ತಿಯ ವರ್ತನೆಯನ್ನು ಪರಿವರ್ತನೆ ಮಾಡುವಂತದ್ದಾಗಿದೆ. ಮನುಷ್ಯನು ಹುಟ್ಟಿನಿಂದ ಸಾವಿನವರೆಗೂ ಕಲಿಯುವ ಪ್ರತಿಯೊಂದು ಕಲಿಕೆಯು ಶಿಕ್ಷಣವಾಗಿದೆ. "ಶಿಕ್ಷಣವಿಲ್ಲದಿದ್ದರೆ ಮನುಷ್ಯನ ಬದುಕೆಲ್ಲಾ ಅಂಧಕಾರಮಯವಾಗುತ್ತಿತ್ತು", ಎಂಬ ಹೇಳಿಕೆ ಅಕ್ಷರಶಃ ಸತ್ಯವಾಗಿದೆ. ಅಂದರೆ, ಶಿಕ್ಷಣವು ಮಗುವನ್ನು ಒಳ್ಳೆಯ ಚಾರಿತ್ರ್ಯವುಳ್ಳ ವ್ಯಕ್ತಿಯನ್ನಾಗಿ ರೂಪಿಸುವಂತಹದ್ದಾಗಿದೆ.

ಮೊಟ್ಟ ಮೊದಲು ಈ ಜಗತ್ತಿಗೆ ಮಾನವನು ಉಗಮವಾದಾಗ ಆ ಮಾನವ ಜನಾಂಗವನ್ನು "ಆದಿ ಮಾನವ" ಎಂದು ಕರೆಯಲ್ಪಡುತ್ತಿದ್ದರು. ಈ "ಆದಿಮಾನವ" ತನ್ನ ಜೀವನವನ್ನು ನಡೆಸಲು ಮುಖ್ಯವಾದ ಒಂದು ಅವಶ್ಯಕತೆ ಇತ್ತು. ಅದುವೇ ಆಹಾರ ಈ ಒಂದು ಹಂತದ ನಂತರ ಅವನ ದೃಷ್ಟಿ ಉಡುಪು ಮತ್ತು ವಸತಿಯತ್ತ ಗಮನ ಹರಿಸಿತು. ಇದರ ತೃಪ್ತಿಯ ನಂತರ ಕ್ರಮೇಣವಾಗಿ ಆದಿಮಾನವ ಎಂಬ ಹೆಸರು ಅಳಿಸಿ "ಆಧುನಿಕ ಮಾನವ" ಎಂಬ ಹೆಸರು ಬಂತು ಈಗ ಆ ಆಧುನಿಕ ಮಾನವ ತನ್ನ ತನವನ್ನು ಉಳಿಸಿಕೊಳ್ಳಲು ಆರೋಗ್ಯ ಮತ್ತು ರಕ್ಷಣೆಯತ್ತ ತನ್ನ ಗಮನವನ್ನು ಕೇಂದ್ರೀಕರಿಸಿದನು. ಕೊನೆಗೆ ಮಾನವನು ಈ ಸಮಾಜದಲ್ಲಿ ಉತ್ತಮ ಪ್ರಜೆಯಾಗಿ ಬಾಳಿ ಬದುಕಲು ಹಾಗೂ ಸುತ್ತ ಮುತ್ತಲಿನ ಜನರೊಡನೆ ಮಧುರ ಬಾಂಧವ್ಯ ಏರ್ಪಡಿಸಿಕೊಳ್ಳಲು ಶಿಕ್ಷಣ ಅವನಿಗೆ ಅನಿವಾರ್ಯವಾಯಿತು. ಒಬ್ಬ ಮನುಷ್ಯನ ಅಥವಾ ದೇಶದ ಭವಿಷ್ಯ ಶಿಕ್ಷಣದಿಂದಲೇ ನಿರ್ಧಾರವಾಗುತ್ತದೆ ಎಂದರೆ ತಪ್ಪಾಗಲಾರದು. ಏಕೆಂದರೆ, ಒಬ್ಬ ಅನಕ್ಷರಸ್ಥನು ತನ್ನ ಭವಿಷ್ಯದ ಬಗ್ಗೆ ಅಥವಾ ದೇಶದ ಭವಿಷ್ಯದ ಬಗ್ಗೆ ನಿರ್ಧಾರ ತೆಗೆದುಕೊಳ್ಳುವಲ್ಲಿ ವಿಫಲನಾಗಬಹುದು. ಆದರೆ ಶಿಕ್ಷಿತನಾದ ಒಬ್ಬನು ತನ್ನ ಭವಿಷ್ಯದ ಬಗ್ಗೆ ಅಥವಾ ದೇಶದ ಬಗ್ಗೆ ತೆಗೆದುಕೊಳ್ಳುವ ನಿರ್ಧಾರದಲ್ಲಿ ವಿಫಲತೆಯ ಅಂಶ ಕಡಿಮೆ ಎಂದು ಹೇಳಬಹುದು. ಇಂತಹ ಶಿಕ್ಷಣದ ಅರ್ಥವನ್ನು ಸೂಚಿಸುವ ಕೆಲವು ವ್ಯಾಖ್ಯೆಗಳು ಈ ಕೆಳಗಿನಂತಿವೆ.

"ಸದೃಢ ಶರೀರದಲ್ಲಿ ಸದೃಢ ಮನಸ್ಸಿನ ನಿರ್ಮಾಣವೇ ಶಿಕ್ಷಣ"
**– ಅರಿಸ್ಟಾಟಲ್**

"ಉತ್ತಮ ನೈತಿಕ ಚಾರಿತ್ರ್ಯ ನಿರ್ಮಾಣವೇ ಶಿಕ್ಷಣ"– **ಹರ್ಬಾರ್ಟ್**

ಈ ಮೇಲಿನ ವ್ಯಾಖ್ಯೆಗಳನ್ನು ನೋಡಲಾಗಿ ಶಿಕ್ಷಣ ಎಂದರೆ, "ಮಾನವನ ವ್ಯಕ್ತಿತ್ವವನ್ನು ವಿಕಾಸ ಮಾಡುವುದಾಗಿದೆ" ಎಂದು ಹೇಳಬಹುದು.

ಈ ಜಗತ್ತಿನಲ್ಲಿ ಶಿಕ್ಷಣ ಅವಶ್ಯಕತೆ ಎಷ್ಟು ಇದೆ ಎಂದು ನೋಡುವದಾದರೆ ಮಹಮ್ಮದ್ ಪೈಗಂಬರ್‌ರು ನೀಡಿದ ಒಂದು ವ್ಯಾಖ್ಯೆ ನೋಡಬಹುದು.

ಈ ಜಗತ್ತಿನಲ್ಲಿ ಶಿಕ್ಷಣ ಪಡೆದ ವ್ಯಕ್ತಿಯು ಪರಿಮಳದ ಪುಷ್ಪದಂತೆ ಎಲ್ಲಾ ಕಡೆ ತನ್ನ ತನವನ್ನು ತೋರಿಸಬಹುದು. ಆದರೆ ಶಿಕ್ಷಣ ಪಡೆಯದ ವ್ಯಕ್ತಿ ಪರಿಮಳವಿಲ್ಲದ ಪುಷ್ಪದಂತೆ ಅಂದರೆ ಅಜ್ಞಾನಿಯಂತೆ ಇರಬೇಕಾಗುತ್ತದೆ. ಆದ್ದರಿಂದ ಈ ಜಗತ್ತಿನಲ್ಲಿ ಉತ್ತಮವಾಗಿ ಬಾಳಿ ಬದುಕಬೇಕಾದರೆ ಶಿಕ್ಷಣ ಅಗತ್ಯವಾಗಿದೆ.

ಒಟ್ಟಿನಲ್ಲಿ ಹೇಳುವುದಾದರೆ ಶಿಕ್ಷಣವು ವ್ಯಕ್ತಿಯ ಸರ್ವತೋಮುಖ ಅಭಿವೃದ್ಧಿಯನ್ನು ರೂಪಿಸುವಂತದ್ದು ಮತ್ತು ಪ್ರತಿ ಮಾನವ ಜೀವಿಗೂ ಅತಿ ಅವಶ್ಯಕವಾಗಿ ಬೇಕಾದ ಮೂಲ ಆಗರ ಎಂದು ಹೇಳಬಹುದು.

## 2. ಅಧ್ಯಯನದ ಮಹತ್ವ

ಸಂಶೋಧಕನು ಅಧ್ಯಯನವಾಗಿ ಶಿರಹಟ್ಟಿ ಗ್ರಾಮೀಣ ಪ್ರದೇಶವನ್ನು ಆಯ್ಕೆ ಮಾಡಿಕೊಂಡಿದ್ದಾನೆ. ಇಂತಹ ಗ್ರಾಮೀಣ ಪ್ರದೇಶದ ಪ್ರೌಢಶಾಲೆಯನ್ನು ಸ್ಥಿತಿಗತಿ, ಭೌತಿಕ ಸೌಕರ್ಯಗಳ ಶಿಕ್ಷಕರ ಬೋಧನೆ ಇವನ್ನೆಲ್ಲಾ ಸಂಶೋಧಕನು ಸಂಶೋಧನೆಗಾಗಿ ಆಯ್ಕೆ ಮಾಡಿಕೊಂಡಿದ್ದಾನೆ.

ಹಾಗೆಯೇ ಇನ್ನು ಕೆಲವು ಸಮಸ್ಯೆಗಳನ್ನು ನೋಡುವುದಾದರೆ ;

1. ಭೂಗೋಳಶಾಸ್ತ್ರ ಬೋಧನೆಗೆ ಉಪಕರಣಗಳು ಲಭಿಸದಿರುವಿಕೆ
2. ಭೂಗೋಳಶಾಸ್ತ್ರದ ಪಠ್ಯವಸ್ತು
3. ಭೂಗೋಳಶಾಸ್ತ್ರದ ಪ್ರಯೋಗಾಲಯ ಇಲ್ಲದಿರುವಿಕೆ
4. ಭೂಗೋಳಶಾಸ್ತ್ರವನ್ನು ಬೋಧಿಸಲು ಸೂಕ್ತವಾದ ಶೈಕ್ಷಣಿಕ ವಿದ್ಯಾರ್ಹತೆ ಹೊಂದಿರುವುದು
5. ವಿದ್ಯಾರ್ಥಿಗಳ ಮಾನಸಿಕ ಮಟ್ಟಕ್ಕೆ ಅನುಗುಣವಾಗಿ ಬೋಧನೆ ಮಾಡದಿರುವುದು
6. ಭೂಗೋಳಶಾಸ್ತ್ರ ಬೋಧಕರು ಭೂಗೋಳಶಾಸ್ತ್ರ ವಿಷಯಕ್ಕೆ ಸಂಬಂಧಿಸಿದ ಕಾರ್ಯಕ್ರಮಗಳಲ್ಲಿ ಭಾಗವಹಿಸದೇ ಇರುವುದು

ಹೀಗೆ ಇತ್ಯಾದಿ ಸಮಸ್ಯೆಗಳು ಈ ಎಲ್ಲಾ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಹಿಡಿದು ಇದರ ಅಧ್ಯಯನ ಮಾಡುವದರಿಂದ ಜ್ಞಾನ ಸಂಪಾದನೆಯಾಗುತ್ತದೆ. ಆದ್ದರಿಂದ ಇದರ ಅಧ್ಯಯನ ಅಗತ್ಯವಾಗಿದೆ.

## 3. ಅಧ್ಯಯನದ ಶೀರ್ಷಿಕೆ

ಪ್ರಸ್ತುತ ಈ ಸಂಶೋಧನಾ ಅಧ್ಯಯನ ಶೀರ್ಷಿಕೆ ಈ ರೀತಿ ಇದೆ. "ಶಿರಹಟ್ಟಿ ತಾಲೂಕಿನ ಗ್ರಾಮೀಣ ಪ್ರೌಢ ಶಾಲೆಗಳಲ್ಲಿನ ಭೂಗೋಳಶಾಸ್ತ್ರ ಬೋಧನೆಗೆ ಸಂಬಂಧಿಸಿದ ಸಮಸ್ಯೆಗಳು ಒಂದು ಅಧ್ಯಯನ".

## 4. ಅಧ್ಯಯನದ ಉದ್ದೇಶಗಳು

1. ಭೂಗೋಳಶಾಸ್ತ್ರ ಬೋಧನೆಯಲ್ಲಿ ಯಾವ ವಿಧಾನಗಳು

ISSN : 2249-2429

ಅನುಸರಿಸಲ್ಪಡುತ್ತವೆ ಎನ್ನುವುದನ್ನು ಮತ್ತು ಯಾವ ವಿಧಾನಗಳನ್ನು ಬಳಸಿದರೆ ಸೂಕ್ತ ಎನ್ನುವುದನ್ನು ತಿಳಿಯುವುದು.

2. ಭೂಗೋಳಶಾಸ್ತ್ರ ಬೋಧನೆಗೆ ಸಂಬಂಧಪಟ್ಟಂತೆ ಶಾಲೆಗಳಲ್ಲಿ ಸಾಕಷ್ಟು ದೃಕ್ ಶ್ರವಣ ಉಪಕರಣಗಳು ಇವೆಯೇ ಎನ್ನುವುದನ್ನು ತಿಳಿಯುವುದು.
3. ಭೂಗೋಳಶಾಸ್ತ್ರ ಬೋಧನೆ ಮಾಡಬೇಕಾದರೆ ಮಕ್ಕಳು ಉತ್ಸುಕರಾಗಿರುತ್ತಾರೆಯೇ ಇಲ್ಲವೇ ಎಂಬುದನ್ನು ತಿಳಿಯುವುದು.
4. ಭೂಗೋಳಶಾಸ್ತ್ರ ಸಂಬಂಧಪಟ್ಟಂತೆ ಶಾಲೆಗಳಲ್ಲಿ ಮನೆಗೆಲಸ ಪೂರ್ಣಗೊಳಿಸುವರೇ ಅಥವಾ ಇಲ್ಲವೋ ಎನ್ನುವುದನ್ನು ಅರಿತುಕೊಳ್ಳುವುದು.
5. ಭೂಗೋಳಶಾಸ್ತ್ರ ಬೋಧನೆಗೆ ಸಂಬಂಧಪಟ್ಟಂತೆ ಶಿಕ್ಷಕರು ಎದುರಿಸುತ್ತಿರುವ ಮತ್ಯಾವುದಾದರು ವಿಶಿಷ್ಟ ಸಮಸ್ಯೆಗಳಿದ್ದಲ್ಲಿ ಅವುಗಳನ್ನು ತಿಳಿಯುವುದು.
6. ಭೂಗೋಳಶಾಸ್ತ್ರ ಬೋಧನೆಗೆ ಶಾಲೆಗಳಲ್ಲಿ ಪ್ರತ್ಯೇಕ ಪ್ರಾಯೋಗಿಕ ಕೊಠಡಿ ಇದೆಯೇ ಇಲ್ಲವೋ ? ಎನ್ನುವುದನ್ನು ತಿಳಿಯುವುದು.

## 5. ಪಾರಿಭಾಷಿಕ ಪದಗಳು

ಈ ಸಮಸ್ಯೆ ನಿರೂಪಣೆಯಲ್ಲಿರುವ ಕೆಲವೊಂದು ಪದಗಳಿಗೆ ಈ ಅಧ್ಯಯನಕ್ಕೆ ಸಂಬಂಧಪಟ್ಟಂತೆ.

## 6. ಅಧ್ಯಯನದ ವಿಧಾನ

ಪ್ರಸ್ತುತ ಅಧ್ಯಯನದಲ್ಲಿ ವಿವರಣಾತ್ಮಕ ಸಂಶೋಧನೆಯ ಉಪ ವಿಧಾನವಾದ ಸಮೀಕ್ಷೆ ವಿಧಾನವನ್ನು ಸಮಸ್ಯೆ ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ. ಸಮೀಕ್ಷೆ ವಿಧಾನ ಶಾಲಾ ಸಮೀಕ್ಷೆಯಲ್ಲಿ ಶಾಲೆಯ ಶಿಕ್ಷಕರು ಎದುರಿಸುವ ಅನೇಕ ಸಮಸ್ಯೆಗಳು ಅನಾನುಕೂಲತೆಗಳ ಅಧ್ಯಯನ ಮಾಡುವುದು.

ಸಮಾಜದ ಸೌಲಭ್ಯಗಳು ಶಾಲೆಯ ಪ್ರಮುಖ ಅಂಶವಾಗಿದೆ. ಭೂಗೋಳಶಾಸ್ತ್ರ ಬೋಧಕರನ್ನು ಭೇಟಿ ಮಾಡಿ ಅವರ ಅಭಿಪ್ರಾಯಗಳನ್ನು ಪ್ರಶ್ನಾವಳಿ ಬಳಸುವುದರ ಮೂಲಕ ಸಂಗ್ರಹಿಸಲಾಗಿದೆ. ಸಂಶೋಧಕರು ಶಾಲೆಗೆ ಭೇಟಿ ನೀಡುವುದರಿಂದ ಕಲ್ಪನೆ ಅನುಮಾನಗಳಿಂದ ದೂರವಾಗಿರುತ್ತಾರೆ. ನೈಜ ಅಂಶಗಳನ್ನು ದಾಖಲಿಸಿಕೊಂಡು ವರದಿಯನ್ನು ನೀಡಲು ಸರ್ವೇಕ್ಷಣ ವಿಧಾನದಿಂದ ಸಾಧ್ಯವಾಗುತ್ತದೆ.

## 7. ಚಲಕಗಳು

ವಿವಿಧ ರೀತಿಯ ಪರಿಮಾಣಾತ್ಮಕ ಮೌಲ್ಯಗಳ ಮೇಲಿನ ಪರಿಕಲ್ಪನೆಯನ್ನು ಚಲಕ ಎನ್ನುವರು.

"Variables are Characteristics that experimentaly manipulative controls"

ಚಲಕಗಳು ಪರಸ್ಪರ ವಿಭಿನ್ನ ರೀತಿಯಲ್ಲಿರುತ್ತವೆ ಮತ್ತು ಬೇರೆ ಬೇರೆ ಚಲಕಗಳು ಬೇರೆ ಬೇರೆ ಚಲಕಗಳ ಮೇಲೆ ಪ್ರಭಾವಗಳನ್ನು ಬೀರುತ್ತದೆ. ವಿವಿಧ ಚಲಕಗಳ ನಡುವೆ ಸಹ ಸಂಬಂಧತೆ ಕಂಡು ಬರುವುದು ಸಂಶೋಧಕನು ಸಂಶೋಧನೆ ಮಾಡುವಾಗ ಚಲಕಗಳ ಆಯ್ಕೆಯು ಬಹಳ ಮುಖ್ಯವಾದುದು. ಅಧ್ಯಯನ ಮಾಡುತ್ತಿರುವ ಚಲಕದ ಮೇಲೆ ಯಾವ ಯಾವ ಚಲಕಗಳು ಪ್ರಭಾವ ಬೀರುತ್ತವೆ ಎಂಬುದನ್ನು ತಿಳಿದುಕೊಂಡು ಚಲಕಗಳು ಆಯ್ಕೆ ಮಾಡಿಕೊಳ್ಳಬೇಕು.

1. ಸ್ವತಂತ್ರ ಚಲಕ
2. ಪರತಂತ್ರ ಚಲಕ
3. ಮಧ್ಯವರ್ತಿ ಚಲಕ

"ಸ್ವತಂತ್ರ ಚಲಕಗಳು ಎಂದರೆ ಸ್ಥಿತಿಗತಿಗಳು ಅಥವಾ ಗುಣ ಲಕ್ಷಣಗಳಾಗಿದ್ದು. ಇವುಗಳನ್ನು ಸಂಶೋಧಕನು ತನ್ನ ನಿರೂಪಣೆಯ ಸನ್ನಿವೇಶಕ್ಕೆ ಯಾವ ರೀತಿ ಸಂಬಂಧ ಹೊಂದಿದೆ ಎಂಬುದನ್ನು ತನ್ನ ಪ್ರಯತ್ನದಲ್ಲಿ ಖಚಿತಪಡಿಸಿಕೊಂಡು ತೋರ್ಪಡಿಸುತ್ತಾನೆ."

## 8. ನಮೂನೆಗಳು

ಸಂಶೋಧನೆಯಲ್ಲಿ ವಿವಿಧ ಸಮಸ್ಯೆಗಳ ಸಲುವಾಗಿ ದೊರಕಿದ ಮಾಹಿತಿಯ ಆಧಾರದಿಂದ ನಿಷ್ಕರ್ಷ ತೆಗೆಯಬಹುದು. ಇಂತಹ ನಿಷ್ಕರ್ಷಗಳನ್ನು ಎಲ್ಲ ಅಭ್ಯಾಸ ಕ್ಷೇತ್ರಗಳಲ್ಲಿ ಬಳಸಬಹುದು. ಆದ್ದರಿಂದ ಸಂಶೋಧಕನು ತನ್ನ ಮಾಹಿತಿಯ ಆಧಾರದಿಂದ ಸಾಮಾನ್ಯೀಕರಣ ಮಾಡಬೇಕಾಗುವುದು. ಇಂತಹ ಸಾಮಾನ್ಯೀಕರಣಕ್ಕಾಗಿ ಸಂಪೂರ್ಣ ಅಭ್ಯಾಸ ಕ್ಷೇತ್ರದ ಅಭ್ಯಾಸ ಮಾಡುವುದು ಅವಶ್ಯ. ಪ್ರಸ್ತುತ ಅಧ್ಯಯನಕ್ಕಾಗಿ ಶಿರಹಟ್ಟಿ ತಾಲೂಕಿನ 20 ಪ್ರೌಢಶಾಲೆಗಳನ್ನು ಉದ್ದೇಶಿತ ತಂತ್ರವನ್ನು ಅನುಸರಿಸಿ ಆಯ್ಕೆ ಮಾಡಿಕೊಳ್ಳಲಾಗಿದೆ. (11 ಸರಕಾರಿ, 6 ಅನುದಾನಿತ ಮತ್ತು 3 ಅನುದಾನರಹಿತ ಪ್ರೌಢಶಾಲೆಗಳು)

## 9. ದತ್ತಾಂಶ ಸಂಗ್ರಹಣೆಗೆ ಬಳಸಿದ ಸಾಧನಗಳು

ಪ್ರತಿಯೊಂದು ಅಧ್ಯಯನಕ್ಕೆ ವಾಸ್ತವವಾದ ಮಾಹಿತಿಯು ಉಪಯುಕ್ತವಾದದ್ದು. ಇಂತಹ ಮಾಹಿತಿಯನ್ನು ವಿವಿಧ ಸಂಪನ್ಮೂಲಗಳಿಂದ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಸಂಗ್ರಹಿಸಬಹುದು. ಸಂಗ್ರಹಿಸಿದ ಮಾಹಿತಿಯು ಸಾಕಷ್ಟು ಮೌಲ್ಯಾಧಾರಿತ ಮತ್ತು ನಂಬಿಕೆಗೆ ಅರ್ಹವಾಗಿರಬೇಕು. ಪ್ರತಿಯೊಂದು ಸಂಶೋಧನೆಯ ವೈವಿಧ್ಯತೆಗೆ ಅನುಗುಣವಾಗಿ ವಿವಿಧ ಸಾಧನಗಳನ್ನು ಅಥವಾ ತಂತ್ರಗಳನ್ನು ಬಳಸಲಾಗುತ್ತದೆ.

ದತ್ತಾಂಶ ಸಂಗ್ರಹಣೆಗೆ ಸಾಧನವನ್ನು ಆಯ್ಕೆ ಮಾಡಿಕೊಳ್ಳುವುದು ಒಂದು ಪ್ರಮುಖವಾದ ಅಂಶವಾಗಿದೆ. ಅಂತೆಯೇ ಉದ್ದೇಶಗಳಿಗೆ ಅನುಗುಣವಾಗಿ ಭೂಗೋಳಶಾಸ್ತ್ರ ಬೋಧನೆಯಲ್ಲಿ ಇರುವ ಸಮಸ್ಯೆಗಳನ್ನು ಅರಿಯಲು ಸಂಶೋಧಕನು ಒಂದು ಸಾಧನವನ್ನು (ನಾಲ್ಕು ಅಂಶಗಳ ಪ್ರಶ್ನಾವಳಿ) ಬಳಸಿಕೊಂಡಿದ್ದಾನೆ. ಈ ಸಾಧನವನ್ನು ಸಂಶೋಧಕ ಸ್ವತಃ ತಯಾರಿಸಿದ್ದಾರೆ. ಅಂದರೆ, ಹಳ್ಳಿಗೆ ಸಂಬಂಧಿಸಿದ ಸಾಮಾನ್ಯ ಮಾಹಿತಿಯನ್ನು ಸಂಗ್ರಹಿಸುವ ಪ್ರಶ್ನೆಗಳು. ಪ್ರೌಢಶಾಲೆಗೆ ಸಂಬಂಧಿಸಿದ ಸಾಮಾನ್ಯ ಮಾಹಿತಿಯನ್ನು ಸಂಗ್ರಹಿಸುವ ಪ್ರಶ್ನೆಗಳು. ಭೂಗೋಳಶಾಸ್ತ್ರ ಅಧ್ಯಾಪಕರ ಸಾಮಾಜಿಕ ಹಿನ್ನೆಲೆಯ ಬಗ್ಗೆ ಸಾಮಾನ್ಯ ಪ್ರಶ್ನೆಗಳು ಮತ್ತು ಭೂಗೋಳಶಾಸ್ತ್ರ ಬೋಧನೆಗೆ ಸಂಬಂಧಪಟ್ಟಂತೆ ಇರುವ ಸಮಸ್ಯೆಗಳ ಬಗ್ಗೆ ಮಾಹಿತಿಯನ್ನು ಸಂಗ್ರಹಿಸುವಂತಹ ಪ್ರಶ್ನೆಗಳನ್ನು ರಚಿಸಿ ಮಾರ್ಗದರ್ಶಕರೊಂದಿಗೆ ಹಾಗೂ ಶಿಕ್ಷಣ ತಜ್ಞರೊಡನೆ ಸಮಾಲೋಚಿಸಿ, ಸಾಧನವನ್ನು ರೂಪಿಸಲಾಯಿತು. ಈ ಸಾಧನವನ್ನು ದತ್ತಾಂಶ ಸಂಗ್ರಹಣೆಗೆ ಬಳಸುವ ಮುನ್ನ ಅನೇಕ ಶಿಕ್ಷಣ ತಜ್ಞರುಗಳ ಅಭಿಪ್ರಾಯದಂತೆ ಅನೇಕ ಅಂಶಗಳನ್ನು ಸೇರಿಸಿ, ಕೆಲವು ಅಂಶಗಳನ್ನು ಬೇರೆ ರೂಪದಲ್ಲಿ ತಯಾರಿಸಿ ಅವುಗಳ ವಿಶ್ವಾಸನೀಯತೆಯನ್ನು ಸಾಬೀತುಪಡಿಸಿಕೊಂಡು ನಂತರ ಪ್ರಶ್ನಾವಳಿಯನ್ನು ದತ್ತಾಂಶ ಸಂಗ್ರಹಣೆಗೆ ಬಳಸಿಕೊಳ್ಳಲಾಯಿತು.

## 10. ಮಾಹಿತಿ ಸಂಗ್ರಹಿಸಿದ ವಿಧಾನ

ಈ ಅಧ್ಯಯನಕ್ಕೆ ಸಂಬಂಧಿಸಿದಂತೆ ಶಿರಹಟ್ಟಿ ತಾಲ್ಲೂಕಿನ ಗ್ರಾಮೀಣ

ISSN : 2249-2429


ಪ್ರದೇಶದಲ್ಲಿ ಬರುವ 20 ಹಳ್ಳಿಗಳನ್ನು ಹಾಗೂ ಆ 20 ಹಳ್ಳಿಗಳಲ್ಲಿ 20 ಪ್ರೌಢಶಾಲೆಗಳನ್ನು ಆ 20 ಪ್ರೌಢಶಾಲೆಗಳಲ್ಲಿ 20 ಭೂಗೋಶಾಸ್ತ್ರಕ್ಕೆ ಸಂಬಂಧಿಸಿದ ಶಿಕ್ಷಕರನ್ನು ಉದ್ದೇಶಪೂರಿತ ಪ್ರತಿಚಯನ ಮೂಲಕ ಆಯ್ಕೆ ಮಾಡಿಕೊಳ್ಳಲಾಯಿತು. ಸಂಶೋಧನಕಾರ ಆಯ್ಕೆ ಮಾಡಿಕೊಂಡ ಶಾಲೆಗಳಿಗೆ ವೈಯಕ್ತಿಕವಾಗಿ ಭೇಟಿ ಕೊಡುವುದರ ಮೂಲಕ ಆ ಶಾಲೆಯ ಮುಖ್ಯೋಪಾಧ್ಯಾಯರಿಂದ ಅನುಮತಿ ಪಡೆದರು. ನಂತರ ತಾನು ತಯಾರಿಸಿದ ಅಂದರೆ, ಹಳ್ಳಿಗಳಿಗೆ ಸಂಬಂಧಿಸಿದ ಪ್ರಶ್ನಾವಳಿಯನ್ನು ಶಾಲೆಗಳಿಗೆ ಸಂಬಂಧಿಸಿದ ಪ್ರಶ್ನಾವಳಿಯನ್ನು ಭೂಗೋಳಶಾಸ್ತ್ರ ಬೋಧಕರಿಗೆ ಸಂಬಂಧಿಸಿದ ಪ್ರಶ್ನಾವಳಿಯನ್ನು ಹಾಗೂ ಭೂಗೋಳಶಾಸ್ತ್ರ ಬೋಧನೆಯನ್ನು ಮಾಡುವಲ್ಲಿ ಶಿಕ್ಷಕರು ಎದುರಿಸುತ್ತಿರುವ ಸಮಸ್ಯೆಗಳಿಗೆ ಸಂಬಂಧಪಟ್ಟಂತೆ ಇರುವ ಪ್ರಶ್ನಾವಳಿಯನ್ನು ತಲಾ ಊರಿನ ಮುಖ್ಯಸ್ಥರಿಂದ ಶಾಲೆಯ ಮುಖ್ಯೋಪಾಧ್ಯಾಯರಿಂದ ಹಾಗೂ ಶಾಲೆಯ ಭೂಗೋಳಶಾಸ್ತ್ರ ಬೋಧಕರಿಂದ ನಿಗದಿತ ಸಮಯದಲ್ಲಿ ಮಾಹಿತಿ ಪಡೆಯಲಾಯಿತು.

ಹೀಗೆ ಪಡೆದು ಸಂಗ್ರಹಿಸಿದ ಮಾಹಿತಿ ಆಧಾರದ ಮೇಲೆ ವಿಶ್ಲೇಷಣೆ ಮಾಡಿ ಫಲಿತಾಂಶವನ್ನು ಕಂಡುಕೊಳ್ಳಲಾಯಿತು.

## 11. ದತ್ತಾಂಶ ವಿಶ್ಲೇಷಣೆ

ಪ್ರಸ್ತುತ ಅಧ್ಯಯನದಲ್ಲಿ ದತ್ತಾಂಶಗಳ ವಿಶ್ಲೇಷಣೆಗೆ ಈ ಕೆಳಗಿನ ಸೂತ್ರವನ್ನು ಬಳಸಲಾಯಿತು.

$$\text{ಶೇಕಡಾವಾರು ಸರಾಸರಿ} = \frac{\text{ಒಟ್ಟು ಪ್ರತಿಕ್ರಿಯೆಗಳು}}{\text{ಒಟ್ಟು ಪ್ರತಿದರ್ಶಿಗಳು}} \times 100$$

### 1. ಶಿರಹಟ್ಟಿ

ಪ್ರಸ್ತುತ ಅಧ್ಯಯನದಲ್ಲಿ ಶಿರಹಟ್ಟಿ ತಾಲೂಕಿನ ಪ್ರದೇಶವಾಗಿದ್ದು. ಇದು ಕರ್ನಾಟಕ ರಾಜ್ಯದ ಗದಗ ಜಿಲ್ಲೆಯ ಒಂದು ತಾಲೂಕು ಪ್ರದೇಶವಾಗಿದೆ. ಇದು ನಮ್ಮ ರಾಜ್ಯದ ರಾಜಧಾನಿಯಾದ ಬೆಂಗಳೂರಿನಿಂದ 425 ಕಿ.ಮೀ. ಅಂತರದಲ್ಲಿದೆ. ಸದ್ಯ ಶಿರಹಟ್ಟಿ ನಗರ ಪ್ರದೇಶವಾಗಿದೆ ಎಂದು ಹೇಳಬಹುದು.

### 2. ಗಾಮೀಣ ಪ್ರದೇಶ

ಪ್ರಸ್ತುತ ಅಧ್ಯಯನಕ್ಕೆ ಸಂಬಂಧಿಸಿದಂತೆ ಶಿರಹಟ್ಟಿ ತಾಲೂಕಿನಲ್ಲಿ ಬರುವ ಗ್ರಾಮೀಣ ಪ್ರದೇಶಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಗ್ರಾಮೀಣ ಪ್ರದೇಶ ಎಂದರೆ 20,000 ಜನಸಂಖ್ಯೆಗಿಂತ ಕಡಿಮೆ ಜನಸಂಖ್ಯೆ ಹೊಂದಿರುವ ಗ್ರಾಮ ಅಥವಾ ಊರನ್ನು ಗ್ರಾಮೀಣ ಪ್ರದೇಶವೆಂದು ಕರೆಯುತ್ತಾರೆ. ಇದನ್ನು ಅಧ್ಯಯನ ಶೀರ್ಷಿಕೆಯಲ್ಲಿ ವಿವರಿಸಲಾಗಿದೆ.

## 12. ಅಧ್ಯಯನದಿಂದ ಕಂಡು ಬಂದ ಫಲಿತಾಂಶಗಳು

- ಹೆಚ್ಚಿನ ಶಾಲೆಗಳಲ್ಲಿ ಭೂಗೋಳಶಾಸ್ತ್ರ ಬೋಧನೆಗೆ ಸಂಬಂದಪಟ್ಟಂತೆ ಸಾಕಷ್ಟು ದೃಕ್ ಶ್ರವಣೋಪಕರಣಗಳು ಇಲ್ಲಾ. ಉದಾ : ರೇಡಿಯೋ, ದೂರದರ್ಶನ, ಗಣಕಯಂತ್ರ, ಚಿತ್ರಪಟಗಳು, ಮಾದರಿಗಳು, ಇತ್ಯಾದಿ.
- ಹೆಚ್ಚಿನ ಶಾಲೆಗಳಲ್ಲಿ ಅಂದರೆ, 17 (85%) ಪ್ರೌಢ ಶಾಲೆಗಳಲ್ಲಿ ಭೂಗೋಳಶಾಸ್ತ್ರಕ್ಕೆ ಸಂಬಂಧಪಟ್ಟ ಪ್ರಾಯೋಗಿಕ ಕೊಠಡಿ ಇರುವುದಿಲ್ಲ ಮತ್ತು ಕೇವಲ 01 (05%) ಶಾಲೆಯಲ್ಲಿ ಮಾತ್ರ ವಸ್ತುಸಂಗ್ರಹಾಲಯವಿದೆ ಎಂದು ಹೇಳಬಹುದು.
- ಹೆಚ್ಚಿನ ಶಾಲೆಗಳಲ್ಲಿ ಭೂಗೋಳಶಾಸ್ತ್ರ ಬೋಧನೆಗೆ ಸಂಬಂಧಪಟ್ಟಂತೆ ಶಿಕ್ಷಕರು ಕೇವಲ ಶಾಲೆಯಲ್ಲಿ ದೊರಕುವ ಪಠ್ಯ ಪುಸ್ತಕಗಳಿಂದ ಮಾತ್ರ ಬೋಧಿಸುತ್ತಿದ್ದಾರೆ. ಬೇರೆ ಪುಸ್ತಕಗಳನ್ನು ಬಳಸಿ ಬೋಧಿಸುತ್ತಿಲ್ಲಾ ಎಂಬುದು ಕಂಡುಬಂದಿದೆ.
- ಅಧ್ಯಯನಕ್ಕೆ ಆಯ್ದ ಯಾವುದೇ ಶಾಲೆಯಲ್ಲಿ ಗ್ರಂಥಾಲಯದ ವ್ಯವಸ್ಥೆ ಇಲ್ಲದಿರುವುದು ಕಂಡು ಬಂದಿದೆ ಮತ್ತು ಕೇವಲ 03 (15%) ಶಾಲೆಯಲ್ಲಿ ಸಮಾಜ ವಿಜ್ಞಾನ ಅಥವಾ ಭೂಗೋಳ ಶಾಸ್ತ್ರದ ಸಂಘ ಇರುವುದು ಕಂಡುಬಂದಿದೆ.
- ಅಧ್ಯಯನಕ್ಕೆ ಆಯ್ದ 20 ಶಿಕ್ಷಕರಲ್ಲಿ ಹೆಚ್ಚಾಗಿ ಶಿಕ್ಷಕರು ಭೂಗೋಳಶಾಸ್ತ್ರ ಶೈಕ್ಷಣಿಕ ತರಬೇತಿ / ಕಾರ್ಯಾಗಾರಗಳಲ್ಲಿ ಪಾಲ್ಗೊಂಡಿರುವುದಿಲ್ಲ ಮತ್ತು ಭೂಗೋಳಶಾಸ್ತ್ರ ಬೋಧಿಸುವಾಗ ಎದುರಾಗುವಂತಹ ವಿಶಿಷ್ಟ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳುವಲ್ಲಿ ಸ್ವಲ್ಪ ಮಟ್ಟಿಗೆ ಪ್ರಯತ್ನಿಸುತ್ತಿದ್ದಾರೆ. ಅಂದರೆ, ವಿವಿಧ ಶಾಲೆಯ ಶಿಕ್ಷಕರೊಡನೆ ಸಮಸ್ಯೆಗಳನ್ನು ಚರ್ಚಿಸುತ್ತಿದ್ದಾರೆ ಎಂದು ಹೇಳಬಹುದು.
- ಅಧ್ಯಯನಕ್ಕೆ ಆಯ್ದ 20 ಶಿಕ್ಷಕರು ಭೂಗೋಳಶಾಸ್ತ್ರವನ್ನು ಬೋಧಿಸಲು ಮೊದಲು ಪ್ರಶ್ನೋತ್ತರ ವಿಧಾನ ನಂತರ ಚರ್ಚಾ ವಿಧಾನ ಮತ್ತು ಉಪನ್ಯಾಸ ವಿಧಾನ ಸೂಕ್ತ ಎಂದಿದ್ದಾರೆ ಮತ್ತು ಭೂಗೋಳಶಾಸ್ತ್ರವನ್ನು ಕಲಿಯಬೇಕಾದರೆ ವಿದ್ಯಾರ್ಥಿಗಳು ಹೆಚ್ಚು ಆಸಕ್ತಿಯುತರಾಗಿರುತ್ತಾರೆ ಎಂದು ತಿಳಿಸಿದ್ದಾರೆ.
- ಅಧ್ಯಯನಕ್ಕೆ ಆಯ್ದ 20 ಪ್ರೌಢಶಾಲೆಗಳಲ್ಲಿ 16 ಪ್ರೌಢಶಾಲೆಗಳಲ್ಲಿ (80%) ಕ್ಷೇತ್ರ ಪ್ರವಾಸಗಳನ್ನು ಕೈಗೊಂಡಿದ್ದಾರೆಂದು ತಿಳಿದು ಬಂದಿದೆ ಮತ್ತು ಅದರಂತೆ ಮಾದರಿಗಳು, ಚಿತ್ರಪಟಗಳು, ನಮೂನೆಗಳು, ಗೋಳಗಳನ್ನು ಹೆಚ್ಚಾಗಿ ವಿದ್ಯಾರ್ಥಿಗಳು ಸಂಗ್ರಹಿಸುತ್ತಾರೆ ಎಂದು ತಿಳಿದು ಬಂದಿದೆ.
- ಅಧ್ಯಯನಕ್ಕೆ ಆಯ್ದ 20 ಶಿಕ್ಷಕರನ್ನು 16 (80%) ಶಿಕ್ಷಕರು ಸರಕಾರ ನಿಗದಿಪಡಿಸಿದ ಪಠ್ಯ ಕ್ರಮವನ್ನು ಪೂರ್ಣಗೊಳಿಸಲು ಸಮಯಾವಕಾಶ ಸಿಗುತ್ತದೆ ಎಂದು ಅಭಿಪ್ರಾಯಪಟ್ಟಿದ್ದಾರೆ.
- ಎಲ್ಲಾ ವಿದ್ಯಾರ್ಥಿಗಳು ಮನೆಗೆಲಸವನ್ನು ಸಂಪೂರ್ಣವಾಗಿ ಮುಗಿಸುತ್ತಾರೆ ಎಂದು ತಿಳಿಸಿದ್ದಾರೆ.

## 13. ಶೈಕ್ಷಣಿಕ ನಿಹಿತಾರ್ಥಗಳು

1. ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡಿರುವ ಶಿರಹಟ್ಟಿ ತಾಲೂಕಿನ 20 ಗ್ರಾಮಾಂತರ ಶಾಲೆಗಳಲ್ಲಿ ಭೂಗೋಳಶಾಸ್ತ್ರ ಬೋಧನೆಯು ಸಮರ್ಪಕವಾಗಿಲ್ಲ.
2. ಶಿಕ್ಷಕರುಗಳಿಗೆ ಸೇವೆಯ ಅವಧಿಯಲ್ಲಿ ವಿವಿಧ ಶೈಕ್ಷಣಿಕ ಕಾರ್ಯಗಾರ ತರಬೇತಿ ಕಾರ್ಯಕ್ರಮಗಳನ್ನು ಶಿಕ್ಷಣ ಇಲಾಖೆಯ ವತಿಯಿಂದ ಹಮ್ಮಿಕೊಂಡು ಭೂಗೋಳಶಾಸ್ತ್ರ ಬೋಧಕರುಗಳಿಗೆ ತಕ್ಷಣವೇ ಒದಗುವ ಬೋಧನಾ/ಶೈಕ್ಷಣಿಕ ಸಮಸ್ಯೆಗಳನ್ನು ಬಗೆಹರಿಸಬೇಕಾಗಿದೆ.
3. ಭೂಗೋಳಶಾಸ್ತ್ರ ಬೋಧನೆಯಲ್ಲಿನ ಅವಗುಣಗಳನ್ನು ಬಗೆಹರಿಸಿ ಬೋಧನೆಯನ್ನು ಉತ್ತಮಪಡಿಸಿ ಪರಿಣಾಮಕಾರಿಯಾಗಿಸ ಬೇಕಾದಲ್ಲಿ ಎಲ್ಲಾ ಶಾಲೆಗಳಿಗೆ ಮೂಲಭೂತವಾದಂತಹ ಸೌಕರ್ಯಗಳನ್ನು (ಬೋಧನಾ ಉಪಕರಣಗಳನ್ನು ದೃಕ್ ಶ್ರವಣೋಪಕರಣಗಳ ಭೂಗೋಳಶಾಸ್ತ್ರ ಕೊಠಡಿ,

ISSN : 2249-2429

ವಸ್ತುಸಂಗ್ರಹಾಲಯ ಇತ್ಯಾದಿ) ಆದಷ್ಟು ಬೇಗನೆ ಆಡಳಿತ ಮಂಡಳಿಗಳ ವತಿಯಿಂದ ಒದಗಿಸಿಕೊಡುವುದರಿಂದ ಈ ಸಮಸ್ಯೆ ಬಗೆಹರಿಸಬಹುದು.

4. ಶಿಕ್ಷಕರು ಭೂಗೋಳಶಾಸ್ತ್ರವನ್ನು ಬೋಧಿಸುವಾಗ ಉಪನ್ಯಾಸ ಪದ್ಧತಿ, ಚರ್ಚಾ ವಿಧಾನ ಮತ್ತು ಪ್ರಶ್ನೋತ್ತರ ವಿಧಾನಗಳ ಜೊತೆಗೆ ಬೇರೆ ವಿಧಾನಗಳನ್ನು ಬಳಸಿ ಬೋಧಿಸುವದರಿಂದ ಸಮಸ್ಯೆಯನ್ನು ಬಗೆಹರಿಸಬಹುದಾಗಿದೆ.
5. ಹೆಚ್ಚು ಹೆಚ್ಚು ಕ್ಷೇತ್ರ ಪ್ರವಾಸಗಳನ್ನು ಏರ್ಪಡಿಸುವುದರಿಂದ ಭೂಗೋಳಶಾಸ್ತ್ರದ ಸಮಸ್ಯೆ ಬಗೆಹರಿಸಬಹುದು.
6. ಸರ್ಕಾರದವರು ಮತ್ತು ಆಡಳಿತ ಮಂಡಳಿಯವರು ಶಾಲೆಗಳಿಗೆ ಗ್ರಂಥಾಲಯ ವ್ಯವಸ್ಥೆ ಮಾಡಿಸುವುದು ಹೆಚ್ಚು ಸೂಕ್ತವಾಗಿದೆ.

## 14. ಅಧ್ಯಯನದ ಮಿತಿಗಳು

1. ಭೂಗೋಳಶಾಸ್ತ್ರಕ್ಕೆ ಸಂಬಂಧಿಸಿದಂತೆ ಬೋಧನಾ ಸಮಸ್ಯೆಗಳನ್ನು ಶಿರಹಟ್ಟಿ ತಾಲೂಕಿನ ಕೇವಲ ಗ್ರಾಮೀಣ ಪ್ರದೇಶದಲ್ಲಿ ಬರುವ ಪ್ರೌಢಶಾಲೆಗಳಲ್ಲಿ ಮಾತ್ರ ಅಧ್ಯಯನವನ್ನು ಕೈಗೊಳ್ಳಲಾಗಿದೆ.
2. ಪ್ರಸ್ತುತ ಅಧ್ಯಯನವು ಕೇವಲ ಭೂಗೋಳಶಾಸ್ತ್ರ ವಿಷಯಕ್ಕೆ ಮಾತ್ರ ಸಂಬಂಧಿಸಿದೆ. ಸಮಾಜ ವಿಜ್ಞಾನ ಅಧ್ಯಯನವನ್ನು ಇಲ್ಲಿ ಮಾಡಿಲ್ಲ.
3. ಈ ಅಧ್ಯಯನಕ್ಕೆ ಶಿರಹಟ್ಟಿ ತಾಲೂಕಿನ 20 ಗ್ರಾಮೀಣ ಪ್ರೌಢಶಾಲೆಗಳನ್ನು ಆಯ್ದುಕೊಳ್ಳಲಾಗಿದೆ.
4. ಶಿರಹಟ್ಟಿ ತಾಲೂಕಿನ ನಗರ ಪ್ರದೇಶಗಳಿಗೆ ಇದು ಸೀಮಿತವಾಗಿಲ್ಲ.
5. 8, 9 ಮತ್ತು 10ನೆಯ ತರಗತಿಯ ಭೂಗೋಳಶಾಸ್ತ್ರ ಬೋಧಿಸುವ ಶಿಕ್ಷಕರಿಗೆ ಮಾತ್ರ ಸಂಬಂಧಿಸಿದೆ.
6. ಪ್ರಸ್ತುತ ಅಧ್ಯಯನಕ್ಕೆ ಆಯ್ದ ಶಿರಹಟ್ಟಿ ತಾಲೂಕಿನ 20 ಗ್ರಾಮೀಣ ಪ್ರೌಢಶಾಲೆಗಳಲ್ಲಿ 09 ಸರ್ಕಾರಿ ಪ್ರೌಢಶಾಲೆಗಳು, 07 ಅನುದಾನಿತ ಶಾಲೆಗಳು ಮತ್ತು 04 ಅನುದಾನ ರಹಿತ ಶಾಲೆಗಳು ಅಧ್ಯಯನದ ವ್ಯಾಪ್ತಿಗೆ ಒಳಗೊಂಡಿದೆ.

## 15. ಮುಂದಿನ ಸಂಶೋಧನೆಗೆ ಸಲಹೆಗಳು

- ಈ ಅಧ್ಯಯನವನ್ನು ಜಿಲ್ಲಾ ಮಟ್ಟದಲ್ಲಿ ಮತ್ತು ರಾಜ್ಯ ಮಟ್ಟದಲ್ಲಿ ಪ್ರೌಢಶಾಲೆಯ ಭೂಗೋಳಶಾಸ್ತ್ರ ಬೋಧನೆಗೆ ಸಂಬಂಧಪಟ್ಟ ಸಮಸ್ಯೆಗಳ ಬಗ್ಗೆ ಅಧ್ಯಯನ ಮಾಡಬಹುದು.
- ಪದವಿ ಹಂತದಲ್ಲಿರುವ ಭೂಗೋಳಶಾಸ್ತ್ರ ಬೋಧನೆಗೆ ಸಂಬಂಧಪಟ್ಟಂತೆ ಇರುವ ಸಮಸ್ಯೆಗಳ ಕುರಿತು ಅಧ್ಯಯನ ಮಾಡಬಹುದು.
- ಸ್ನಾತಕೋತ್ತರ ಹಂತದಲ್ಲಿರುವ ಭೂಗೋಳಶಾಸ್ತ್ರ ಬೋಧನೆಗೆ ಸಂಬಂಧಪಟ್ಟಂತೆ ಇರುವ ಸಮಸ್ಯೆಗಳ ಕುರಿತು ಅಧ್ಯಯನ ಮಾಡಬಹುದು.
- ಬೃಹತ್ ಪ್ರತಿದರ್ಶಿಗಳನ್ನು ಆಯ್ಕೆ ಮಾಡಿಕೊಂಡು ಭೂಗೋಳಶಾಸ್ತ್ರ ಬೋಧನೆಗೆ ಸಂಬಂಧಪಟ್ಟಂತೆ ಇರುವ ಸಮಸ್ಯೆಗಳ ಕುರಿತು ಅಧ್ಯಯನ ಮಾಡಬಹುದು.

## ಉಪಸಂಹಾರ

ಒಟ್ಟಿನಲ್ಲಿ ಈ ಅಧ್ಯಯನದಿಂದ ತಿಳಿದು ಬರುವದೇನೆಂದರೆ, ಭೂಗೋಳಶಾಸ್ತ್ರವನ್ನು ಬೋಧಿಸಲು ಪ್ರಶ್ನೋತ್ತರ ವಿಧಾನ, ಚರ್ಚಾ ವಿಧಾನ ಮತ್ತು ಉಪನ್ಯಾಸ ವಿಧಾನ ಸೂಕ್ತವೆಂದು ತಿಳಿದುಬಂದಿದೆ. ಅದರಂತೆ ಕ್ಷೇತ್ರ ಪ್ರವಾಸಗಳನ್ನು ಹೆಚ್ಚಾಗಿ ಮತ್ತು ಎಲ್ಲಾ ಶಿಕ್ಷಕರುಗಳು ಸರಕಾರವು ನಿಗದಿಪಡಿಸಿದ ಸಮಯದಲ್ಲಿ ಭೂಗೋಳಶಾಸ್ತ್ರ ವಿಷಯವನ್ನು ಮುಗಿಸುತ್ತಿದ್ದಾರೆ ಎಂದು ತಿಳಿದು ಬಂದಿದೆ. ಆದರೆ ಈ ಭೂಗೋಳಶಾಸ್ತ್ರ ಇನ್ನೂ ಪರಿಣಾಮಕಾರಿಯಾಗಿ ಸಮಸ್ಯೆಯಿಂದ ದೂರವಿರಬೇಕಾದರೆ ಎಲ್ಲಾ ಶಾಲೆಯಲ್ಲಿ ಮೊದಲು ಗ್ರಂಥಾಲಯದ ವ್ಯವಸ್ಥೆ ಮಾಡಿಸಬೇಕು. ಭೂಗೋಳಶಾಸ್ತ್ರ ಬೋಧನೆಗೆ ಸಂಬಂಧಪಟ್ಟಂತೆ ಸಾಕಷ್ಟು ದೃಕ್ ಶ್ರವಣೋಪಕರಣಗಳನ್ನು ಎಲ್ಲಾ ಶಾಲೆಯಲ್ಲಿ ಒದಗಿಸಬೇಕು. ಹಾಗೆಯೇ ಎಲ್ಲಾ ಶಾಲೆಯಲ್ಲಿ ಭೂಗೋಳಶಾಸ್ತ್ರಕ್ಕೆ ಸಂಬಂಧಪಟ್ಟಂತೆ ವಸ್ತುಸಂಗ್ರಹಾಲಯ ಮತ್ತು ಈ ವಿಷಯಕ್ಕೆ ಸಂಬಂಧಪಟ್ಟ ಕೊಠಡಿ ಇರುವುದು ಸೂಕ್ತವಾಗಿದೆ. ಈ ಹೊಸತನವನ್ನು ಅಳವಡಿಸಿದ್ದೇ ಆದಲ್ಲಿ ಭೂಗೋಳಶಾಸ್ತ್ರ ಸಮಸ್ಯೆಯಿಂದ ಮುಕ್ತವಾಗುತ್ತದೆ.

## ಆಕರ ಗ್ರಂಥಗಳು


- **ಅಗರವಾಲ ಜೆ. ಸಿ.** (1973) "ಸ್ವತಂತ್ರ ಭಾರತದಲ್ಲಿ ಶಿಕ್ಷಣ ಅಥವಾ ಶೈಕ್ಷಣಿಕ ಪ್ರಗತಿ" ದೆಹಲಿ ಆಕ್ಸ್ ಬುಕ್ ಡಿಪೋ.
- **ಅನಂತ ರಾಮಯ್ಯ ಆರ್. ಎಲ್.** (1972) "ನಕ್ಷಾಶಾಸ್ತ್ರದ ಮೂಲ ತತ್ವಗಳು" ಮೈಸೂರು ಎಂಟರ್ ಪ್ರೈಜಸ್.
- **ಲೋಕಾಪುರ ಐ. ಎ.** (1997) "ಪ್ರೌಢ ಶಿಕ್ಷಣ ಮತ್ತು ಶಿಕ್ಷಕನ ಕಾರ್ಯಗಳು" ವಿದ್ಯಾನಿಧಿ ಪ್ರಕಾಶನ, ಗದಗ .
- **ಮರಿದೇವರು ಸಿ. ಹೆಚ್.** (1997) "ಶಿಕ್ಷಣ ತತ್ವಶಾಸ್ತ್ರ" ಉದಯಬಾನ ಪ್ರಕಾಶನ, ತುಮಕೂರು.
- **ನಾಗಭೂಷಣ ಆರಾಧ್ಯ** (1998–99) "ಭೂಗೋಳಶಾಸ್ತ್ರ ಬೋಧನೆ" ವಿದ್ಯಾನಿಧಿ ಪ್ರಕಾಶನ, ಗದಗ.
- **ಪಾಂಡೆಯ ಬಿ. ಎನ್.** (1997) "ವಿದ್ಯಾರ್ಥಿ ಬೋಧನೆ ಮತ್ತು ಮೌಲ್ಯಮಾಪನ" (ಇ) ನವದೆಹಲಿ ರಾ.ಶೈ.ಸಂ.ತ.ಸಂ.
- **ಪ್ರಸಾದ ಪಿ. ಶ್ರೀ.** (1972) "ಭೂಗೋಳಶಾಸ್ತ್ರ ಪರಿಚಯ" (ಭಾಗ–1) ಕನ್ನಡ ಅಧ್ಯಯನ ಸಂಸ್ಥೆ ಮೈಸೂರು ವಿಶ್ವವಿದ್ಯಾನಿಲಯ.
- **ರಾಮಯ್ಯಂಗಾರ ಎಚ್. ಕೆ.** (1968) "ಶಿಕ್ಷಣ ಪ್ರದೀಪ್" ಶ್ರೀನಿವಾಸ ಪಬ್ಲಿಕೇಷನ್, ಬೆಂಗಳೂರು.
- **ಶಿವರಾಮಕಾರಂತ ಕೆ.** (1984) "ವಿಶಾಲ ಸಾಗರಗಳು" ಪಿ.ಬಿ.ಎಚ್. ಪ್ರಕಾಶನ, ಬೆಂಗಳೂರು.
- **ತನೇಜಾ ವಿ.ಆರ್.** (1976) "ಶೈಕ್ಷಣಿಕ ಚಿಂತನೆ ಮತ್ತು ಆಚರಣೆ" (ಇ) ಸ್ಟೆರಲಿಂಗ ಪಬ್ಲಿಷರ್ಸ್, ನವದೆಹಲಿ.
- **ಯಶೋಧರಾ ಕೆ.** (1995) "ಶಿಕ್ಷಣದಲ್ಲಿ ಸಂಖ್ಯಾಶಾಸ್ತ್ರ" ಶುಭ ಪ್ರಕಾಶನ, ಮೈಸೂರು.


■■

ISSN : 2249-2429


# ಕರ್ನಾಟಕದಲ್ಲಿ HIV/AIDS ಸಮಸ್ಯೆಗಳು ಮತ್ತು ಭವಿಷ್ಯದಲ್ಲಿಯ ಅಗತ್ಯತೆಗಳು

✍ **ವೀಣಾ ಕೆ. ಮರಕಟ್ಟಿ**, ಸಂಶೋಧಕರು, ಸ್ನಾತಕೋತ್ತರ ಸಮಾಜಶಾಸ್ತ್ರ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಕಿತ್ತೂರ ರಾಣಿ ಚನ್ನಮ್ಮ ಸ್ನಾತಕೋತ್ತರ ಕೇಂದ್ರ, ಬೆಳಗಾವಿ.

✍ **ಡಾ. ಡಿ. ಆರ್ ಅಳಬಾಳ**, ಮಾರ್ಗದರ್ಶಕರು, ಸ್ನಾತಕೋತ್ತರ ಸಮಾಜಶಾಸ್ತ್ರ ವಿಭಾಗ ಮುಖ್ಯಸ್ಥರು, ಕರ್ನಾಟಕ ವಿಶ್ವವಿದ್ಯಾಲಯ, ಕಿತ್ತೂರ ರಾಣಿ ಚನ್ನಮ್ಮ ಸ್ನಾತಕೋತ್ತರ ಕೇಂದ್ರ ಬೆಳಗಾವಿ.

ಇಂದು ಜಗತ್ತು ಹೊಸ ಸರ್ವಾಧಿಕಾರಿಯ ಬಿಗಿ ಮುಷ್ಠಿಯಲ್ಲಿ ಸಿಲುಕಿಕೊಂಡಿದೆ ಇದರಿಂದ ಸುಮಾರು ಜನರ ಭವಿಷ್ಯದ ಮೇಲೆ ಅನಿಶ್ಚಿತವಾದ ಕರಾಳ ಛಾಯೇ ಕವಿದಿದೆ ಎಂದು ಹೇಳಬಹುದು. ಎರಡು ಮಹಾಯುದ್ಧಗಳಲ್ಲಿ ಸತ್ತವರಿಗಿಂತ ಹೆಚ್ಚಿನ ಜನ ಈಗಾಗಲೇ ಈ ದುಷ್ಟನಿಗೆ ಬಲಿಯಾಗಿದ್ದಾರೆ. ಇಂತಹ ಸರ್ವಾಧಿಕಾರಿ ಯಾರು ? ಅದೇ ಏಡ್ಸ್ ರೋಗಕ್ಕೆ ಕಾರಣವಾಗಿರುವ ಒಂದು ವೈರಸ್ ಆಗಿದೆ. ಇಂತಹ ವೈರಸ್ ಹೊಂದಿದ HIV/AIDS ಇಡೀ ಜಗತ್ತಿನಾದ್ಯಂತ ಮೊಟ್ಟಮೊದಲಬಾರಿಗೆ ಅಭಿವೃದ್ಧಿ ಹೊಂದಿದ ರಾಷ್ಟ್ರವಾದ ಹಾಗೂ ಅತೀ ತಿರ್ವಗತಿಯಲ್ಲಿ ಆಧುನೀಕರಣ ಹೊಂದುತ್ತಿರುವ ಮತ್ತು ತನ್ನ ಎಲ್ಲಾ ಸಮಸ್ಯೆಗಳಿಗೂ ತಾನೆ ತಾನಾಗಿ ಪರಿಹಾರ ಕಂಡುಕೊಳ್ಳುವ ಸಾಮರ್ಥ್ಯವನ್ನು ಹೊಂದಿರುವ ರಾಷ್ಟ್ರ ಎಂದು ಹೆಗ್ಗಳಿಕೆಗೆ ಹೆಸರಾದಂತಹ "USA" ಅಂದರೇ, ಅಮೇರಿಕೆಯಲ್ಲಿ 1981 ರಲ್ಲಿ ಮೊದಲ ಬಾರಿಗೆ AIDS ಎಂಬ ಕಾಯಿಲೆಯನ್ನು ಪತ್ತೆ ಹಚ್ಚಲಾಯಿತು. ನಂತರ ಇಡೀ ಜಗತ್ತಿನಾದ್ಯಂತ ಬಹಳ ತೀರ್ವಗತಿಯಲ್ಲಿ ಈ ರೋಗ ಉತ್ತರ, ದಕ್ಷಿಣ ಅಮೇರಿಕಾ, ಯುರೋಪ್ ಮತ್ತು ಆಫ್ರಿಕಾ ಖಂಡಗಳಲ್ಲಿಯೂ ಹರಡಿತು. 1983 ರಲ್ಲಿ ಪ್ಯಾರಿಸ್ ಎಂಬಲ್ಲಿ ಈ HIV ಲಕ್ಷಣಗಳ ಬಗ್ಗೆ ವಿವರಿಸಲಾಯಿತು. ಈ HIV/AIDS ಎಂಬುದು ರಾಷ್ಟ್ರಗಳಿಗೆ ಮಾತ್ರ ಸಿಮೀತವಾಗಿರದೆ ಹಲವಾರು ದೇಶಗಳಿಗೂ ಹಾಗೂ ರಾಜ್ಯಗಳಿಗೂ ಮತ್ತು ಜಿಲ್ಲೆಗಳಲ್ಲಿಯೂ ಸಹಿತ ಇದರ ಕರಾಳ ಛಾಯೇ ಹರಡಿತು. ಇದೇ 1983 ರಲ್ಲಿ ಡಾ. ವಿಲ್ಸನ್ ಕಾರ್‌ವೆಲ್ ಎಂಬುವವರು ಉಗಾಂಡ ಜನರಲ್ಲಿ ಈ ರೋಗದ ಲಕ್ಷಣಗಳ ಬಗ್ಗೆ ಪತ್ತೆ ಹಚ್ಚಿದ ನಂತರ 1985 ರಲ್ಲಿ ಇದಕ್ಕಾಗಿ ಸಂಶೋಧನೆಯನ್ನು ಕೈಗೊಂಡರು. ನಂತರ HIV/AIDS ಎಂಬುದು ಇಷ್ಟಕ್ಕೆ ಸಿಮೀತವಾಗಿರದೆ ನಮ್ಮ ಭಾರತಕ್ಕೂ ಸಹಿತ 1986 ರಲ್ಲಿ ಪ್ರಪ್ರಥಮಬಾರಿಗೆ ಲಗ್ಗೆ ಹಾಕಿತು. ಮೊದಲುಬಾರಿಗೆ ತಮಿಳು ನಾಡಿನ ಚನ್ನೈಯ ವೆಲ್ಲೂರಾ CMC ಎಂಬ ಸಂಶೋಧನಾ ಸಂಸ್ಥೆಯಲ್ಲಿ ಇದನ್ನು ಪತ್ತೇ ಹಚ್ಚಲಾಯಿತು,

ನಂತರ ಕರ್ನಾಟಕ, ಮಹಾರಾಷ್ಟ್ರ, ಆಂಧ್ರಪ್ರದೇಶ, ಮಣಿಪೂರ ಮತ್ತು ನಾಗಾಲ್ಯಾಂಡಗಳಲ್ಲಿ 100 ಕ್ಕೆ 99% ರಷ್ಟು ಪ್ರಮಾಣದಲ್ಲಿ ಇದು ಕಂಡುಬಂದಿತು. ಪ್ರತಿ ವರ್ಷ ಸುಮಾರು 2 ಲಕ್ಷದಷ್ಟು ಜನ ಸಾಯುವಂತಾಯಿತು. ಇಗಾಗಲೇ 25 ಲಕ್ಷದಷ್ಟು ಜನ ಈ ಮಾರಕ ಕಾಯಿಲೆಗೆ ಸತ್ತಿದ್ದಾರೆ. 1984ರಲ್ಲಿ ಪ್ಯಾರಿಸ್‌ನ ವಿಜ್ಞಾನಿಗಳ ಗುಂಪೊಂದು ಈ ರೋಗದಿಂದ ಹೊಸ ವೈರಸ್‌ನ್ನು ಬೇರ್ಪಡಿಸುವಲ್ಲಿ ಯಶಸ್ವಿಯಾಗಿ ನಂತರ ಆ ವೈರಸ್‌ಗೆ HIV **"ಹ್ಯೂಮನ್ ಇಮ್ಯೂನೋ ಡಿಫೀಶಿಯನ್‌ಸ್ಸಿ ವೈರಸ್"** ಅಂದರೇ "ಮಾನವನಲ್ಲಿರತಕ್ಕಂತ ರೋಗ ನಿರೋಧಕ ಶಕ್ತಿಯನ್ನು ಕುಗ್ಗಿಸುವ ಒಂದು ರೋಗಾಣು" ಎಂಬುದು



ಹಾಗೇ AIDS ಎಂದರೇ **"ಅಕ್ವೈರಡ್ ಇಮ್ಯೂನೋ ಡಿಫೀಶಿಯನ್ಸಿ ಸಿಂಡ್ರೋಮ್"** "ಅರ್ಜಿತ ರೋಗ ನಿರೋಧಕ ಲಕ್ಷಣಗಳ ಕೂಟ" ಎಂದು ಹೆಸರಿಸಲಾಯಿತು. ನಂತರ 1987ರಲ್ಲಿ HIV/AIDS ನ ಕರಾಳ ಛಾಯೇಯು ಭಾರತ ದೇಶದಲ್ಲಿರುವ ಕರ್ನಾಟಕ ರಾಜ್ಯದ ಒಂದು ಜಿಲ್ಲೆಯಾದ ಬೆಳಗಾಂ ಎಂಬಲ್ಲಿಯೂ ಒಬ್ಬಳು ಲೈಂಗಿಕ ವೃತ್ತಿ ನಿರತ ಮಹಿಳೆಯಲ್ಲಿ HIV ಇರುವ ಬಗ್ಗೆ ಪತ್ತೆಯಾಯಿತು. ಕರ್ನಾಟಕದಲ್ಲಿ ಒಂದೇ ಜಿಲ್ಲೆಗೆ ಮಾತ್ರ ಇದು ಸಿಮೀತವಾಗಿರದೆ ಎಲ್ಲಾ ಜಿಲ್ಲೆಗಳಲ್ಲಿ 1987 ರಿಂದ 2007ರ ವರೆಗೂ ಇದರ ಛಾಯೇ ಹರಡಿ ಇಡಿ ಕರ್ನಾಟಕದ ತುಂಬಾ ಪಸರಿಸಿತು.

ಮೊದಲು ಬಾರಿಗೆ ಕರ್ನಾಟಕದ ಬೆಳಗಾಂ ಜಿಲ್ಲೆಯಲ್ಲಿ 1 % ಕಾಣಿಸಿಕೊಂಡಿದ್ದ ಈ ರೋಗವು ನಂತರ ಬಿಜಾಪೂರ, ರಾಯಚೂರ, ಗುಲ್ಬರ್ಗಾ ಇನ್ನು ಹಲವಾರು ಜಿಲ್ಲೆಗಳಲ್ಲಿ ಇದರ ಛಾಯೆಯು ಕರಾಳವಾಗಿ ಬೀರತೊಡಗಿತು. 1987 ರಿಂದ 2004 ರವರೆಗಿನ HIV/AIDS ಪ್ರಮಾಣವು ದಿನೆ-ದಿನೇ ಹೆಚ್ಚಾಗುತ್ತ ಬಂದಿತು. ಮನುಕುಲದ ಇತಿಹಾಸದಲ್ಲಿ ಇಷ್ಟು ವ್ಯಾಪಕವಾಗಿ ಜಗತ್ತಿನ ಎಲ್ಲ ದೇಶಗಳಲ್ಲಿ ಎಲ್ಲ ರಾಜ್ಯಗಳಲ್ಲಿ ಮತ್ತು ಎಲ್ಲಾ ಜಿಲ್ಲೆಗಳಲ್ಲಿಯೂ ತನ್ನ ಸೋಂಕನ್ನು ಹಬ್ಬಿಸಿ ಸಾವಿಗೆ ಕಾರಣವಾದ ಬೇರೊಂದು ರೋಗವಿಲ್ಲ ಎನ್ನಬಹುದು. ಈ ರೋಗದ ಹುಟ್ಟು, ಬೆಳವಣಿಗೆ, ಹೊತ್ತುತರುವ ರೋಗ ಸಮೂಹ ಹಾಗೂ ಚಿಕಿತ್ಸೆಗಳ ಬಗ್ಗೆ ಎಷ್ಟು ಬರೆದರೂ ಕೂಡ ಕಮ್ಮಿನೆ, ಇಂದಿಗೂ ಕೂಡ ನಮ್ಮ ಸರಕಾರ ಇದರ ಬಗ್ಗೆ ಹಲವಾರು ರೀತಿಯ ಮಾಹಿತಿಯನ್ನು ಜನರ ಮುಂದೆ ಇಟ್ಟರು ಕೂಡ ಜಗತ್ತಿನ 80 % ರಷ್ಟು ಜನರಿಗೆ ಈ ರೋಗದ ಬಗ್ಗೆ ಸರಿಯಾದ ಮಾಹಿತಿ ಹಾಗೂ ತಿಳುವಳಿಕೆಯಿಲ್ಲ. ಇಂತಹ ಭಯಂಕರವಾದ ವೈರಿಯನ್ನು ನಾವೇ ಮನೆಗೆ ಆಹ್ವಾನಿಸಿ, ಉಪಚರಿಸಿ ಕೊನೆಗೆ ಆತನಿಗೆ ಬಲಿಯಾಗುವ ಪರಿಸ್ಥಿತಿ ಮಾನವ ಜನಾಂಗಕ್ಕೆ ಯಾಕೆ ಬಂತು ? ಎಂಬುದು ಪ್ರಶ್ನೆಯಾಗಿ ಉಳಿದು ಬಿಟ್ಟಿದೆ

ISSN : 2249-2429

ಇದಕ್ಕೆ ಸಮಂಜಸವಾದ ಉತ್ತರವನ್ನು ನಮ್ಮ ಸರಕಾರ ಹುಡುಕುತ್ತಲೇ ಇದೆ.

## ಉದ್ದೇಶ

"ದ್ವಿತೀಯ ಹಂತದ ಸಂಶೋಧನೆಯ ಮೂಲಕ HIV/AIDS ಎಂಬ ರೋಗದ ರೀತಿ ನೀತಿಗಳು ಹಾಗೂ ಅದರ ಲಕ್ಷಣಗಳ ಬಗ್ಗೆ ಮತ್ತು ಕರ್ನಾಟಕದಲ್ಲಿ HIV/AIDS ದ ಪ್ರಮಾಣವು ಯಾವ ವರ್ಷದಲ್ಲಿ ಎಷ್ಟರ ಮಟ್ಟಿಗೆ ಇತ್ತು ಹಾಗೂ ಪುರುಷರು ಮತ್ತು ಸ್ತ್ರೀಯರಲ್ಲಿ ರೋಗದ ಪ್ರಮಾಣವು ಎಷ್ಟರ ಮಟ್ಟಿಗೆ ಇದೆ ಎಂಬುದನ್ನು ತಿಳಿಯುವುದಾಗಿದೆ.

## ಸಮಸ್ಯೆಗಳು

"ಕರ್ನಾಟಕದ ಜನರ ಜೀವನದ ಮೇಲೆ HIV/AIDSಎಂಬ ರೋಗವು ಎಷ್ಟರ ಮಟ್ಟಿಗೆ ಮತ್ತು ಯಾರ ಮೇಲೆ ಹೇಗೆ ಪ್ರಭಾವ ಬೀರಿದೆ ಹಾಗೂ ಇನ್ನು ಬೀರುತ್ತಲಿದೆ ಎಂಬುದನ್ನು ನೋಡಬಹುದು. HIV/AIDS ರೋಗವು ಬಡವ ಶ್ರೀಮಂತ ಎಂಬ ಭೇದವಿಲ್ಲದೇ ಎಲ್ಲ ಜಾತಿ, ಮತ, ಧರ್ಮಕ್ಕೆ ಸೇರಿದ ಎಲ್ಲ ರೀತಿಯ ಜನರನ್ನು ಕಾಡುತ್ತಿದೆ.

HIV/AIDS ಎಂಬುದು ಬದಲಾಗುತ್ತಿರುವ ಸಮಾಜದಲ್ಲಿ, ಸಮಾಜಗಳಿಗನುಗುಣವಾಗಿ ಅಲ್ಲಿರತಕ್ಕಂತಹ ಜನರ ಮೇಲೆ ಎಷ್ಟರ ಮಟ್ಟಿಗೆ ಪ್ರಭಾವ ಬೀರಿದೆ ಎಂಬುದು ಹಾಗೂ ಉದ್ಯೋಗಸ್ಥರಲ್ಲಿ ಮತ್ತು ನಿರುದ್ಯೋಗಸ್ಥರಲ್ಲಿ, ಅಕ್ಷರಸ್ಥರು, ಅನಕ್ಷರಸ್ಥರು ಮತ್ತು ಗ್ರಾಮೀಣಮಟ್ಟದಲ್ಲಿ, ನಗರಗಳಲ್ಲಿ ಇದರ ಪ್ರಮಾಣ ಯಾವ ರೀತಿ ಹಾಗೂ ಎಷ್ಟರ ಮಟ್ಟಿಗೆ ಇದೆ ಎಂಬುದನ್ನು ತಿಳಿಯುವುದು ಈ ಅಧ್ಯಯನದ ಮಹತ್ತರವಾದ ಉದ್ದೇಶವಾಗಿದೆ.

## 1. ಕರ್ನಾಟಕದಲ್ಲಿ 2001-2004 ವರೆಗಿನ HIV/AIDS ಪ್ರವೇಶದ ವಿವರದ ಬಗ್ಗೆ ತಿಳಿಯುವುದು

ಕರ್ನಾಟಕದಲ್ಲಿ 1987ರಲ್ಲಿ ಪ್ರವೇಶಿಸಿದ HIV/AIDS ವು ಮೊದಲು ಬಾರಿಗೆ ಕರ್ನಾಟಕ ರಾಜ್ಯದ ಒಂದು ಜಿಲ್ಲೆಯಾದ ಬೆಳಗಾಂ ಎಂಬಲ್ಲಿ ಪತ್ತೆಯಾದ ನಂತರ ತನ್ನ ಕರಾಳ ಛಾಯೆಯನ್ನು ಅಕ್ಕ-ಪಕ್ಕದ ಜಿಲ್ಲೆಗಳಿಗೂ ಕೂಡ ಹರಡತೊಡಗಿತು. ಕರ್ನಾಟಕ ರಾಜ್ಯದ ಅಂಕಿ ಸಂಖ್ಯೆಯ ಪ್ರಕಾರ 1987ರ ನಂತರದಿಂದ 2001 ರೊಳಗೆ ಇದರ ಹರಡಿರುವಿಕೆಯ ವಿವರ ಈ ರೀತಿ ಇದೆ, ಬೆಳಗಾಂ ಜಿಲ್ಲೆಯಲ್ಲಿ ಮಾತ್ರ ಕಾಣಿಸಿಕೊಂಡಿದ್ದ ಈ ರೋಗವು ನಂತರ 2001ರಲ್ಲಿ 11 ಜಿಲ್ಲೆಗಳಾದ ಗುಲ್ಬರ್ಗಾ, ಬಿಜಾಪೂರ, ರಾಯಚೂರು, ಧಾರವಾಡ, ದಾವಣಗೇರಿ, ಉತ್ತರ ಕರ್ನಾಟಕ, ಹಾಸನ, ಮೈಸೂರ, ಚಾಮರಾಜನಗರ ಹಾಗೂ ಬೆಂಗಳೂರು ಎಂಬಲ್ಲಿ ಇದು ಹರಡುವಿಕೆಯ ಬಗ್ಗೆ ತಿಳಿದು ಬಂದರೇ ಉಳಿದ 15 ಜಿಲ್ಲೆಗಳಲ್ಲಿ ಇದರ ಬಗ್ಗೆ ಯಾವುದೇ ರೀತಿಯ ಸುಳಿವು ಇರಲಿಲ್ಲ, ಅವುಗಳು ಎಂದರೇ, ಬೀದರ್, ಬಾಗಲಕೋಟ, ಕೊಪ್ಪಳ, ಗದಗ, ಬಳ್ಳಾರಿ, ದಕ್ಷಿಣ, ಉತ್ತರ ಕನ್ನಡ, ಹಾವೇರಿ, ಶಿವಮೊಗ್ಗ, ಚಿತ್ರದುರ್ಗ, ತುಮಕೂರು, ಉಡುಪಿ, ಚಿಕ್ಕಮಗಳೂರು, ಕೋಲಾರ, ಮಂಡ್ಯ ಹಾಗೂ ಕೊಡಗು ಈ ಎಲ್ಲಾ ಜಿಲ್ಲೆಗಳಲ್ಲಿ 2001 ರೊಳಗೆ HIV/AIDS ಯಾವುದೇ ಸುಳಿವು ಕಂಡುಬಂದಿರಲಿಲ್ಲ, ಆದರೇ ಈ ಒಂದು ವರ್ಷದಲ್ಲಿ 2.5% ರಷ್ಟು ಪ್ರಮಾಣ HIV/AIDS ಇರುವುದರ ಬಗ್ಗೆ ವರದಿಯಾಗಿದೆ.

ಅದೇ ರೀತಿ 2001 ರ ನಂತರದಿಂದ 2002 ರೊಳಗೆ HIV/AIDS ಪ್ರಮಾಣದಲ್ಲಿ ಹೆಚ್ಚಳವಾಯಿತು. ಮೊದಲು 11 ಜಿಲ್ಲೆಗಳಲ್ಲಿ ಮಾತ್ರ ಕಾಣಿಸಿಕೊಂಡಿದ್ದ ಈ ರೋಗ ತದನಂತರ 2001 ರಿಂದ 2002 ರ ಅವಧಿಯಲ್ಲಿ ಮತ್ತೇ 5 ಜಿಲ್ಲೆಗಳಲ್ಲಿ ಅದರ ಸೊಂಕು ಹರಡಿದ್ದರ ಬಗ್ಗೆ ವರದಿಯಾಯಿತು. ಅವುಗಳೆಂದರೆ – ಬಳ್ಳಾರಿ, ಗದಗ, ಉಡುಪಿ, ಕೊಡಗು, ಮಂಡ್ಯ ಎಂಬಲ್ಲಿ ಆಗ ತಾನೇ ಹರಡಿದ HIV/AIDS ಸೊಂಕಿನ ಬಗ್ಗೆ ತಿಳಿದುಬಂದಿತು. 2002 ರಲ್ಲಿ ಇದರ ಪ್ರಮಾಣ 2.8% ಕ್ಕೆ ಏರಿದರ ಬಗ್ಗೆ ವರದಿಯಾಗಿದೆ.

ನಂತರ 2003 ರಲ್ಲಿ ಮೊದಲನೇ ಹಂತದ 11 ಜಿಲ್ಲೆ ಹಾಗೂ ಎರಡನೇ ಹಂತದ 5 ಜಿಲ್ಲೆಗಳಲ್ಲದೇ ಮತ್ತೇ 4 ಜಿಲ್ಲೆಗಳಾದ ಬಾಗಲಕೋಟ, ತುಮಕೂರ, ಮೈಸೂರ, ಕೋಲಾರಗಳಲ್ಲಿ ಈ HIV/AIDS ರೋಗವು ಸಂಪೂರ್ಣವಾಗಿ ಹರಡಿದ ಬಗ್ಗೆ ವರದಿಯಾಯಿತು. ಒಟ್ಟಾಗಿ 2003 ರಲ್ಲಿ ನಮ್ಮ ಕರ್ನಾಟಕದ 20 ಜಿಲ್ಲೆಗಳಲ್ಲಿ HIV/AIDS ನ ಎಲ್ಲ ರೀತಿಯ ಲಕ್ಷಣಗಳು ಕಂಡುಬಂದಿದ್ದು ಈ ಒಂದು ನಿಟ್ಟಿನಲ್ಲಿ 1.5 ರಷ್ಟು ಸ್ಥಳಗಳಲ್ಲಿ ಮಾತ್ರ HIV/AIDS ಸೊಂಕು ಹರಡದೇ ಇರುವ ಬಗ್ಗೆ ವರದಿ ಮಾಡಲಾಯಿತು.

ನಂತರ ಕೊನೆಯದಾಗಿ 2004 ರಲ್ಲಿನ ಅಂಕಿ ಸಂಖ್ಯೆಯ ಪ್ರಕಾರ 18 ಜಿಲ್ಲೆಗಳಲ್ಲಿ HIV/AIDS ನ ಲಕ್ಷಣಗಳು ಕಂಡುಬಂದರೇ 4 ಜಿಲ್ಲೆಗಳಲ್ಲಿ ಅದರ ಸೋಂಕು ಇರುವ ಬಗ್ಗೆ ಹಾಗೂ ಇನ್ನೂಳಿದ 3 ಜಿಲ್ಲೆಗಳಲ್ಲಿ ಈ ರೋಗ ಇಲ್ಲದೆ ಇರುವ ಬಗ್ಗೆ ವರದಿಯಾಯಿತು. 2004 ರ ಸಂಶೋಧನೆಯ ಪ್ರಕಾರ ಹಾವೇರಿ, ಚಿತ್ರದುರ್ಗ ಹಾಗೂ ಶಿವಮೊಗ್ಗಗಳಲ್ಲಿ ಇದು ಹರಡಿರುವ ಬಗ್ಗೆ ಪತ್ತೆ ಹಚ್ಚಲಾಯಿತು. ಈ ಅವಧಿಯಲ್ಲಿ HIV/AIDS ಪ್ರಮಾಣವು ಗಗನಕ್ಕೇರಿತ್ತು. ಆ ಒಂದು ನಿಟ್ಟಿನಲ್ಲಿ 1.11% ರಷ್ಟು ಜಿಲ್ಲೆಗಳಲ್ಲಿ ಮಾತ್ರ HIV/AIDS ಕಂಡುಬಂದಿರಲಿಲ್ಲ, ನಂತರ 2005 ರಿಂದ 2006 ರ ಹೊತ್ತಿಗೆ ಇದು ಸಂಪೂರ್ಣವಾಗಿ ಇಡೀ ಕರ್ನಾಟಕ ರಾಜ್ಯದ 28 ಜಿಲ್ಲೆಗಳಲ್ಲಿ ಇರುವ ಬಗ್ಗೆ ವರದಿಯಾಯಿತು.

ಈ ಒಂದು ನಿಟ್ಟಿನಲ್ಲಿ HIV/AIDS ರೋಗದ ಸೊಂಕು ಹೊಂದಿದವರ ಪ್ರಮಾಣ 1.4% ರಿಂದ 1.6% ರಷ್ಟು ಇದ್ದರೆ ಅದೇ ಸಮಯದಲ್ಲಿ HIV/AIDS ರೋಗ ಹೊಂದಲು ಮುಖ್ಯ ಕಾರಣವಾಗಿರುವ STD- Sexual transmitted diseases ಎಂಬುದು ಅಂದರೇ, ಲೈಂಗಿಕ ರೋಗವನ್ನು ಹೊಂದಿದ್ದ ರೋಗಿಗಳ ಪ್ರಮಾಣವು 15% ರಷ್ಟು ಇತ್ತು. ಈ ಪ್ರಮಾಣವು ನಗರಗಳಲ್ಲಿ ಹಾಗೂ ಗ್ರಾಮಗಳಲ್ಲಿ, ಅಕ್ಷರಸ್ಥರು ಮತ್ತು ಅನಕ್ಷರಸ್ಥರಲ್ಲಿ ಬೇರೆ-ಬೇರೆ ರೀತಿಯದ್ದಾಗಿತ್ತು ಎಂದು ವರದಿಯಾಗಿದೆ.

## 2. ಕರ್ನಾಟಕದಲ್ಲಿಯ ಉದ್ಯೋಗಸ್ಥರು ಮತ್ತು ನಿರುದ್ಯೋಗ ಸ್ಥರಲ್ಲಿಯ HIV/AIDS ಪ್ರಮಾಣವನ್ನು ತಿಳಿಯುವುದು

ಕರ್ನಾಟಕದ ಎಲ್ಲಾ ವರ್ಗದ ಜನರಲ್ಲಿ ಅಂದರೇ ಉದ್ಯೋಗಸ್ಥರಲ್ಲಿ ಮತ್ತು ನಿರುದ್ಯೋಗಿಗಳಲ್ಲಿ HIV/AIDS ಯನ್ನು ಹೊಂದಿದವರ ಪ್ರಮಾಣ ಎಷ್ಟಿದೆ ಎಂಬುದನ್ನು ಇಲ್ಲಿ ತಿಳಿಯಲಾಗಿದೆ.

- ಒಕ್ಕಲುತನ ಮಾಡುವವರಲ್ಲಿ 1.4% ರಷ್ಟು ಪ್ರಮಾಣ ನೋಡಬಹುದಾಗಿದ್ದು ಕಾರಣ, ಇವರು ಕೆಳಮಟ್ಟದ ಶಿಕ್ಷಣ ಹೊಂದಿದವರಾಗಿದ್ದು ಹಾಗೂ ಆರೋಗ್ಯದ ಬಗ್ಗೆ ಹೆಚ್ಚಿನ ಮಾಹಿತಿ ಇಲ್ಲದಿರುವುದು ಮತ್ತು ರೋಗ ಉಂಟಾದರೆ ಚಿಕಿತ್ಸೆಗೆಂದು ಸಾಕಷ್ಟು ಹಣ ಇಲ್ಲದಿರುವ ಕಾರಣ ರೋಗ ಬೆಳೆಯುತ್ತದೆ.

ISSN : 2249-2429


- ಹಾಗೆಯೇ ಒಕ್ಕಲುತನದಲ್ಲಿ 1.4% ರಷ್ಟು ಪ್ರಮಾಣ ಕಂಡುಬಂದಿದ್ದರೇ, ರಫ್ತುಗಾರರಲ್ಲಿ 2.2% ರಷ್ಟು HIVಯ ಪ್ರಮಾಣ ಇದೇ, ಕಾರಣ ಇವರು ದೇಶ, ವಿದೇಶಗಳಲ್ಲಿ ವ್ಯಾಪಾರಕ್ಕೋಸ್ಕರ ತಿರುಗಾಡುವುದರಿಂದ ಬೇರೆ ಕಡೆ ಹೋದಾಗ ಅಲ್ಲಿಯ ಮನರಂಜನೆಗೋಸ್ಕರ ಅನೈತಿಕ ಸಂಬಂಧಗಳಲ್ಲಿ ಇಳಿಯುವುದು ಬಹಳ ಮುಖ್ಯವಾದ ಕಾರಣವಾಗಿದೆ.
- ಅದೇ ರೀತಿ ಕೈಗಾರಿಕೋದ್ಯಮಿಗಳಲ್ಲಿಯೂ ಸಹಿತ 1.4% ರಷ್ಟು ಪ್ರಮಾಣದಲ್ಲಿ HIV/AIDS ಕಾಣಬಹುದಾಗಿದ್ದು, ಇವರು ಆರ್ಥಿಕವಾಗಿ ಹಾಗೂ ಶೈಕ್ಷಣಿಕ ಮಟ್ಟದಲ್ಲಿ ಸುಧಾರಣೆ ಹೊಂದಿದ್ದರು ಕೂಡ ವ್ಯಾಪಾರದ ಸಮಯದಲ್ಲಿ ಹಲವಾರು ಸ್ಥಳಗಳಲ್ಲಿ ತಂಗುವುದರಿಂದ ಕೆಲವೊಂದು ಕೃತ್ಯಗಳಿಗೆ ತೊಡಗಬೇಕಾಗಿ ಬರುತ್ತದೆ ಅಂತಹ ಸಮಯದಲ್ಲಿ ಇವರಿಗೆ ಅರಿಯದ ರೀತಿಯಲ್ಲಿ ಈ ರೋಗಕ್ಕೆ ಬಲಿಯಾಗುತ್ತಿದ್ದಾರೆ.
- ಹೋಟೆಲ ಉದ್ಯಮಿಗಳಲ್ಲಿ 1.6% ರಷ್ಟು ಪ್ರಮಾಣ ಕಾಣಬಹುದಾಗಿದ್ದು ಕಾರಣ ಇವರು ಬೆಳಿಗ್ಗೆಯಿಂದ ರಾತ್ರಿಯವರೆಗೆ ದುಡಿದು ಯಾವುದೇ ಮನರಂಜನೆ ಇಲ್ಲದ ಕಾರಣ ಸಿಕ್ಕ ಸಮಯದಲ್ಲಿ ಮನರಂಜನೆಗೋಸ್ಕರ ಅಡ್ಡದಾರಿ ಹಿಡಿಯುವುದರಿಂದ ಇಂತಹ ತೊಂದರೆಗೀಡಾಗಿದ್ದಾರೆ.
- ನೌಕರಸ್ಥರಲ್ಲಿ 1.1% ರಷ್ಟು ಮಾತ್ರ ಈ ರೋಗದ ಪ್ರಮಾಣ ಕಾಣಬಹುದಾಗಿದ್ದು ಕಾರಣ ಇವರಿಗೆ ತಿಳುವಳಿಕೆ, ಒಳ್ಳೆಯ ಶಿಕ್ಷಣ ಹಾಗೂ ಆರೋಗ್ಯದ ಬಗ್ಗೆ ಕಾಳಜಿ ಇದ್ದರು ಸಹಿತ ಹೆಚ್ಚಾಗಿ ಇವರಿಗೂ ಸಮಯದ ಅಭಾವ ಇರುವ ಕಾರಣ ಇದಕ್ಕೆ ಬಲಿಯಾಗುತ್ತಿದ್ದಾರೆ.
- ವ್ಯಾಪಾರಸ್ಥರಲ್ಲಿ 1.3% ರಷ್ಟು ಪ್ರಮಾಣ ಕಾಣಬಹುದಾಗಿದೆ.
- ಹಾಗೆಯೇ ನಿರುದ್ಯೋಗಸ್ಥರಲ್ಲಿ 3.5% ರಷ್ಟು ಅಂದರೇ, ಎಲ್ಲಾ (ಉದ್ಯೋಗಸ್ಥರಲ್ಲಿ, ಒಕ್ಕಲುತನ, ರಫ್ತುಗಾರರು, ಕೈಗಾರಿಕೋದ್ಯಮಿಗಳು, ಹೋಟೆಲ್ ಕಾರ್ಮಿಕರು, ನೌಕರಸ್ಥರು ಮತ್ತು ವ್ಯಾಪಾರಸ್ಥರಲ್ಲಿ ಕಡಿಮೆ ಪ್ರಮಾಣದಲ್ಲಿ HIV/AIDS ಯು ಕಂಡುಬಂದಿದ್ದರೆ) ನಿರುದ್ಯೋಗಸ್ಥರಲ್ಲಿ ಎಲ್ಲಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಕಾಣಬಹುದಾಗಿದೆ ಕಾರಣ, ಅವರಿಗೆ ಕೆಲಸ ಕಾರ್ಯದ ಚಿಂತೆಯಿಲ್ಲ ಹಾಗೂ ಕಾಲಹರಣ ಮಾಡಲು ಮನರಂಜನೆಯಲ್ಲಿ ತೊಡಗುವದರಿಂದ ಈ ರೋಗಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಬಲಿಯಾಗುತ್ತಿರುವುದು ಕಂಡುಬಂದಿದೆ.
- ಕೊನೆಯದಾಗಿ ವಿದ್ಯಾರ್ಥಿಗಳಲ್ಲಿ 0.0% ಅಂದರೇ ಅವರಲ್ಲಿ ಯಾವುದೇ ಪ್ರಮಾಣ ಕಂಡುಬಂದಿಲ್ಲ.

### 3. NACO ವರದಿ ಪ್ರಕಾರ ಕರ್ನಾಟಕದಲ್ಲಿ ಅಕ್ಷರಸ್ಥರು ಮತ್ತು ಅನಕ್ಷರಸ್ಥರಲ್ಲಿ ಲೈಂಗಿಕ ರೋಗಗಳು ಮತ್ತು HIV ಪ್ರಮಾಣವು ಬೇರೆ ಬೇರೆಯಾಗಿದೆ

- ಅನಕ್ಷರಸ್ಥರಲ್ಲಿ ರೋಗದ ಪ್ರಮಾಣವು, ಆಗ ತಾನೇ ಸೋಂಕಿನ ರೂಪದಲ್ಲಿ ಹರಡಿದ್ದು 1.7% ಇದ್ದರೇ, ಲೈಂಗಿಕ ರೋಗದ ಪ್ರಮಾಣ 20.8% ಇದೆ. ಪುರುಷರು ಮತ್ತು ಮಹಿಳೆಯರಲ್ಲಿ ಇದರ ಪ್ರಮಾಣವನ್ನು ಬೇರ್ಪಡಿಸಿ ನೋಡಿದಾಗ ಲೈಂಗಿಕ ರೋಗಗಳ ಪ್ರಮಾಣವು ಪುರುಷರಲ್ಲಿ 24.4% ಇದ್ದರೆ ಮಹಿಳೆಯರಲ್ಲಿ 19.3% ರಷ್ಟು ಇರುವುದರ ಬಗ್ಗೆ 2004ರ ಅಂಕಿಸಂಖ್ಯೆಯ ಪ್ರಕಾರ ವರದಿಯಾಗಿದೆ.
- ಅನಕ್ಷರಸ್ಥರಲ್ಲಿ ಇಷ್ಟು ಪ್ರಮಾಣದಲ್ಲಿ ಕಂಡು ಬಂದರೇ 5 ನೇಯ ಕ್ಲಾಸವರೆಗೆ ಓದಿದವರಲ್ಲಿ ಲೈಂಗಿಕ ಸೋಂಕಿನ ಪ್ರಮಾಣ 1.3% ರಷ್ಟಿದ್ದರೆ, ಲೈಂಗಿಕ ರೋಗಗಳ ಪ್ರಮಾಣ 14.6% ರಷ್ಟು ಕಂಡುಬಂದಿದೆ. 5 ನೇಯ ಕ್ಲಾಸ ಓದಿದ ಪುರುಷರಲ್ಲಿ 27.1% ಇದ್ದರೆ ಮಹಿಳೆಯರಲ್ಲಿ 8.3% ರಷ್ಟು ಇರುವುದರ ಬಗ್ಗೆ ವರದಿಯಾಗಿದೆ.
- ಇನ್ನು 6 ನೇಯ ಕ್ಲಾಸನಿಂದ 12 ನೇಯ ಕ್ಲಾಸವರೆಗೂ ಓದಿದವರಲ್ಲಿನ ಸೋಂಕು ರೋಗಿನ ಪ್ರಮಾಣ 1.5% ರಷ್ಟು ಇದ್ದರೆ, ರೋಗ ಹೊಂದಿದವರ ಪ್ರಮಾಣ 14.1% ರ್ಷದೆ. ಅದೇ ರೀತಿ ರೋಗದ ಪ್ರಮಾಣ ಪುರುಷರಲ್ಲಿ 16.9% ಇದ್ದರೆ, ಮಹಿಳೆಯರಲ್ಲಿ 10.2% ಪ್ರಮಾಣವನ್ನು ಕಾಣಬಹುದು.
- ಕೊನೆಯದಾಗಿ ಪದವೀಧರರಲ್ಲಿ ಈ ಲೈಂಗಿಕ ರೋಗದ ಪ್ರಮಾಣವು ಅತಿ ಕಡಿಮೆ ರೂಪದಲ್ಲಿ ಕಾಣಬಹುದಾಗಿದ್ದು ರೋಗದ ಸೋಂಕು ಪ್ರಮಾಣ 0.9% ರಷ್ಟು ಇದ್ದರೆ, ಲೈಂಗಿಕ ರೋಗದ ಪ್ರಮಾಣ 10.2% ರಷ್ಟು ಇದೆ. ಅದೇ ರೀತಿ ಪದವೀಧರ ಪುರುಷರಲ್ಲಿ ರೋಗದ ಪ್ರಮಾಣ 12.3% ಇದ್ದರೆ, ಮಹಿಳೆಯರಲ್ಲಿ 4.9% ರಷ್ಟು ಕಾಣಬಹುದು.

ಕಾರಣ ಅನಕ್ಷರಸ್ಥರಲ್ಲಿ ಆರೋಗ್ಯದ ಬಗ್ಗೆ ಹೆಚ್ಚಿನ ತಿಳುವಳಿಕೆ ಇಲ್ಲದಿರುವುದಕ್ಕಾಗಿ ಅದಕ್ಕಾಗಿ ಅವರಲ್ಲಿ ಈ ರೋಗದ ಪ್ರಮಾಣವನ್ನು ಹೆಚ್ಚಿನ ಮಟ್ಟದಲ್ಲಿ ಕಾಣಬಹುದಾಗಿದೆ. ಹಾಗೇ ಅಕ್ಷರಸ್ಥರಲ್ಲಿ ಶೈಕ್ಷಣಿಕ ಮಟ್ಟ ಮತ್ತು ಆರೋಗ್ಯದ ಬಗ್ಗೆ ಒಳ್ಳೆಯ ತಿಳುವಳಿಕೆಯಿರುವ ಕಾರಣ ರೋಗದ ಪ್ರಮಾಣ ಕಡಿಮೆ ಇದೆ.

### 4. ಕರ್ನಾಟಕದ ಸ್ಥಳಿಯ ಮಟ್ಟವಾದ ಗ್ರಾಮೀಣ ಹಾಗೂ ನಗರ ಪ್ರದೇಶಗಳಲ್ಲಿನ ಲೈಂಗಿಕ ರೋಗಗಳು ಮತ್ತು HIV/AIDS ನ ಪ್ರಮಾಣದ ಬಗ್ಗೆ ತಿಳಿಯುವುದು, ಪುರುಷರಲ್ಲಿ ಹಾಗೂ ಮಹಿಳೆಯರಲ್ಲಿ ಎಷ್ಟರ ಪ್ರಮಾಣದಲ್ಲಿ ಹರಡಿದೆ ಮತ್ತು ಹರಡುತ್ತಿದೆ ಎಂಬುದನ್ನು ತಿಳಿಯುವುದಾಗಿದೆ.

- ನಗರಗಳಲ್ಲಿ ಸೋಂಕು ರೋಗದ ಪ್ರಮಾಣ 1.6% ರಷ್ಟು ಇದ್ದರೆ, ಲೈಂಗಿಕ ರೋಗದ ಪ್ರಮಾಣ 13.5% ಇದೆ. ನಗರದ ಪುರುಷರಲ್ಲಿ 17.3% ಇದ್ದರೆ, ಮಹಿಳೆಯರಲ್ಲಿ 9.8% ಕಾಣಬಹುದಾಗಿದೆ.
- ಗ್ರಾಮೀಣ ಮಟ್ಟದಲ್ಲಿ ಸೋಂಕು ರೋಗದ ಪ್ರಮಾಣ 1.5% ಇದ್ದರೆ, ಲೈಂಗಿಕ ರೋಗದ ಪ್ರಮಾಣ 17.8% ಇದೆ. ಪುರುಷರಲ್ಲಿ 23.5% ಇದ್ದರೆ, ಮಹಿಳೆಯರಲ್ಲಿ 14.0% ರಷ್ಟು ಇರುವುದು 2004ರ ಅಂಕಿಸಂಖ್ಯೆಯ ಪ್ರಕಾರ ವರದಿಯಾಗಿದೆ.

ಕಾರಣ ನಗರದಲ್ಲಿ ವಾಸಿಸುವ ಜನರಿಗೆ ಎಲ್ಲಾ ರೀತಿಯ ಆರೋಗ್ಯದ ಸೌಕರ್ಯಗಳ ಬಗ್ಗೆ ಹಾಗೂ ಉತ್ತಮ ಶಿಕ್ಷಣ ಇರುವುದರಿಂದ ಅವರಲ್ಲಿ ತಿಳುವಳಿಕೆಯು ಇರುತ್ತದೆ. ಅವರು ರೋಗ ಹರಡದಂತೆ ಮುನ್ನೆಚ್ಚರಿಕೆ ವಹಿಸುವುದರ ಜೊತೆಗೆ ರೋಗ ಬಂದ ಮೇಲೆ ಯಾವ ರೀತಿ ಚಿಕಿತ್ಸೆಯನ್ನು ಪಡೆಯಬೇಕು ಎಂಬುದರ ಬಗ್ಗೆಯೂ ತಿಳುವಳಿಕೆ ಇರುವ ಕಾರಣ ಅವರಲ್ಲಿ ರೋಗದ ಪ್ರಮಾಣ ಕಡಿಮೆ ಇದೆ ಆದರೇ ಗ್ರಾಮೀಣ ಮಟ್ಟದಲ್ಲಿ ವಾಸಿಸುವವರಿಗೆ ಶೈಕ್ಷಣಿಕ ಮಟ್ಟ ಕಡಿಮೇ, ಅಲ್ಲಿ ಅನಕ್ಷರಸ್ಥರು ಹೆಚ್ಚಾಗಿರುವುದರಿಂದ ಅವರಿಗೆ ಆರೋಗ್ಯವನ್ನು ಹೇಗೆ

ISSN : 2249-2429

ಕಾಪಾಡಿಕೊಳಬೇಕು ಮತ್ತು ಯಾವ ರೀತಿ ಸುರಕ್ಷಿತವಾಗಿರಬೇಕು ಎಂಬುದರ ಬಗ್ಗೆ ಹೆಚ್ಚಿನ ತಿಳುವಳಿಕೆ ಇಲ್ಲದಿರುವುದೇ ಈ ರೋಗ ಹರಡಲು ಮುಖ್ಯ ಕಾರಣವಾಗಿದೆ.

## 5. ಕರ್ನಾಟಕದಲ್ಲಿ 31 ಮಾರ್ಚ 2006ರ ಸಮೀಕ್ಷೆ ಅಥವಾ ಸಂಶೋಧನೆ ಪ್ರಕಾರ

ಕರ್ನಾಟಕದ ಒಟ್ಟು 5,00,000 ರಷ್ಟು ಜನತೆಯಲ್ಲಿ HIV ಯನ್ನು ಹೊಂದಿದವರ ಪ್ರಮಾಣ 61.708 ಇದ್ದರೆ, AIDS ಹೊಂದಿದವರ ಪ್ರಮಾಣ 9.374 ಇದೆ, ಹಾಗೂ ಕಾಯಿಲೆಯಿಂದ ಸತ್ತವರ ಪ್ರಮಾಣವು 788 ರಷ್ಟು ಇರುವುದು ಮಾರ್ಚ, 31, 2006 ರ ಸಮೀಕ್ಷೆಯಿಂದ ವರದಿಯಾಗಿದೆ.

## ಪರಿಹಾರೋಪಾಯಗಳು

ಕರ್ನಾಟಕ ಸರಕಾರದಿಂದ ಮತ್ತು ಅರೇ ಸರಕಾರೇತರ ಸಂಸ್ಥೆಗಳಿಂದ (NGO) HIV/AIDS ಬಗ್ಗೆ ಹೆಚ್ಚಿನ ತಿಳುವಳಿಕೆಯನ್ನು ಜನರಿಗೆ ಕೊಡುವುದು ಅಂದರೇ, ಗ್ರಾಮೀಣ ಮತ್ತು ನಗರಗಳಿಗೆ ಅನುಗುಣವಾಗಿ ಸ್ಥಳೀಯ ಮಟ್ಟದಲ್ಲಿ ಜನರ ಪ್ರವೃತ್ತಿಗಳು, ಹವ್ಯಾಸಗಳು ಮತ್ತು ಮನೋಭಾವನೆಗಳು ಬದಲಾಗುತ್ತ ಹೋಗುವುದರಿಂದ ಅವರ ಸಾಮಾಜಿಕ ಜೀವನದ ಮೇಲೆ ಇದರ ತುಂಬಾ ಪ್ರಭಾವ ಬೀರಿದೆ.

"ಮಧ್ಯವಯಸ್ಸಿನವರಲ್ಲಿ ಹಲವಾರು ರೀತಿಯ ಚಟುವಟಿಕೆಗಳಿರುವ ಕಾರಣ ಅವರ ಕೆಲಸ ಕಾರ್ಯಗಳಲ್ಲಿ ಆಗಲಿ ಹಾಗೂ ಅವರ ಸ್ವಭಾವದ ರೀತಿ, ನೀತಿಗಳಲ್ಲಿ, ಹವ್ಯಾಸಗಳಲ್ಲಿ, ಇಗೀನ ಮಟ್ಟಿಗೆ ಆಧುನಿಕರಣ ಹೊಂದುತ್ತಿರುವುದರಿಂದ HIV/AIDS ಪ್ರಭಾವವು ತುಂಬಾ ಬೀರಿದೆ. ಸಾಮಾಜಿಕವಾಗಿ ನೋಡಬೇಕಾದರೇ ಕೆಳಮಟ್ಟದ ಜೀವನ ಅಂದರೇ, ಬಡತನ, ಅಪ್ರೌಕತೆ, ರಕ್ತಹೀನತೆಯು ಒಂದು ಮುಖ್ಯ ಕಾರಣವಾಗಿದೆ. ಬಹುಸಂಗಾತಿ ಹೊಂದಿರುವ ಪುರುಷರಲ್ಲಿ ಹಾಗೂ ಸ್ಥಳಿಯ ರೂಢಿಗಳು ಮತ್ತು ಸಂಪ್ರದಾಯಗಳನ್ನು ಹೊತ್ತ ದೇವದಾಸಿಯರಲ್ಲಿ ಮತ್ತು ಹೆಣ್ಣು ಮಕ್ಕಳ ಋತುಸ್ರಾವದ ಸಮಯದಲ್ಲಿ ಸ್ವಚ್ಛತೆಯನ್ನು ಕಾಪಾಡಿಕೊಳ್ಳದೆ ಇರುವ ಕಾರಣದಿಂದಲೂ ಈ ರೋಗ ಹೆಚ್ಚಿನ ರೀತಿಯಲ್ಲಿ ಹರಡಲು ಕಾರಣವಾಗಿದೆ.

ಶೈಕ್ಷಣಿಕವಾಗಿ ಕೆಳಮಟ್ಟ ಹೊಂದಿದ ಅಂದರೇ. ಅಕ್ಷರಜ್ಞಾನ ಇಲ್ಲದ ಜನರಲ್ಲಿ ಆರೋಗ್ಯದ ಬಗ್ಗೆಯು ಸರಿಯಾದ ತಿಳುವಳಿಕೆಯಿರದು ಇದರಿಂದ ಅವರು ಶರೀರದ ಸಂರಕ್ಷಣೆಯನ್ನು ಯಾವ ರೀತಿ ಮಾಡಿಕೊಳ್ಳಬೇಕು ಎನ್ನುವುದರ ಬಗ್ಗೆ ಅರಿವಿರದ ಕಾರಣವೇ ರೋಗ ಹೆಚ್ಚಲು ಮುಖ್ಯವಾಗಿದೆ ಎಂದು ಹೇಳಬಹುದು. ಈ ಮೂರು ಕಾರಣಗಳು "ಕಪ್ಪು ಭೂತವೆಂದು ಹೆಸರು ವಾಸಿಯಾದ ಹಾಗೂ ಮಾಹಾಮಾರಿಯಾದ ಈ ರೋಗ ಹರಡಲು ಬಹು ಮುಖ್ಯವಾದ ಕಾರಣಗಳಾಗಿವೆ.

ಎಲ್ಲಾ ಜನಸಾಮಾನ್ಯರಿಗೆ ತಲುಪುವ ರೀತಿಯಲ್ಲಿ HIV/AIDS ಅಂದರೇ ಏನು, ಅದು ಹೇಗೆ ಬರುತ್ತದೆ ಅದರ ಸೊಂಕು ಯಾವ ರೀತಿ ಮತ್ತು ಅದರ ಲಕ್ಷಣಗಳು ಹೇಗೆ ಇರುತ್ತವೆ ಎಂಬುವುದರ ಬಗ್ಗೆ ಸಂಪೂರ್ಣ ಮಾಹಿತಿಯನ್ನು ಸ್ಥಳಿಯ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಂದ ಹಾಗೂ ಸ್ಥಳೀಯ ಮಟ್ಟದಲ್ಲಿ ಸರಕಾರದ ಅನುದಾನಿತ ಸಂಸ್ಥೆಗಳಿಂದ ಎಲ್ಲಾ ಮನೆ-ಮನೆಗಳಿಗೂ ಹೋಗಿ ಆರೋಗ್ಯ ಸಂರಕ್ಷಣೆಯ ಬಗ್ಗೆ ತಿಳಿಸುವುದು ಮತ್ತು ಅದರ ಜೊತೆಗೆ (ಬೀದಿ ನಾಟಕಗಳು, ರೇಡಿಯೋಗಳ ಮೂಲಕ ಹಾಗೂ ಮಾಸ ಮತ್ತು ದಿನಪತ್ರಿಕೆಗಳ ಮೂಲಕ ಹಾಗೇ ಟಿ.ವಿ ಮಾಧ್ಯಮ, ಚಲನಚಿತ್ರಗಳ ಮೂಲಕ) ಜನರಿಗೆ ಮನದಟ್ಟಾಗುವಂತೆ ಮಾಡುವುದು, ಮತ್ತು HIV/AIDS ಇರುವಂತ ರೋಗಿಗಳಿಗೆ ಸರಕಾರದಿಂದ ಆರೋಗ್ಯ ಸೌಲಭ್ಯಗಳನ್ನು ದೊರಕಿಸಿದರೆ ಅವುಗಳು ಸ್ಥಳಿಯ ಮಟ್ಟದಲ್ಲಿ ಎಲ್ಲಾ ಜನಸಾಮಾನ್ಯರಗೆ ಸರಿಯಾಗಿ ತಲುಪುವಂತೆ ನೋಡಿಕೊಳ್ಳುವುದು. ಲೈಂಗಿಕ ವೃತ್ತಿನಿರತ ಮಹಿಳೆಯರಿಗೆ ಹಾಗೂ ಪುರುಷರಿಗೆ ಆರೋಗ್ಯ ಸಂರಕ್ಷಣೆಯ ಅನುಕೂಲ ಕಲ್ಪಿಸಿಕೊಡುವುದು ಮತ್ತು ಯುವಕ ಯುವತಿಯರು ಮದುವೆಯ ಮುಂಚೆ ಕಡ್ಡಾಯವಾಗಿ HIV/AIDS ಪರೀಕ್ಷೆ ಮಾಡಿಸುವುದು ಮತ್ತು ರೋಗ ಹರಡದಂತೆ ಮುನ್ನೆಚ್ಚರಿಕೆಯ ಕ್ರಮವಾಗಿ ಒಳ್ಳೆಯ ನಿರೋಧ ಹಾಗೂ ಪರೀಕ್ಷಿಸಿದ ರಕ್ತವನ್ನು ಪಡೆಯುವುದು ಮತ್ತು ರೋಗ ಬಂದಿದ್ದರೆ ಸಾಯುವ ಅವಧಿಯನ್ನು ದೂರಮಾಡುವಂತಹ ART (Anty retro therapy) ಎಂಬ ಚಿಕಿತ್ಸೆಯನ್ನು ಪಡೆಯುವುದು ಬಹಳ ಮುಖ್ಯವಾದ ಕ್ರಮವಾಗಿದ್ದು ಇದು ಕಡ್ಡಾಯವಾದಾಗ ಮಾತ್ರ HIV/AIDS ಪ್ರಮಾಣ ಕಡಿಮೆಯಾಗಬಹುದು.

## ಸಮಾರೋಪ

ಒಟ್ಟಿನಲ್ಲಿ ಹೇಳುವುದಾದರೇ HIV/AIDS ಎಂಬ ಮಹಾಮಾರಿ ರೋಗವು ಇಡೀ ಜಗತ್ತಿನಾದ್ಯಂತ ಅತಿ ವಿಶಾಲವಾಗಿ ಹಾಗೂ ವ್ಯಾಪಕವಾಗಿ ಹರಡಿದ ರೋಗವಾಗಿದ್ದು ಇದರ ನಿರ್ಮೂಲನೆಗೆ ಸರಕಾರ ಎಲ್ಲಾ ರೀತಿಯ ಯೋಜನೆಗಳನ್ನು ಹಾಕಿಕೊಂಡಿದ್ದರು ಸಹಿತ ಅದರ ಮಟ್ಟ ಇನ್ನು ಕಡಿಮೆಯಾಗದೇ ದಿನೆ-ದಿನೆ ಬೆಳೆಯುತ್ತಲೇ ಹೋಗುತ್ತಿದೆ ಹಾಗೂ ಅರೇ ಸರಕಾರೇತರ ಸಂಸ್ಥೆಗಳು HIV/AIDS ಬಗೆಗಿನ ಕಾರ್ಯಕ್ರಮಗಳನ್ನು ಕೇಳುವದರ ಮೂಲಕ, ನೋಡುವುದರ ಮೂಲಕ ಹಾಗೂ ಮನೆ-ಮನೆಗೆ ಸ್ವತಹ ಹೋಗಿ ಮಾಹಿತಿ ನೀಡುವುದರ ಮೂಲಕ, ಬೀದಿ ನಾಟಕಗಳು, ಹಾಡುಗಳು, ಲಾವಣಿಗಳು (ಕವನಗಳು) ಮೂಲಕ ತಿಳಿಸಿದರು ಕೂಡ ಅದರ ಪ್ರಭಾವ ಇನ್ನು ಕಡಿಮೆಯಾಗಿಲ್ಲ ಹಾಗೂ HIV/AIDS ನಿರ್ಮೂಲನೆಗೆ ಸರಕಾರವಾಗಲಿ ಹಾಗೂ ಅರೇ ಸರಕಾರೇತರ ಸಂಸ್ಥೆಗಳ ಪ್ರಯತ್ನ ಇನ್ನು ಸಫಲತೆಯನ್ನು ಕಂಡಿಲ್ಲ ಎನ್ನಬಹುದು.

## ಆಕರ ಗ್ರಂಥಗಳು


- www. Naco.nic.in national AIDS control organization (NACO)
- Ministry of health and family welfare, by IEC, government of India
- Karnataka state AIDS prevention society Bangalore-1
- UNISEFE Report on HIV/AIDS 2002
- ರಾಷ್ಟ್ರೀಯ ನಿಯಂತ್ರಣ ಸಂಸ್ಥೆ : ಸ್ವಾಸ್ಥ್ಯ ಹಾಗೂ ಕುಟುಂಬ ಕಲ್ಯಾಣ ಮಂತ್ರಾಲಯ ಭಾರತ ಸರಕಾರ.


■■

ISSN : 2249-2429
ಸೈದ್ಧಾಂತಿಕ

# ಕರ್ನಾಟಕದಲ್ಲಿ ರಾಜಕೀಯ ನಾಯಕತ್ವ

✍ **ಶ್ರೀನಿವಾಸ ಎಚ್. ಕೊಪ್ಪಳ,** ಸಹಾಯಕ ರಾಜ್ಯಶಾಸ್ತ್ರ ಉಪನ್ಯಾಸಕರು, ಸರಕಾರಿ ಪ್ರಥಮ ದರ್ಜೆ ಕಾಲೇಜು, ಕುಂದಗೋಳ (ಧಾರವಾಡ)
✍ **ಎಂ. ಜಿ. ಖಾನ,** ರಾಜ್ಯಶಾಸ್ತ್ರ ಉಪನ್ಯಾಸಕರು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

## ಪ್ರಸ್ತಾವನೆ

ಸಂಸದೀಯ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ರಾಜಕೀಯ ಪಕ್ಷಗಳ ಪಾತ್ರ ಅತ್ಯಂತ ಮಹತ್ವದ್ದಾಗಿರುತ್ತದೆ. ಶಾಸನಸಂಸ್ಥೆ ಅಂದರೆ ಶಾಸನಸಭೆ ವಿಧಾನ ಸಭೆ ಅಥವಾ ಪ್ರಜಾಪ್ರತಿನಿಧಿ ಸಭೆಎಂಬುದು ರಾಜಕೀಯ ಪಕ್ಷಗಳಿಗೆ ಅಧಿಕಾರ ಪಡೆಯುವ ಪ್ರಮುಖ ಕೇಂದ್ರವಾಗಿರುತ್ತದೆ. ಈ ಅಧಿಕಾರ ಪಡೆಯುವಲ್ಲಿ ರಾಜಕೀಯ ಪಕ್ಷಗಳ ಸಾರ್ವತ್ರಿಕ ಶಾಸನಸಭಾ ಚುನಾವಣೆಗಳನ್ನು ಸಾಧನವನ್ನಾಗಿ ಮಾಡಿಕೊಂಡು ರಾಜ್ಯದ ಆಡಳಿತಾಧಿಕಾರವನ್ನು ಪಡೆಯುತ್ತಿದೆ. ಚುನಾವಣೆಯಲ್ಲಿ ರಾಜ್ಯದ ಪ್ರಜೆಗಳಿಗೆ ಪಕ್ಷದ ಚುನಾವಣಾ ಪ್ರಣಾಳಿಕೆ ಮೂಲಕ ಪಕ್ಷದ ಅಭ್ಯರ್ಥಿಗಳ ಗೆಲುವಿಗಾಗಿ ಪ್ರಚಾರ ಮಾಡಿ ಪಕ್ಷದ ಅಭ್ಯರ್ಥಿಗಳು ಅಧಿಕ ಸಂಖ್ಯೆಯಲ್ಲಿ ಜಯ ಗಳಿಸುವಂತೆ ಮಾಡುತ್ತವೆ. ರಾಜ್ಯ ವಿಧಾನಸಭೆಯ ಸಾರ್ವತ್ರಿಕ ಚುನಾವಣೆಯಲ್ಲಿ ಬಹುಮತ ಪಡೆದ ರಾಜಕೀಯ ಪಕ್ಷ ಅಥವಾ ಗುಂಪು ತನ್ನ ಶಾಸಕಾಂಗ ಪಕ್ಷದ ನಾಯಕನನ್ನು ಆಯ್ಕೆ ಮಾಡುವುದು ಪಕ್ಷ ಪದ್ಧತಿಯ ಪ್ರತೀಕವಾಗಿರುತ್ತದೆ. ಆಯ್ಕೆಯಾದ ನಾಯಕನು ಸರಕಾರ ರಚಿಸುವ ಅವಕಾಶ ನೀಡುವಂತೆ ಸಂವಿಧಾನದ ಪ್ರಮುಖರಾದ ರಾಜ್ಯಪಾಲರಲ್ಲಿ ಪ್ರತಿಪಾದಿಸುತ್ತಾನೆ. ಆಗ ರಾಜ್ಯಪಾಲರು ಆಯ್ಕೆಯಾದ ಧುರೀಣನಿಗೆ ಸರಕಾರ ರಚಿಸಲು ಆಹ್ವಾನಿಸಿ ಮುಖ್ಯಮಂತ್ರಿಯಾಗಿ ನೇಮಕ ಮಾಡುತ್ತಾರೆ ಇದು ಸಂಸದೀಯ ನಿಯಮ.

## ನಾಯಕತ್ವದ ಅರ್ಥ

ನಾಯಕತ್ವವು ಮಾನವ ಸಮಾಜದ ಅವಿಭಾಜ್ಯ ಅಂಗವಾಗಿದೆ. ಮಾನವನ ಪ್ರತಿಯೊಂದು ಸಂಘಟನೆಯಲ್ಲಿ ಒಂದಿಲ್ಲೊಂದು ಕಾರಣಕ್ಕೆ ನಾಯಕತ್ವದ ಅವಶ್ಯವೆನಿಸುತ್ತದೆ. ನಾಯಕತ್ವವೆಂಬ ಸಾಧನವಿಲ್ಲದೆ ಮಾನವರ ಚಟುವಟಿಕೆಗಳನ್ನು ಸಂಘಟಿಸುವದು ಹಾಗೂ ಮುನ್ನಡೆಸಿಕೊಂಡು ಹೋಗುವದು ಕಠಿಣವಾದದ್ದಾಗಿದೆ. ಎಲ್ಲ ಬಗೆಯ ಸಂಘ, ಸಂಸ್ಥೆಗಳ ವೈಜ್ಞಾನಿಕ ಕಾರ್ಯನಿರ್ವಹಣೆಗೆ ಪರಿಣಾಮಕಾರಿಯಾದ ಹಾಗೂ ನಿಷ್ಣಾತತನವುಳ್ಳ ನಾಯಕತ್ವಬೇಕು.

ಶಬ್ಧಕೋಶದ ಅರ್ಥದ ಅನ್ವಯ Leadership ಎಂಬ ಇಂಗ್ಲೀಷ ಪದವು Lead ಎಂಬ ಪದದಿಂದ ರೂಪಿತವಾಗಿದ್ದು, ಅದರ ಅರ್ಥ ಮುಂದಾಳತ್ವ ವಹಿಸುವದು, ಪ್ರಮುಖಸ್ಥಾನ ಪಡೆಯುವದು, ಅಧಿಕಾರ ವುಳ್ಳವನಾಗಿರಬಹುದು ಎಂಬ ಅಂಶಗಳನ್ನು ಸೂಚಿಸುತ್ತದೆ. ''ನಾಯಕತ್ವದ ಅರ್ಥವನ್ನು ಸಮಾಜ ವಿಜ್ಞಾನಿಗಳು ವಿವಿಧ ಪ್ರಕಾರಗಳಲ್ಲಿ ವ್ಯಾಖ್ಯಾನಿಸಿದ್ದಾರೆ.''

''ಸಾಮಾನ್ಯ ಅರ್ಥದಲ್ಲಿ ನಾಯಕತ್ವವನ್ನು 'ಶ್ರೇಷ್ಠ ಅಧಿಕಾರ ಸ್ಥಾನ' ಅಥವಾ 'ಸಾಮಾಜಿಕ ಶ್ರೇಷ್ಠತೆ' ಎಂದು ಕರೆಯಲಾಗಿದೆ. ನಾಯಕತ್ವವೆಂದರೆ ಜನರ ಮೇಲೆ, ಬೀರುವ ಪ್ರಭಾವ ಅಥವಾ ಸಾಮರ್ಥ್ಯವಾಗಿದೆ. ಅದರಂತೆ ''ನಾಯಕತ್ವವು

ಒಬ್ಬ ಶ್ರೇಷ್ಠ ವ್ಯಕ್ತಿ ಹಲವು ಸಾಮೂಹಿಕ ಹಿತಾಸಕ್ತಿಗಳಿಗಾಗಿ ಜನ ಸಮೂದಾಯದ ಮೇಲೆ ಪ್ರಭಾವ ಬೀರುವ ಕ್ರಿಯೆಯಾಗಿದೆ.''

ಸಿ. ಕೆ. ಆಲೆನ್ ಅವರ ಅನ್ವಯ ''ಸಾಮೂಹಿಕ ಗುರಿಗಳನ್ನು ಸಾಧಿಸಲು ಜನರನ್ನು ಸಹಕರಿಸುವಂತೆ ಮಾಡಲು ಇರುವ ವ್ಯವಸ್ಥೆ ನಾಯಕತ್ವವಾಗಿದೆ.'' ಓರ್ವೆ ಟೀಡ ಅವರು ''ಜನರು ಬಯಸುವ ಗುರಿಗಳನ್ನು ಮುಟ್ಟಲು ಅವರ ಸಹಕಾರ ಪಡೆಯಲು ಬೀರುವ ಪ್ರಭಾವದ ಕ್ರಿಯೆಯನ್ನು ನಾಯಕತ್ವವೆಂದು ವ್ಯಾಖ್ಯಾನಿಸಿದ್ದಾರೆ.''

ಈ ಎಲ್ಲ ಅಭಿಪ್ರಾಯಗಳನ್ನು ಗಮನಿಸಿದಾಗ ''ನಿಜವಾದ ನಾಯಕತ್ವವನ್ನು ಸೇವೆಯ ಮೂಲಕ ಗುರುತಿಸಲಾಗುವದು ಆದರೆ ಪ್ರಭುತ್ವವನ್ನು ತೋರುವ ಮೂಲಕ ಅಲ್ಲ'' ಎಂಬುದು ಕಂಡುಬರುತ್ತದೆ. ಒಟ್ಟಿನಲ್ಲಿ, ನಾಯಕರು ತಮ್ಮ ಖಾಸಗಿ ಇಲ್ಲವೆ ಸಾರ್ವಜನಿಕ ಜೀವನದಲ್ಲಿ ಅನೇಕ ವಿಧದಲ್ಲಿ ಬೇರೊಬ್ಬರಿಗೆ ಮಾರ್ಗದರ್ಶನ ನೀಡುತ್ತಾರೆ, ಉಪದೇಶಿಸುತ್ತಾರೆ, ನಿರ್ದೇಶಿಸುತ್ತಾರೆ, ಬೋಧನೆ ಮಾಡುತ್ತಾರೆ ಹಾಗೂ ಪ್ರಭಾವ ಬೀರುತ್ತಾರೆ.

## ಕರ್ನಾಟಕ ರಾಜ್ಯದಲ್ಲಿ ರಾಜಕೀಯ ನಾಯಕತ್ವ

ಕರ್ನಾಟಕ ರಾಜ್ಯವು ಭಾರತದ ರಾಜಕಾರಣದಲ್ಲಿ ತನ್ನದೇ ಆದ ಕೊಡುಗೆಯನ್ನು ನೀಡಿದೆ. ರಾಜ್ಯದ ರಾಜಕೀಯ ನಾಯಕರುಗಳು ತಮ್ಮ ವಿಶಿಷ್ಟ ಮತ್ತು ರಾಜಕೀಯ ನೈಪುಣ್ಯತೆಯಿಂದ ಸಾಧನೆಗೈದು ರಾಜ್ಯ ರಾಜಕಾರಣದಿಂದ ಹಿಡಿದು ರಾಷ್ಟ್ರ ರಾಜಕಾರಣದವರೆಗೆ ಹೆಸರು ಮಾಡಿದ್ದಾರೆ. ಆದ್ದರಿಂದ ಕರ್ನಾಟಕ ರಾಜ್ಯವು ಅನೇಕ ರಾಜಕೀಯ ನಾಯಕರುಗಳಿಗೆ ತವರೂರಾಗಿದೆ ಎಂದು ಹೇಳಿದರೆ ತಪ್ಪಾಗಲಾರದು. ರಾಜ್ಯದ ಅಂದಿನ (ಮೈಸೂರ ರಾಜ್ಯ) ಮುಖ್ಯಮಂತ್ರಿಗಳಾಗಿದ್ದ ಕೆ. ಸಿ. ರೆಡ್ಡಿ ಕೆಂಗಲ್ ಹನುಮಂತಯ್ಯ, ಕಡಿದಾಳ್ ಮಂಜಪ್ಪ, ಎಸ್. ನಿಜಲಿಂಗಪ್ಪ, ಬಿ. ಡಿ ಜತ್ತಿ ಎಸ್. ಆರ್. ಕಂಠಿ, ವಿರೇಂದ್ರ ಪಾಟೀಲ್, ಡಿ. ದೇವರಾಜ ಅರಸ್, ಗುಂಡೂರಾವ್. ಎಂ. ರಾಮಕೃಷ್ಣ ಹೆಗಡೆ, ಎಸ್. ಆರ್. ಬೋಮ್ಮಾಯಿ, ಎಸ್. ಬಂಗಾರಪ್ಪ, ಎಂ. ವೀರಪ್ಪಮೊಯಿಲಿ, ಹೆಚ್. ಡಿ. ದೇವೆಗೌಡ, ಜೆ. ಎಚ್. ಪಟೇಲ್, ಎಸ್. ಎಮ್. ಕೃಷ್ಣ ಎಂ. ಧರ್ಮಸಿಂಗ, ಹೆಚ್. ಡಿ. ಕುಮಾರಸ್ವಾಮಿ, ಬಿ. ಎಸ್. ಯಡಿಯೂರಪ್ಪ, ಸದಾನಂದಗೌಡ ಮತ್ತು ಜಗದೀಶ ಶೆಟ್ಟರ, ಹಾಗೂ ಇಂದಿನ ಮುಖ್ಯ ಮಂತ್ರಿ ಸಿದ್ಧರಾಮಯ್ಯ ಮುಂತಾದ ರಾಜಕೀಯ ನಾಯಕರುಗಳನ್ನು ನಾಡಿಗೆ ಪರಿಚಯಿಸಿದ ಕರ್ನಾಟಕದ ರಾಜಕೀಯದ ಹಿರಿಮೆ ಅವಿಸ್ಮರಣೀಯವಾದುದು.

ಸ್ವತಂತ್ರ ಭಾರತವು ರಾಜಕೀಯ ನಾಯಕರ ಹಾಗೂ ರಾಜ್ಯ ನಿಪುಣರ ಕೊರತೆಯನ್ನು ಅನುಭವಿಸಿಲ್ಲ ಸಮಯ ಸಂದರ್ಭಕ್ಕನುಸಾರವಾಗಿ ಹಲವಾರು ವ್ಯಕ್ತಿಗಳು ನಾಯಕರಾಗಿ ಹೊರಹೊಮ್ಮಿದ್ದಾರೆ. ಆದರೆ ರಾಜಕೀಯ ರಂಗದಲ್ಲಿದ್ದವರೆಲ್ಲರು ನಾಯಕರಾಗಿಲ್ಲ, ಕೆಲವೇ ಕೆಲವು ರಾಜಕೀಯ ನಾಯಕರು ಜನತೆಗೆ ಸಲ್ಲಿಸಿದ ಅಮೂಲ್ಯ ಸೇವೆಯಿಂದಾಗಿ ಜನಮನದಲ್ಲಿ ಉಳಿದಿದ್ದಾರೆ. ''ಹಲವಾರು ರಾಜಕಾರಣಿಗಳು ರಾಜಕೀಯ ಅಧಿಕಾರಕ್ಕೆ ವಿಶೇಷ ಪ್ರಾಶಸ್ತ್ಯ ನೀಡಿ, ಉನ್ನತ ಸ್ಥಾನಮಾನಗಳನ್ನು ಪಡೆಯಲು, ಸಂಪತ್ತನ್ನು ಸಂಗ್ರಹಿಸಲು ಹಾಗೂ ಸ್ವಾರ್ಥ ಸಾಧನೆಗಾಗಿ ದೂರದೃಷ್ಟಿತ್ವ ಇಲ್ಲದೇ ಕಾರ್ಯಮಾಡುತ್ತ ಬಂದಿದ್ದಾರೆ.

ISSN : 2249-2429

''ತಮ್ಮ ಪ್ರದೇಶದ ಜನರ ಬೇಡಿಕೆಗಳನ್ನು ಪೂರೈಸಲು, ಅವರ ಹಿತಾಸಕ್ತಿಗಳನ್ನು ರಕ್ಷಿಸಲು ಯಾವ ಬಗೆಯ ಅಧಿಕಾರವನ್ನು ಹಾಗೂ ಪ್ರಚಾರವನ್ನು ಆಪೇಕ್ಷಿಸದೇ ತಮ್ಮ ಅಮೂಲ್ಯವಾದ ಜೀವನವನ್ನೇ ತ್ಯಾಗ ಮಾಡಿದ ರಾಜಕೀಯ ನಾಯಕರ ಕೊಡುಗೆಗಳನ್ನು ಅರಿತುಕೊಳ್ಳುವಲ್ಲಿ, ಮೆಚ್ಚುಗೆ ವ್ಯಕ್ತಪಡಿಸುವುದರಲ್ಲಿ ಹಾಗೂ ಮೌಲ್ಯಮಾಪನ ಮಾಡುವದರಲ್ಲಿ ಕರ್ನಾಟಕ ತನ್ನ ಪ್ರಾಮಾಣಿಕ ಪ್ರಯತ್ನವನ್ನು ಮಾಡದಿರುವದು ಬೇಸರವನ್ನುಂಟು ಮಾಡುವ ಸಂಗತಿಯಾಗಿದೆ.''

## ನಾಡು ಮೆಚ್ಚಿದ ಜನನಾಯಕ

ಎಚ್. ಕೆ. ಪಾಟೀಲರು ಕನ್ನಡ ನಾಡು ಕಂಡ ಬಲು ಅಪರೂಪದ ರಾಜಕಾರಣಿಯಾಗಿದ್ದಾರೆ ಹಳ್ಳಿಯಲ್ಲಿ ಜನಿಸಿ ಸಾರ್ವಜನಿಕ ಜೀವನ ಪ್ರವೇಶಿಸಿದ ಪಾಟೀಲ ಶಾಸಕರಾಗಿ, ಸಚಿವರಾಗಿ, ಸಹಕಾರಿ ಕ್ಷೇತ್ರದ ರೂವಾರಿಯಾಗಿ, ಸಮಷ್ಠಿಯ ಹಿತಕ್ಕಾಗಿ ಸಾಧಿಸಿದ್ದು ಅನನ್ಯ, ಅಪಾರ. ಅದಕ್ಕಾಗಿಯೇ ಅವರು ನಾಡು ಮೆಚ್ಚಿನ ನಾಯಕರೆನಿಸಿದ್ದಾರೆ. ಪಾಟೀಲರದ್ದು ಹೋರಾಟ, ಸಂಘರ್ಷ, ವೈವಿಧ್ಯೆತೆಗಳಿಂದ ಕೂಡಿದ ವರ್ಣರಂಜಿತ ಬದುಕು. ಮಾಡಬಲ್ಲವರು ಮಾಡುತ್ತಾರೆ, ಮಾಡಲರಿಯದವರು ಮಾತನಾಡುತ್ತಾರೆ. ಪಾಟೀಲರು ಮೊದಲನೇ ವರ್ಗಕ್ಕೆ ಸೇರಿದವರು. ಮನುಷ್ಯ ಎಷ್ಟರ ಮಟ್ಟಿಗೆ ಒಳ್ಳೆಯದಕ್ಕಾಗಿ ಸರ್ವ ಹಿತಕ್ಕಾಗಿ, ಸಮಷ್ಠಿಗಾಗಿ ದುಡಿಯುತ್ತಾನೆಯೋ ಅಷ್ಟರ ಮಟ್ಟಿಗೆ ಆತ ದೊಡ್ಡವನಾಗುತ್ತಾನೆ. ಪಾಟೀಲರ ಜೀವನ ನೋಡಿದಾಗ ಅದು ನಿಜವೆನಿಸುವದು. ಅವರ ವಿರೋಧಿಗಳು ಸಹ ಬೆಕ್ಕಸ ಬೆರಗಾಗುವಂತೆ ಕೆಲಸ ಮಾಡಿದ್ದಾರೆ. ಕೈಯಲ್ಲಿ ಅವರೆಂದೂ ಸೋತವರಲ್ಲ, ಸೋಲು ಎಂಬ ಪದ ಸೋಲಿಸಿದ ಧೀಮಂತ. ಪಾಟೀಲರು ವ್ಯವಹಾರಿಕ ಅರ್ಥದ ರಾಜಕಾರಣಿಯಾಗಿರಲಿಲ್ಲ, ಅವರೊಬ್ಬ ದಾರ್ಶನಿಕ ಧುರೀಣರಾಗಿದ್ದಾರೆ ರಾಜಕಾರಣಿ ಮುಂದಿನ ಚುನವಣೆ ಬಗ್ಗೆ ಯೋಚಿಸಿದರೆ ದಾರ್ಶನಿಕ ಮುಂದಿನ ಜನಾಂಗದ ಬಗ್ಗೆ ಯೋಚಿಸುತ್ತಾನೆ. ಅವರ ದೃಷ್ಟಿ ಸದಾ ಭವಿಷ್ಯತ್ತನ್ನು ಉತ್ತಮಗೊಳಿಸುವುದಾಗಿದ್ದಿತು. ಅವರ ಗುರಿ ಸದಾ ರೈತರ ಹಿತ ಕಾಪಾಡುವುದಾಗಿದ್ದಿತು. ಅವರ ಆಶಯ ಶೋಷಣೆ ಮುಕ್ತಸಮಾಜ ನಿರ್ಮಾಣ ಮಾಡುವದಾಗಿದ್ದಿತು. ತಮ್ಮ ಆದರ್ಶಗಳಿಂದಾಗಿ ಅವರು ಇತರರಿಗೆ ಅನುಕರಣೀಯರಾಗಿದ್ದಾರೆ ತಮ್ಮ ಕರ್ಮದಿಂದ ಅವರು ಕಾಯಕಯೋಗಿಯಂತಹ ಜೀವನ ನಡೆಸುತ್ತಿದ್ದಾರೆ ಅವರು ಅಲಂಕರಿಸಿದ ಸ್ಥಾನಗಳು ದೊಡ್ಡತನ ಅನುಭವಿಸುವಂತೆ ಮಾಡಿದ ಚಿಂತಕರು, ಪಾಟೀಲ, ಆದಿಯಿಂದ ಅಂತ್ಯದವರೆಗೂ ಅಪ್ಪಟ ಹಳ್ಳಿಯ ವ್ಯಕ್ತಿ, ಹಳ್ಳಿಯ ನಿಷ್ಠುರತೆ, ಸತ್ಯಸಂಧತೆ, ಸರಳತೆ, ಧೈರ್ಯ, ಮುನ್ನುಗುವ ಮನೋಭಾವ, ಲಾಭ ಹಾನಿಯ ಲೆಕ್ಕಾಚಾರ ಹಾಕದ ಮುಗ್ಧತೆ ಅವರ ಜೀವನದಲ್ಲಿ ಹಾಸುಹೊಕ್ಕಾಗಿವೆ. ಭಯಗೊಂಡರೆ ಜಯವಿಲ್ಲವೆನ್ನುವ ಪಾಟೀಲರು ಅಂಜಿ ಅಂಜಿ ದಿನವೂ ಸಾಯುದಕ್ಕಿಂತ ಧೈರ್ಯದಿಂದ ಹೋರಾಡಿ ಬದುಕಬೇಕೆನ್ನುತ್ತಿದ್ದರಲ್ಲದೇ, ಧೈರ್ಯವೊಂದಿದ್ದರೆ ದೇವರನ್ನು ಸಹ ಗೆಲ್ಲಬಹುದೆಂದು ಹೇಳುತ್ತಾರೆ, ಆಪತ್ತುಗಳನ್ನು ಎದುರಿಸಲು ಆತ್ಮವಿಶ್ವಾಸವಿರಬೇಕೆನ್ನುತ್ತಾರೆ. ನಾವು ಮಾಡುವ ಕೆಲಸದಿಂದ ಜನಹಿತ ಸಾಧಿಸುತ್ತಿದ್ದರೆ ಭಗವಂತನಿಗೂ ಅಂಜಬೇಕಾಗಿಲ್ಲ ಅವರದು ಅಪ್ಪಟ ನಿರ್ಭೀತ ಬದುಕು, ಭಯ ಅವರ ಸಮೀಪ ಸುಳಿಯುವ ಧೈರ್ಯವೆಂದು ಮಾಡಿಲ್ಲ.

ಪಾಟೀಲರು ಆಡಳಿತದಲ್ಲಿ ನಿಪುಣರು, ಸಂಘಟಣೆಯಲ್ಲಿ ಚತುರರು, ಶಾಸಕರಾಗಿ, ಸಚಿವರಾಗಿ ಅದನ್ನು ಸಾಭೀತು ಪಡಿಸಿದರು ಛಲದಂಕಮಲ್ಲರಾಗಿದ್ದುದು, ಅವರ ವ್ಯಕ್ತಿತ್ವದ ವಿಶೇಷ. ಅನ್ಯಾಯವೆನಿಸಿದಾಗ ಅದರ ವಿರುದ್ಧ ಹೋರಾಡಲು ತುದಿಗಾಲ ಮೇಲೆ ನಿಲ್ಲುವುದು ಅವರ ಜಾಯಮಾನವಾಗಿದೆ.

ತಮಗೆ ಸರಿ ಎಂದು ಕಂಡು ಬಂದುದನ್ನು ಮಾಡುವಾಗ ಅವರೆಂದು ತಮ್ಮ ಜೊತೆಗೂಡಲು ಬೇರೆಯವರಿಗೆ ಕಾದವರಲ್ಲ ಇನ್ನೊಬ್ಬರ ಬೆಂಬಲಕ್ಕಾಗಿ ಹಾದಿ ನೋಡಿದವರಲ್ಲ, ಎರಡು ಗುಂಪುಗಳಲ್ಲಿ ಕಾಲಿಟ್ಟು ಮುಚ್ಚು ಮರೆ ರಾಜಕಾರಣ ಮಾಡುವವರಲ್ಲ ಸುಳ್ಳು ಭರವಸೆ ನೀಡಿ ಅನುಯಾಯಿಗಳನ್ನು ಓಲೈಸುವವರಲ್ಲ. ರೊಟ್ಟಿಯ ಯಾವ ಭಾಗಕ್ಕೆ ತುಪ್ಪ ಹಚ್ಚಿದೆ ಎಂದು ರೊಟ್ಟಿ ಹಿಡಿದು ಪರೀಕ್ಷಿಸುವವರಲ್ಲ ತಮಗೆ ಅನ್ಯಾಯವಾಗಿದೆ ಎಂದೆನಿಸಿದಾಗ ತಮ್ಮ ಆತ್ಮ ಗೌರವ ಕಾಪಾಡಿಕೊಳ್ಳಲು ತಮ್ಮ ಸಮರ ತಾವೇ ನಡೆಸುವವರು. ಪಾಟೀಲರದ್ದು ಗೌಡಕಿ ಈ ಮನೆತನಕ್ಕೆ ಅಹಂ ತಂದಿಲ್ಲ, ಸೇವಾಭಾವ ತಂದಿದೆ ಇತರರಿಗೆ ನೇರವಾಗುವದೇ ಈ ಮನೆತನದ ಸಿರಿತನ. ತಮಗಾಗಿ ಬದುಕುವದಕ್ಕಿಂತ ಇತರರಿಗಾಗಿ ಬದುಕುವುದೇ ಶ್ರೇಷ್ಠ ಎಂಬುದನ್ನು ಕೆಲಸಗಳಿಂದ ಮಾಡಿ ತೋರಿಸಿದ್ದಾರೆ.

ಕೆ. ಎಚ್. ಪಾಟೀಲ ಪುತ್ರ ಎಚ್. ಕೆ. ಪಾಟೀಲ ಇಂದು ನಾಡಿನ ಪ್ರತಿಭಾನ್ವಿತ ಜನನಾಯಕರಾಗಿದ್ದಾರೆ ಎಚ್. ಕೆ. ಪಾಟೀಲರಿಗೆ ಸದಾ ಕೆಲಸ ಬೇಕು, ಕೆಲಸ ಹುಡುಕಿ ಕೆಲಸ ಮಾಡುವ ಗುಣ ಹಿಡಿದ ಕೆಲಸ ಸಾಧಿಸುವ ಛಲಗಾರಿಕೆ ಸಮಾಜದ ಅತ್ಯಂತ ಕೆಳಹಂತದ ಜನರ ಬದುಕನ್ನು ಸುಧಾರಿಸುವ ಹಂಬಲವಿಟ್ಟುಕೊಂಡಿದ್ದಾರೆ.

## ಸಮಾರೋಪ

ಪಾಟೀಲರು ಸಾಧಿಸಿದ್ದು ಅಪಾರ ಪ್ರತಿಭೆಯಲ್ಲಿ, ಪಾಂಡಿತ್ಯದಲ್ಲಿ, ಸಂಘಟನಾಚಾತುರ್ಯದಲ್ಲಿ, ಆಡಳಿತ ಕೌಶಲ್ಯದಲ್ಲಿ, ಲೋಕಾನುಭವದಲ್ಲಿ, ಪರೋಪಕಾರದಲ್ಲಿ, ಪ್ರಗತಿಪರ ಮನೋಭಾವದಲ್ಲಿ, ಬಡವರ ಸೇವೆಯಲ್ಲಿ, ಕರ್ತವ್ಯ ನಿಷ್ಠೆಯಲ್ಲಿ, ವಾಗ್ಮಿತೆಯಲ್ಲಿ, ಎಲ್ಲಕ್ಕೂ ಹೆಚ್ಚಾಗಿ ಸಹಕಾರ ತತ್ವದಲ್ಲಿ ಅವರು ಹೊಂದಿದ ಅಚಲ ವಿಶ್ವಾಸದಲ್ಲಿ ಪಾಟೀಲರನ್ನು ಹೋಲುವ ವ್ಯಕ್ತಿಗಳು ದೊರೆಯಲಾರರು. ಪಾಟೀಲರ ಉಸಿರೇ ಸಹಕಾರ. ರೈತನೇ ಹೃದಯ. ಗ್ರಾಮ ಹಾಗೂ ಕೃಷಿ ಅವರ ಎರಡು ಶ್ವಾಸಕೋಶಗಳು. ಕೈಗಾರಿಕೆ ಹಾಗೂ ಶಿಕ್ಷಣ ಅವರ ಕಣ್ಣುಗಳು ರಚನಾತ್ಮಕ ಕೆಲಸಗಳೇ ಅವರ ಕಾಲು. ಅವಿಶ್ರಾಂತ ಶ್ರಮ ಅವರ ಬಲಿಷ್ಠ ಬಾಹುಗಳು ಅದರ ನಿಲುವು ಛಲದ್ದು, ಅವರ ಬದುಕು ಸಂಘರ್ಷದ್ದು, ಶೋಷಣೆಗೆ ರಹಿತ ಸಮಾಜ ಕಟ್ಟುವ ಸುಂದರ ಕನಸುಗಾರ. ಅವರ ಗುರಿ ಶೋಷಣೆ ಮುಕ್ತ ಗ್ರಾಮೀಣ ಬದುಕು. ಅವರಿಗೆ ರಾಜಕೀಯ ಒಂದು ಸಾಧನವಾಗಿದ್ದಿತೇ ಹೊರತು, ಅದೇ ಗುರಿಯಾಗಲಿಲ್ಲ, ಅವರ ನರನಾಡಿನಲ್ಲಿ ಹರಿದಿದ್ದು ಇಲ್ಲದವರ ಬಗ್ಗೆ ಮಾನವೀಯ ಅನುಕಂಪ, ಮಾತು ಒರಟು ಮನಸ್ಸು ಮೃದು.

## ಆಕರ ಗ್ರಂಥಗಳು


- ಶೇಷಾದ್ರಿ ಹೂವೆ : 'ಬಾಗಿಲು 12, ಭವಿಷ್ಯದ ಕೈದೀಪ, ಪುಟ–545
- ಸದನದಲ್ಲಿ ಕೆ. ಎಚ್. ಪಾಟೀಲ : ದೃಷ್ಠಿ–ಸಮಷ್ಠಿವಾಗಿ ಸೃಷ್ಟಿ, ಕುವೆಂಪು ವಿಶ್ವವಿದ್ಯಾಲಯ ಶಿವಮೊಗ್ಗ ಸಂಪುಟ–2, 2007
- Faida, Babulal, State Politics in India, Vol. I, Radiant Publishers, New Delhi, 1984, P.31
- Jennings E.E., An Anatomy of Leadership, Harper & Company, New York, 1960, P.31
- Bhagawan Vishnoo Bhushan Vidya, Public Administration, S, Chand & company, New Delhi, 2003, P. 214
- Allen C. K., Law and Orders, Quoted in Bhagawan Vishnoo Bhushan Vidya, Opcit, P. 177
- Orway Tead, The Art of Leadership, Mc Graw Hill Company, New York, 1935, P. 20
- Taylor J. W., How to Select and Develop Leaders, McGraw Hill Book Company, Landon, 1962, P. 6


■■

ISSN : 2249-2429
ಸೈದ್ಧಾಂತಿಕ

# ಕರ್ನಾಟಕ ಚರಿತ್ರೆಯಲ್ಲಿ ಸೂಳೆ ಸಮಾಜ

✍ **ಪ್ರೊ. ಬಿ.ಎನ್. ತಾರಾ,** ಸಹ ಪ್ರಾಧ್ಯಾಪಕರು, ಕೆ. ಎಲ್. ಇ. ಸಂಸ್ಥೆಯ ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯ, ಗದಗ.
✍ **ಡಾ. ಆರ್. ಸುನಂದಮ್ಮ,** ಮುಖ್ಯಸ್ಥರು, ಮಹಿಳಾ ಅಧ್ಯಯನ ಕೇಂದ್ರ, ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯ, ಬಿಜಾಪೂರ.

ಜಗತ್ತಿನ ಇತಿಹಾಸ ಪುನರಾವಲೋಕಿಸಿ ನೋಡಿದಾಗ ಸ್ತ್ರೀ ನಡೆದು ಬಂದ ದಾರಿ ಕ್ರಮಿಸಿದ ಮಾರ್ಗ ಅತ್ಯಂತ ದುರ್ಗಮವಾದುದು. ಅವಳಿಗಿರುವ ನೂರಾರು ಸಾವಿರಾರು ಅಡೆತಡೆಗಳನ್ನು ದಾಟಿ ಅಂಥಹ ದುರ್ಗಮತೆಯಲ್ಲಿ ತನ್ನ ಅಸ್ಮಿತೆಗಾಗಿ ಶ್ರಮಿಸಿ ಹೋರಾಡಿ 'ಅಸ್ಮಿತೆ' ತಂದುಕೊಂಡಾಕೆ ಆಕೆ ಇನ್ನು ಮಾನವನ ಇತಿಹಾಸದಲ್ಲಿ ಎಲ್ಲಾ ಚಿಂತನಾ ಕ್ರಮಗಳು ಪುರುಷ ಸಂರಚಿತ ಎಲ್ಲಾ ಜ್ಞಾನ ಶಿಸ್ತುಗಳೂ ಪುರುಷ ಕೇಂದ್ರಿತ ಆಗಿದ್ದು ಈ ಅನುಷಂಗಿಕ ವ್ಯವಸ್ಥೆಯಲ್ಲಿ ಸಾಮಾನ್ಯ ಸ್ತ್ರೀ ಅಷ್ಟೇ ಅಲ್ಲ ಇಡೀ ಮಹಿಳಾ ಸಮೂಹವೇ ನಿರ್ಲಕ್ಷ್ಯೆಗೆ ಒಳಗಾಗಿದ್ದು ಸಾರ್ವಕಾಲಿಕ ಸತ್ಯ. ಸ್ತ್ರೀ ಸಂರಚಿತ ಮೌಲ್ಯದರ್ಶನಗಳ ಹುಡುಕಾಟ ಇಂದು ಆಗಬೇಕಿದೆ. ಅದರಲ್ಲೂ ಸಾಮಾಜಿಕ ಸ್ಥರದಲ್ಲಿ ಲೈಂಗಿಕ ವೃತ್ತಿ ನಿರತ ಮಹಿಳೆಯರ ಅಸ್ತಿತ್ವಕ್ಕೊಂದು ನೆಲೆ ಸ್ಥಾನಮಾನ ದೊರೆಯಬೇಕಾಗಿದೆ.

ಇದು ಇಂದು ನಿನ್ನೆಯದಲ್ಲ, ನಿರಂತರವಾಗಿ ಅನೂಚಾನವಾಗಿ ನಡೆದುಕೊಂಡು ಬಂದ ವ್ಯವಸ್ಥೆಯಾಗಿದೆ. ವೇದಗಳ ಕಾಲದಿಂದಲೂ ವಿವಾಹ ಮತ್ತು ಗೃಹಿಣಿ ಸಮಾಜದ ಜೊತೆ ಜೊತೆಗೆ ಬೆಳೆದು ಬಂದ ವರ್ಗವಾಗಿದೆ. ಇವರನ್ನು ಸಾಧಾರಣಾ, ಜಾರಾ, ನಟಿ ಎಂದು ಕರೆಯಲಾಗುತ್ತಿದ್ದು, ಅದು ಸಮಾಜಕ್ಕೆ ಅನಿವಾರ್ಯ ಎಂಬಂತೆ ಮಾಡಲಾಗಿತ್ತು, ಇನ್ನು ಮತ್ಸ್ಯ ಪುರಾಣದಲ್ಲಿ ವೇಶ್ಯಾ ಧರ್ಮ ಭಕ್ತಿಯಿಂದ ಅನುಸರಿಸಬೇಕೆಂದು ಇಂದ್ರನೇ ಹೇಳಿದ ಎಂಬ ಉಲ್ಲೇಖ ಬರುತ್ತದೆ. ಇನ್ನು ವಾತ್ಸಾಯಣನ ಕಾಮಸೂತ್ರ ಕೌಟಿಲ್ಯನ ಅರ್ಥಶಾಸ್ತ್ರ ಸಂಸ್ಕೃತ, ಕನ್ನಡ ಕಾವ್ಯಗಳಲ್ಲಿಯೂ ಕೂಡಾ ಲೈಂಗಿಕ ವೃತ್ತಿನಿರತ ಮಹಿಳೆಯರ ಉಲ್ಲೇಖ ಬರುತ್ತದೆ. ಆಕೆಗೆ ರಾಜರ ಭೋಗ ವಸ್ತುಗಳ ಪಟ್ಟಿಯಲ್ಲಿ ಅಗ್ರಗಣ್ಯ ಸ್ಥಾನವಿತ್ತು. ಆ ಕಾಲದಲ್ಲಿ ಈ ವ್ಯವಸ್ಥೆ ಪೋಷಿಸಿದ ಸಾಧ್ಯತೆ ಇವೆ. ಮನ್ನಣೆ ಇದ್ದರೂ ಗೌರವದ ವಿಷಯವಲ್ಲದ ಕಾರಣ ಸಾಮಾನ್ಯ ವರ್ಗದ ಉಲ್ಲೇಖವಿಲ್ಲ. ಅವರನ್ನು ಮೂರು ವಿಧದಲ್ಲಿ ವಿಂಗಡನೆ ಮಾಡಲಾಗುತ್ತಿತ್ತು.

1. ವ್ಯಕ್ತಿಗಳಿಗಾಗಿ,
2. ಸಮಾಜಕ್ಕಾಗಿ,
3. ದೇವರಿಗಾಗಿ ಎಂದು.

ಬಾದಾಮಿಯ ಚಾಲುಕ್ಯರ ಕಾಲದಲ್ಲಿ ಇವರನ್ನು ಪೊಡ್ಡಿ ಪೋಟಿ, ಪೊಟಿ, ಪೊಡ್ಡಿ, ಬೊಡ್ಡಿ ಎಂಬ ಹೆಸರುಗಳಿಂದ ಕರೆಯುತ್ತಿದ್ದರು. ಪುಲಕೇಶಿಯ ಮಗ ಚಂದ್ರಾದಿತ್ಯನ ಕಾಲದಲ್ಲಿಯ ಕೊಚ್ರೆ ತಾಮ್ರ ಶಾಸನದಲ್ಲಿ "ಚಂದ್ರಾದಿತ್ಯ ಪೃಥ್ವೀವಲ್ಲಭ ಮಹಾರಾಜಾಧಿ ರಾಜಸ್ಯ ಪ್ರಿಯ ಮಹಿಷಿ", ಕಲಿಕಾಲಪ್ರತಿ ಪಕ್ಷಭೂತಾ ಶ್ರೀವಿಜಯ ಮಹಾದೇವಿ ಬೊಡ್ಡಿ, ಪೊಡ್ಡಿ, ಸರ್ವಾನಾಜಾ ಪಯತಿ" ಎಂದು ಉಲ್ಲೇಖಿಸಲಾಗಿದೆ. ಮೂಲತಃ ಲೈಂಗಿಕ ವೃತ್ತಿ ವಂಶಕ್ಕೆ ಸೇರಿದ (ಸೂಳೆ) ಇವಳನ್ನು ವಿವಾಹವಾಗಿ ಮಹಿಷಿಯಾಗಿಸಿದ. (ಮಹಿಷಿ ಒಲಿದು ಬಂದವಳು).

ಕ್ರಿ. ಶ. 733 ರ ಮಹಾಕೂಟದ ಶಾಸನವೊಂದರಲ್ಲಿ "ಶ್ರೀ ವಿಜಯಾದಿತ್ಯ ಸತ್ಯಾಶ್ರಯ ಶ್ರೀ ಪೃಥ್ವಿವಲ್ಲಭ ಮಹಾರಾಜಾಧಿರಾಜ ಪರಮೇಶ್ವರ ಭಟರರಾ ಪ್ರಾಣವಲ್ಲಭೆ ವೀನಾಪೋಟಿಗಳೆನ್ನೂರ ಸೂಳೆಯರ್" ಎಂಬ ಉಲ್ಲೇಖವಿದೆ. ಈಕೆ ರಾಜ ವೇಶ್ಯೆಯಾಗಿದ್ದು ತನ್ನ ಒಡೆಯನ ಶ್ರೇಯಸ್ಸಿಗಾಗಿ ಹಿರಣ್ಯ ಗರ್ಭದಾನ ಮಾಡಿ ದತ್ತಿಕೊಟ್ಟ ವಿಷಯ ಉಲ್ಲೇಖನೀಯ. ಇನ್ನೂ ಈಕೆಯ ತಾಯಿ ಕುಚಿಪೋಟಿ ಕೊಚ್ಚಿ ರೇವಮಂಚಾಳ್ ಎಂದು ತಿಳಿದು ಬರುತ್ತದೆ. ಹೀಗಾಗಿ ಇವರು ವಂಶಸ್ಥ ಲೈಂಗಿಕ ವೃತ್ತಿ ನಿರತರು ಎಂಬುದು ತಿಳಿದು ಬರುತ್ತದೆ.

ರಾಜರಿಗೆ ಸಂಬಂಧಿಸಿದಂತೆ "ರಾಜಸೂಳೆ"ಯರ ಉಲ್ಲೇಖ ಕೇವಲ ಬಾದಾಮಿ ಚಾಲುಕ್ಯರ ಹಾಗೂ ಗಂಗರ ಕಾಲದಲ್ಲಿ ಕಾಣಬಹುದಾಗಿದೆ. ಅವರು ಅವರನ್ನು ಪ್ರಿಯ 'ಮಹಿಷಿ' ಪ್ರಾಣವಲ್ಲಭೆ, ಎಂದು ಪರಿಭಾಷಿಕವಾಗಿ ಸಂಬೋಧಿಸುತ್ತಿದ್ದರು. ಕಲ್ಯಾಣ ಚಾಲುಕ್ಯ ಇರುವೆ ಬೆಡಂಗ ಸತ್ಯಾಶ್ರಯನ ಹೆಂಡತಿಯಂತೆ (ಬಂಗಾರದವಳು) ಅಂಬಿಕೆ ಎಂಬಾಕೆ ಇದ್ದಳು. ಕುಂದಮರಸ ಆಕೆಯ ಮಗನಾಗಿದ್ದ, ಶಾಸನಸ್ಥ ರಾಜ ವೈಶ್ಯೆಯರೆಂದೇ ಇವರನ್ನು ಕರೆಯುತ್ತಿದ್ದರು.

ಜನ್ನನ ಅಜಿತನಾಥ ಪುರಾಣದಲ್ಲಿ ರಾಣಿದಾಸ, ಪೆಂಡವಾಸ, ಅನ್ನೊ ಪದಗಳ ಬಳಕೆ ಕಾಣಬಹುದು. ಇಲ್ಲಿ ಪೆಂಡದಾಸ ಈ ಲೈಂಗಿಕ ವೃತ್ತಿಪರರ ಬಗೆಗೆ ಇದ್ದಿರಬಹುದು. ಪಂಪನೂ ಇದನ್ನು ಪುಷ್ಠೀಕರಿಸುತ್ತಾನೆ.

ರಾಜ ವೈಶ್ಯೆಯರು ಭೋಗಕ್ಕೆ ಮಾತ್ರ ಸೀಮಿತವಾಗಿರದೆ ಧಾರ್ಮಿಕ ಕ್ಷೇತ್ರಗಳಲ್ಲಿಯೂ ಭಾಗವಹಿಸಿದ್ದರು. ದೇವಾಲಯಗಳ ನಿರ್ಮಾಣ, ಪೂಜೆ, ಪುನಸ್ಕಾರ, ದೇವಾಲಯಗಳ ಜೀರ್ಣೋದ್ದಾರಗಳಂತಹ ಮಹತ್ತರ ಕಾರ್ಯಗಳಲ್ಲಿ ಭಾಗವಹಿಸಿರುವ ಉಲ್ಲೇಖಗಳು ಸಿಗುತ್ತವೆ. ವಿಜಯ ಮಹಾದೇವಿ ಎರಡು ದತ್ತಿಗಳನ್ನು ಬಿಟ್ಟು ಕೊಟ್ಟಿರುವುದು ವೀನಾಪೋಟಿ ಎಂಬಾಕೆ (ಮಹಾಕೂಟ ಶಾಸನ) ತನ್ನ ಒಡೆಯನ ಶ್ರೇಯಸ್ಸಿಗಾಗಿ ಹಿರಣ್ಯ ಗರ್ಭದಾನ ಮಾಡಿ ದತ್ತಿಬಿಟ್ಟು ಕೊಟ್ಟಿರುವುದು ಅಣ್ಣಯ್ಯನ ವಾರವಧು ವಿಜಯಬ್ಬೆ ದೇವಸ್ಥಾನಕ್ಕೆ ಸ್ಥಂಭದಾನ ಮಾಡಿದ್ದು ಇತ್ಯಾದಿ.

ಸಮಾಜದಲ್ಲಿ ಈ ವರ್ಗದವರ ಮಕ್ಕಳಿಗೂ ಗೌರವವಿತ್ತು, ಬೇವಿನಕುಪ್ಪೆ ಶಾಸನದಲ್ಲಿ ಪ್ರಧುವಿಗಂಗನ (ಸೂಳೆ) ಬೀರಕ್ಕನ ಮಗ ಎರೆಕಳಿಂಗ ವಿಪತ್ತು ಬಂದಾಗ ದೊರೆಗೆ ತನ್ನ ತಲೆಯನ್ನು ಅರ್ಪಿಸಿದ್ದ ಎಂದು ಉಲ್ಲೇಖ. ವಾಸನಗ್ರಾಮದ ಶಾಸನದ ಕಾಳಿಯಂಬುವವಳ ಮಗ ಯುದ್ಧವೊಂದರಲ್ಲಿ ವೀರಮರಣ ಹೊಂದಿದ ಕಾರಣ ವೀರಗಲ್ಲು ನಿಲ್ಲಿಸಿ ಸಕಲ ಗೌರವಗಳೊಂದಿಗೆ 100 ಕಮ್ಮ ಗದ್ದೆ ಬಿಟ್ಟು ಕೊಟ್ಟಿರುವ ಉಲ್ಲೇಖ ನೀತಿಮಾರ್ಗ ಪೆಮಾರನಡಿಗಳ ಸೂಳೆ ಜೋಗಚ್ಚಂದ ಮಗಳು ಚಾವುಣಬ್ಬೆಯನ್ನು ಸಿಗೆನಡ ಪೆರ್ಮಾಡಿ ಗಾವುಮುಡನನ್ನು ಮದುವೆಯಾಗಿದ್ದು ಹಾಗೂ ಈ ದಂಪತಿಗಳು ರಾಮೇಶ್ವರ ದೇವಸ್ಥಾನ ನಿರ್ಮಿಸಿ ದತ್ತಿ ಬಿಟ್ಟಿರುವುದು. ಮೊದಲನೆ ದೊಂಕ ರಾಜ್ಯ ದೇವಾಲಯದ ಪಾತರದವಳನ್ನು ಮದುವೆಯಾಗಿದ್ದ.

ISSN : 2249-2429

## ದೇವ ಸೂಳೆ

ದೇವರ ಭೋಗಕ್ಕೆ ಒಪ್ಪಿಸಲ್ಪಟ್ಟವರು ಆಜನ್ಮ ಪರ್ಯಂತ ದೇವರ ಸೇವೆಗೆ ಮಾತ್ರ ಮೀಸಲಾದವಳು, ಪ್ರಾಚೀನ ಕಾಲದಿಂದಲೂ ನಡೆದು ಬಂದ ಪದ್ಧತಿಯಾಗಿದೆ. ಮಹಾರಾಷ್ಟ್ರದಲ್ಲಿ ಭಾಮಿನಿ, ಉತ್ತರಭಾರತದಲ್ಲಿ ಮಂಗಳ ಮುಖಿಯಾಗಿ ದ. ಕನ್ನಡದಲ್ಲಿ ಕೂತಾಡುವ ಬಾಕನಂಗೆ, ಹೀಗೆ ಹಲವಾರು ಹೆಸರುಗಳಿಂದ ಕರೆಯಲಾಗುತ್ತದೆ ಗುಜರಾತದ ಸೋಮನಾಥ ದೇವಾಲಯದದಲ್ಲಿ 500 ನರ್ತಕಿಯರು ತಂಜಾವೂರಿನ ರಾಜರಾಜೇಶ್ವರ ದೇವಾಲಯದದಲ್ಲಿ 400 ನರ್ತಕಿಯರು ಇದ್ದರೆಂದು ಉಲ್ಲೇಖ ಬರುತ್ತದೆ.

ಬಾಗಲಕೋಟ ಜಿಲ್ಲೆಯ ಪಟ್ಟದಕಲ್ಲು ನಾಗಮಂಗಲದ ತಾಲೂಕಿನ ಮಣೆ, ಹೊನ್ನಾಳಿ, ತಾಲೂಕಿನ ನ್ಯಾಮತಿ, ರೋಣ ತಾಲೂಕಿನ ಸೂಡಿ, ಗದಗನ ಲಕ್ಕುಂಡಿ, ಹರಪನಹಳ್ಳಿಯ ಬಾಗಳಿ, ಹಿರೇಮಂಗಳಗೇರಿ, ಹಡಗಲಿ ತಾಲೂಕಿನ ಮೋರಿಂಗೆರೆ, ಹೂವಿನ ಹಡಗಲಿ ಹಳೆಗೊಂಡಿ, ಮುದ್ದೇಬಿಹಾಳದ ನಾಲತವಾಡ, ಹುನಗುಂದದ ಅರಿಸಿಬೀದಿ, ನಂದವಾಡಗಿ, ರಾಣೇಬೆನ್ನೂರಿನ ಹೊಳೆ ಆನವೇರಿ, ಹೂಲಿಹಳ್ಳಿ, ಮುಂಡರಗಿಯ ಕೊರ್ಲಹಳ್ಳಿ, ಶಿಗ್ಗಾಂವನ ಬಂಕಾಪೂರ, ದಾವಣಗೇರಿಯ ಬೇತೂರ, ಆಡೋನಿಯ ಚಿನ್ನತುಂಬಳ, ಬಳ್ಳಾರಿಯ ಸಿರಗುಪ್ಪಿ, ಕೊಪ್ಪಳದ ಕುಕುನೂರ, ಕೌಲಬ, ರಾಯಚೂರಿನ ಇಟಗಿ, ಹಿರೇಕೆರೂರಿನ, ಕಾಗಿನೆಲೆ, ಸಿಂದಗಿಯ ದೇವರನಾವದಗಿ, ಚನ್ನರಾಯಪಟ್ಟಣದ ಕೆಂಬಾಳು, ಕುಂದಾಪುರದ ತೋಟೇಶ್ವರ, ಬೇಲೂರಿನ ಹಳೇಬಿಡು, ಮಂಡ್ಯದ ಬಸರಾಳದ, ಗುಬ್ಬಿಯ ಸಂಪಿಗೆ, ಮುಂತಾದ ದೇವಾಲಯಗಳಲ್ಲಿ ಈ ವರ್ಗದವರು ಉಲ್ಲೇಖವಿದೆ.

**ಅಂಗಭೋಗ ರಂಗಭೋಗ :** 10ನೇ ಶತಮಾನದ ನಂತರ ಕೆಲಬದಲಾವಣೆಗಳಾಗಿ ಅಂಗ ಮತ್ತು ರಂಗ ಭೋಗವೆಂದು ವರ್ಗಿಕರಣ ಮಾಡಲಾಯಿತು, ಅಂಗಭೋಗದಲ್ಲಿ ಹೆಸರೇ ಸೂಚಿಸುವಂತೆ ಅಂಗಕ್ಕೆ ಸಂಬಂಧಿಸಿದಂತೆ ಸಮರ್ಪಣಾಕಾರ್ಯ ಮಾಡಬೇಕಾಗಿತ್ತು.

**ರಂಗಭೋಗ :** ದೇವಾಲಯದ ಮುಖಮಂಟಪದ ರಂಗ ಮಂಟಪದಲ್ಲಿ ದೇವರಸೇವೆಗೆ ರಂಗಭೋಗವೆಂದು ಕರೆಯಲಾಯಿತು. ಅದರಲ್ಲಿ ಡಂಬ, ಮಾಡದ, ಚಾಮರದ, ಪಾತ್ರದ, ಓಲಗದ, ಬಸವಿ, ನಟವ, ಮುಂತಾದ ಪ್ರಕಾರದಲ್ಲಿ ಇವರನ್ನು ಗುರ್ತಿಸಲಾಗುತ್ತಿತ್ತು, ವಚನಕಾರ್ತಿಯರಲ್ಲೂ ತಮ್ಮ ವಚನಗಳ ಮೂಲಕ ಪರಿಚಿತರಾದವರು ಸಂಕವ್ವೆಯಂತವರು ಇದ್ದಾರೆ ಇವರಿಗೂ ಕೂಡಾ ತೆರಿಗೆ ನೀಡುತ್ತಿದ್ದರು.

ಭೌದ್ಧಧರ್ಮದ ಕಾಲದಲ್ಲೂ ಆಮ್ರಪಾಲಿ, ಮಾಧವಿ, ಕಣ್ಣಿಗಿ ಅಂತಾವರ ಬಗೆಗೆ ಉಲ್ಲೇಖ ಸಿಗುತ್ತದೆ. ಸ್ವತಂತ್ರ ಪೂರ್ವದಲ್ಲಿ ಸ್ವಾತಂತ್ರ್ಯ ಸಮರಕ್ಕೆ ಸಹಾಯಿಸಿದ ವರ್ಗದ ಮಹಿಳೆಯರಲ್ಲಿ ಅಜಿಜನ್'ಳ ಪಾತ್ರ ಹಿರಿದಾದುದು. ಆದರೆ ಆಧುನಿಕ ಕಾಲದಲ್ಲಿ ಬಹಳಷ್ಟು ಬದಲಾವಣೆ ವ್ಯತ್ಯಾಸ ಕಾಣಬಹುದು. ಅಂದಿನ ಕಾಲದ ಈ ವರ್ಗದ ಜನರಿಗೆ ಸಮಾಜದಲ್ಲಿ ಸ್ಥಾನಮಾನಗಳಿದ್ದು, ಸಾಮಾನ್ಯ ಜೀವನ ನಡೆಸಬಹುದಾಗಿತ್ತು. ಆದುದರಿಂದ ಈ ವರ್ಗದ ಮಹಿಳೆಯರನ್ನು ಸಮಾಜವು ಅತ್ಯಂತ ನಿಕೃಷ್ಟವಾಗಿ ಕಂಡು ಮಡಿವಂತಿಕೆಯ ಸೋಗಿನಲ್ಲಿ ಅವರನ್ನು ಹಿಂಸಿಸುತ್ತಾರೆ. ಆದರೆ ಬಹುಮಟ್ಟಿಗೆ ಈ ವೃತ್ತಿಗೆ ಇಳಿಯುವ ಮಹಿಳೆಯರು ಆ ಸಮಾಜದ ದುಷ್ಟ ಜನರ ದುಷ್ಟತೆಯಿಂದ ದೌರ್ಜನ್ಯಕ್ಕೆ ಈಡಾಗುತ್ತಾರೆ. ಆಕೆಯ ಈ ಸ್ಥಿತಿಗೆ ಸಮಾಜದಲ್ಲಿರುವ ಕೆಟ್ಟ ಪುರುಷರು ಕಾರಣರಾಗುತ್ತಾರೆ. ಲೈಂಗಿಕ ವೃತ್ತಿನಿರತ ಮಹಿಳೆಯರಿಗೆ ಸ್ವಂತಿಕೆ ಇಲ್ಲ, ದೇಹ ಮನಸ್ಸುಗಳ ಬಗೆಗೆ ವಿಚಾರಿಸುವಂತಿಲ್ಲ, ಇದು ಒಂದು ವ್ಯವಹಾರ ವಾಗಿರದೆ ಒಂದು ದೇಹವಾಗಿ ಪರಿಗಣಿಸಲ್ಪಟ್ಟಿದೆ. ಆಕೆ ಅದೆಷ್ಟು ವೇದನೆ ಅನುಭವಿಸುತ್ತಾಳೆ, ಅದೆಷ್ಟೋ ಕಾಯಿಲೆಗಳಿಗೆ ಗುರಿಯಾಗುತ್ತಾಳೆ. ಅವರ ಮಕ್ಕಳಿಗೆ ಸ್ಥಾನಮಾನವಿಲ್ಲ, ಆ ಮಕ್ಕಳಿಗೆ ಕೂಡಾ ಪಿತೃಮೂಲದಿಂದ ಗುರ್ತಿಸಲು ಕಾರಣೀಕರ್ತರಾದ ಪುರುಷರೇ ಒಪ್ಪಿಕೊಳ್ಳದಿರುವುದು ವಿಷಾದನಿಯ ಹೀಗಾಗಿ ಅವರು ಸ್ತ್ರೀ ಮೂಲದಿಂದಲೇ ಗುರ್ತಿಸಲ್ಪಡುತ್ತಾರೆ.

ಈಗ ಸಮಾಜದಲ್ಲಿ ಇದು ಒಂದು ವ್ಯವಹಾರವಾಗಿ ಪರಿಣಮಿಸಿದೆ. ದೇಹ ಮಾತ್ರ ಪರಿಗಣಿಸಲ್ಪಡುತ್ತದೆ. ಅಂದ, ಚಂದಗಳ ಮಾತ್ರ ಗಣನೆಗೆ ಬರುತ್ತವೆ, ಕೊಳ್ಳಬಾಕ ಸಂಸ್ಕೃತಿಯಲ್ಲಿ ಅವರು ನಲುಗುತ್ತಿದ್ದಾರೆ. ಸದ್ಯದಲ್ಲಿ Real Estate Business ಹಾಗೆ ಬಳಸಲಾಗುತ್ತಿದೆ. ಭೂಮಿ ಹೆಣ್ಣುಗಳನ್ನು ಶೋಧಿಸಿ ಮೊಗೆದು ಬಗೆದು ಖಾಲಿ ಮಾಡಿ ಬಂಡವಾಳ ಶಾಹಿಗಳು ಬಲಿಷ್ಠರಾಗುತ್ತಿದ್ದಾರೆ.

ಈ ರೀತಿ ಸಂಕಷ್ಟದಲ್ಲಿರುವ ಮಹಿಳೆಯರ ಬದುಕು ಹಸನಾಗುವ ರೀತಿಯಲ್ಲಿ ಕಾರ್ಯಮಾಡಲು ಅನೇಕ ಸಂಘ ಸಂಸ್ಥೆಗಳು ಜನ್ಮ ತಾಳಿವೆ. ಅಂತರಾಷ್ಟ್ರೀಯ ಮಟ್ಟದಲ್ಲಿ CRY ಕ್ಕೆ ಎಂಬ ಸಂಸ್ಥೆ ಇದೆ. ಸಂವೇದನೆ, ರಕ್ಷಣೆ, ಜಿಲ್ಲಾ ಮಹಿಳಾ ಒಕ್ಕೂಟಗಳು ಕೆಲಸ ಮಾಡುತ್ತಿದೆ. ಹಾಗೆ ಅನೇಕ ಸಾಂತ್ವನ ಕೇಂದ್ರಗಳು ಹಾಗೂ ಎನ್. ಜಿ. ಓ. ಗಳು ಕೆಲಸ ಮಾಡುತ್ತಿವೆ.

## ಈ ವರ್ಗದ ಜನರಲ್ಲಿ ಜಾಗೃತಿಯುಂಟು ಮಾಡುವ ನಿಟ್ಟಿನಲ್ಲಿ

- ಕಾನೂನು ತಿಳುವಳಿಕೆ ಕಾರ್ಯಕ್ರಮ.
- ದೌರ್ಜನ್ಯ ತಡೆಗಟ್ಟುವ ನಿಟ್ಟಿನಲ್ಲಿ ಪ್ರತಿಭಟಿಸುವ ಶಕ್ತಿ ಹೆಚ್ಚಳ.
- ಸರ್ಕಾರಿ, ಅರೆಸರ್ಕಾರ, ಸರ್ಕಾರೇತರ ಸಂಸ್ಥೆಗಳ ಸಹಭಾಗಿತ್ವದಲ್ಲಿ ಆರೋಗ್ಯ ರಕ್ಷಣೆಗಾಗಿ ಸೇವಾ ಕಾರ್ಯಕ್ರಮಗಳು.
- ಮಹಿಳಾ ಮತ್ತು ಮಕ್ಕಳ ಶಿಕ್ಷಣ ಮಟ್ಟ ಹೆಚ್ಚಿಸುವುದು.
- ಆರ್ಥಿಕ ಸುಭದ್ರತೆಗೆ ತರಬೇತಿ ನಿಡುವುದು.
- ಅವರ ಮೇಲಾಗುವ ದೌರ್ಜನ್ಯದ ವಿರುದ್ಧ ಧ್ವನಿ ಎತ್ತುವುದು.

ಹೀಗೆ ಅನೇಕಾನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಅವರಲ್ಲಿ ಜಾಗೃತಿಯುಂಟು ಮಾಡಿ ಸಮಾಜದಲ್ಲಿ ಒಬ್ಬ ವ್ಯಕ್ತಿಯನ್ನು ಪರಿವರ್ತಿಸುತ್ತಿರುವುದು ಶ್ಲಾಘನೀಯ. ಅವರಲ್ಲಿ ಚೈತನ್ಯ ತುಂಬುವ ನಿಟ್ಟಿನಲ್ಲಿಸರಿಕಿರಣ, ಕಾರ್ಯಾಗಾರ, ಬಾಥಾಗಳನ್ನು ಸರಿಪಡಿಸುತ್ತಿದ್ದಾರೆ. ಅವರು ತಮ್ಮ ಮನದಲ್ಲಿರುವ ಕೀಳರಿಮೆ ಕಿತ್ತೊಗೆದು ಹೊರ ಬರಲು ಪ್ರಯತ್ನಿಸುತ್ತಿದ್ದಾರೆ. ಹೀಗೆ ಅಧ್ಯಯನಗಳ ಮೂಲಕ ಕಳಂಕಿತ ಮಹಿಳೆಯವರ ಸಾಮಾಜಿಕ, ಸ್ಥಾನಮಾನ ಹೆಚ್ಚಿಸುವ ನಿಟ್ಟಿನಲ್ಲಿ ಈ ಸಂಘ ಸಂಸ್ಥೆಗಳ ಶಕ್ತಿ ಗುರಿ ಕೆಲಸ ಮಾಡುತ್ತಿವೆ. ಹಾಗೆ ದೌರ್ಜನ್ಯ ಮುಕ್ತ ವಾತಾವರಣ ಒದಗಿಸುವ ಕಾರ್ಯದಲ್ಲಿ ತೊಡಗಿವೆ.

■■

ISSN : 2249-2429


# ಪ್ರಾಥಮಿಕ ಶಿಕ್ಷಣವನ್ನು ಯಶಸ್ವಿಗೊಳಿಸುವಲ್ಲಿ ರಾಜ್ಯ ಸರಕಾರವು ಕೈಗೊಂಡ ಕಾರ್ಯಕ್ರಮಗಳು

✍ **ಶ್ರೀ ವಿನೋದ ಹೂಲಿ,** ಉಪನ್ಯಾಸಕರು, ರಾಜೀವ ಗಾಂಧಿ ಸ್ನಾತಕೋತ್ತರ ಶಿಕ್ಷಣ ಅಧ್ಯಯನ ಕೇಂದ್ರ, ಗದಗ ರಸ್ತೆ ದದೇಗಲ್ಲ ಹತ್ತಿರ, ಕೊಪ್ಪಳ.

## 1. ಸರ್ವ ಶಿಕ್ಷಣ ಅಭಿಯಾನ

ಸರ್ವ ಶಿಕ್ಷಣ ಅಭಿಯಾನವು 2010ರ ವೇಳೆಗೆ 6 ರಿಂದ 14 ವಯೋಮಾನದ ಎಲ್ಲಾ ಮಕ್ಕಳಿಗೆ ಉಪಯುಕ್ತ ಹಾಗೂ ಸುಸಂಗತವಾದ ಪ್ರಾಥಮಿಕ ಶಿಕ್ಷಣವನ್ನು ಒದಗಿಸುತ್ತದೆ. ಶಾಲೆಗಳ ನಿರ್ವಹಣೆಯಲ್ಲಿ ಸಮುದಾಯವನ್ನು ಸಕ್ರೀಯವಾಗಿ ಪಾಲ್ಗೊಳ್ಳುವಂತೆ ಮಾಡುವುದರೊಂದಿಗೆ, ಸಾಮಾಜಿಕ ಜೆಂಡರ್ ಅಂತರಗಳನ್ನು ಕಡಿಮೆ ಮಾಡುವುದು ಇದರ ಮತ್ತೊಂದು ಗುರಿಯಾಗಿದೆ.

ಆಧ್ಯಾತ್ಮಿಕವಾಗಿ ಹಾಗೂ ಭೌತಿಕವಾಗಿ ತಮ್ಮ ಮಾನವ ಸಾಮರ್ಥ್ಯವನ್ನು ಉಪಯೋಗಿಸಿಕೊಂಡು, ಅವರ ಸ್ವಾಭಾವಿಕ ಪರಿಸರದ ಬಗ್ಗೆ ಕಲಿಯಲು ಮತ್ತು ಮನನ ಮಾಡಿಕೊಳ್ಳಲು ಮಕ್ಕಳಿಗೆ ಅವಕಾಶ ನೀಡುವುದು ಇದರ ಗುರಿಯಾಗಿದೆ.

2005ರ ವೇಳೆಗೆ ಎಲ್ಲಾ ಮಕ್ಕಳು ಶಾಲೆಗಳಲ್ಲಿ ಶಿಕ್ಷಣ ಖಾತರಿ ಕೇಂದ್ರಗಳಲ್ಲಿ, ಪರ್ಯಾಯ ಶಾಲೆಗಳಲ್ಲಿ "ಮರಳಿ ಶಾಲೆಗೆ" ಶಿಬಿರಗಳಲ್ಲಿ ಕಲಿಯುವಂತೆ ಮಾಡುವುದು.

2007ರ ವೇಳೆಗೆ ಎಲ್ಲಾ ಮಕ್ಕಳು 5 ವರ್ಷಗಳ ಪ್ರಾಥಮಿಕ ಶಾಲಾ ಶಿಕ್ಷಣವನ್ನು ಪೂರ್ಣಗೊಳಿಸುವಂತೆ ಮಾಡುವುದು.

2010ರ ವೇಳೆಗೆ ಎಲ್ಲಾ ಮಕ್ಕಳು 8 ವರ್ಷಗಳ ಪ್ರಾಥಮಿಕ ಶಾಲಾ ಶಿಕ್ಷಣವನ್ನು ಪೂರ್ಣಗೊಳಿಸುವಂತೆ ಮಾಡುವುದು.

ಬದುಕಿಗಾಗಿ ಶಿಕ್ಷಣದ ಮೇಲೆ ಒತ್ತು ನೀಡುವುದರೊಂದಿಗೆ ತೃಪ್ತಿಕರ ಗುಣಮಟ್ಟದ ಪಾಥಮಿಕ ಶಿಕ್ಷಣಕ್ಕೆ ಗಮನ ಹರಿಸುವುದು.

2010ರ ವೇಳೆಗೆ ಪ್ರಾಥಮಿಕ ಶಿಕ್ಷಣ ಹಂತದಲ್ಲಿರುವ ಎಲ್ಲಾ ಜೆಂಡರ್ ಮತ್ತು ಸಾಮಾಜಿಕ ಪ್ರವರ್ಗದ ಅಂತರಗಳನ್ನು ಕಡಿಮೆ ಮಾಡುವುದು.

2010ರ ವೇಳೆಗೆ ಸಾರ್ವತ್ರಿಕ ಉಳಿಯುವಿಕೆಯನ್ನು ಸಾಧಿಸುವುದು.

## 2. ಸಮುದಾಯತ್ತ ಶಾಲೆ

ಸಮುದಾಯದೊಂದಿಗೆ ಬೆರೆತು ಸ್ಥಳೀಯ ಸಹಕಾರ ನೆರವಿನೊಂದಿಗೆ ಶಾಲೆಗಳ ಸಮಸ್ಯೆಗಳನ್ನು ಪರಿಹರಿಸಿಕೊಳ್ಳುವುದು ಮತ್ತು ಎಲ್ಲಾ ಮಕ್ಕಳು ಶಾಲೆಗೆ ಬರುವಂತೆ ಮಾಡುವುದು ಇದರ ಉದ್ದೇಶವಾಗಿದೆ.

## 3. ಡಿ.ಪಿ.ಇ.ಪಿ. ಯೋಜನೆ

ಇದು ಕೇಂದ್ರ ಸರ್ಕಾರದ ಯೋಜನೆಯಾಗಿದ್ದು ಪ್ರಾಥಮಿಕ ಶಿಕ್ಷಣದ ಸಾರ್ವತ್ರಿಕರಣಕ್ಕೆ ವಿದೇಶಿ ಸಹಾಯದಿಂದ ಸ್ಥಾಪಿತವಾಗಿರುವ ಯೋಜನೆ ಜಿಲ್ಲಾ ಪ್ರಾಥಮಿಕ ಶಿಕ್ಷಣ ಯೋಜನೆ ಇದಕ್ಕಾಗಿ 85% ಹಣವನ್ನು ಭಾರತ ಸರ್ಕಾರ ವಿದೇಶಿ ಸಹಾಯದಿಂದ ಪಡೆದು ರಾಜ್ಯ ಸರ್ಕಾರಗಳಿಗೆ ನೀಡುತ್ತದೆ. 15% ಹಣವನ್ನು ರಾಜ್ಯ ಸರ್ಕಾರಗಳು ಭರಿಸುತ್ತವೆ. ಈ ಯೋಜನೆಯಡಿಯಲ್ಲಿ ಹೊಸ ಶಾಲೆಗಳ ನಿರ್ಮಾಣ ಹೊಸ ಶಿಕ್ಷಕರ ನೇಮಕಾತಿ ಶಿಶು ಸಂರಕ್ಷಣಾ ಕೇಂದ್ರಗಳ ಸ್ಥಾಪನೆ ಸಂಶೋಧನೆ ಹಾಗೂ ಹೆಣ್ಣು ಮಕ್ಕಳ ವಿದ್ಯಾಭ್ಯಾಸಕ್ಕಾಗಿ ವಿಶೇಷ ನೆರವು ಯೋಜನೆಗಳನ್ನು ರಾಜ್ಯ ಸರ್ಕಾರ ಅನುಷ್ಠಾನಕ್ಕೆ ತಂದಿದೆ.

## 4. ಸಮನ್ವಯ ಶಿಕ್ಷಣ

ಭಿನ್ನ ಸಾಮರ್ಥ್ಯವುಳ್ಳ ಮಕ್ಕಳನ್ನು ಸಾಮಾನ್ಯ ಶಾಲೆಗಳಿಗೆ ಸೇರಿಸಿಕೊಂಡು ಇತರ ಮಕ್ಕಳೊಡನೆ ಸೇರಿ ಶಿಕ್ಷಣ ಪಡೆಯುವುದು ದೈಹಿಕ ಅಂಗವಿಕಲರು ಶಾರೀರಿಕ ನ್ಯೂನತೆ ಹೊಂದಿದ ಮಕ್ಕಳನ್ನು ಶಾಲೆಗೆ ಸೇರ್ಪಡಿಸುವುದು, ಅವರಿಗೆ ವಿದ್ಯಾರ್ಥಿ ವೇತನ ಮತ್ತು ವಿಶೇಷ ರಿಯಾಯತಿಗಳನ್ನು ನೀಡಲಾಗುವುದು.

## 5. ಬಿಸಿಯೂಟ ಯೋಜನೆ : (ಅಕ್ಷರ ದಾಸೋಹ)

ಈಶಾನ್ಯ ವಲಯದ 7 ಜಿಲ್ಲೆಗಳಾದ ಕೊಪ್ಪಳ, ಗುಲಬರ್ಗಾ, ಬೀದರ್, ಬಳ್ಳಾರಿ, ಬಿಜಾಪುರ ಹಾಗೂ ಬಾಗಲಕೋಟೆ ಜಿಲ್ಲೆಗಳಲ್ಲಿ ಬಿಸಿಯೂಟ ನೀಡುವ ಯೋಜನೆ ಪ್ರಾಯೋಗಿಕವಾಗಿ ಆರಂಭವಾಯಿತು. ಸಾರ್ವಜನಿಕ ಶಿಕ್ಷಣ ಅನುದಾನದಲ್ಲಿ ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಉಪ ಆಯುಕ್ತರು ಹಾಗೂ ತಹಶೀಲ್ದಾರವರ ಮೂಲಕ ಗ್ರಾಮ ಪಂಚಾಯತಿಗಳ ವತಿಯಿಂದ ಜಾರಿಗೊಳಿಸಲಾಗಿದೆ. ಕೇಂದ್ರ ಸರ್ಕಾರವು ಭಾರತ ಆಹಾರ ನಿಗಮದ ಮೂಲಕ ಅಕ್ಕಿ ಗೋಧಿಯನ್ನು ನೀಡುತ್ತಿದೆ. ಅಂದಿನ ಮುಖ್ಯಮಂತ್ರಿಗಳಾದ ಸನ್ಮಾನ್ಯ ಶ್ರೀ ಎಸ್. ಎಂ. ಕೃಷ್ಣಾರವರು ರಾಯಚೂರು ಜಿಲ್ಲೆಯ ದೇವದುರ್ಗ ತಾಲೂಕಿನ ಅರಕೇರಿಯಲ್ಲಿ ದಿನಾಂಕ 09–11–2001 ರಂದು ಶಾಲೆಗಳಲ್ಲಿ ಬಿಸಿಯೂಟ ನೀಡುವುದರ ಮೂಲಕ ರಾಜ್ಯದ ಎಲ್ಲೆಡೆ ಪ್ರಾರಂಭಿಸಲು ಅನುಮತಿ ನೀಡಿದರು.

## 6. ಸಂಚಾರೀ ಶಾಲೆ

ಶಾಲೆಯಿಂದ ಹೊರತಾದ ಮಕ್ಕಳಿರುವ ತಾಣಗಳನ್ನು ಗುರುತಿಸಿ ಅವರಿರುವೆಡೆಯಲ್ಲಿಯೇ ಶಾಲೆಯನ್ನು ನಡೆಸುವ ಹೊಸ ಯೋಜನೆ ಸಂಚಾರಿ ಶಾಲೆ. 1999 ಜುಲೈ 8 ರಂದು ಈ ಯೋಜನೆ ಅನುಷ್ಠಾನಕ್ಕೆ ಬಂದಿತು. ಮಕ್ಕಳು ಬಸ್‌ನಲ್ಲಿ ಕುಳಿತು ಶಾಲಾ ಸೌಲಭ್ಯ ಪಡೆಯುತ್ತಾರೆ. ಉಚಿತ ಪಠ್ಯ ಸಮವಸ್ತ್ರ ಇತ್ಯಾದಿಗಳನ್ನು ಇಲಾಖೆಯಿಂದ ಒದಗಿಸಲಾಗಿದೆ. ಸಂಚಾರಿ ಶಾಲೆಯಲ್ಲಿ ದಾಖಲಾದ ಒಂದು ವರ್ಷದ ನಂತರ ಈ ಮಕ್ಕಳನ್ನು ನಿಯತ ಶಾಲೆಗಳಿಗೆ ಸೇರಿಸಲಾಗಿದೆ. ರಾಜ್ಯ ಸರ್ಕಾರದ ಯೋಜನೆಯಲ್ಲಿ ಇದೊಂದು ಯಶಸ್ವಿ ಯೋಜನೆಯಾಗಿದೆ.

## 7. ಶಾಲಾ ದತ್ತು ಯೋಜನೆ

ರಾಜ್ಯ ಸರ್ಕಾರದ ಸಾಮಾಜಿಕ ಮತ್ತು ಆರ್ಥಿಕವಾಗಿ ಹಿಂದುಳಿದ ಮಕ್ಕಳು ಅವರು ಕಲಿಯುತ್ತಿರುವ ಸರ್ಕಾರಿ ಪ್ರಾಥಮಿಕ ಶಾಲೆಗಳನ್ನು ಖಾಸಗಿಯವರು ದತ್ತು ತೆಗೆದುಕೊಂಡು ಅಭಿವೃದ್ಧಿ ಪಡಿಸುವ ಯೋಜನೆ ಇದಾಗಿದೆ. ಆಸಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆಯೊಂದಿಗೆ ಒಪ್ಪಂದ

ISSN : 2249-2429

ಮಾಡಿಕೊಂಡು ಶಾಲೆಯ ಮತ್ತು ಅದರಲ್ಲಿ ಕಲಿಯುತ್ತಿರುವ ಮಕ್ಕಳ ಸರ್ವತೋಮುಖ ಅಭಿವೃದ್ಧಿ ಸಾಧಿಸಬಹುದು.

## 8. ಬಾ ಮರಳಿ ಶಾಲೆಗೆ

ಕೇಂದ್ರ ಮತ್ತು ರಾಜ್ಯ ಸರಕಾರಗಳು 6 ರಿಂದ 14 ವರ್ಷದ ಪ್ರತಿ ಮಗುವಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣ ನೀಡುವುದಾಗಿ ಘೋಷಿಸಿದರೂ ಅನೇಕ ಕಾರಣಗಳಿಂದ ಮಕ್ಕಳು ಶಾಲೆಗೆ ಬರುತ್ತಿಲ್ಲ, ಆದ ಕಾರಣ ಶಿಕ್ಷಣ ಇಲಾಖೆ ಬಾ ಮರಳಿ ಶಾಲೆಗೆ ಆಂದೋಲನ ಪರಿಚಯಿಸಿತು. ಶಾಲೆಯಿಂದ ಹೊರಗುಳಿದ ಮತ್ತು ಗೈರು ಹಾಜರಾಗಿರುವ ಮಕ್ಕಳನ್ನು ಶಾಲೆಗೆ ಬರುವಂತೆ ಹಾಗೂ ಹೊಂದಿಕೊಳ್ಳುವಂತೆ ಮಾಡಿ ಅಗತ್ಯ ಸೇತು–ಬಂಧ ಕಾರ್ಯಕ್ರಮ ಮತ್ತು ಪರಿಹಾರ ಬೋಧನೆಯ ಮೂಲಕ ಯಶಸ್ವಿಗೊಳಿಸುವುದಾಗಿದೆ.

## 9. ಕೂಲಿಯಿಂದ ಶಾಲೆಗೆ

ಈ ಮೇಲಿನ ಅನೇಕ ಯೋಜನೆಗಳು ಅನುಷ್ಠಾನಗೊಂಡರೂ ಅನೇಕ ವಿದ್ಯಾರ್ಥಿಗಳು ಕೌಟುಂಬಿಕ ಹಾಗೂ ಆರ್ಥಿಕ ಪರಿಸ್ಥಿತಿಯ ಹಿನ್ನಲೆಯಲ್ಲಿ ನಲಿಯುತ್ತಾ ಕಲಿಯುವ ಬದಲು ಬಾಲಕಾರ್ಮಿಕ ಅವ್ಯವಸ್ಥೆಗೆ ಸಿಕ್ಕಿಕೊಂಡು ನರಳುತ್ತಿದ್ದಾರೆ. ಈ ದಾಸ್ಯದಿಂದ ಬಿಡುಗಡೆ ಮಾಡಿ ಶಾಲೆಗೆ ಬರುವಂತೆ ಮಾಡುವುದೆ ಕೂಲಿಯಿಂದ ಶಾಲೆಗೆ.

## 10. ಬಾ ಬಾಲೆ ಶಾಲೆಗೆ

ಶಿಕ್ಷಣದಿಂದ ವಂಚಿತರಾಗಿರುವ ಬಾಲಕಿಯರನ್ನು ಶಾಲೆಗೆ ಕರೆತರುವುದೆ ಬಾ ಬಾಲೆ ಶಾಲೆಗೆ. ಶಾಲೆಗೆ ಬಾರದ 6 ರಿಂದ 14 ವರ್ಷದ ಎಲ್ಲಾ ಬಾಲಕಿಯರನ್ನು 8ನೆಯ ತರಗತಿ ಮುಗಿಸುವವರೆಗೆ ನಿಗದಿತ ಕಲಿಕಾ ಮಟ್ಟ ತಲುಪುವಂತೆ ಹಾಗೂ ಲಿಂಗ ತಾರತಮ್ಯ ಹೋಗಲಾಡಿಸುವುದೆ ಇದರ ಉದ್ದೇಶವಾಗಿದೆ.

## 11. ಮಾಹಿತಿ ಸಿಂಧು ಯೋಜನೆ

ಕರ್ನಾಟಕ ರಾಜ್ಯದ ಗ್ರಾಮೀಣ ಭಾಗದ 8, 9, ಮತ್ತು 10ನೇ ತರಗತಿಯ ಮಕ್ಕಳಿಗಾಗಿ ರೂಪಿಸಲಾಗಿದೆ. ವಿದ್ಯಾರ್ಥಿಗಳಲ್ಲಿ ಕಂಪ್ಯೂಟರ್ ಶಿಕ್ಷಣದ ಅರಿವು, ಕಂಪ್ಯೂಟರ್ ಆಧಾರಿತ ಶಿಕ್ಷಣ ಮತ್ತು ಮೂಲಭೂತ ಕಂಪ್ಯೂಟರ್ ಪ್ರೋಗ್ರಾಂ ರಚನೆಯ ಅಭಿವೃದ್ಧಿಯ ಅರಿವು ಮೂಡಿಸುವುದಾಗಿದೆ.

## 12. ಚೈತನ್ಯ 1

ಈ ತರಬೇತಿಯು ಕಲಿನಲಿ ತರಬೇತಿಯ ಕಲಿಕಾ ಚಟುವಟಿಕೆಗಳನ್ನು ಮೌಲ್ಯಮಾಪನ ಮಾಡುವದಾಗಿದೆ. ಸೇವಾ ನಿರತ ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಚೈತನ್ಯ ತುಂಬಲು ಆಸಕ್ತಿ ಮೂಡಿಸಲು ಹೊಸತನವನ್ನು ಕಂಡುಕೊಳ್ಳಲು ಕಲಿಕಾ ತರಗತಿಯಲ್ಲಿ ಉತ್ತಮ ವಾತಾವರಣ ನಿರ್ಮಾಣ ಮಾಡಲು ತರಬೇತಿ ನೀಡಲಾಗುತ್ತದೆ.

## 13. ಚೈತನ್ಯ 2

ರಾಜ್ಯದಲ್ಲಿ 5 ರಿಂದ 7ನೇ ತರಗತಿ ವಿದ್ಯಾರ್ಥಿಗಳಿಗೆ ಕಲಿಸುವ ಶಿಕ್ಷಕರಿಗೆ ಈ ತರಬೇತಿಯನ್ನು ನೀಡಲಾಗುವುದು. ಓದುವ ಹವ್ಯಾಸ, ಸಾಹಿತ್ಯ ಅವಲೋಕಿಸಿ ವಿಷಯ ಪರಿಣಿತಿ ಹೊಂದುವುದು. ಅರ್ಥಪೂರ್ಣ ಪ್ರಶ್ನೆ ಪತ್ರಿಕೆ ತಯಾರಿಸಿ ಮೌಲ್ಯಮಾಪನದ ರೂಪರೇಷೆಗಳನ್ನು ಅರ್ಥೈಸಿಕೊಳ್ಳುತ್ತಾರೆ. ವಿಶೇಷವಾಗಿ ತರಬೇತಿಯಲ್ಲಿ ಸಾಹಿತ್ಯವನ್ನು ಓದಿ ವಿಶ್ಲೇಷಣೆ ಮಾಡುವರು.

## 14. ನಲಿ–ಕಲಿ

ಈ ಯೋಜನೆಯು ಮಕ್ಕಳಲ್ಲಿ ಸೃಜನಶೀಲತೆ, ಭಾಷಾ ಕೌಶಲ್ಯ, ಭೌದ್ಧಿಕ ಬೆಳೆವಣಿಗೆ ಹಾಗೂ ಧೈರ್ಯ–ಸ್ಥೈರ್ಯ ಮೂಡಿಸುವುದಲ್ಲದೆ ಮಕ್ಕಳು ಕನಿಷ್ಠ ಕಲಿಕಾಂಶವನ್ನು ಹೊಂದುವರು. ಹಾಗೂ ಶಿಕ್ಷಕರು ಸಂಪೂರ್ಣವಾಗಿ ಭಾಗವಹಿಸುವರಲ್ಲದೆ ಬೋಧನಾ ಕಲಿಕಾ ಸಾಮಗ್ರಿಗಳನ್ನು ತಯಾರಿಸುವರು. ಇದು ಪಠ್ಯ ರಹಿತ ಕಲಿಕಾ ಯೋಜನೆಯಾಗಿದ್ದು ಇದನ್ನು ಪಠ್ಯಸಹಿತ ಯೋಜನೆ ಮಾಡಿದರೆ ಒಳ್ಳೆಯದು.

## 15. ಚೈತ್ರದ ಚಿಗುರು

ಪ್ರತಿ ವರ್ಷ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಅಥವಾ ಸೂಕ್ತ ಪರಿಸರವಿರುವ ಯಾವುದೇ ಸ್ಥಳಗಳಲ್ಲಿ ಬೇಸಿಗೆಯ ರಜಾ ಅವಧಿಯಲ್ಲಿ ಮಗುವಿನಲ್ಲಿ ಅಡಗಿರುವ ಸೂಕ್ತ ಪ್ರತಿಭೆಗೆ ಅವಕಾಶ ಹಾಗೂ ತರಬೇತಿ ನೀಡುವುದಾಗಿದೆ, ವಿಶೇಷವಾಗಿ ಸಂಗೀತ, ಲಲಿತಕಲೆ, ಚಿತ್ರಕಲೆ, ನಾಟಕ, ಸಾಹಿತ್ಯ ರಚನೆಯಲ್ಲಿ ತೊಡಗಿಸಿ ಮಕ್ಕಳನ್ನು ಬಹುಮುಖ ಪ್ರತಿಭೆಯಾಗಿ ಬೆಳೆಯುವಂತೆ ಮಾಡುವದಾಗಿದೆ.

## 15. ಚಿಣ್ಣರ ಮೇಳ

ಹೆಸರೇ ಸೂಚಿಸುವಂತೆ ಇದೊಂದು ಮೇಳ ಅಥವಾ ಜಾತ್ರೆ, ಎಲ್ಲಾ ಮಕ್ಕಳು ಯಾವುದೇ ಒತ್ತಡ ಹಾಗೂ ನಿಯಮವಿಲ್ಲದೆ ಸ್ವಚ್ಛಂದವಾಗಿ ಅವರ ಇಚ್ಛೆಯಂತೆ ಲಿಂಗ ಬೇಧವಿಲ್ಲದೆ 3 ಅಥವಾ 4 ದಿನ ಆಡಿ–ಹಾಡಿ, ನಕ್ಕು ನಲಿಯುವಂತೆ ಮಾಡಿ ಮಕ್ಕಳಲ್ಲಿ ಸಮಾನತೆ, ಸಹಕಾರ, ಸೌಹಾರ್ದತೆ ಬರುವಂತೆ ಮಾಡುವದಾಗಿದೆ.

## 16. ಪ್ರತಿಭಾ ಕಾರಂಜಿ

ಜನಪದ, ನೃತ್ಯ, ನಾಟಕ, ಭಾಷಣ, ಆಶು–ಭಾಷಣ, ಚಿತ್ರಕಲೆ, ಹಾಡು, ಮೂಕಾಭಿನಯ ಮುಂತಾದ ಸ್ಪರ್ಧೆಗಳನ್ನು ಏರ್ಪಡಿಸಿ ಸೂಕ್ತ ಪ್ರತಿಭೆಗೆ ಬಹುಮಾನ ಪುರಸ್ಕಾರಗಳನ್ನು ನೀಡುವ ಮೂಲಕ ಗ್ರಾಮ ಮಟ್ಟದಿಂದ ರಾಷ್ಟ್ರ ಮಟ್ಟದವರೆಗೆ ಪ್ರತಿಭೆಯನ್ನು ಪ್ರದರ್ಶಿಸುವಂತೆ ಮಾಡುವ ಕಾರ್ಯಕ್ರಮವೇ ಪ್ರತಿಭಾ ಕಾರಂಜಿ.

## 17. ಚಿಣ್ಣರ ಕರ್ನಾಟಕ ದರ್ಶನ

ರಾಜ್ಯ ಸರ್ಕಾರವು 2004–05ನೇ ಸಾಲಿನಿಂದ ಹಳ್ಳಿಗಾಡಿನ ಹೆಣ್ಣು ಮಕ್ಕಳು ಹಾಗೂ ಬಡತನ ಹಾಗೂ ಹಿಂದುಳಿದ ಮಕ್ಕಳನ್ನು ಕರ್ನಾಟಕ ಸುತ್ತಿ ನಾಡಿನ ಇತಿಹಾಸ, ಕಲೆ, ಸಂಸ್ಕೃತಿಯನ್ನು ಪರಿಚಯಿಸುವ ಯೋಜನೆಯಾಗಿದೆ.

## 18. ಕೇಳಿ ಕಲಿ

ಪಾಲಕರು ತಮ್ಮ ಮಕ್ಕಳಿಗೆ ಶಿಕ್ಷಣ ನೀಡುವುದು ಅವಶ್ಯ ಮತ್ತು ಕಡ್ಡಾಯವೆಂಬ ಮನೋಭಾವನೆ ಹೊಂದಿ ಸರ್ವರಿಗೂ ಶಿಕ್ಷಣ ದೊರಕಿಸಿ ಕೊಡುವ ನಿಟ್ಟಿನಲ್ಲಿ ಈ ಕೇಳಿ–ಕಲಿ ಯೋಜನೆ ವಿಶೇಷವಾದುದು ಮತ್ತು ಆಕರ್ಷಣೀಯವಾದದ್ದು. ಇದೊಂದು ರೇಡಿಯೋ ಪಾಠ ದೂರ ಶಿಕ್ಷಣ ಯೋಜನೆಯಡಿಯಲ್ಲಿ ರಾಯಚೂರು, ಗುಲಬರ್ಗಾ ಜಿಲ್ಲೆಗಳಲ್ಲಿ ಪ್ರಯೋಗ ನಡೆಸಿ ಯಶಸ್ವಿ ನಂತರ ಈಗ ರಾಜ್ಯಾದ್ಯಂತ 10 ಆಕಾಶವಾಣಿ ಕೇಂದ್ರಗಳಿಂದ ಪ್ರಸಾರಗೊಳ್ಳುತ್ತಿದೆ.

– 39 ನೇ ಪುಟಕ್ಕೆ ಮುಂದುವರೆದುದು

ISSN : 2249-2429


# ಪ್ರಾಥಮಿಕ ಶಾಲಾ ಶಿಕ್ಷಣದ ಗುಣಮಟ್ಟವನ್ನು ಸುಧಾರಿಸುವಲ್ಲಿ ಕ್ಷೇತ್ರ ಹಾಗೂ ಸಮೂಹ ಸಂಪನ್ಮೂಲ ವ್ಯಕ್ತಿಗಳು ನಿರ್ವಹಿಸುತ್ತಿರುವ ಕಾರ್ಯಗಳ ಬಗ್ಗೆ ಪ್ರಾಥಮಿಕ ಶಾಲಾ ಮುಖ್ಯೋಪಾಧ್ಯಾಯರು ಹೊಂದಿರುವ ಅಭಿಪ್ರಾಯ ಕುರಿತು ಅಧ್ಯಯನ

✍ **ಪ್ರಶಾಂತ. ಅ. ರುದ್ರಗೌಡರ,** M.Sc, M.Ed, NET/K-SET, PGDCA., PGDHE, (Ph.D). ಪೋಸ್ಟ : ಲಕ್ಷ್ಮಿಸಾಗರ, ತಾ. ಜಿ. ಚಿತ್ರದುರ್ಗ
✍ **ಹನುಮಂತಪ್ಪ. ಎ.** M.A., M.Ed. NET/ K-SET, PGDT.

## ಪೀಠಿಕೆ

ಇಂದು ಶಿಕ್ಷಣದ ಅಗತ್ಯವನ್ನು ಅದರ ಮಹತ್ವವನ್ನು ಅರಿಯವುದು ವಿರಳ. ರಾಷ್ಟ್ರ ನಿರ್ಮಾಣ ಕಾರ್ಯದಲ್ಲಿ ಶಿಕ್ಷಣಕ್ಕೆ ಪ್ರಧಾನ ಸ್ಥಾನವಿದೆ. ಕಳೆದ ಅರ್ಧಶತಮಾನದ ಪೂರ್ಣದಲ್ಲಿ ಅಜ್ಞಾನವಾಗಿದ್ದು, "ಅಭಿವೃದ್ಧಿಶೀಲ" ರಾಷ್ಟ್ರಗಳು ಶಿಕ್ಷಣದ ಪ್ರಭಾವದಿಂದ ಎಚ್ಚೆತ್ತಿವೆ. ಅಂತೆಯೇ ರಾಷ್ಟ್ರ ನಿರ್ಮಾಣ ಕಾರ್ಯದಲ್ಲಿ ಶಿಕ್ಷಣದ ಮಹತ್ವವನ್ನರಿತ ಪ್ರತಿಯೊಂದು ರಾಷ್ಟ್ರವು ಶಿಕ್ಷಣದ ಪ್ರಸಾರ ಪ್ರಗತಿಗಾಗಿ ವಿಶೇಷವಾದ ಆಸಕ್ತಿಯನ್ನು ವಹಿಸುತ್ತದೆ.

ಇತ್ತೀಚಿಗೆ ನಮ್ಮ ದೇಶದಲ್ಲಿ ಮಾನವ ಸಂಪನ್ಮೂಲ ಅಭಿವೃದ್ಧಿ ಮಂತ್ರಾಲಯವು ನಮ್ಮ ಶಿಕ್ಷಣ ವ್ಯವಸ್ಥೆಯು ಎಲ್ಲಾ ಸಾಮಾಜಿಕವಾಗಿ ಆರ್ಥಿಕವಾಗಿ ಕೆಳಸ್ಥರದ ಮಕ್ಕಳಿಗೂ ತಲುಪಬೇಕು ಎನ್ನುವ ಮಹದಾಶಯದೊಂದಿಗೆ ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣ ಯೋಜನೆಯನ್ನು ಹಮ್ಮಿಕೊಂಡು ಗುಣಾತ್ಮಕ ಕಲಿಕೆಯ ಗುರಿಯನ್ನು ಇಟ್ಟುಕೊಂಡಿದೆ. ಈ ದಿಸೆಯಲ್ಲಿ ಕರ್ನಾಟಕ ರಾಜ್ಯದ ಸಾರ್ವಜನಿಕ ಶಿಕ್ಷಣ ಇಲಾಖೆ ಹಲವಾರು ಮಾರ್ಗೋಪಾಯಗಳನ್ನು ಅಳವಡಿಸಿಕೊಂಡಿದೆ ಹಾಗೂ ಹೊಸ ಹೊಸ ವಿಧಾನಗಳತ್ತ ದೃಷ್ಟಿಹರಿಸಿದೆ. ಹೀಗೆ ಬದಲಾಗುತ್ತಿರುವ ಪರಿಸ್ಥಿತಿಗನುಗುಣವಾಗಿ ಪ್ರಾಥಮಿಕ ಶಿಕ್ಷಣ ಕ್ಷೇತ್ರದಲ್ಲಿ ನವನವೀನ ಸಂಶೋಧನೆ ಮತ್ತು ಆವಿಷ್ಕಾರಗಳು ನಡೆಯುತ್ತಿರುತ್ತವೆ. ಈ ನವನವೀನ ಕ್ಷೇತ್ರಗಳಲ್ಲಿ ಶೈಕ್ಷಣಿಕ ಆಡಳಿತಗಾರರಿಗೆ ಹಾಗೂ ಪ್ರಾಥಮಿಕ ಶಾಲಾ ಶಿಕ್ಷಕರಿಗೆ ತರಬೇತಿ ನೀಡಬೇಕಾದದ್ದು ಅಗತ್ಯವಾಗಿದೆ. ಈ ದೃಷ್ಟಿಯಿಂದ ವಿವಿಧ ಶೈಕ್ಷಣಿಕ ಅಂಗ ಸಂಸ್ಥೆಗಳು ರಾಜ್ಯ ಸಾರ್ವಜನಿಕ ಶಿಕ್ಷಣ ಇಲಾಖೆಯ ಅಡಿಯಲ್ಲಿ ಕಾರ್ಯ ನಿರ್ವಹಿಸುತ್ತವೆ. ಪ್ರಾಥಮಿಕ ಶಿಕ್ಷಣದಲ್ಲಿ ಗುಣಾತ್ಮಕ ಬದಲಾವಣೆಯ ಜೊತೆಗೆ ಸಾಮರ್ಥ್ಯಾಧಾರಿತ ಕಲಿಕೆಯನ್ನು ಮಕ್ಕಳಲ್ಲಿ ಬೆಳೆಸುವ ದೃಷ್ಟಿಯಿಂದ ಶಿಕ್ಷಣದಲ್ಲಿ ಸ್ಫೂರ್ತಿ ತುಂಬಲು ಕೇಂದ್ರ ಪ್ರಾಯೋಜಿತ ಜಿಲ್ಲಾ ಪ್ರಾಥಮಿಕ ಶಿಕ್ಷಣ ಯೋಜನೆಯ ಪ್ರಕಾರ ಡಯಟ್ ನಿಯಂತ್ರಣದ ಅಡಿಯಲ್ಲಿ ತಾಲೂಕು ಮಟ್ಟದಲ್ಲಿ ಕ್ಷೇತ್ರ ಸಂಪನ್ಮೂಲ ಕೇಂದ್ರಗಳು ಸ್ಥಾಪನೆಯಾದವು.

## ಅಧ್ಯಯನದ ಮಹತ್ವ

ಪ್ರಾಥಮಿಕ ಶಿಕ್ಷಣ ಸಾರ್ವತ್ರೀಕರಣಕ್ಕಾಗಿ ಶಿಕ್ಷಕರ ತರಬೇತಿಗೆ ಸರ್ಕಾರವು ಕೋಟಿಗಟ್ಟಲೇ ಹಣವನ್ನು ವ್ಯಯ ಮಾಡುತ್ತದೆ. ಕೇವಲ ಸಂಬಳಕ್ಕಾಗಿ ಮಾಡುವ ವೃತ್ತಿ ಶಿಕ್ಷಕ ವೃತ್ತಿಯಲ್ಲ. ಇಡೀ ರಾಷ್ಟ್ರದ ನಿರ್ಮಾಣದ ಜವಾಬ್ದಾರಿಯೂ ಶಿಕ್ಷಕರ ಮೇಲಿದೆ. "A Teacher is better than a Doctor" ಎಂಬಂತೆ ಒಂದು ವೈದ್ಯ ವೃತ್ತಿಗಿಂತ ಶಿಕ್ಷಕ ವೃತ್ತಿ ಘನತೆಯುಳ್ಳದ್ದು. ಹೀಗಾಗಿ ಆತನು ಸತತ ವಿದ್ಯಾರ್ಥಿಯಂತೆ ಜೀವನ ಕಳೆಯಬೇಕಾಗುತ್ತದೆ, "A Lamp can light up another lamp only when it is burning." ಎನ್ನುತ್ತಾರೆ. ಆದರೆ ಹೊಸ ಹೊಸ ವಿಷಯಗಳಲ್ಲಿ ದಿನ ನಿತ್ಯ ಅಭ್ಯಾಸ ಮಾಡಿ ವಿದ್ಯಾರ್ಥಿಗಳಿಗೆ ಬೋಧಿಸಬೇಕು. ಪ್ರಸ್ತುತ ಪಠ್ಯಕ್ರಮವು ಶಿಶು ಕೇಂದ್ರಿತ ಪಠ್ಯಕ್ರಮವಾಗಿದ್ದು, ಮಗುವನ್ನು ಆಹ್ಲಾದಕರ, ಉಲ್ಲಾಸಕರ ವಾತಾವರಣದಲ್ಲಿ ಕಳೆಯುವಂತೆ ಪ್ರೇರೇಪಿಸಬಹುದು ಹಾಗೂ ಸ್ಫೂರ್ತಿ ನೀಡುವುದು ಕ್ಷೇತ್ರ ಸಂಪನ್ಮೂಲ ಕೇಂದ್ರದ ಆದ್ಯ ಕರ್ತವ್ಯವಾಗಿದೆ. ಈ ನಿಟ್ಟಿನಲ್ಲಿ ನವೀನ ಪಾಠ ಬೋಧನೆ ಕಲಿಕಾ ಸಾಮಗ್ರಿ ತಯಾರಿಕೆ ಚೈತನ್ಯ, ನಾಟಕೀಯ, ರಂಗಕಲೆ ಮೂಲಕ ಪಠ್ಯವನ್ನು ಮಕ್ಕಳಿಗೆ ಮೂರ್ತೀಕರಿಸುವಂತೆ ಮಾಡಲು ಹಾಗೂ ಶೈಕ್ಷಣಿಕ ಆಡಳಿತಗಾರರಿಗೆ ಮತ್ತು ಪ್ರಾಥಮಿಕ ಶಾಲಾ ಶಿಕ್ಷಕರಿಗೆ ವಿವಿಧ ತರಬೇತಿ ನೀಡಲು ತಾಲೂಕು ಮಟ್ಟದಲ್ಲಿ ಸ್ಥಾಪನೆಯಾದ ಬಿ.ಆರ್.ಸಿ. ಕೇಂದ್ರಗಳ ಕಾರ್ಯ ವೈಖರಿ ಆಡಳಿತ ರಚನೆ ಅವುಗಳ ಸಂಘಟಿಸುವ ತರಬೇತಿ ಕಾರ್ಯಗಳು ಹೆಚ್ಚು ಸಂಶೋಧನೆಯಾಗಿಲ್ಲದ ಕಾರಣ ಸಂಶೋಧಕ ಪ್ರಸ್ತುತ ಅಧ್ಯಯನವನ್ನು ಕೈಗೆತ್ತಿಗೊಂಡಿದೆ.

## ಸಮಸ್ಯೆಯ ನಿರೂಪಣೆ

"ಹೊಸದುರ್ಗ ತಾಲೂಕಿನ ಪ್ರಾಥಮಿಕ ಶಾಲಾ ಶಿಕ್ಷಣದ ಗುಣಮಟ್ಟವನ್ನು ಸುಧಾರಿಸುವಲ್ಲಿ ಕ್ಷೇತ್ರ ಹಾಗೂ ಸಮೂಹ ಸಂಪನ್ಮೂಲ ವ್ಯಕ್ತಿಗಳು ನಿರ್ವಹಿಸುತ್ತಿರುವ ಕಾರ್ಯಗಳ ಬಗ್ಗೆ ಪ್ರಾಥಮಿಕ ಶಾಲಾ ಮುಖ್ಯೋಪಾಧ್ಯಾಯರು ಹೊಂದಿರುವ ಅಭಿಪ್ರಾಯ ಕುರಿತು ಅಧ್ಯಯನ"

## ಅಧ್ಯಯನದ ವ್ಯಾಪ್ತಿ

1. ಪ್ರಸ್ತುತ ಅಧ್ಯಯನವು ಹೊಸದುರ್ಗ ತಾಲೂಕಿನ ಕ್ಷೇತ್ರ ಹಾಗೂ ಸಮೂಹ ಸಂಪನ್ಮೂಲ ವ್ಯಕ್ತಿಗಳು ನಿರ್ವಹಿಸುತ್ತಿರುವ ಕಾರ್ಯಗಳಿಗೆ ಮಾತ್ರ ಸೀಮಿತವಾಗಿದೆ.
2. ಪ್ರಸ್ತುತ ಸಂಶೋಧನಾ ಅಧ್ಯಯನದಲ್ಲಿ ಪ್ರಾಥಮಿಕ ಶಾಲಾ ಮುಖ್ಯೋಪಾಧ್ಯಾಯರು ನೀಡಿರುವ ಅಭಿಪ್ರಾಯಗಳನ್ನು ಕ್ಷೇತ್ರ ಹಾಗೂ ಸಮೂಹ ಸಂಪನ್ಮೂಲ ವ್ಯಕ್ತಿಗಳ ಕಾರ್ಯಗಳಿಗೆ ಅಷ್ಟೇ ಸೀಮಿತವಾಗಿದೆ.

## ಪ್ರಸ್ತುತ ಅಧ್ಯಯನದ ಉದ್ದೇಶಗಳು

1. ಕ್ಷೇತ್ರ ಮತ್ತು ಸಮೂಹ ಸಂಪನ್ಮೂಲ ವ್ಯಕ್ತಿಗಳು ನಿರ್ವಹಿಸುತ್ತಿರುವ ಕಾರ್ಯಗಳ ಬಗ್ಗೆ ಮುಖ್ಯೋಪಾಧ್ಯಯರ ಅಭಿಪ್ರಾಯ ಸಂಗ್ರಹಿಸುವುದು.
2. ಪ್ರಾಥಮಿಕ ಶಾಲಾ ಶಿಕ್ಷಣದ ಗುಣಮಟ್ಟ ಸುಧಾರಿಸುವಲ್ಲಿ ಬಿ.ಆರ್.ಸಿ ಯ ಪಾತ್ರವನ್ನು ಗುರ್ತಿಸುವುದು.

 ISSN : 2249-2429

3. ಕ್ಷೇತ್ರ ಸಂಪನ್ಮೂಲ ವ್ಯಕ್ತಿಗಳು ಹಾಗೂ ಸಮೂಹ ಸಂಪನ್ಮೂಲ ವ್ಯಕ್ತಿಗಳು ಸಂಘಟಿಸುವ ವಿಶೇಷ ಕಾರ್ಯಕ್ರಮಗಳ ವಿವರವನ್ನು ತಿಳಿಯುವುದು.
4. ಪ್ರಾಥಮಿಕ ಶಾಲಾ ಮುಖ್ಯೋಪಾಧ್ಯಾಯರಿಗೆ ಹಾಗೂ ಶಿಕ್ಷಕರಿಗೆ ಕ್ಷೇತ್ರ ಸಂಪನ್ಮೂಲ ಕೇಂದ್ರದವರು ಸಂಘಟಿಸಿದ ತರಬೇತಿ ಕಾರ್ಯಗಳ ಬಗ್ಗೆ ಮುಖ್ಯೋಪಾಧ್ಯಯರ ಅಭಿಪ್ರಾಯಗಳನ್ನು ಸಂಗ್ರಹಿಸುವುದು.
5. ಕ್ಷೇತ್ರ ಸಂಪನ್ಮೂಲ ವ್ಯಕ್ತಿಗಳ ವಾರ್ಷಿಕವಾಗಿ ಕೈಗೊಳ್ಳುವ ಶಾಲಾ ಚಟುವಟಿಕೆಗಳನ್ನು ಗುರ್ತಿಸುವುದು.
6. ಕ್ಷೇತ್ರ ಸಂಪನ್ಮೂಲ ವ್ಯಕ್ತಿಗಳ ಕಾರ್ಯ ದಕ್ಷತೆಯನ್ನು ಮೌಲ್ಯಮಾಪನ ಮಾಡುವುದು ಅಥವಾ ಓರೆ ಹಚ್ಚುವುದು.
7. ಕ್ಷೇತ್ರ ಸಂಪನ್ಮೂಲ ಕೇಂದ್ರದ ರಚನೆ ಮತ್ತು ಅವುಗಳು ಕಾರ್ಯನಿರ್ವಹಿಸುವ ಕರ್ತವ್ಯ ಗುರಿಗಳು ಮತ್ತು ಕಾರ್ಯಗಳನ್ನು ತಿಳಿಯುವುದು.

## ತಾಂತ್ರಿಕ ಪದಗಳ ವ್ಯಾಖ್ಯಾನಗಳು

**ಪ್ರಾಥಮಿಕ ಶಿಕ್ಷಣ :** 6 ರಿಂದ 14 ವರ್ಷದ ಮಕ್ಕಳಿಗೆ ನೀಡುವ ಔಪಚಾರಿಕ ಶಿಕ್ಷಣದ ಅವಧಿಯನ್ನು ಪ್ರಾಥಮಿಕ ಶಿಕ್ಷಣ ಎಂದು ಕರೆಯುವರು.

**ಕ್ಷೇತ್ರ ಹಾಗೂ ಸಮೂಹ ಸಂಪನ್ಮೂಲ ವ್ಯಕ್ತಿಗಳು :** ಶಿಕ್ಷಕರ ಸಾಮರ್ಥ್ಯ ವರ್ಧನೆ ಮತ್ತು ಪ್ರಾಥಮಿಕ ಶಿಕ್ಷಣದ ಗುಣಾತ್ಮಕತೆಯ ಸಾರ್ವತ್ರೀಕರಣದ ಸಾಧನೆಗಾಗಿ ಸರ್ವ ಶಿಕ್ಷಣ ಅಭಿಯಾನದಡಿಯಲ್ಲಿ ಡಯಟ್ ನಿರ್ದೇಶನದಂತೆ ಈ ಕ್ಷೇತ್ರ ಸಂಪನ್ಮೂಲವನ್ನು ತಾಲೂಕು ಮಟ್ಟದಲ್ಲಿ ಒಂದರಂತೆ ನೆಲೆಗೊಳಿಸಲಾಯಿತು. ಇದನ್ನು ಬಿ.ಆರ್.ಸಿ. ಗಳೆಂದೂ ಕರೆಯುವರು. ಇದರ ಅಡಿಯಲ್ಲಿ ಕ್ಷೇತ್ರ ಹಾಗೂ ಸಮೂಹ ಸಂಪನ್ಮೂಲ ವ್ಯಕ್ತಿಗಳು ಕಾರ್ಯ ನಿರ್ವಹಿಸುತ್ತಾರೆ.

## ಅಧ್ಯಯನದ ವಿಧಾನ

ಪ್ರಸ್ತುತ ಅಧ್ಯಯನಕ್ಕೆ ವಿವರಣಾತ್ಮಕ ಸಂಶೋಧನೆಯ "**ಸಮೀಕ್ಷಾ–ವಿಧಾನ**" ವನ್ನು ಅಳವಡಿಸಿಕೊಳ್ಳಲಾಗಿದೆ.

## ಪ್ರತಿಚಯನದ ಆಯ್ಕೆ

ಹೊಸದುರ್ಗ ತಾಲ್ಲೂಕಿನಲ್ಲಿ 14 ಕ್ಲಸ್ಟರ್‌ಗಳಿವೆ ಪ್ರತಿಯೊಂದು ಕ್ಲಸ್ಟರ್‌ನಲ್ಲಿ 4 ಶಾಲೆಗಳನ್ನು ಈ ಕಿರು ಸಂಶೋಧನೆಗೆ ಆಯ್ದು ಕೊಳ್ಳಲಾಗಿದೆ.

## ದತ್ತಾಂಶ ಸಂಗ್ರಹಣೆಗೆ ಬಳಸಿದ ಸಾಧನಗಳು

ಈ ಸಂಶೋಧನೆಗಾಗಿ ಆಯ್ಕೆ ಮಾಡಿಕೊಂಡಿರುವ ವಿಷಯದ ಬಗ್ಗೆ ವಿವಿಧ ಮೂಲಗಳ ಮಾಹಿತಿಗಳನ್ನು ಸಂಗ್ರಹಿಸಲು ಬಳಸುವ ಒಂದು ಸಾಧನವೆಂದರೆ "**ವ್ಯಕ್ತಿಗತ ಸಂದರ್ಶನ**" ಹಾಗೂ "**ದರ್ಜಾ ಮಾಪನ**" ಯನ್ನು ಬಳಸಲಾಗಿದೆ.

**ದರ್ಜಾ ಮಾಪನ :** ಸಂಶೋಧಕರು ಪ್ರಾಥಮಿಕ ಶಾಲಾ ಶಿಕ್ಷಣದ ಗುಣಮಟ್ಟವನ್ನು ಹೆಚ್ಚಿಸಲು ಕ್ಷೇತ್ರ ಹಾಗೂ ಸಮೂಹ ಸಂಪನ್ಮೂಲ ವ್ಯಕ್ತಿಗಳು ನಿರ್ವಹಿಸುತ್ತಿರುವ ಕಾರ್ಯಗಳ ಬಗ್ಗೆ ಪ್ರಾಥಮಿಕ ಶಾಲಾ ಮುಖ್ಯೋಪಾಧ್ಯಾಯರು ಹೊಂದಿರುವ ಅಭಿಪ್ರಾಯವನ್ನು ಕಂಡು ಹಿಡಿಯಲು ಸ್ವರಚಿತ ದರ್ಜಾಮಾಪನವನ್ನು ಬಳಸಲಾಗಿದೆ.

## ದತ್ತಾಂಶ ವಿಶ್ಲೇಷಣೆಗೆ ಬಳಸಬಹುದಾದ ಸಂಖ್ಯಾಶಾಸ್ತ್ರೀಯ ತಂತ್ರಗಳು

ಪ್ರಸ್ತುತ ಅಧ್ಯಯನದಲ್ಲಿ ದತ್ತಾಂಶಗಳ ವಿಶ್ಲೇಷಣೆಗಾಗಿ ಸಂಖ್ಯಾಶಾಸ್ತ್ರೀಯ ತಂತ್ರವಾದ ಶೇಕಡವಾರನ್ನು ಬಳಸಿಕೊಳ್ಳಲಾಗಿದೆ. ಇದಕ್ಕೆ ಬಳಸಿದ ಸೂತ್ರವೆಂದರೆ –

$$\text{ಶೇಕಡವಾರು ಸರಾಸರಿ} = \frac{\text{ಒಟ್ಟು ಪ್ರತಿಕ್ರಿಯೆಗಳ ಸಂಖ್ಯೆ}}{\text{ಒಟ್ಟು ಮುಖ್ಯೋಪಾಧ್ಯಾಯರ ಸಂಖ್ಯೆ}} \times 100$$

## ಅಧ್ಯಯನದ ಫಲಿತಾಂಶಗಳು

1. ಅಧ್ಯಯನದ ಪೂರ್ಣ ವಿಶ್ಲೇಷಣೆಯಿಂದ ತಿಳಿಸುವುದೇನೆಂದರೆ, ಎಲ್ಲ ಮುಖ್ಯೋಪಾಧ್ಯಾಯರು ಕ್ಷೇತ್ರ ಸಂಪನ್ಮೂಲ ಕೇಂದ್ರದವರು ಸಂಘಟಿಸಿದ ತರಬೇತಿ ಕಾರ್ಯಕ್ರಮಗಳ ಬಗ್ಗೆ ಮುಖ್ಯೋಪಾಧ್ಯಾಯರು ಧನಾತ್ಮಕ ಅಭಿಪ್ರಾಯವನ್ನು ಹೊಂದಿದ್ದಾರೆ.
2. ತಮ್ಮ ಕ್ಷೇತ್ರದಲ್ಲಿ ಬರುವ ಸಂಪನ್ಮೂಲ ಕೇಂದ್ರ ಕ್ಲಸ್ಟರಗಳು ಹಮ್ಮಿಕೊಳ್ಳುವ ಶೈಕ್ಷಣಿಕ ಯೋಜನೆಗಳನ್ನು ತೃಪ್ತಿಕರವಾಗಿ ನಡೆಸುತ್ತದೆ. ಹಾಗೂ ಸೇವಾ ನಿರತ ಶಿಕ್ಷಕರಿಗೆ ತರಬೇತಿಗಳನ್ನು ಆಗಾಗ್ಗೆ ನೀಡುತ್ತಿದೆ ಎಂಬುದು ತಿಳಿದು ಬರುತ್ತದೆ.
3. ಕ್ಲಸ್ಟರ್ ಹಂತಗಳಲ್ಲಿ ನಡೆಯುವ ಶೈಕ್ಷಣಿಕ ಸಮಾಲೋಚನಾ ಸಭೆಗಳಲ್ಲಿ ಮುಖ್ಯೋಪಾಧ್ಯಾಯರು ಭಾಗವಹಿಸುತ್ತಾರೆ. ಇದು ತಿಂಗಳಿಗೊಮ್ಮೆ ನಡೆಯುತ್ತದೆ. ಇದರಲ್ಲಿ ತಮ್ಮ ಕುಂದು ಕೊರತೆಗಳನ್ನು ಬಗೆಹರಿಸಿಕೊಳ್ಳಬಹುದು.
4. ಶಾಲಾ ತಪಾಸಣಾ ಅಥವಾ ಮೌಲ್ಯಮಾಪನಗಳ್ಲ ಸಂದರ್ಭಗಳಲ್ಲಿ ಬಿ.ಇ.ಓ ಅಥವಾ ಬಿ.ಆರ್.ಸಿ. ಗಳಿಗೆ ಸಿ.ಆರ್.ಪಿ. ಹಾಗೂ ಬಿ.ಆರ್.ಪಿ. ಗಳು ಸಹಕಾರ ನೀಡಿ ಶೈಕ್ಷಣಿಕ ಗುಣಮಟ್ಟ ಕಾಪಾಡುವಲ್ಲಿ ಸಹಾಯ ಮಾಡುತ್ತೀರೆಂದು ತಿಳಿದು ಬರುವುದು.
5. ವಿಷಯವಾರು ತರಬೇತಿ ಕಾರ್ಯಕ್ರಮವು ಬೋಧನೆಯಲ್ಲಿ ವಿಷಯದ ಮೇಲೆ ಹೆಚ್ಚು ಪ್ರಭುತ್ವ ಸಾಧಿಸಲು ಮಕ್ಕಳಲ್ಲಿ ಪರಿಣಾಮಕಾರಿಯಾದ ಕಲಿಕೆ ಉಂಟು ಮಾಡುವಲ್ಲಿ ಹಾಗೂ ವಿಷಯಗಳ ಕಲಿಕೆ–ಬೋಧನೆ ಗುಣಮಟ್ಟ ಸುಧಾರಿಸಲು ತರಬೇತಿಗಳಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ಶಿಕ್ಷಕರೊಡನೆ ಸಕ್ರೀಯವಾಗಿ ಭಾಗವಹಿಸಿ ಸೂಕ್ತ ವಿಧಾನದಿಂದ ತರಬೇತಿ ನೀಡುತ್ತಾರೆ.
6. ಹಲವಾರು ಕಾರಣಗಳಿಂದ ಶಾಲೆಗಳಿಗೆ ಹಾಜರಾಗದಿರುವ ಹಾಗೂ ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಗುರ್ತಿಸಿ ಅವರಿಗೆ ಪೂರಕ ಕಾರ್ಯಕ್ರಮಗಳನ್ನು ಆಗಾಗ್ಗೆ ಹಮ್ಮಿಕೊಳ್ಳುತ್ತಾರೆಂಬುದು ತಿಳಿದು ಬರುತ್ತದೆ.
7. ಗಣತಿ ಕಾರ್ಯ ದಾಖಲಾತಿ ಆಂದೋಲನದಲ್ಲಿ ಅಪರೂಪವಾಗಿ ಭಾಗಿಯಾಗಿರುತ್ತಾರೆ ಹಾಗೂ ದಾಖಲಾತಿ ಆಂದೋಲನಗಳು ಶಾಲಾ ಹಂತಗಳಲ್ಲಿ ಮೇ/ಜೂನ್ ತಿಂಗಳನಲ್ಲಿ ಜರುಗುವಂತೆ ವ್ಯವಸ್ಥೆಗೊಳಿಸಲು ಮಾರ್ಗದರ್ಶನ ನೀಡುತ್ತಿರುತ್ತಾರೆ ಎಂಬುದು ತಿಳಿದು ಬರುತ್ತದೆ.
8. ಸರ್ವ ಶಿಕ್ಷಣ ಅಭಿಯಾನ ಕಾರ್ಯಗಳ ಅನುಷ್ಠಾನಗಳಲ್ಲಿ ಸಕ್ರಿಯವಾಗಿ ಬಿ.ಆರ್.ಪಿ ಹಾಗೂ ಸಿ.ಆರ್.ಪಿಗಳು ಭಾಗವಹಿಸುತ್ತಾರೆಂದು ಕಂಡು ಬಂದಿದೆ.

9. ಅಕ್ಷರ ದಾಸೋಹ ಕಾರ್ಯಕ್ರಮದಿಂದ ಹಾಜರಾತಿಯಲ್ಲಿ ಹೆಚ್ಚಳವಾಗಿರುವುದನ್ನು ಹಾಗೂ ಬಡ ಮಕ್ಕಳು ಹಸಿವಿನಿಂದ ಪಾರು ಮಾಡಿರುವುದನ್ನು ನೋಡಬಹುದಾಗಿದೆ, ಇದಕ್ಕೆ ಸೂಕ್ತ ಸಲಹೆಗಳನ್ನು ಕೊಡುತ್ತಾರೆಂದು ಕಂಡು ಬಂದಿದೆ.
10. ಕ್ಲಸ್ಟರ್ ಕೇಂದ್ರವನ್ನು ಒಂದು ಸಂಪನ್ಮೂಲ ಕೇಂದ್ರವನ್ನಾಗಿ ಅಭಿವೃದ್ಧಿಪಡಿಸಲು ಸಾಹಿತ್ಯ ಹಾಗೂ ಕಲಿಕೋಪಕರಣಗಳು ದೊರೆಯುವಂತೆ ಅನುಕೂಲ ಮಾಡಿಕೊಟ್ಟಿದ್ದಾರೆಂದು ತಿಳಿದು ಬಂದಿದೆ.
11. ಸೇತುಬಂಧ ಕಲಿಕಾ ಆಂದೋಲನ ಸರಿಯಾಗಿ ನಡೆಯಲು ಶಿಕ್ಷಕರಿಗೆ ಸೂಕ್ತವಾದ ಮಾರ್ಗದರ್ಶನ ನೀಡುತ್ತಾರೆ ಹಾಗೂ ಕಲಿಕೋಪಕರಣಗಳ ಬಳಕೆ ಕುರಿತು ಪ್ರಾತ್ಯಕ್ಷಿತೆ ನೀಡುತ್ತಾರೆಂದು ಕಂಡು ಬಂದಿದೆ.
12. ಮಕ್ಕಳು ಪಠ್ಯ ಹಾಗೂ ಪಠ್ಯೇತರ ಚಟುವಟಿಕೆಗಳಲ್ಲಿ ಮಾಡಿದ ಪ್ರಗತಿಯನ್ನು ವೀಕ್ಷಿಸುತ್ತಾರೆಂದು ಹಾಗೂ ವಿದ್ಯಾರ್ಥಿಗಳ ಮನೋಭಾವ ಮತ್ತು ಕೌಶಲ್ಯಗಳು ಅಭಿವೃದ್ಧಿಯಾಗಲು ವಿಶೇಷ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಾರೆಂದು ತಿಳಿದು ಬಂದಿದೆ.
13. ಎಸ್.ಡಿ.ಎಂ.ಸಿ ರಚನೆ ಇದಕ್ಕೆ ಸಮುದಾಯದ ಸಹಕಾರ ಹಾಗೂ ಎಸ್.ಡಿ.ಎಂ.ಸಿ ಕ್ರಿಯಾಶೀಲವಾಗಿರಲು ದೇಣಿಗೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರಿಗೆ ಸೂಕ್ತ ಮಾರ್ಗದರ್ಶನ ನೀಡುತ್ತಾರೆಂದು ತಿಳಿದು ಬರುತ್ತದೆ.
14. ಸಮುದಾಯದತ್ತ ಶಾಲೆ ಕಾರ್ಯಕ್ರಮ ವ್ಯವಸ್ಥಿತವಾಗಿ ನಡೆಯಲು ಸೂಕ್ತವಾದ ತರಬೇತಿ ನೀಡಿ, ಅವರಿಗೆ ಕಾಲ ಕಾಲಕ್ಕೆ ಮಾರ್ಗದರ್ಶನ ಹಾಗೂ ನೆರವು ನೀಡುತ್ತಾರೆಂದು ತಿಳಿದು ಬರುತ್ತದೆ.
15. ಸಾರ್ವತ್ರಿಕ ದಾಖಲಾತಿಗೆ ಸಂಬಂಧಿಸಿದಂತೆ ಶಾಲಾ ಮಕ್ಕಳ ಗಣತಿ ಖಾತ್ರಿಪಡಿಸಿಕೊಳ್ಳುವುದು ಹಾಗೂ ಶಾಲೆಯಿಂದ ಹೊರಗುಳಿದ ಮಕ್ಕಳಿಗೆ ವಿಶೇಷ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಾರೆಂದು ಕಂಡು ಬರುತ್ತದೆ.
16. ವಿಶೇಷ ಸಾಮರ್ಥ್ಯವುಳ್ಳ ಮಕ್ಕಳು ಸಾಮಾನ್ಯ ಮಕ್ಕಳಿಗಿಂತ ಭಿನ್ನವಾಗಿರುತ್ತಾರೆ. ಅವರನ್ನು ಗುರ್ತಿಸಿ ದಾಖಲಾತಿ ಮಾಡಿಕೊಳ್ಳಬೇಕೆಂದು ಮುಖ್ಯೋಪಾಧ್ಯಾಯರಿಗೆ ಬಿ.ಆರ್.ಪಿ ಹಾಗೂ ಸಿ.ಆರ್.ಪಿ.ಗಳು ಆಗಾಗ್ಗೆ ಸಲಹೆಗಳನ್ನು ಕೊಡುತ್ತಾರೆಂದು ತಿಳಿದು ಬರುತ್ತದೆ.
17. ಶಾಲೆಗಳ ಅಭಿವೃದ್ಧಿಗೆ ಸಮುದಾಯ ಮತ್ತು ಸಂಘ–ಸಂಸ್ಥೆಗಳ ಸಹಾಯ ಪಡೆದು ಶಾಲೆಗಳ ಅಭಿವೃದ್ಧಿಗೊಳಿಸುವಲ್ಲಿ ಆಗಾಗ್ಗೆ ಪ್ರಯತ್ನಿಸುತ್ತಾರೆಂದು ತಿಳಿದು ಬರುತ್ತದೆ.
18. ಯಾವುದೇ ಒಂದು ಯೋಜನೆ ರೂಪಿಸಬೇಕಾದರೆ ಶಾಲೆಯಲ್ಲಿರುವ ಸೌಲಭ್ಯಗಳ ಬಗ್ಗೆ ಸಂಶೋಧನೆ ನಡೆಸಿ, ನಂತರ ಕೊರತೆ ಇರುವ ಸೌಲಭ್ಯಗಳನ್ನು ಒದಗಿಸುವಲ್ಲಿ ಸಹಕಾರ ನೀಡುತ್ತಾರೆ.
19. ಶೈಕ್ಷಣಿಕ ವರ್ಷದಲ್ಲಿ ಜರಗುವ ಕಾರ್ಯಕ್ರಮಗಳ ಯೋಜನೆ ಮತ್ತು ಅನುಷ್ಠಾನಗೊಳಿಸುವ ಬಗ್ಗೆ ವಿವರಣೆ ನೀಡುತ್ತಾರೆಂದು ತಿಳಿದು ಬರುವುದು.
20. ಬ್ಲಾಕ್ ಹಂತಗಳಲ್ಲಿ ಜರಗುವ ಸಭೆ ಸಮಾರಂಭಗಳ ಬಗ್ಗೆ ಸೂಕ್ತ ಮಾಹಿತಿಯನ್ನು ಯಾವಾಗಲೂ ಸಂಪನ್ಮೂಲ ವ್ಯಕ್ತಿಗಳು ಮುಖ್ಯೋಪಾಧ್ಯಾಯರಿಗೆ ನೀಡುತ್ತಾರೆಂದು ತಿಳಿದು ಬರುತ್ತದೆ.

## ಅಧ್ಯಯನದ ಮಿತಿಗಳು

1. ಈ ಅಧ್ಯಯನದ ಹೊಸದುರ್ಗ ತಾಲ್ಲೂಕಿನ ಕ್ಷೇತ್ರ ಹಾಗೂ ಸಮೂಹ ಸಂಪನ್ಮೂಲ ವ್ಯಕ್ತಿಗಳು ನಿರ್ವಹಿಸುತ್ತಿರುವ ಕಾರ್ಯಕ್ರಮಗಳಿಗೆ ಮಾತ್ರ ಸೀಮಿತವಾಗಿದೆ.

2. ಪ್ರಸ್ತುತ ಕಿರು ಸಂಶೋಧನಾ ಅಧ್ಯಯನದಲ್ಲಿ ಪ್ರಾಥಮಿಕ ಶಾಲಾ ಮುಖ್ಯೋಪಾಧ್ಯಾಯರು ನೀಡಿರುವ ಅಭಿಪ್ರಾಯಗಳನ್ನು ಕ್ಷೇತ್ರ ಹಾಗೂ ಸಮೂಹ ಸಂಪನ್ಮೂಲ ವ್ಯಕ್ತಿಗಳ ಕಾರ್ಯಗಳಿಗೆ ಅಷ್ಟೇ ಸೀಮಿತವಾಗಿದೆ.

3. ಪ್ರಸ್ತುತ ಅಧ್ಯಯನವು ಹೊಸದುರ್ಗ ತಾಲ್ಲೂಕಿನ ಐವತ್ತಾರು ಪ್ರಾಥಮಿಕ ಶಾಲಾ ಮುಖ್ಯೋಪಾಧ್ಯಾಯರಿಗೆ ಮಾತ್ರ ಸೀಮಿತವಾಗಿದೆ.

## ಫಲಿತಾಂಶಗಳ ದರ್ಜೆ

ಪ್ರಾಥಮಿಕ ಶಾಲಾ ಶಿಕ್ಷಣದ ಗುಣಮಟ್ಟವನ್ನು ಸುಧಾರಿಸುವಲ್ಲಿ ಸಂಪನ್ಮೂಲ ವ್ಯಕ್ತಿಗಳು ನಿರ್ವಹಿಸುತ್ತಿರುವ ಕಾರ್ಯಗಳ ಬಗ್ಗೆ ಪ್ರಾಥಮಿಕ ಶಾಲಾ ಮುಖ್ಯೋಪಾಧ್ಯಾಯರು ಧನಾತ್ಮಕ ಅಭಿಪ್ರಾಯವನ್ನು ಹೊಂದಿರುತ್ತಾರೆ. ಶಾಲಾ ಶಿಕ್ಷಣ ಗುಣಮಟ್ಟವನ್ನು ಸುಧಾರಿಸುವಲ್ಲಿ ಹಾಗೂ ಪ್ರಾಥಮಿಕ ಶಾಲಾ ಸಾರ್ವತ್ರೀಕರಣಗೊಳಿಸುವಲ್ಲಿ ಕ್ಷೇತ್ರ ಹಾಗೂ ಸಮೂಹ ಸಂಪನ್ಮೂಲ ಕೇಂದ್ರಗಳು ಹಮ್ಮಿಕೊಳ್ಳುವ ತರಬೇತಿ, ಶೈಕ್ಷಣಿಕ ಸಮಾಲೋಚನೆ, ಶೈಕ್ಷಣಿಕ ಯೋಜನೆ, ಮೌಲ್ಯಮಾಪನ, ಶಾಲಾ ದಾಖಲಾತಿ, ವ್ಯವಸ್ಥಿತ ಮಾರ್ಗದರ್ಶನ ಹಾಗೂ ಇತರೆ ವಿಶೇಷ ಕಾರ್ಯಕ್ರಮಗಳ ಬಗ್ಗೆ ಧನಾತ್ಮಕ ಮನೋಭಾವನೆಯನ್ನು ಹೊಂದಿರುತ್ತಾರೆ.

ಪ್ರಸ್ತುತ ಸ್ಥಿತಿಯಲ್ಲಿ ಸಮನ್ವಯ ಶಿಕ್ಷಣಕ್ಕೆ ಒತ್ತು ಕೊಟ್ಟಿರುವುದನ್ನು ನೋಡಬಹುದು. ಒಟ್ಟಾರೆಯಾಗಿ ಪ್ರಾಥಮಿಕ ಶಾಲಾ ಶಿಕ್ಷಣದ ಗುಣಮಟ್ಟ ಅವುಗಳನ್ನು ಸಮರ್ಪಕವಾಗಿ ನಿಭಾಯಿಸಲು ಹಾಗೂ ಸಾರ್ವತ್ರೀಕರಣ ಗೊಳಿಸಲು ಸಂಪನ್ಮೂಲ ವ್ಯಕ್ತಿಗಳು ಅವಶ್ಯಕ ಎಂಬುವುದು ಮುಖ್ಯೋಪಾಧ್ಯಾಯರ ಅಭಿಪ್ರಾಯವಾಗಿದೆ.

## ಶೈಕ್ಷಣಿಕ ನಿಹಿತಾರ್ಥಗಳು

1. ಪ್ರಾಥಮಿಕ ಶಾಲಾ ಮುಖ್ಯೋಪಾಧ್ಯಾಯರು ತರಬೇತಿ ಸಂದರ್ಭದಲ್ಲಿ ಎದುರಿಸುತ್ತಿರುವ ಸಮಸ್ಯೆಗಳನ್ನು ಈ ಅಧ್ಯಯನದಿಂದ ತಿಳಿಯಬಹುದು.
2. ಕ್ಷೇತ್ರ ಸಂಪನ್ಮೂಲ ವ್ಯಕ್ತಿಗಳು ಸಂಘಟಿಸಿದ ಕಾರ್ಯಕ್ರಮಗಳ ಬಗ್ಗೆ ಮುಖ್ಯೋಪಾಧ್ಯಯರ ಅಭಿಪ್ರಾಯಗಳನ್ನು ತಿಳಿದು ಇನ್ನು ಉತ್ತಮಗೊಳಿಸುವ ಪ್ರಯತ್ನವನ್ನು ಮಾಡಬಹುದಾಗಿದೆ.
3. ಕ್ಷೇತ್ರ ಸಂಪನ್ಮೂಲ ಕೇಂದ್ರ ನಡೆಸುವ ಕಾರ್ಯಕ್ರಮಗಳಿಂದ ಸಾರ್ವಜನಿಕ ಶಿಕ್ಷಣ ಇಲಾಖೆ, ಪಂಚಾಯತ್ ರಾಜ್ ವ್ಯವಸ್ಥೆ, ಶಿಕ್ಷಕರು, ವಿವಿಧ ಸಂಪನ್ಮೂಲ ವ್ಯಕ್ತಿಗಳು ಶಾಲಾ ಸಂಕೀರ್ಣದ ವ್ಯವಸ್ಥೆ ಇತ್ಯಾದಿಗಳನ್ನು ಸಮನ್ವಯಗೊಳಿಸುವಂತೆ ಮಾಡಬಹುದು.
4. ಮಕ್ಕಳು ಶೈಕ್ಷಣಿಕ ವರ್ಷದ ಅರ್ಧದಲ್ಲಿ ಶಾಲೆ ಬಿಡಲು ಕಾರಣಗಳನ್ನು ತಿಳಿಯಬಹುದು. ಹಾಗೂ ಅದಕ್ಕೆ ಸೂಕ್ತ ಮಾರ್ಗಗಳನ್ನು ಕಂಡು ಹಿಡಿಯಬಹುದು.
5. ವಿಶೇಷ ಸಾಮರ್ಥ್ಯವುಳ್ಳ ಮಕ್ಕಳು ಇಂದಿನ ಸ್ಥಿತಿಯಲ್ಲಿ ಯಾವ ರೀತಿ ಸಾಧನೆ ಮಾಡುತ್ತಿದ್ದಾರೆಂದು ತಿಳಿಯಬಹುದು ಹಾಗೂ ಅವರಿಗೆ ಸಮನ್ವಯ ಶಿಕ್ಷಣಕ್ಕೆ ದಾರಿ ಮಾಡಿಕೊಡಬಹುದು.

6. ಶಾಲೆಗಳ ಅಭಿವೃದ್ಧಿಗೆ ಸಮುದಾಯ ಮತ್ತು ಸಂಘ ಸಂಸ್ಥೆಗಳು ಹೇಗೆ ಸಹಕಾರ ನೀಡುತ್ತವೆ ಎಂಬುದನ್ನು ತಿಳಿಯಬಹುದು.
7. ಕ್ಲಸ್ಟರ್ ಅಧಿಕಾರಿಗಳಿಗೆ ಮುಖ್ಯೋಪಾಧ್ಯಾಯರು ಹೇಗೆ ಪ್ರತಿಕ್ರಿಯೆ ನೀಡುತ್ತಾರೆಂಬುದು ತಿಳಿಯಬಹುದು.
8. ಸಾರ್ವತ್ರಿಕ ಶಿಕ್ಷಣಕ್ಕೆ ಬಿ.ಆರ್.ಪಿ ಹಾಗೂ ಸಿ.ಆರ್.ಪಿ ಗಳ ಕರ್ತವ್ಯಗಳೇನೆಂಬುದನ್ನು ತಿಳಿಯಬಹುದಾಗಿದೆ.
9. ಪ್ರಚಲಿತ ಎಸ್.ಡಿ.ಎಂ.ಸಿ ಹೇಗೆ ಕೆಲಸ ನಿರ್ವಹಿಸುತ್ತದೆ ಎಂಬುದನ್ನು ತಿಳಿಯಬಹುದು.

## ಮುಂದಿನ ಸಂಶೋಧನೆಗೆ ಸಲಹೆಗಳು

1. ಕ್ಷೇತ್ರ ಸಂಪನ್ಮೂಲ ಕೇಂದ್ರ ಸಂಘಟಿಸಿದ ತರಬೇತಿ ಕಾರ್ಯಕ್ರಮಗಳ ಬಗ್ಗೆ ಪ್ರಾಥಮಿಕ ಶಾಲಾ ಶಿಕ್ಷಕರು ಹೊಂದಿರುವ ಅಭಿಪ್ರಾಯಗಳ ಕುರಿತು ಅಧ್ಯಯನ ಮಾಡಬಹುದು.
2. ಕ್ಷೇತ್ರ ಸಂಪನ್ಮೂಲ ಕೇಂದ್ರದ ಸಂಪನ್ಮೂಲ ವ್ಯಕ್ತಿಗಳ ತರಬೇತಿ ಕುರಿತು ಅಧ್ಯಯನ ಮಾಡಬಹುದು.
3. ಪ್ರಾಥಮಿಕ ಶಾಲಾ ಮುಖ್ಯೋಪಾಧ್ಯಾಯರು ಎದುರಿಸುತ್ತಿರುವ ಸಮಸ್ಯೆಗಳ ಕುರಿತು ಅಧ್ಯಯನ ಮಾಡಬಹುದು.
4. ಸಾರ್ವಜನಿಕ ಶಿಕ್ಷಣ ಇಲಾಖೆ ನೀಡುವ ಕಾರ್ಯಕ್ರಮಗಳ ಬಗ್ಗೆ ಕ್ಷೇತ್ರ ಹಾಗೂ ಸಮೂಹ ಸಂಪನ್ಮೂಲ ವ್ಯಕ್ತಿಗಳು ಹೊಂದಿರುವ ಅಭಿಪ್ರಾಯ ಕುರಿತು ಅಧ್ಯಯನ ಮಾಡಬಹುದು.
5. ಜಿಲ್ಲಾ ಮಟ್ಟದಲ್ಲಿ ಡಯಟ್ ನಿರ್ವಹಿಸುತ್ತಿರುವ ಕಾರ್ಯಕ್ರಮಗಳ ಬಗ್ಗೆ ಸಮೀಕ್ಷೆ ಮಾಡಬಹುದು.
6. ರಾಷ್ಟ್ರ ಮಟ್ಟದಲ್ಲಿ ಎನ್.ಸಿ.ಇ.ಆರ್.ಟಿ ಯು ನಿರ್ವಹಿಸುತ್ತಿರುವ ಕಾರ್ಯಕ್ರಮಗಳ ಬಗ್ಗೆ ಅಧ್ಯಯನ ಮಾಡಬಹುದು.
7. ರಾಜ್ಯ ಮಟ್ಟದಲ್ಲಿ ಡಿ.ಎಸ್.ಇ.ಆರ್.ಟಿ. ಯು ನಿರ್ವಹಿಸುತ್ತಿರುವ ಕಾರ್ಯಕ್ರಮಗಳ ಬಗ್ಗೆ ಅಧ್ಯಯನ ಮಾಡಬಹುದು.
8. ಎಸ್.ಡಿ.ಎಂ.ಸಿ ಯು ನಿರ್ವಹಿಸುತ್ತಿರುವ ಕಾರ್ಯಕ್ರಮಗಳ ಬಗ್ಗೆ ಸಮೀಕ್ಷೆ ಮಾಡಬಹುದು.

## ಆಕರ ಗ್ರಂಥಗಳು


- **Bhatia M. K.** (1984), "Measurement and Evaluation", Prakash Brothers Educational Jallandhar.
- **Buch M. B.** (1992), "Sixth Survey of Research in Education", NCERT, New Delhi.
- **Henry E. Garret** (1973), "Statistics in Psychology and Education", Vakils Feffer and Simals Ltd., Bombay.
- **Lokesh Koul** (2004), "Methodology of Educational Research", Vikas publications, New Delhi
- ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆ ಬೆಂಗಳೂರು ಗುಚ್ಛ ಸಂಪನ್ಮೂಲ ವ್ಯಕ್ತಿಗಳು ಮತ್ತು ಶಿಕ್ಷಣ ಸಂಯೋಜಕರ ಜವಾಬ್ದಾರಿ ಮತ್ತು ಕರ್ತವ್ಯಗಳ ಕುರಿತಾದ ಪುಸ್ತಕ (ಉಪಗ್ರಹ ಆಧಾರಿತ ತರಬೇತಿಗಾಗಿ– (2001)
- **'ಬಹುಮುಖಿ' ಪ್ರಾಥಮಿಕ ಶಾಲಾ ಶಿಕ್ಷಕರಾಗಿ ಸಂಪನ್ಮೂಲ ಸಾಹಿತ್ಯ'** ಕರ್ನಾಟಕ ಸರ್ಕಾರ, ಬೆಂಗಳೂರು (2005)
- ಡಿ.ಎಸ್.ಇ.ಆರ್. ಟಿ., "**ಚೈತನ್ಯ ಶಿಕ್ಷಕರ ಸಾಹಿತ್ಯ**", ಕರ್ನಾಟಕ ಸರ್ಕಾರ, ಬೆಂಗಳೂರು.
- ಡಿ.ಎಸ್.ಇ.ಆರ್.ಟಿ.(2003),"**ಶಿಕ್ಷಣದಲ್ಲಿ ರಂಗಕಲೆ, ಶಿಕ್ಷಕರಿಗೆ ತರಬೇತಿ ಸಾಹಿತ್ಯ**", ಕರ್ನಾಟಕ ಸರ್ಕಾರ, ಬೆಂಗಳೂರು
- ಡಿ.ಎಸ್.ಇ.ಆರ್.ಟಿ.(2003) "**ಸ್ಪಂದನ**" ಎಸ್.ಡಿ.ಎಂ.ಸಿ. ಸದಸ್ಯರಾಗಿ ತರಬೇತಿ ಪೂರಕ ಸಾಹಿತ್ಯ" ಕರ್ನಾಟಕ ಸರ್ಕಾರ, ಬೆಂಗಳೂರು.
- **ಡಿ.ಎಸ್.ಇ.ಆರ್.ಟಿ.** (2003), **"ಪಠ್ಯಕ್ರಮ ಕಾರ್ಯಚರಣೆಯ ತತ್ವಗಳು"** ಡಿ.ಎಡ್. ಪ್ರಥಮ ವರ್ಷ", ಕರ್ನಾಟಕ ಸರ್ಕಾರ, ಬೆಂಗಳೂರು
- **ಲಕ್ಷ್ಮೀ ಎನ್.** (2006), "**ಶೈಕ್ಷಣಿಕ ಸಂಶೋಧನೆ**" ವಿದ್ಯಾನಿಧಿ ಪ್ರಕಾಶನ, ಗದಗ.
- **ಪಾಟೀಲ್ ಆರ್. ಎಸ್.** (2006), "**ಸಂಖ್ಯಾಶಾಸ್ತ್ರ ಪದ್ಧತಿ**", ವಿದ್ಯಾನಿಧಿ ಪ್ರಕಾಶನ, ಗದಗ.
- **ಯಶೋಧರ ಕೆ.** (2006), "ಶಿಕ್ಷಣದಲ್ಲಿ ಸಂಖ್ಯಾಶಾಸ್ತ್ರ", ಶಿಬಾ ಪ್ರಕಾಶನ, ಮೈಸೂರು.


■■

– 35 ನೇ ಪುಟದಿಂದ ಮುಂದುವರೆದುದು

## 19. ಉಪಗ್ರಹ ಆಧಾರಿತ ಬೋಧನೆ

ಎಲ್ಲಾ ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಏಕರೂಪದ ತರಬೇತಿಯನ್ನು ನೀಡುವುದು ಕಷ್ಟ ಸಾಧ್ಯ. ಆದ್ದರಿಂದ ದೇಶದಲ್ಲಿ ಕರ್ನಾಟಕಕ್ಕಾಗಿ ಎನ್.ಸಿ.ಈ.ಆರ್.ಟಿ. ನಡೆಸಿದ ಪ್ರಥಮ ಪ್ರಯತ್ನವೇ 'ಟೆಲಿಸ್ಟಾಫ್' ಕಾರ್ಯಕ್ರಮ–96 ಇದನ್ನು ಸುಧಾರಿತ ಗಣಿತ ವಿಷಯದಲ್ಲಿ ನೀಡಿದ 2ನೆಯ ಪ್ರಯತ್ನವೇ 'ಟೆಲಿಮ್ಯಾಥ್–97'. ಈ ದೆಸೆಯಲ್ಲಿ ಇಗ್ನೋ ಹಾಗೂ ಇಸ್ರೋ ಸಂಸ್ಥೆಗಳು ಯಶಸ್ವಿಯಾಗುವಂತೆ ಸಂಪೂರ್ಣ ಸಹಕಾರ ನೀಡಿವೆ.

## 20. ವಿದ್ಯಾ ಚೇತನಾ

ಚಿಣ್ಣರ ಅಂಗಳ ಕಾರ್ಯಕ್ರಮದ ನಂತರವೂ ಶಾಲೆಗೆ ದಾಖಲೆ ಆಗದಿರುವವರ, ಶಾಲೆಗೆ ಸೇರಿ ನಡುವೆ ಬಿಟ್ಟ ಮಕ್ಕಳನ್ನು ಪ್ರೇರೇಪಿಸಲು ಕೈಗೊಂಡ ಕಾರ್ಯಕ್ರಮವೇ ವಿದ್ಯಾ ಚೇತನ.

## 21. ಅಕ್ಷರ

2003ರಲ್ಲಿ ಬೆಂಗಳೂರು ನಗರದಲ್ಲಿ ಸಾರ್ವತ್ರಿಕ ಪೂರ್ವ ಪ್ರಾಥಮಿಕ ಹಾಗೂ ಪ್ರಾಥಮಿಕ ಶಿಕ್ಷಣ ಸಾಧಿಸುವುದಕ್ಕಾಗಿ ಈ ಕಾರ್ಯಕ್ರಮ ಆರಂಭವಾಯಿತು. ಸರಕಾರ, ಕಾರ್ಪೋರೇಟ್ ವೆಲ್ ಸಮ್ ಹಾಗೂ ಸ್ವಯಂ ಸೇವಾ ಕ್ಷೇತ್ರಗಳ ತ್ರಿಕೋನ ಪಾಲುದಾರಿಕೆಯಿಂದ ನಡೆಯುತ್ತಿದೆ.

## 22. ಮೈಕ್ರೋ ಯೋಜನೆ

ಐದು ಶಿಕ್ಷಕರ ಒಂದು ಗುಂಪು ಒಂದು ಗ್ರಾಮಕ್ಕೆ ಹೋಗಿ ಅಲ್ಲಿಯ ಮಗುವಿನ ಹಾಜರಾತಿ, ಗೈರುಹಾಜರಾಗುವ ದಿನಗಳನ್ನು ಸಮೀಕ್ಷೆ ಮಾಡಿ ಯೋಜನೆ ರೂಪಿಸಲಾಗುವುದು. ನಂತರ ಸಾಯಂಕಾಲ ಊರಿನ ಪ್ರಮುಖ ಸ್ಥಳಗಳಲ್ಲಿ ಶೈಕ್ಷಣಿಕ ಜಾಗೃತಿ ಮೂಡಿಸುವುದಾಗಿದೆ.

## 23. ಗ್ರಾಮ ನಕ್ಷೆ

ಗ್ರಾಮ ನಕ್ಷೆಯು ಸಾಮಾಜಿಕ ಸಂಪನ್ಮೂಲಗಳನ್ನು ಒಳಗೊಂಡಿರುತ್ತದೆ. ಇದು ಗ್ರಾಮದ ರೂಪವಾಗಿದ್ದು, ದೇವಸ್ಥಾನ, ಗೋಮಾಳ, ಕಾರ್ಖಾನೆ, ಕೆರೆ ಕಟ್ಟೆಗಳ ಸ್ಥಳಗಳನ್ನು ಗುರುತಿಸಿ ಶಾಲೆಯಿಂದ ಹೊರಗಿರುವ ಮಕ್ಕಳನ್ನು ಕುರಿತು ಚರ್ಚಿಸಲಾಗುತ್ತದೆ.

■■

ISSN : 2249-2429


# ಹಿಂದುಳಿದ ವರ್ಗದ ಮಕ್ಕಳ ಕಲಿಕಾ ಪ್ರಗತಿ : ಅಕ್ಷರದಾಸೋಹ

✍ **ಭಾಗ್ಯಮ್ಮ ಎನ್.** ಪಿಎಚ್.ಡಿ., ವಿದ್ಯಾರ್ಥಿನಿ ಸಮಾಜಶಾಸ್ತ್ರ ಮತ್ತು ಸಂಶೋಧನಾ ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ 577451
✍ **ಡಾ.ಎಂ.ಪೂರ್ವಾಚಾರ್,** ಮುಖ್ಯಸ್ಥರು ಸಮಾಜಶಾಸ್ತ್ರ ಮತ್ತು ಸಮಾಜಕಾರ್ಯ ವಿಭಾಗ, ಸಹ್ಯಾದ್ರಿ ಕಾಲೇಜ್, ಶಿವಮೊಗ್ಗ.

ಮಾನವನನ್ನು ಪ್ರಗತಿ ಪಥದೆಡೆಗೆ ಕೊಂಡೊಯ್ಯುವ ಪ್ರಮುಖ ಸಾಧನವೇ ಜ್ಞಾನ. ಇಂತಹ ಜ್ಞಾನವನ್ನು ಮಾನವನು ಹುಟ್ಟಿನಿಂದಲೇ ಹಂತ_ಹಂತವಾಗಿ ಕುಟುಂಬದ ಸದಸ್ಯರೊಂದಿಗೆ ನೆರ-ಹೊರೆಯವರೊಂದಿಗೆ ಕಲಿತಿರುತ್ತಾನೆ. ಹೀಗೆ ಸಂಪಾದಿಸಿದ ಜ್ಞಾನವನ್ನು ವ್ಯವಸ್ಥಿತ ರೀತಿಯಲ್ಲಿ ಮಾರ್ಪಡಿಸಿ ಅಡಗಿರುವ ಜ್ಞಾನ ಸಂಪತ್ತಿನ ಪ್ರಭೆಯನ್ನು ಹೊರತಂದು ಪ್ರಜ್ವಲಿಸುವಂತೆ ಮಾಡುವದೇ ಶಿಕ್ಷಣವಾಗಿದೆ. ಶಿಕ್ಷಣ ಎಂಬುದು ಇಂದು ನಿನ್ನೆಯದಲ್ಲ, ಮಾನವನ ಉಗಮ ದೊಂದಿಗೆನೇ ಹುಟ್ಟಿಕೊಂಡ ವ್ಯವಸ್ಥೆಯಾಗಿದೆ. ಔಪಚಾರಿಕ ಶಿಕ್ಷಣದ ವಿಧಾನವೇ ವ್ಯವಸ್ಥಿತವಾದ ಕ್ರಮಬದ್ಧವಾದ ಜ್ಞಾನದ ಜೋಡಣೆಯಾಗಿದೆ. ವ್ಯಕ್ತಿಯ ಚಟುವಟಿಕೆ, ವರ್ತನೆ ನಡವಳಿಕೆ ಹಾಗೂ ಅವನು ಪಡೆದಿರುವ ಜ್ಞಾನವನ್ನು ಪ್ರತಿನಿಧಿಸುವುದಲ್ಲದೆ, ಸಮಾಜದಲ್ಲಿ ಅವನ ಸ್ಥಾನಮಾನ ಮುಂತಾದ ಅವನ ಸಂಪೂರ್ಣ ವ್ಯಕ್ತಿತ್ವದ ಪ್ರತೀಕವಾಗುತ್ತದೆ. ಆದ್ದರಿಂದ ವ್ಯಕ್ತಿಯು ಮೌಲ್ಯಯುತವಾದ ಸ್ಥಾನಮಾನ ಹೊಂದಬೇಕಾದರೆ, ನಯ, ವಿನಯ, ಗುರು ಹಿರಿಯರನ್ನು ಗೌರವಿಸುವುದು ಮುಂತಾದ ಸದ್ಗುಣಗಳು ವ್ಯಕ್ತಿಯಲ್ಲಿ ನೆಲೆಸುವಂತೆ ಮಾಡುವುದೇ ಶಿಕ್ಷಣವಾಗಿದೆ. ಶಿಕ್ಷಣವು ಸತ್ಯದಿಂದ-ಅಸತ್ಯದೆಡೆಗೆ, ಮೃತ್ಯುವಿನಿಂದ-ಅಮರತ್ವದೆಡೆಗೆ ಕೊಂಡೊಯ್ಯುವುದಾಗಿದೆ.

ದೇಶದ ಪ್ರಗತಿಯು ದೃಷ್ಟಯಿಂದ ಕಡ್ಡಾಯ ಶಿಕ್ಷಣ ಅನಿವಾರ್ಯವಾಗಿದೆ. ಭಾರತ ಸಮೃದ್ಧ ರಾಷ್ಟ್ರವಾದರೂ ಜ್ಞಾನದ ಕೊರತೆಯಿಂದ ನಿರೀಕ್ಷಿತ ಮಟ್ಟದ ಪ್ರಗತಿಯನ್ನು ಅಭಿವೃದ್ದಿಯನ್ನು ಸಾಧಿಸಲಾಗುತ್ತಿಲ್ಲ. ಈಗಿರುವ ಶಿಕ್ಷಣವೇ ಅಭಿವೃದ್ಧಿಯ ಪ್ರತೀಕವಾಗಬೇಕಿದೆ. ಆದರೆ ನಮ್ಮ ದೇಶದಲ್ಲಿ ಉನ್ನತ ಶಿಕ್ಷಣ ಶೇ. 50 ರಷ್ಟು ಜನರಿಗೆ ಮಾತ್ರ ದೊರಕುತ್ತಿದೆ ಎಂಬುದು ತುಂಬಾ ಆತಂಕಕಾರಿಯಾದ ವಿಚಾರವಾಗಿದೆ. ಎಲ್ಲಿ ಜ್ಞಾನ ತಿಳುವಳಿಕೆ ಇರುತ್ತದೋ ಅಲ್ಲಿ ಅಭಿವೃದ್ಧಿಯನ್ನು ಕಾಣುತ್ತೇವೆ ಎಂಬುದನ್ನು ಮರೆಯಬಾರದು. ಮಾನವ ಶಕ್ತಿ ಮತ್ತು ನೈಸರ್ಗಿಕ ಶಕ್ತಿಯನ್ನು ಬಳಸಿಕೊಳ್ಳುವ ಜ್ಞಾನದ ಕೊರತೆ ನಮ್ಮಲ್ಲಿ ಕಂಡುಬರುತ್ತದೆ. ಇದಕ್ಕೆ ಮುಖ್ಯ ಕಾರಣ ಅಕ್ಷರ ಜ್ಞಾನದಇಲ್ಲದಿರುವುದು. ಸಂವಿಧಾನದಲ್ಲಿ 1 ರಿಂದ 5ನೇ ತರಗತಿಯವರೆಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ಎಲ್ಲರಿಗೂ ನೀಡಬೇಕೆಂದು ಆದೇಶವಾದರೂ, ಸ್ವತಂತ್ರ ಭಾರತದಲ್ಲಿ ಉಚಿತ ಮತ್ತು ಕಡ್ಡಾಯ ಶಿಕ್ಷಣಕ್ಕಾಗಿ ಇಂದು ಜಪಿಸುತ್ತಿದ್ದೇವೆ. ಈ ನಿಟ್ಟಿನಲ್ಲಿ ನೋಡಿದಾಗ ನಾವು ಶಿಕ್ಷಣ ಕ್ಷೇತ್ರದಲ್ಲಿ ಸಾಧಿಸಿರುವುದು ತೀರ ಕಡಿಮೆ ಎನ್ನಿಸುತ್ತದೆ. ಇದನ್ನರಿತ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಶಿಕ್ಷಣದ ಸಾರ್ವತ್ರಿಕರಣಕ್ಕೆ ಹಲವಾರು ಕಾರ್ಯಕ್ರಮಗಳನ್ನು ಜಾರಿಗೊಳಿಸಿದೆ.

ಭಾರತ ಸರ್ಕಾರವು ಶಿಕ್ಷಣ ಇಲಾಖೆಯನ್ನು ಮಾನವ ಸಂಪನ್ಮೂಲ ಇಲಾಖೆ ಎಂದು ಗುರುತಿಸಿರುವುದು ಸ್ವಾಗತಾರ್ಹ. ಸಮಾಜದ ಹಿತದೃಷ್ಟಿಯಿಂದ ಮಾನವ ಸಂಪನ್ಮೂಲವನ್ನು ಹೆಚ್ಚು ಪರಿಣಾಮಕಾರಿಯಾಗಿ ಬಳಸಿಕೊಳ್ಳಲು ಶಿಕ್ಷಣ ಸಹಕಾರಿಯಾಗಿದೆ. ಆದರೂ ಅಂತಹ ಹೆಮ್ಮೆಪಟ್ಟುಕೊಳ್ಳುವಂತಹ ಪ್ರಗತಿಯಾಗಿಲ್ಲ ಎಂಬ ಅಂಶವನ್ನು ಗಮನದಲ್ಲಿಟ್ಟುಕೊಂಡು 1986 ರಲ್ಲಿ ಹೊಸ ಮಾದರಿಯ ಶಿಕ್ಷಣ ನೀತಿಯನ್ನು ರೂಪಿಸಲಾಯಿತು. ಇದರ ಬಹುಮುಖ್ಯ ಉದ್ದೇಶವೇ ಶಿಕ್ಷಣದ ಅಸಮಾನತೆಯನ್ನು ತೊಡೆದು ಹಾಕಿ ಗುಣಮಟ್ಟದ ಶಿಕ್ಷಣವನ್ನು ನೀಡುವುದಾಗಿತ್ತು. ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳು ಸೌಲಭ್ಯ ವಂಚಿತರಾಗಿದ್ದರು. ಇಂತಹ ಮಕ್ಕಳ ಪ್ರತಿಭೆಯನ್ನು ಗುರುತಿಸಿ ಅವರ ಬುದ್ಧಿ ಸಾಮರ್ಥ್ಯ ಕಲಿಕೆಯಲ್ಲಿ ಕ್ರಿಯಾಶೀಲತೆ ಹೊಂದಿರುವ ಮಕ್ಕಳಿಗಾಗಿ ಇತರ ವಿದ್ಯಾರ್ಥಿಗಳಿಗಾಗಿ ಅಗತ್ಯ ಸೌಲಭ್ಯವನ್ನು ಒದಗಿಸುವುದು ಇಂದಿನ ಶಿಕ್ಷಣ ಇಲಾಖೆಯ ಧ್ಯೇಯವಾಗಿದೆ. ಈ ನಿಟ್ಟಿನಲ್ಲಿ ಸರ್ಕಾರವು ವಿದ್ಯಾರ್ಥಿಗಳಿಗೆ ಅದರಲ್ಲೂ ಗ್ರಾಮೀಣ ಮಕ್ಕಳಿಗೆ ದೊರಕುತ್ತಿರುವುದರಿಂದ ನಗರದ ಪ್ರತಿಭಾವಂತ ಮಕ್ಕಳನ್ನು ಮೆಟ್ಟಿ ನಿಲ್ಲುವಲ್ಲಿ ಪ್ರೇರಕವಾಗಿದೆ.

## ಕಲಿಕೆಯ ನಿರಂತರತೆ ಹಾಗೂ ಹಿಂದುಳಿದಿರುವಿಕೆ

ಆಧುನಿಕ ಶಿಕ್ಷಣದ ಪ್ರಮುಖ ಉದ್ದೇಶವೇ ಮಗುವಿನಲ್ಲಿ ಸರ್ವತೋಮುಖ ಅಭಿವೃದ್ಧಿಯನ್ನು ಕಾಣುವುದಾಗಿದೆ. ತರಗತಿಯಲ್ಲಿ ಶಿಕ್ಷಕ ಹೇಳಿದ ರೀತಿಯಲ್ಲಿ ಪುನರುಚ್ಚರಿಸುವಲ್ಲಿ ಮಗು ಮುಂದಾದರೆ ಕಲಿಕೆಯಾಗಿದೆ ಎಂದಾರ್ಥ. ತರಗತಿಯಲ್ಲಿ ಶೇ. 20 ರಷ್ಟು ಕಲಿಕೆಯಲ್ಲಿ ಹಿಂದುಳಿದವರಿದ್ದು, ವಿಷಯ ಗ್ರಹಿಸಲಾಗದೇ ಪೇಚಾಡುವಂತಹ ಮಕ್ಕಳಿದ್ದಾರೆ. ಇವರ ಬೌದ್ಧಿಕ ಸಾಮರ್ಥ್ಯವು ಇತರ ಮಕ್ಕಳಿಗಿಂತ ಕಡಿಮೆ ಇದ್ದು, ಇಂತಹ ಮಕ್ಕಳು ಸಹಪಾಠಿಗಳು ಕಲಿಯುವಷ್ಟು ಕಲಿಯದೆ, ಸಹಜವಾಗಿ ಕಲಿಕೆಯಲ್ಲಿ ಹಿಂದುಳಿಯುತ್ತಾರೆ. ಬರ್ಟಲ್ ಹಿಲ್ ಪ್ರಕಾರ : ಯಾರು ಶೈಕ್ಷಣಿಕವಾಗಿ ಸಾಮಾನ್ಯ ಮಟ್ಟವನ್ನು ತಲುಪದೇ, ಹಿಂದೆ ಬೀಳುವರೋ ಅವರನ್ನು ನಿಧಾನವಾಗಿ ಕಲಿಯುವರು ಎಂದು ಹೇಳುತ್ತಾರೆ. ಟರ್ಡ ಪ್ರಕಾರ: ಯಾವ ಮಗು ಶಾಲಾ ತರಗತಿಯ ಕಾರ್ಯ ಚಟುವಟಿಕೆಯನ್ನು ಸಂಪೂರ್ಣವಾಗಿ ನಿರ್ವಹಿಸಲು ಅಸಮರ್ಥನಾಗಿರುತಾರೋ ಅಂತಹ ಮಗುವನ್ನು ಕಲಿಕೆಯಲ್ಲಿ ಹಿಂದುಳಿದವರೆಂದು ಕರೆಯುತ್ತಾರೆ. ಒಟ್ಟಿನಲ್ಲಿ ಒಮ್ಮೆ ಕಲಿತ ವಿಷಯವನ್ನು ಪುನಃ ಹೇಳುವಲ್ಲಿ ಯಾರು ಅಸಮರ್ಥರಾಗಿರುತ್ತಾರೊ ಅವರೇ ಕಲಿಕೆಯಲ್ಲಿ ಹಿಂದುಳಿದವರು. ಇಂತಹ ಮಕ್ಕಳನ್ನು ಮತ್ತು ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಮುಖ್ಯವಾಹಿನಿಗೆ ತರಲು ಸರ್ಕಾರವು ಹಮ್ಮಿಕೊಂಡ ಹಲವಾರು ಕಾರ್ಯಕ್ರಮಗಳಲ್ಲಿ ಅಕ್ಷರದಾಸೋಹವು ಒಂದಾಗಿದೆ. ಅಷ್ಟೇ ಅಲ್ಲ ಈ ಕಾರ್ಯಕ್ರಮವು ಅತ್ಯಂತ ಪರಿಣಾಮಕಾರಿಯಾದ ಯೋಜನೆಯಾಗಿದ್ದು, ಎಷ್ಟೋ ಗ್ರಾಮೀಣ ಭಾಗದ ಮಕ್ಕಳಿಗಂತೂ ಈ ಯೋಜನೆಯೂ ಒಂದು ವರದಾನವಾಗಿದೆ. ಸರ್ವಶಿಕ್ಷಾ ಅಭಿಯಾನದಡಿ ಇಂತಿಷ್ಟು ಕಿಲೋಮೀಟರ್‌ಗೆ ಒಂದು ಪ್ರಾಥಮಿಕ ಹಾಗೂ ಮಾಧ್ಯಮಿಕ ಶಾಲೆಯನ್ನು ಸ್ಥಾಪಿಸಿರುವುದರಿಂದ

ISSN : 2249-2429

ಅಷ್ಟು ದೂರದ ಶಾಲೆಗೆ ನಿತ್ಯ ಹೋಗಬೇಕಾಗಿರುವುದು ಅನಿವಾರ್ಯವಾದ ಪ್ರಯುಕ್ತ ಎಷ್ಟೋ ವೇಳೆ ಸಮಯಕ್ಕೆ ಸರಿಯಾಗಿ ಊಟ ಸಿದ್ದವಿಲ್ಲದಿದ್ದಾಗ ಉಪವಾಸವೇ ಶಾಲೆಯನ್ನು ಸೇರುವಂತಹ ಮಕ್ಕಳಿಗೆ ಹಾಗೂ ಮಧ್ಯಾನ್ಹದ ಊಟಕ್ಕೆಂದು ಮನೆಗೆ ತೆರಳಿದರೆ ವಾಪಸ್ಸಾಗುವವರ ಸಂಖ್ಯೆ ಕಡಿಮೆಯಾಗುತ್ತಿತ್ತು, ಜೊತೆಗೆ ಬಡತನ ರೇಖೆಗಿಂತ ಕೆಳಗಿರುವಂತಹ ಮಕ್ಕಳು ಶಾಲೆಗೆ ದಾಖಲಾಗಿದ್ದರೂ, ಜೀವನ ನಿರ್ವಹಣೆಗಾಗಿ ಶಾಲೆಯನ್ನು ಮಧ್ಯದಲ್ಲಿ ತೊರೆದು ಕೂಲಿ ಮತ್ತಿತರ ಕೆಲಸ ಕಾರ್ಯಗಳಲ್ಲಿ ತೊಡಗಿಸಿಕೊಳ್ಳುತ್ತಿದ್ದಾರೆ. ಹೀಗೆ ಪೋಷಕರು ತಮ್ಮ ಮಕ್ಕಳನ್ನು ಶಾಲೆಯಿಂದ ಹೊರಗುಳಿಯುವಂತೆ ಮಾಡುವಲ್ಲಿ ಕೈಜೋಡಿಸುತ್ತಿದ್ದಾರೆ. ಇಂತಹ ಸಂದಿಗ್ದ ಪರಿಸ್ಥಿತಿಗೆ ಬೆಳಕಾಗಿ ಬಂದದ್ದು ಅಕ್ಷರದಾಸೋಹ ಇದರಿಂದ ಎಷ್ಟೋ ಬಡ ಹಾಗೂ ದೂರದ ಊರಿಂದ ಬರುವ ಮಕ್ಕಳಿಗೂ ಉಪಯುಕ್ತವಾದದ್ದಾಗಿದೆ. ಊಟಕ್ಕೆಂದೆ ಮನೆಗೆ ಹೋಗುವುದು ತಪ್ಪಿ ಶಾಲೆಯಲ್ಲಿಯೇ ಉಳಿದು ಅಲ್ಲಿ ನೀಡುತ್ತಿರುವ ಬಿಸಿಯಾದ ಆಹಾರವನ್ನು ಸವಿದು ಪುನಃ ತರಗತಿಗೆ ಹಾಜರಾಗುವುದರಿಂದ ಕಲಿಕೆಯಲ್ಲಿ ನಿರಂತರತೆ ಉಂಟಾಗಿ ಮಕ್ಕಳು ಹೆಚ್ಚು-ಹೆಚ್ಚು ಉತ್ಸುಕತೆಯಿಂದ ಕಲಿಯಲು ಸಾಧ್ಯವಾಗುತ್ತಿದೆ.

## ಶಿಕ್ಷಣ ಮತ್ತು ಕಲಿಕೆ

ಕಲಿಕೆ ಎನ್ನುವಂತಹದ್ದು ವ್ಯಕ್ತಿಯ ಜ್ಞಾನ, ಕೌಶಲ್ಯಗಳು, ಆಸಕ್ತಿ ಹಾಗೂ ಅಭಿವ್ಯಕ್ತಿ ಇವೆಲ್ಲವುಗಳು ಕಲಿತವುಗಳೇ ಆಗಿವೆ. ಜೀವನದಲ್ಲಿ ಎದುರಾಗುವ ಸನ್ನಿವೇಶಗಳನ್ನು ಎದುರಿಸುವಲ್ಲಿ ನೂತನ ವಿಧಾನಗಳನ್ನು ಜೀವನಕ್ಕೆ ಅಳವಡಿಸುವಲ್ಲಿ ಕಲಿಕೆಯು ಉಪಯುಕ್ತವಾಗುತ್ತದೆ. ಮಕ್ಕಳಲ್ಲಿ ಅಪೇಕ್ಷಿತ ರೀತಿಯಲ್ಲಿ ಬದಲಾವಣೆಗಳು ಆಗಲಿ ಎಂದು ಸುವ್ಯವಸ್ಥಿತವಾದ ಕಾರ್ಯಕ್ರಮವನ್ನು ಸಮಾಜ ಹಾಕಿಕೊಂಡಿದೆ. ಅದೇ ಈ ಶಿಕ್ಷಣ ವ್ಯವಸ್ಥೆ. ಶಿಕ್ಷಣವನ್ನು ಔಪಚಾರಿಕವಾಗಿ ನೀಡುವಂತಹ ಕೇಂದ್ರ ಶಾಲೆಯಾಗಿದೆ. ಇಲ್ಲಿ ಕಲಿಕೆ ತ್ರಿದಳಾತ್ಮಕವಾದ ಪ್ರಕ್ರಿಯೆಯಾಗಿದೆ. ಶಿಕ್ಷಣ ವಿದ್ಯಾರ್ಥಿ ಮತ್ತು ಪಠ್ಯ ಈ ಮೂರರ ಮಧ್ಯ ನಡೆಯುವ ಪ್ರಕ್ರಿಯೆಯಾಗಿದೆ. ಕಲಿಕೆಯು ಕಲಿಯುವ ವ್ಯಕ್ತಿ, ಕಲಿಕೆಯ ಸನ್ನಿವೇಶ, ಕಲಿಯಬೇಕಾದ ಪಠ್ಯ ವಸ್ತುವನ್ನು ಅವಲಂಭಿಸಿರುತ್ತದೆ. ಒಟ್ಟಿನಲ್ಲಿ ಇಂತಹ ಕಲಿಕಾ ಪ್ರಕ್ರಿಯೆಯನ್ನು ಸರಳವಾದ ರೀತಿಯಲ್ಲಿ ಮಕ್ಕಳಲ್ಲಿಯಾಗಲಿ ಎಂದು ಕೇಂದ್ರ ರಾಜ್ಯ ಸರ್ಕಾರಗಳು ನಲಿ-ಕಲಿ, ಚಿಣ್ಣರ ಚಿಲಿಪಿಲಿ ಬಾನುಲಿಪಾಠ, ಮುಂತಾದ ಕಾರ್ಯಕ್ರಮಗಳನ್ನು ಜಾರಿಗೊಳಿಸಿತು. ನಂತರ ಶಾಲೆಯಿಂದ ಹೊರಗುಳಿದ ಮಕ್ಕಳು ಶಾಲೆಗೆ ಮರಳಲು, ಬಾ, ಬಾಲೆ ಶಾಲೆಗೆ, ಬಾ ಮರಳಿ ಶಾಲೆಗೆ, ಕೂಲಿಯಿಂದ ಶಾಲೆಗೆ, ಚಿಣ್ಣರ ಅಂಗಳ, ವಿದ್ಯಾವಿಕಾಸ, ವಿದ್ಯಾ ಚೇತನ, ಉಚಿತ ಸಮವಸ್ತ್ರ, ಪಠ್ಯ ಪುಸ್ತಕ ವಿತರಣೆ ವಿದ್ಯಾರ್ಥಿವೇತನ ಹಾಗೂ ಮಧ್ಯಾನ್ಹದ ಬಿಸಿಯೂಟ ಯೋಜನೆ ಮುಂತಾದ ಹಲವಾರು ಕಾರ್ಯಕ್ರಮಗಳನ್ನು ಸರ್ಕಾರ ಜಾರಿಗೊಳಿಸಿತು.

## ಭಾರತದಲ್ಲಿ ಮಧ್ಯಾನ್ಹದ ಉಪಹಾರ ಯೋಜನೆ

ಭಾರತದಲ್ಲಿ ಮಧ್ಯಾನ್ಹದ ಉಪಹಾರ ಯೋಜನೆಯ ಬಗ್ಗೆ ಒಂದು ಇತಿಹಾಸವೇ ಇದೆ. 1925ರಲ್ಲಿ ಮಕ್ಕಳ ಶಿಕ್ಷಣದ ಅನುಕೂಲತೆಯ ಹಿನ್ನೆಲೆಯಿಂದ ಮದ್ರಾಸ್ ಮುನಿಸಿಪಲ್ ಕಾರ್ಪೋರೇಷನ್ ಬಿಸಿಯೂಟ ಯೋಜನೆಯನ್ನು ಜಾರಿಗೆ ತಂದಿತು. 1980ರಲ್ಲಿ ಮೊಟ್ಟಮೊದಲಿಗೆ ಮೂರು ರಾಜ್ಯಗಳಲ್ಲಿ ಈ ಯೋಜನೆಯನ್ನು ಅಸ್ತಿತ್ವಕ್ಕೆ ತರಲಾಯಿತು. ಅವುಗಳೆಂದರೆ, ಗುಜರಾತ್, ಕೇರಳ ಮತ್ತು ತಮಿಳುನಾಡು ಆ ನಂತರದಲ್ಲಿ ಪ್ರಾಥಮಿಕ ಶಿಕ್ಷಣದ ಅಧ್ಯಯನಕ್ಕೋಸ್ಕರ ಸ್ವಂತ ಸಂಪನ್ಮೂಲಗಳಿಂದ ಉತ್ತರಾಂಚಲ, ಪಾಂಡಿಚೇರಿಗಳಲ್ಲಿ ಈ ಮಧ್ಯಾನ್ಹದ ಉಪಹಾರ ಯೋಜನೆಯನ್ನು ಸಾರ್ವತ್ರೀಕರಣಗೊಳಿಸಲಾಯಿತು. ಪ್ರಾರಂಭಿಕವಾಗಿ ಈ ಕಾರ್ಯಕ್ರಮವು ಅಸ್ತಿತ್ವಕ್ಕೆ ಬಂದಿರುವುದು ಮೊಟ್ಟಮೊದಲಿಗೆ ಬುಡಕಟ್ಟು ಜನರಿರುವಂತಹ ರಾಜ್ಯಗಳಾದ ಮಧ್ಯಪ್ರದೇಶ ಓರಿಸ್ಸಾದಲ್ಲಿ ಇದರ ಉದ್ದೇಶವೇನೆಂದರೆ, ಇಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಬುಡಕಟ್ಟುಗಳಿದ್ದು ಇಲ್ಲಿ ಮಕ್ಕಳು ವಿದ್ಯಾಭ್ಯಾಸದಿಂದ ದೂರ ಉಳಿದಿರುವುದರಿಂದ ತಮ್ಮ ಜೀವನ ನಿರ್ವಹಣೆಗಾಗಿ ಕೂಲಿ ಮತ್ತಿತರ ಕೆಲಸಗಳಲ್ಲಿ ತೊಡಗಿಕೊಡಿರುವುದರಿಂದ ಇಂತಹ ಮಕ್ಕಳಿಗೆ ಉಪಯುಕ್ತವಾಗಲೆಂದೇ ಮೊದಲಿಗೆ ಇಂತಹ ಪ್ರದೇಶದಲ್ಲಿ ಮಧ್ಯಾನ್ಹದ ಉಪಹಾರ ಯೋಜನೆಯನ್ನು ಜಾರಿಗೆ ತರಲಾಯಿತು. ಯೋಜನೆಯು ಮಕ್ಕಳನ್ನು ಮುಖ್ಯವಾಹಿನಿಗೆ ತರುವಲ್ಲಿ ಯಶಸ್ವಿಯಾಗಿದೆ. ಈಗಾಗಲೇ ಮೇಲೆ ತಿಳಿಸಿದಂತೆ, ಮೂರು ರಾಜ್ಯಗಳಲ್ಲಿ ಯೋಜನೆಯು ಯಶಸ್ವಿಯಾಗಿದೆ. ನಂತರ 12 ರಾಜ್ಯಗಳಾದ ಗೋವಾ, ಗುಜರಾತ್, ಮಧ್ಯಪ್ರದೇಶ, ಮಹಾರಾಷ್ಟ್ರ, ಮೇಘಾಲಯ, ಮಿಜರಾಂ, ನಾಗಾಲ್ಯಾಂಡ್, ಸಿಕ್ಕಿಂ, ತಮಿಳುನಾಡು, ತ್ರಿಪುರಾ ಮತ್ತು ಉತ್ತರಪ್ರದೇಶಗಳಿಗೆ ವಿಸ್ತರಿಸಲಾಯಿತು. ಇನ್ನುಳಿದ ರಾಜ್ಯಗಳಾದ ಕರ್ನಾಟಕ ಓರಿಸ್ಸಾ ಮತ್ತು ಪಶ್ಚಿಮ ಬಂಗಾಳ ರಾಜ್ಯಗಳಲ್ಲಿ ರಾಜ್ಯ ಸಂಪನ್ಮೂಲಗಳೊಂದಿಗೆ ಅಂತರಾಷ್ಟ್ರೀಯ ನೆರವಿನಿಂದ ಇಲ್ಲಿಯೂ ಬಿಸಿಯೂಟ ಯೋಜನೆಯನ್ನು ಆಂಧ್ರ ಮತ್ತು ರಾಜಸ್ತಾನಗಳಲ್ಲಿಯೂ ಸಹ ಯೋಜನೆಯನ್ನು ಜಾರಿಗೆ ತರಲಾಯಿತು.

## ಕರ್ನಾಟಕದಲ್ಲಿ ಅಕ್ಷರ ದಾಸೋಹ ಯೋಜನೆ

ಕರ್ನಾಟಕದಲ್ಲಿ ಮೈಸೂರು ಅರಸರ ಕಾಲದಿಂದಲೂ ಮಧ್ಯಾನ್ಹದ ಉಪಹಾರ ಕಾರ್ಯಕ್ರಮವು ಜಾರಿಯಲ್ಲಿತ್ತು. ಶಿಕ್ಷಣ ಇಲಾಖೆಯು 1951-1952 ರಲ್ಲಿ ಮಧ್ಯಾನ್ಹದ ಉಪಹಾರ ಕಾರ್ಯಕ್ರಮಕ್ಕೆಂದು ಸುಮಾರು 3.70 ಲಕ್ಷ ಮಂಜೂರು ಮಾಡಿತು. ಈ ಯೋಜನೆಯ ಅಡಿಯಲ್ಲಿ ರಾಜ್ಯದಲ್ಲಿ ಸುಮಾರು 1957 ಮಾಧ್ಯಮಿಕ ಶಾಲೆಗಳು, 25 ಪ್ರೌಢ ಶಾಲೆಗಳಲ್ಲಿ 9366 ವಿದ್ಯಾರ್ಥಿಗಳು ಪ್ರಯೋಜನ ಪಡೆದುಕೊಂಡಿದ್ದಾರೆ. ಈ ಯೋಜನೆಯ ಮುಖ್ಯ ಗುರಿ ಬಡ ಹಾಗೂ ದುರ್ಬಲ ವರ್ಗಗಳ ವಿದ್ಯಾರ್ಥಿಗಳ ಹಾಜರಾತಿಯನ್ನು ಉತ್ತಮಗೊಳಿಸುವುದರ ಜೊತೆಗೆ ಪೌಷ್ಠಿಕಾಂಶ ಯುಕ್ತ ಆಹಾರ ಒದಗಿಸುವುದಾಗಿತ್ತು. ಸಾರ್ವತ್ರಿಕವಾಗಿ ಮಧ್ಯಾನ್ಹದ ಉಪಹಾರ ಕಾರ್ಯಕ್ರಮವನ್ನು ಕೆಲವು ಕಡೆ 1963 ರಲ್ಲಿ 'ಕೇರ್' (ಸಾರ್ವತ್ರಿಕವಾಗಿ ಅಮೇರಿಕಾ ನೆರವಿನ ಸಹಕಾರ) ನೆರವಿನಿಂದ ಆರಂಭಿಸಲಾಯಿತು. ಇದನ್ನು ಕೇಂದ್ರ ಸರ್ಕಾರ ಈ ಯೋಜನೆಯನ್ನು ಜಾರಿಗೊಳಿಸಿದಾಗ, 1976-77ರಲ್ಲಿ ಈ ಯೋಜನೆಯು ಉತ್ತುಂಗಕ್ಕೇರಿ 15 ಲಕ್ಷ ಮಕ್ಕಳು ಕಾರ್ಯಕ್ರಮದ ನೆರವು ಪಡೆದರು. ಇದು ಪೂರ್ವ ಪ್ರಾಥಮಿಕ, ಪ್ರಾಥಮಿಕ ಶಿಕ್ಷಣಗಳೆರಡಕ್ಕೂ ನೆರವು ನೀಡುತ್ತಿತ್ತು. 1984-85 ರಲ್ಲಿ ಕೇರ್‌ನ ನೆರವು ಪೂರ್ವ ಪ್ರಾಥಮಿಕ ಶಿಕ್ಷಣಕ್ಕೆ ಸ್ಥಗಿತವಾಗಿ 1993 -94 ರಲ್ಲಿ ಸಂಪೂರ್ಣವಾಗಿ ನಿಂತುಹೋಯಿತು.

## ಪೌಷ್ಠಿಕ ಆಹಾರ

ರಾಜ್ಯ ಸರ್ಕಾರವು ಮೈಸೂರಿನ ಸಿ.ಎಫ್.ಟಿ.ಆರ್.ಐ ಸಿದ್ಧಗೊಳಿಸಿದ ಪೌಷ್ಠಿಕ ಆಹಾರ ಸೂತ್ರದ ಮಾದರಿಯಲ್ಲಿ ತನ್ನದೆಯಾದ ಪೌಷ್ಠಿಕ ಆಹಾರ ಕಾರ್ಯಕ್ರಮವನ್ನು 1980-81 ರಲ್ಲಿ ಆರಂಭಿಸಲಾಯಿತು. 1990-91 ರಲ್ಲಿ 5.62 ಲಕ್ಷ ಮಕ್ಕಳು ಪ್ರಯೋಜನ ಪಡೆದರು. 1993-94 ರಲ್ಲಿ 4ನೇ ತರಗತಿಯವರೆಗಿನ ಮಕ್ಕಳಿಗೆ ಆಹಾರ ಯೋಜನೆ ಆರಂಭಿಸಿತು. ನಂತರ ಪ್ರಾಥಮಿಕ ಶಾಲಾ ಮಕ್ಕಳಿಗೂ ವಿಸ್ತರಿಸಲಾಯಿತು. ಮಕ್ಕಳ

ISSN : 2249-2429


ಪೌಷ್ಠಿಕಾಂಶ ಕೊರತೆ ನೀಗಿಸಲೂ ಅವರು ಶಾಲೆಗೆ ಕ್ರಮವಾಗಿ ಹಾಜರಾಗಲೂ ಉತ್ತೇಜಿಸುವ ದೃಷ್ಟಿಯಿಂದ ಪೌಷ್ಠಿಕ ಆಹಾರ ನೆರವಿನ ಯೋಜನೆಯನ್ನು ರಾಜ್ಯ ಸರ್ಕಾರವು ಪ್ರಾರಂಭಿಸಿತು. ಈ ಕಾರ್ಯಕ್ರಮದ ಮೂಲಕ ಪ್ರತಿ ಮಗುವಿಗೂ ಪ್ರತಿ ತಿಂಗಳು ತಲಾ 3 ಕೆ. ಜಿ. ಗೋಧಿ ಅಥವಾ ಅಕ್ಕಿಯನ್ನು ವಿತರಣೆ ಮಾಡುತ್ತಿತ್ತು.

## ಅಕ್ಷಯ ಕಾರ್ಯಕ್ರಮ

1992–93 ರಲ್ಲಿ ಪ್ರಾರಂಭಿಸಲಾದ ಮೂಲ ಉದೇಶವು 1–4ನೇ ತರಗತಿಯ ಮಕ್ಕಳ ಹಾಜರಾತಿಯನ್ನು ಉತ್ತಮಗೊಳಿಸಿ ಶಾಲೆಯಿಂದ ಹೊರಗುಳಿಯುವವರ ಸಂಖ್ಯೆ ತಗ್ಗಿಸುವುದಾಗಿತ್ತು. ಶಾಲೆ ನಡೆದ ಪ್ರತಿಯೊಂದು ದಿನಕ್ಕೂ ತಲಾ ಒಂದು ರೂಪಾಯಿಯಂತೆ ಪೋಷಕರಿಗೆ ಪ್ರೋತ್ಸಾಹ ಧನವನ್ನು ಈ ಯೋಜನೆಯ ಮೂಲಕ ನೀಡಲಾಗುತ್ತಿತ್ತು. ಆದರೆ ಈ ಯೋಜನೆಯ ಲೆಕ್ಕ ನಿರ್ವಹಣೆಯು ಇದಕ್ಕೆ ಸಂಬಂಧಿಸಿದ ಸಮಸ್ಯೆಗಳ ಹಿನ್ನೆಲೆಯಲ್ಲಿ ಕಾರ್ಯಕ್ರಮವನ್ನು ಕೈಬಿಡಲಾಯಿತು. ನಂತರದಲ್ಲಿ ಅಸ್ತಿತ್ವಕ್ಕೆ ಬಂದ ಯೋಜನೆಯೇ 'ಅಕ್ಷರದಾಸೋಹ'

## ಅಕ್ಷರ ದಾಸೋಹ ಯೋಜನೆ

ಶೈಕ್ಷಣಿಕವಾಗಿ ಹಿಂದುಳಿದ ಏಳು ಜಿಲ್ಲೆಗಳಲ್ಲಿ ಶಾಲಾ ಮಕ್ಕಳಿಗೆ ಬಿಸಿಯೂಟ ನೀಡುವ ಯೋಜನೆಯನ್ನು 2002–2003 ರಲ್ಲಿ ಆರಂಭಿಸಲಾಯಿತು. ಈ ಯೋಜನೆಯ ಯಶಸ್ಸಿನ ಫಲವಾಗಿ ಉಳಿದ ಜಿಲ್ಲೆಗಳಿಗೂ 2003 ರಲ್ಲಿ ವಿಸ್ತರಿಸಲಾಯಿತು. ಇದರ ವ್ಯಾಪ್ತಿಯು 2004 ಸೆಪ್ಟಂಬರ್ 1 ರಿಂದ ಸರ್ಕಾರಿ ಅನುದಾನಿತ 5ನೇ ತರಗತಿಯ, 2005 ರಿಂದ 6–7ನೇ ತರಗತಿಯ ಮಕ್ಕಳಿಗೂ ವಿಸ್ತರಿಸಲಾಯಿತು. ಒಟ್ಟು 43,414 ಸರ್ಕಾರಿ ಶಾಲೆಗಳು ಹಾಗೂ 2830 ಅನುದಾನಿತ ಶಾಲೆಗಳು ಒಟ್ಟಾರೆ 46224 (ಪ್ರಾಥಮಿಕ ಶಾಲೆಗಳು) ಈ ಯೋಜನೆಯ ವ್ಯಾಪ್ತಿಗೆ ಒಳಪಟ್ಟಿವೆ. 2005–2006 ನೇ ಸಾಲಿನಲ್ಲಿ 38.926 ಅಡುಗೆ ಕೇಂದ್ರಗಳು 96,064 ಅಡುಗೆಯವರು ಕಾರ್ಯಕ್ರಮ ನಿರ್ವಹಿಸುವರು.

**ಬಿಸಿಯೂಟ ಯೋಜನೆಯ ಫಲಾನುಭವಿಗಳ ವಿವರ**

| ತರಗತಿ | ಸರ್ಕಾರಿ ಶಾಲೆ | ಅನುದಾನಿತ ಶಾಲೆ | ಒಟ್ಟು |
|---|---|---|---|
| 1 ರಿಂದ 5 | 36,00 | 04,67 | 40,67 |
| 6 ರಿಂದ 7 | 13,23 | 02,14 | 15,37 |
| ಒಟ್ಟು | 46,23 | 06,81 | 56,04 |

(2005–06 ವಾರ್ಷಿಕ ವರದಿ)

ಈ ಯೋಜನೆಗೆ 2005–2006 ರ ಬಜೆಟ್‌ನಲ್ಲಿ 258,84 ಕೋಟಿ ರೂಗಳನ್ನು ನೀಡಲಾಗಿತ್ತು. ಕೇಂದ್ರ ಸರ್ಕಾರ ಪ್ರತಿ ಮಗುವಿಗೆ ಒಂದು ದಿನಕ್ಕೆ 100 ಗ್ರಾಂ. ಅಕ್ಕಿ/ಗೋಧಿ ಮತ್ತು ತಯಾರಿಕೆಗೆ 1.50 ರೂ.ನ್ನು ನೀಡುತ್ತದೆ. ರಾಜ್ಯ ಸರ್ಕಾರ ಒಂದು ಮಗುವಿಗೆ ದಿನವೊಂದಕ್ಕೆ ರೂ 3.16 ರಂತೆ ನೀಡುತ್ತದೆ. 2006–2007 ನೇ ಸಾಲಿನಲ್ಲಿ ಬಜೆಟ್‌ನಲ್ಲಿ ಈ ಯೊಜನೆಗೆ 253,47 ಕೋಟಿ ರೂ ಮೀಸಲಾತಿಯನ್ನು 5000/ ರೂ ವೆಚ್ಚ ಅಡುಗೆ ಕೋಣೆಯನ್ನು ನಿರ್ಮಿಸಲು 26 ಕೋಟಿ ರೂ. ಬಿಡುಗಡೆ ಮಾಡಲಾಯಿತು. ಅಡುಗೆ ಪರಿಕರಗಳ ಖರೀದಿಗೆ 72 ಕೋಟಿ ರೂ. ಮತ್ತು ಅಡುಗೆ ಕೊಠಡಿ ನಿರ್ಮಿಸಲು 34.46 ಕೋಟಿ ರೂ ಅನ್ನು ಕೇಂದ್ರ ಸರ್ಕಾರ ನೀಡಿತು.

ಬಡಕುಟುಂಬಗಳ ಮಕ್ಕಳ ಹಸಿವು ಮತ್ತು ಅನಕ್ಷರತೆಯ ವಿಷ ವರ್ತುಲದಿಂದ ಬಿಡುಗಡೆ ಮಾಡಲು ಉದಾತ್ತ ಗುರಿಯೊಂದಿಗೆ **ಇಸ್ಕಾನ್ ಅಕ್ಷಯ ಪಾತ್ರೆ** ಪ್ರತಿಷ್ಠಾನವು 2000ನೇ ಇಸ್ವಿಯಲ್ಲಿ ರಚಿತವಾಯಿತು. ಅಂದಿನಿಂದ ಬೆಂಗಳೂರು ಮತ್ತು ಸಮೀಪದ ಕೆಲವು ಪ್ರದೇಶಗಳಲ್ಲಿನ ಬಡಕುಟುಂಬಗಳ ಶಾಲಾ ಮಕ್ಕಳಿಗೆ ಮಧ್ಯಾನ್ಹದ ವೇಳೆ ಸತ್ವಭರಿತ ಉಪಹಾರವನ್ನು ಉಚಿತವಾಗಿ ನೀಡುತ್ತಾ ಬಂದಿದೆ. ಬೆಂಗಳೂರು ನಗರದಲ್ಲಿ ಮೊದಲಿಗೆ 1500 ಬಡಮಕ್ಕಳಿಗೆ ಮಧ್ಯಾನ್ಹದ ಉಪಾಹಾರ ನೀಡುವ ಮೂಲಕ ಆರಂಭವಾದ ಈ ಯೋಜನೆಯು ಇಂದು ಬೃಹದಾಕಾರವಾಗಿ ಬೆಳೆದು ಬಂದಿದೆ. ಬೆಂಗಳೂರು ಸೇರಿದಂತೆ, ದೇಶದ ಐದು ನಗರಗಳಲ್ಲಿ ಐದು ಲಕ್ಷ ಮಕ್ಕಳಿಗೆ ಉಚಿತ ಮಧ್ಯಾನ್ಹದ ವೇಳೆ ಆಹಾರ ನೀಡುತ್ತಲಿದೆ. ಸರ್ಕಾರ ನೀಡುವಂತಹ ಆಹಾರ ಧಾನ್ಯ ಮತ್ತು ಅಡುಗೆ ತಯಾರಿಸಲು ಬರುವ ವೆಚ್ಚವನ್ನು ಬಳಸಿಕೊಳ್ಳಲಾಗುತ್ತದೆ. ದೇಶಾದ್ಯಂತ ಗಮನಾರ್ಹ ಸಾಧನೆ ಮಾಡಿರುವ ಈ ಅಕ್ಷಯ ಪಾತ್ರೆಯ ಉದ್ದೇಶಗಳು ಈ ಕೆಳಕಂಡಂತಿವೆ.

- ಮಕ್ಕಳನ್ನು ಹಸಿವೆಯಿಂದ ಪಾರು ಮಾಡುವುದು. ಹಾಜರಾತಿ ಕಲಿಕಾ ಸುಧಾರಣೆ.
- ಲಿಂಗ ತಾರತಮ್ಯ ಹಾಗೂ ಅಸಮಾನತೆಯನ್ನು ಹೋಗಲಾಡಿಸುವುದು.
- ವಿಶೇಷವಾಗಿ ಬಾಲಕಿಯರ ಸಬಲೀಕರಣ.

ಬೆಂಗಳೂರು ನಗರದಲ್ಲಿ ಮಧ್ಯಾನ್ಹದ ಉಪಹಾರವನ್ನು 533 ಸರ್ಕಾರಿ ಅನುದಾನಿತ ಹಾಗೂ ಕಾರ್ಪೋರೇಷನ್ ಶಾಲೆಗಳ 1.45 ಲಕ್ಷ ವಿದ್ಯಾರ್ಥಿಗಳಿಗೆ ಒದಗಿಸಲಾಗುತ್ತಿದೆ. ಈ ಕಾರ್ಯಕ್ರಮದ ಮೂಲಕ ದುರ್ಬಲ ವರ್ಗದ 1507 ಗರ್ಭಿಣಿ ಹಾಗೂ ಬಾಣಂತಿ ಮಹಿಳೆಯರಿಗೂ ಸಹ ಪೌಷ್ಟಿಕ ಆಹಾರ ಪೂರೈಸಲಾಗುತ್ತಿದೆ.

ಬಡ ಹಾಗೂ ದುರ್ಬಲ ವರ್ಗದ ಜನರು ನಾಗರಿಕತೆಯಿಂದ ದೂರ ಇರುವ ಪ್ರಯಾಣಿಸಲು ಸಾಧ್ಯವಿರದಂತಹ ಸ್ಥಳಗಳಲ್ಲಿ ಶಾಲೆಗಳಿವೆ. ತೀರ ದುರ್ಬಲ ವರ್ಗದವರು ಹೊತ್ತಿನ ಊಟಕ್ಕೂ ಪರದಾಡುವಂತಹ ಅಂಚಿನ ಗುಂಪಿನ ಕುಟುಂಬಗಳು ಆರ್ಥಿಕ, ಸಾಮಾಜಿಕ ಶೈಕ್ಷಣಿಕವಾಗಿ ತೀರ ಹಿಂದುಳಿದವರಾಗಿರುತ್ತಾರೆ. ಇವರು ತಮ್ಮ ಜೀವನ ನಿರ್ವಹಣೆಯ ಕಡೆಯೇ ಗಮನ ಇರುತ್ತದೆಯೇ ವಿನಃ ಭವಿಷ್ಯದ ಬಗ್ಗೆ ಚಿಂತಿಸುವ ಗೋಜಿಗೆ ಹೋಗುವುದಿಲ. ಇರುವಂತಹ ಎಲ್ಲಾ ಮಕ್ಕಳಿಗೆ ಯಾವುದೇ ಶೈಕ್ಷಣಿಕ ಸೌಲಭ್ಯ ಕಲ್ಪಿಸುವಲ್ಲಿ ಅಸಮರ್ಥರಾಗಿರುವಂತಹ ಕುಟುಂಬಗಳು ಇಂದಿಗೂ ಮಾಸಿ ಹೋಗಿಲ್ಲ. ಕೆಲವೊಮ್ಮೆ ಇಂತಹ ಕುಟುಂಬಗಳ ಮಕ್ಕಳು ಶಾಲೆಗೆ ದಾಖಲಾದರೂ ಒಂದು ಹೊತ್ತಿನ ತುತ್ತಿಗೋಸ್ಕರ ಶಾಲೆಯನ್ನು ಮಧ್ಯದಲ್ಲಿಯೇ ತೊರೆಸಿ ಇತರೆ ಕೆಲಸ ಕಾರ್ಯಗಳಲ್ಲಿ ತೊಡಗಿಸಿ ಕೊಳ್ಳುತ್ತಿದ್ದರು. ಇಂತಹ ಸಂದರ್ಭಕ್ಕೆ ಅನುವಾಗಿ ಹಿಂದುಳಿದ ಮುಗ್ಧ ಮಕ್ಕಳ ಶೈಕ್ಷಣಿಕ ಏಳಿಗೆಗಾಗಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಜಾರಿಗೆ ತಂದ ಹಲವಾರು ಯೋಜನೆಗಳಲ್ಲಿ ಬಿಸಿಯೂಟ ಯೋಜನೆಯು ಒಂದು ಆಗಿದ್ದು ಇದು ಬಡ ವರ್ಗದ ಮಕ್ಕಳಿಗಂತೂ ಒಂದು ವರದಾನವೇ ಆಗಿದೆ.

## ಸಾಹಿತ್ಯ ವಿಮರ್ಶೆ

**ಶ್ರೀವಾಸ್ತವ್ (1967)** ರವರು ತಮ್ಮ ಸಂಶೋಧನೆಯಲ್ಲಿ ಕಲಿಕೆಯಲ್ಲಿ ಹಿಂದುಳಿದವರ ಬಗ್ಗೆ ಸಂಶೋಧನೆಯನ್ನು ನಡೆಸಿದ್ದಾರೆ. ಅಧ್ಯಯನಕ್ಕೆ 1837 ವಿದ್ಯಾರ್ಥಿಗಳನ್ನು ಆಯ್ಕೆ ಮಾಡಿಕೊಂಡು ನಾಲ್ಕು ಗುಂಪುಗಳಾಗಿ

ವಿಂಗಡಿಸಿ ಟಿ. ಎ. ಟಿ. ಸ್ಕ್ವೇರ್, ಪೈ ಸಹಸಂಬಂಧ ವಿಧಾನಗಳನ್ನು ಬಳಸಿದ್ದಾರೆ. ಇದರಿಂದ ಮಕ್ಕಳು ಕಲಿಕೆಯಲ್ಲಿ ಹಿಂದುಳಿಯಲು ಹೆಚ್ಚು ಅಭ್ಯಾಸ ಕಾರಣವಾಗುತ್ತದೆ. ಕಡಿಮೆ ಓದುವ ಸಾಮರ್ಥ್ಯ, ಓದುವ ವೇಗ ಸೂಕ್ತವಾಗಿಲ್ಲದಿರುವುದು, ಕಾಗುಣಿತ ದೋಷ, ಪದಸಂಪತ್ತು ಇಲ್ಲದಿರುವುದು. ಸಾಮಾಜಿಕ ಆರ್ಥಿಕವಾಗಿ ಹಿಂದುಳಿದಿರುವುದು. ಮಕ್ಕಳ ಅನಾರೋಗ್ಯ, ಕೌಟುಂಬಿಕ ಸಮಸ್ಯೆಗಳು, ಪೋಷಕರ ಉದ್ಯೋಗ, ಕುಟುಂಬದ ಗಾತ್ರ ಅನುತ್ತೀರ್ಣತೆ ಮುಂತಾದುವು ಕಲಿಕೆಯಲ್ಲಿ ಹಿಂದುಳಿಯಲು ಕಾರಣವೆಂಬುದನ್ನು ಇವರು ಸಂಶೋಧನೆಯಿಂದ ಕಂಡುಬಂದಿದೆ.

ಅಸ್ಕಿ ಎನ್. ವಿ. : **ಶಾಲಾ ಸಂಪನ್ಮೂಲ ನಿರ್ವಹಣೆ** ಸಾರ್ವಜನಿಕ ಶಿಕ್ಷಣ ಇಲಾಖೆ ಬೆಂಗಳೂರು 2009.

ಸಾರ್ವತ್ರಿಕ ಶಿಕ್ಷಣ ಇಲಾಖೆಯ ಅಂತಿಮ ಆಶಯ ಎಲ್ಲಾ ಮಕ್ಕಳು ಕಲಿಕೆಯ ಗುಣಮಟ್ಟದಲ್ಲಿ ಹೆಚ್ಚಿನ ಪ್ರಗತಿಯನ್ನು ಸಾಧಿಸುವುದಾಗಿದೆ. ಈ ಉದ್ದೇಶದ ಈಡೇರಿಕೆಗಾಗಿ ಇಲಾಖೆಯಲ್ಲಿನ ವೃತ್ತಿಪರ ನಿರ್ವಹಣಾ ಕೌಶಲ್ಯವನ್ನು ಹೆಚ್ಚಿಸುವುದು ಹಾಗೂ ಉತ್ತಮ ನಾಯಕತ್ವದ ಗುಣಗಳನ್ನು ಬೆಳೆಸುವುದು. ಅಭಿವೃದ್ಧಿ ಕಾರ್ಯಕ್ರಮದ ಮೂಲ ಉದ್ದೇಶಗಳಲ್ಲಿ ಒಂದಾಗಿದೆ. ಈ ಕಾರ್ಯಕ್ರಮವು 2006 ರ ಶಿಕ್ಷಣ ಇಲಾಖೆ ಮತ್ತು ಸರ್ವಶಿಕ್ಷಾ ಅಭಿಯಾನದ ಮೂಲಕ ಆಯೋಜಿಸಲ್ಪಟ್ಟಿದೆ ವೃತ್ತಿಪರರಿಗೆ ನಿರ್ವಹಣಾ ಕೌಶಲ್ಯದ ತತ್ವಗಳನ್ನು ಪರಿಚಯಿಸಿ ಅವರ ಕಾರ್ಯದಕ್ಷತೆಯನ್ನು ಹೆಚ್ಚಿಸುವ ಯೋಜನೆಯನ್ನು ರೂಪಿಸಲಾಗಿದ್ದು ಶಿಕ್ಷಕರಿಗೆ ಮತ್ತು ಶೈಕ್ಷಣಿಕ ಆಡಳಿತಗಾರರಿಗೆ ಶೈಕ್ಷಣಿಕ ಪ್ರಕ್ರಿಯೆಯಲ್ಲಿ ತುರ್ತು ಅಗತ್ಯವಿರುವ ಕಿರು ಹೊತ್ತಿಗೆಗಳನ್ನು ರಚಿಸಿ ಎಸ್.ಎಸ್.ಎ. ಮೂಲಕ ಇಂತಹ ಹತ್ತು ಹಲವಾರು ಯೋಜನೆಗಳು ಜಾರಿಯಾಗುತ್ತಿದ್ದುದು ಶಿಕ್ಷಣದ ಪ್ರಗತಿಯೇ ಆಗಿದೆ. ಮುಂತಾದ ಮಾಹಿತಿಯ ಬಗ್ಗೆ ವಿವರಿಸಲಾಗಿದೆ.

## ಸಂಶೋಧನಾ ಅಧ್ಯಯನದ ಉದ್ದೇಶಗಳು

ಪ್ರತಿಯೊಂದು ಸಂಶೊಧನೆಯು ತನ್ನದೆಯಾದ ನಿರ್ದಿಷ್ಟ ಉದ್ದೇಶಗಳನ್ನು ಒಳಗೊಂಡಿರುತ್ತದೆ ಈ ದೃಷ್ಟಿಯಿಂದ **'ಹಿಂದುಳಿದ ವರ್ಗದ ಮಕ್ಕಳ ಕಲಿಕಾ ಪ್ರಗತಿ : ಅಕ್ಷರದಾಸೋಹ'** ಎಂಬ ಅಧ್ಯಯನಕ್ಕೆ ಸಂಬಂದಿಸಿದ ಉದ್ದೇಶಗಳು ಈ ಕೆಳಕಂಡಂತಿವೆ.

- ಹಿಂದುಳಿದ ವರ್ಗದ ಮಕ್ಕಳ ಕೌಟುಂಬಿಕಾ ಸ್ಥಿತಿಗತಿಯನ್ನು ತಿಳಿಯುವುದು.
- ಹಿಂದುಳಿದ ವರ್ಗದ ಮಕ್ಕಳ ಕಲಿಕಾ ಪ್ರಗತಿಯ ಬಗ್ಗೆ ತಿಳಿಯುವುದು.
- ಹಿಂದುಳಿದ ವರ್ಗದ ಮಕ್ಕಳ ಶೈಕ್ಷಣಿಕ ಪ್ರಗತಿಯಲ್ಲಿ ಅಕ್ಷರದಾಸೋಹದ ಪಾತ್ರದ ಬಗ್ಗೆ ಗುರುತಿಸುವುದು.

ಸಾಮಾನ್ಯವಾಗಿ ಹಿಂದುಳಿದ ವರ್ಗದ ಮಕ್ಕಳ ಕಲಿಕಾ ಪ್ರಗತಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಹಲವಾರು ಯೋಜನೆಗಳನ್ನು ಜಾರಿಗೆ ತರಲಾಗಿದೆ. ಈ ಯೋಜನೆಗಳಲ್ಲಿ ಸೈಕಲ್ ವಿತರಣೆ ಉಚಿತ ಸಮವಸ್ತ್ರ ಹಾಗು ಪಠ್ಯಪುಸ್ತಕ ವಿತರಣೆಯಂತಹ ಕಾರ್ಯಕ್ರಮಗಳ ಜೊತೆ-ಜೊತೆಯಲ್ಲಿಯೇ ಅಕ್ಷರ ದಾಸೋಹ ಯೋಜನೆಯು ಅತ್ಯಂತ ಪರಿಣಾಮಕಾರಿಯಾದ ಯೊಜನೆಯಾಗಿದೆ. ಇದು ಮಕ್ಕಳ ಕಲಿಕಾ ಪ್ರಗತಿಯಲ್ಲಿ ತನ್ನದೇಯಾದ ಸಹಾಯ ಹಸ್ತವನ್ನು ನೀಡಿತ್ತಿದ್ದು, ಮಕ್ಕಳು ಶೈಕ್ಷಣಿಕ ಪ್ರಗತಿ ಸಾಧಿಸುವಲ್ಲಿ ಯಶಸ್ವಿಯಾದ ಪಾತ್ರ ನಿರ್ವಹಿಸುತ್ತದೆ. ಈ ಯೋಜನೆಯ ಬಗ್ಗೆ ಏನೇ ದೋಷಾರೋಪಗಳು ಕೇಳಿ ಬಂದರೂ ತನ್ನದೇಯಾದ ಚಾಪನ್ನು ಮೂಡಿಸುವಲ್ಲಿ ಮೇಲುಗೈ ಸಾಧಿಸಿದೆ.

## ಅಧ್ಯಯನದ ಮಾದರಿ

ಪ್ರಸ್ತುತ ಅಧ್ಯಯನವು **"ಹಿಂದುಳಿದ ವರ್ಗದ ಮಕ್ಕಳ ಕಲಿಕಾ ಪ್ರಗತಿ ; ಅಕ್ಷರದಾಸೋಹ"** ಎಂಬುದಾಗಿದ್ದು ಹಿಂದುಳಿದ ವರ್ಗದ ಮಕ್ಕಳ ಕಲಿಕೆ ಅಥವಾ ಶಿಕ್ಷಣದಲ್ಲಿ ಅತ್ಯುನ್ನತ ಪ್ರಗತಿ ಸಾಧಿಸುವಲ್ಲಿ ಪ್ರೇರಕವಾದ ಹಲವಾರು ಕಾರ್ಯಕ್ರಮಗಳಲ್ಲಿ ಬಿಸಿಯೂಟ ಯೋಜನೆಯು ಒಂದಾಗಿದೆ. ಅಧ್ಯಯನಕ್ಕೆ ಸಂಬಂಧಿಸಿದಂತೆ ಚಿತ್ರದುರ್ಗ ಜಿಲ್ಲೆಯ ಕುರುಬರಹಳ್ಳಿ ಮತ್ತು ದೇವರಕೊಟ್ಟ ಗ್ರಾಮದ ಸರ್ಕಾರಿ ಪ್ರೌಢಶಾಲೆಯನ್ನು ಅಧ್ಯಯನಕ್ಕೆ ಆಯ್ಕೆ ಮಾಡಿಕೊಳ್ಳಲಾಗಿದೆ, ಪ್ರತಿ ಶಾಲೆಯಲ್ಲಿ 25 ಮಕ್ಕಳಂತೆ ಈ ಎರಡು ಶಾಲೆಯಲ್ಲಿ 50 ಮಕ್ಕಳನ್ನು **ಸರಳ ಯಾದೃಚ್ಛಿಕ** ಮಾದರಿಯ ಲಾಟರಿ ವಿಧಾನದ ಮೂಲಕ ಆಯ್ಕೆ ಮಾಡಿಕೊಂಡು ಸಂದರ್ಶನ ಅನುಸೂಚಿಯನ್ನು ಬಳಸಿಕೊಂಡು ಅವಲೋಕನದ ಸಹಾಯದಿಂದ ಮಾಹಿತಿಯನ್ನು ಸಂಗ್ರಹಿಸಲಾಯಿತು.

## ಸಂಶೋಧನಾ ವಿನ್ಯಾಸ

ಸಾಮಾಜಿಕ ಸಂಶೋಧನೆಯಲ್ಲಿ ಸಂಶೋಧನೆಯ ವಿನ್ಯಾಸವು ಅತ್ಯಂತ ಪ್ರಮುಖವಾದ ಪಾತ್ರವನ್ನು ವಹಿಸುತ್ತಿದೆ. ಪ್ರಸ್ತುತ ಅಧ್ಯಯನದ ದೃಷ್ಟಿಯಿಂದ ಪ್ರಮುಖವಾಗಿ ಹಿಂದುಳಿದ ವರ್ಗದ ಮಕ್ಕಳ ಕಲಿಕಾ ಪ್ರಗತಿ ಹೇಗೆ ಆಗುತ್ತಿದೆ. ಇದಕ್ಕೆ ಪ್ರೇರಕವಾಗಿ ಅಕ್ಷರದಾಸೋಹ ಹೇಗೆ ಕೈಜೋಡಿಸಿದೆ ಎಂಬುದನ್ನು ಆಧರಿಸಿ ಕುರುಬರಹಳ್ಳಿ ದೇವರಕೊಟ್ಟ ಪ್ರೌಢಶಾಲೆಗಳಿಂದ 50 ವಿದ್ಯಾರ್ಥಿಗಳನ್ನು ಆಯ್ಕೆ ಮಾಡಿಕೊಂಡು ಅಧ್ಯಯನ ಮಾಡುವಲ್ಲಿ ವಿವರಣಾತ್ಮಕ ಸಂಶೋಧನಾ ಮಾದರಿ ವಿಧಾನವನ್ನು ಅಳವಡಿಸಿಕೊಳ್ಳಲಾಗಿದೆ.

## ಸಂಶೋಧನೆಯಲ್ಲಿ ಮಾಹಿತಿ ಸಂಗ್ರಹಣೆಯ ಮೂಲಗಳು

ಪ್ರಸ್ತುತ ಅಧ್ಯಯನದಲ್ಲಿ ಸಿದ್ಧಪಡಿಸಿದ ಸಂದರ್ಶನಾನುಸೂಚಿ, ಪ್ರಶ್ನಾವಳಿಯ ಮೂಲಕ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ಮಕ್ಕಳಿಂದ ಪ್ರಾಥಮಿಕ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಇಲ್ಲಿ ಪ್ರಮುಖವಾಗಿ ಹಿಂದುಳಿದ ವರ್ಗದ ಇಡೀ ಸಮುದಾಯದ ಮಕ್ಕಳ ಶೈಕ್ಷಣಿಕ ಪ್ರಗತಿಯ ಬಗೆಗಿನ ಮಾಹಿತಿಯನ್ನಾದರಿಸಿ ಅನೇಕ ಸಂಶೋಧನಾ ಲೇಖನ ಪುಸ್ತಕ ನಿಯತಕಾಲಿಕೆ ಹಾಗೂ ಪ್ರಬಂಧಗಳಿಂದ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಈ ಸಂಶೋಧನಾ ವಿಧಾನಗಳಿಂದ ಸಂಗ್ರಹಿಸಿದ ಮಾಹಿತಿಯನ್ನು ಪಟ್ಟಿ ಮಾಡುವಿಕೆ, ಶೇಕಡಾವಾರು ಕಂಡುಹಿಡಿಯುವಲ್ಲಿ ಸಂಖ್ಯಾಶಾಸ್ತ್ರೀಯ ವಿಧಾನವನ್ನು ಬಳಸಿಕೊಳ್ಳಲಾಗಿದೆ. ಈ ರೀತಿಯಾಗಿ ಸಂಶೋಧನೆಯ ಮಾಹಿತಿಯನ್ನು ವೈಜ್ಞಾನಿಕ ಚೌಕಟ್ಟಿನಲ್ಲಿ ವಿಶ್ಲೇಷಿಸಿ ವರದಿಯನ್ನು ತಯಾರಿಸಲಾಗಿದೆ. ಹಿಂದುಳಿದ ವರ್ಗಗಳು ಬಹುಕಾಲದವರೆಗೆ ಶಾಲೆ ಕಾಲೇಜ್‌ಗಳಲ್ಲಿ ನೃತ್ಯ, ನಾಟಕಶಾಲೆ ಕಲಾಮಂದಿರಗಳಲ್ಲಿ ಅಧ್ಯಯನ ಮಾಡಲು ಅವಕಾಶವಿರಲಿಲ್ಲ, ಬ್ರಿಟಿಷರು ಸಾರ್ವತ್ರಿಕ ಶಿಕ್ಷಣ ಜಾರಿಗೊಳಿಸಿದರೂ, ಅದನ್ನು ಬಹುತೇಕರಿಗೆ ಉಪಯೋಗಿಸಿಕೊಳ್ಳಲಾಗಲಿಲ್ಲ. ಶೈಕ್ಷಣಿಕ ಮಟ್ಟ ರಾಷ್ಟ್ರೀಯ ಸರಾಸರಿಗಿಂತಲೂ ಕಡಿಮೆ ಇತ್ತು. ಕ್ರಮೇಣವಾಗಿ ಹೆಚ್ಚುತ್ತಾ ಬಂದಿದೆ. ಇಂತಹ ವರ್ಗದ ಶ್ರೇಯಸ್ಸಿಗಾಗಿ ಸರ್ಕಾರ ವಿಶೇಷವಾಗಿ ಇವರ ಶಿಕ್ಷಣಕ್ಕೆ ಒತ್ತನ್ನು ನೀಡಿ ಪುಸ್ತಕ, ಉಚಿತಪ್ರವೇಶ, ಶುಲ್ಕದಲ್ಲಿ ರಿಯಾಯಿತಿ ವಿದ್ಯಾರ್ಥಿ

ವೇತನ, ಉಚಿತ ವಿದ್ಯಾರ್ಥಿ ನಿಲಯ ಮುಂತಾದವುಗಳನ್ನು ಉಚಿತವಾಗಿ ನೀಡುವ ಮೂಲಕ ಈ ಮುಗ್ದ ಮಕ್ಕಳನ್ನು ಶಾಲೆಯತ್ತ ಆಕರ್ಷಿಸುವಂತೆ ಮಾಡುವಲ್ಲಿ ಯಶಸ್ವಿಯಾಗುತ್ತಿದೆ. 1983ರಲ್ಲಿ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳು ಪ್ರಾಥಮಿಕ ಶಾಲಾ ಹಂತದಲ್ಲಿ 11.91ರಷ್ಟು ಪ್ರೌಢಶಾಲಾ ಹಂತದಲ್ಲಿ 12.01 ಪ್ರಮಾಣದಲ್ಲಿ ಮಾತ್ರ ಅಧ್ಯಯನ ಮಾಡುತ್ತಿದ್ದರು. ಶಾಲೆಯಿಂದ ಅರ್ಧದಲ್ಲಿಯೇ ಹೊರಬೀಳುವ ಮಕ್ಕಳು ಸಂಖ್ಯೆ ಹಿಂದುಳಿದ ವರ್ಗಗಳಲ್ಲಿಯೇ ಹೆಚ್ಚಿನದಾಗಿ ಕಂಡುಬರುತ್ತಿದೆ .ಅದು ಇಂದಿಗೂ ಸತ್ಯಸಾಭೀತಾಗುತ್ತಿದೆ. ಇಡೀ ದೇಶದಲ್ಲಿಯೇ ಶಿಕ್ಷಣ ಪಡೆಯುವಲ್ಲಿ ಇತ್ತೀಚೆಗೆ ಕ್ರಮೇಣವಾಗಿ ಹೆಚ್ಚುತ್ತಲಿದೆ. ಆರ್ಥಿಕ ಕುಂದು ಕೊರತೆಯನ್ನು ನೀಗಿಸಲು ಸರ್ಕಾರವು ಹಲವಾರು ಸಾಲ ಸೌಲಭ್ಯ ಸಬ್ಸಿಡಿಯನ್ನು ನೀಡುತ್ತಿದ್ದು, ಆರ್ಥಿಕವಾಗಿ ಸಬಲರಾಗಿ ಉತ್ತಮ ಶಿಕ್ಷಣ ಉದ್ಯೋಗ ಪಡೆಯುವಲ್ಲಿ ಮುಂದಾಗುತ್ತಿದ್ದಾರೆ ಆದರೂ ಇನ್ನೂ ಪ್ರಗತಿಪರ ನಿಲುವುಗಳು ಈ ವರ್ಗದಲ್ಲಿ ಹೆಚ್ಚು-ಹೆಚ್ಚು ಮೂಡಿಬರಬೇಕು.

## ಸಂಶೋಧನೆಯಿಂದ ಕಂಡು ಬಂದ ಅಂಶಗಳು

**ಪರಿಶಿಷ್ಟಜಾತಿ ವಿದ್ಯಾರ್ಥಿಗಳ ಆರ್ಥಿಕ ಸ್ಥಿತಿಗತಿ :** ಸಮಾಜದ ಇತರೆ ವರ್ಗಗಳಿಂದ ಪ್ರತ್ಯೇಕಿಸಲ್ಪಟ್ಟ ವರ್ಗವಾಗಿದ್ದು ಸಾಮಾಜಿಕ, ಆರ್ಥಿಕ, ರಾಜಕೀಯ, ಶೈಕ್ಷಣಿಕವಾಗಿ ಹಿಂದುಳಿದಿರುವವರಾಗಿರುತ್ತಾರೆ. ಇವರ ಮೇಲೆ ಹಲವಾರು ದೌರ್ಜನ್ಯಗಳು ಒತ್ತಡಗಳು ನಡೆಯುತ್ತಲೇ ಇವೆ. ಹಾಗೂ ಅಸಮಾನತೆಗಳು ಮುಂದುವರೆದಿವೆ ಇದನ್ನರಿತ ಸರ್ಕಾರವು ಸಂವಿಧಾನದ ಮೂಲಕ ಹಲವಾರು ರೀತಿಯ ಮೀಸಲಾತಿ ಸೌಲಭ್ಯಗಳನ್ನು ಕಲ್ಪಿಸಿದೆ. ಸಾಮಾಜಿಕ ರಕ್ಷಣೆಯ ದೃಷ್ಟಿಯಿಂದ ಅಸ್ಪೃಶ್ಯತೆಯ ಆಚರಣೆಯನ್ನು ನಿವಾರಿಸಲು ಕಾಯ್ದೆಗಳನ್ನು ಜಾರಿಗೆ ತರಲಾಗಿದೆ. ಸಾರ್ವಜನಿಕ ಸ್ಥಳದಲ್ಲಿ ಮುಕ್ತ ಅವಕಾಶ, ಶೈಕ್ಷಣಿಕವಾಗಿ ವಿಶೇಷ ಸೌಲಭ್ಯವನ್ನು ಜಾರಿಗೊಳಿಸಿದಾಗ್ಯೂ ಅಂತಹ ಗಮನಾರ್ಹವಾದ ಬದಲಾವಣೆ ಏನು ಕಂಡುಬಂದಿಲ್ಲ. ಇವರ ಮೇಲಿನ ದೌರ್ಜನ್ಯಗಳು ನಿಂತಿಲ್ಲ. ಯಾವುದೇ ಕ್ಷೇತ್ರದಲ್ಲಿ ಪ್ರಬುದ್ಧತೆಯನ್ನು ಕಂಡುಕೊಳ್ಳಲು ಸಾಧ್ಯವಾಗುತ್ತಿಲ್ಲ. ಆರ್ಥಿಕಸ್ಥಿತಿಯು ಉತ್ತಮವಾಗಿಲ್ಲ. 1991ರ ಜನಗಣತಿಯ ಪ್ರಕಾರ ಶೇ 60-64 ರಷ್ಟು ಪರಿಶಿಷ್ಟ ಜಾತಿಯವರು ಇದ್ದಾರೆ ಕರ್ನಾಟಕದಲ್ಲಿರುವ ಕೃಷ್ಟಿ ಕಾರ್ಮಿಕರು 50 ಲಕ್ಷ ಜನರು ಅದರಲ್ಲಿ 18.29 ಲಕ್ಷ ಪರಿಶಿಷ್ಟಜಾತಿಯವರು ಇದ್ದಾರೆ. ಇಲ್ಲ ಮಹಿಳೆಯರು ಜಮೀನು ಕೂಲಿ ಮತ್ತಿತರ ಕೆಲಸಗಳಲ್ಲಿ ನಿರಂತರವಾಗಿ ದುಡಿಯುತ್ತಿರುವುದು ಕಂಡು ಬಂದಿದೆ.

## ಹಿಂದುಳಿದ ವರ್ಗದ ಪರಿಶಿಷ್ಟ ಜಾತಿಯವರುವ ಹೊಂದಿರು ಕುಟುಂಬದ ಮಾದರಿ

ಮಾನವನು ಅಲೆಮಾರಿ ಜೀವನ ಬಿಟ್ಟು ಒಂದೆಡೆ ನೆಲೆಸಲು ಎಂದು ಆರಂಭಿಸಿದನೋ ಅಂದಿನಿಂದ ವ್ಯವಸ್ಥಿತವಾದ ಕುಟುಂಬ ಸ್ಥಾಪನೆಯಾಗಿ ಒಂದು ರೂಪವನ್ನು ಕಂಡುಕೊಂಡಿತು. ಕುಟುಂಬ ಎಂಬುದು ಮಾನವನಿಗೆ ಅನಿವಾರ್ಯ ಹಾಗೂ ಅವಶ್ಯವಾದ ಅಂಗವಾಗಿದೆ. ಇಂತಹ ಕುಟುಂಬವು ಹಲವಾರು ರೂಪದಲ್ಲಿ ಕಂಡು ಬರುತ್ತಿದ್ದವು. ಅವುಗಳನ್ನು ಈ ಹಿಂದಿನ ಕೋಷ್ಟಕದಲ್ಲಿ ತೋರಿಸಿದೆ.

**ಸೂಚನಾದಾರರ ಕುಟುಂಬದ ವಿವರ ಸೂಚಿಸುವ ಕೋಷ್ಟಕ**

| ಕ್ರ.ಸಂ. | ಕುಟುಂಬದ ವಿವರ | ಆವೃತ್ತಿ | ಶೇಕಡಾವಾರು |
|---|---|---|---|
| 1. | ಅವಿಭಕ್ತ ಕುಟುಂಬ | 02 | 04.00 |
| 2. | ವಿಭಕ್ತ ಕುಟುಂಬ | 48 | 96.00 |
| | ಒಟ್ಟು | 50 | 100.00 |

ಈ ಮೇಲಿನ ಕೋಷ್ಟಕದಿಂದ ತಿಳಿದುಬರುವುದೇನೆಂದರೆ ಶೇ 96 ರಷ್ಟು ಅವಿಭಕ್ತ ಕುಟುಂಬಗಳು, ಕಂಡು ಬಂದಿವೆ. ಕೈಗಾರಿಕಾ ಕ್ರಾಂತಿಯ ಪರಿಣಾಮ ಆಧುನಿಕತೆ ನಾಗರೀಕತೆಯಿಂದ ಸ್ವಾವಲಂಭಿಗಳಾಗಿ ಬದುಕಲು ಇಚ್ಚಿಸುವ ಯುವ ಜನತೆ ಅವಿಭಕ್ತ ಕುಟುಂಬಗಳಿಂದ ಹೊರ ಬಂದು ಸ್ವಂತ ಉದ್ಯೋಗವನ್ನು ಪಡೆದು ಸ್ವತಂತ್ರ ಜೀವನವನ್ನು ನಡೆಸುತ್ತಿರುವುದರಿಂದ ಇವರಲ್ಲಿ ವಿಭಕ್ತ ಕುಟುಂಬಗಳ ಸಂಖ್ಯೆ ಹೆಚ್ಚಾಗಿದ್ದು, ಶೇ. 04 ರಷ್ಟು ಮಾತ್ರ ಸಾಂಪ್ರದಾಯಿಕವಾಗಿ ಮುಂದುವರೆದು ಕೊಂಡು ಬಂದ ಸಾಂಪ್ರದಾಯಿಕವಾದಿ ಅವಿಭಕ್ತ ಕುಟುಂಬಗಳು ಕಂಡು ಬಂದಿವೆ.

## ಪೋಷಕರ ಉದ್ಯೋಗದ ವಿವರ

ವ್ಯಕ್ತಿಯು ಸಮಾಜದಲ್ಲಿ ಹೊಂದಿರುವ ಸಾಮಾಜಿಕ ಆರ್ಥಿಕ ಸ್ಥಾನಮಾನವು ನಿರ್ಧರಿತವಾಗುವುದು ಅವರು ಹೊಂದಿರುವ ಉದ್ಯೋಗದ ಆಧಾರದ ಮೇಲೆ ನಿಂತಿರುತ್ತದೆ. ಉತ್ತಮ ಉದ್ಯೋಗ ಹೊಂದಿರುವ ವ್ಯಕ್ತಿ ಉತ್ತಮ ವೇತನ ಪಡೆಯುತ್ತಾನೆ, ಇದರಿಂದ ವ್ಯಕ್ತಿಯ ಜೀವನ ಮಟ್ಟವು ಉತ್ತಮವಾಗಿರುತ್ತದೆ. ಇದರಿಂದಾಗಿ ಸಾಮಾಜಿಕ ಸ್ಥಾನಮಾನದ ಮೇಲೆ ನೇರವಾಗಿ ಪ್ರಭಾವ ಬೀರುತ್ತದೆ. ಉತ್ತಮ ಆರ್ಥಿಕ, ಶೈಕ್ಷಣಿಕ ಕೌಟುಂಬಿಕ ಜೀವನ ಶೈಲಿಯನ್ನು ಹೊಂದಿರುವವರು ಸಹಜವಾಗಿಯೇ ಮಕ್ಕಳನ್ನು ಉತ್ತಮ ವಿದ್ಯಾಭ್ಯಾಸದಲ್ಲಿ ತೊಡಗಿಸಲು ಮುಂದಾಗುತ್ತಾರೆ. ಇಲ್ಲಿ ಪರಿಶಿಷ್ಟಜಾತಿ ವಿದ್ಯಾರ್ಥಿಗಳ ಪೋಷಕರ ಉದ್ಯೋಗದ ಬಗ್ಗೆ ಮಾಹಿತಿಯನ್ನು ಸಂಗ್ರಹಿಸಲು ಭೇಟಿ ನೀಡಿದಾಗ ಕಂಡು ಬಂದ ಮಾಹಿತಿಯ ವಿವರ ಈ ಕೆಳಕಂಡಂತಿದೆ.

**ಪೋಷಕರ ಉದ್ಯೋಗದ ವಿವರ ಸೂಚಿಸುವ ಕೋಷ್ಟಕ**

| ಕ್ರ.ಸಂ. | ಪೋಷಕರ ಉದ್ಯೋಗದ ವಿವರ | ಆವೃತ್ತಿ | ಶೇಕಡಾವಾರು |
|---|---|---|---|
| 1. | ಸರ್ಕಾರಿ ಉದ್ಯೋಗ | 02 | 04.00 |
| 2. | ಖಾಸಗಿ ಉದ್ಯೋಗ | 05 | 10.00 |
| 3. | ವ್ಯವಸಾಯ | 28 | 56.00 |
| 4. | ವ್ಯಾಪಾರ | 05 | 10.00 |
| 5. | ಕೂಲಿ | 10 | 20.00 |
| | ಒಟ್ಟು | 50 | 100.00 |

ಈ ಮೇಲಿನ ಕೋಷ್ಟಕದಿಂದ ತಿಳಿದುಬರುವುದೇನೆಂದರೆ ಕ್ಷೇತ್ರದಲ್ಲಿ ಕಂಡುಕೊಂಡ ಮಾಹಿತಿಯನ್ನು ಇಲ್ಲಿ ನಮೂದಿಸಲಾಗಿದೆ. ಸರ್ಕಾರಿ ಉದ್ಯೋಗವನ್ನು ಶೇ. 04 ರಷ್ಟು, ಖಾಸಗಿ ಉದ್ಯೋಗವನ್ನು ಶೇ. 10 ರಷ್ಟು, ವ್ಯವಸಾಯ ಮಾಡುವವರು ಶೇ. 56 ರಷ್ಟು, ವ್ಯಾಪಾರ ಮಾಡುವವರು ಶೇ. 10 ರಷ್ಟು, ಕೂಲಿ ಮಾಡುವವರು ಶೇ. 20 ರಷ್ಟು ಇರುವುದು ಕಂಡು ಬಂದಿದೆ. ಬಹುತೇಕವಾಗಿ ಪರಿಶಿಷ್ಟ ಜಾತಿಯವರು ವ್ಯವಸಾಯ ವೃತ್ತಿಯನ್ನು ಆಧರಿಸಿರುವುದು ಕಂಡು ಬಂದಿದೆ.

## ಪೋಷಕರ ಆದಾಯದ ಕುರಿತ ವಿವರ

ಪೋಷಕರು ಬಹುತೇಕವಾಗಿ ಹೆಚ್ಚು ಆದಾಯ ಹೊಂದಿರುವವರು ಉತ್ತಮವಾದ ಜೀವನಾದರ್ಶಗಳನ್ನು ಹೊಂದಿರುತ್ತಾರೆ. ಅವರು

ISSN : 2249-2429

ಹೊಂದಿರುವ ಉದ್ಯೋಗವು ವಾರ್ಷಿಕ ಆದಾಯದ ಪ್ರಮಾಣವನ್ನು ಸೂಚಿಸುತ್ತದೆ. ವಾರ್ಷಿಕ ಆದಾಯವೇ ಆದಾಯದ ಮೂಲವಾಗಿದೆ. ಈ ಕುರಿತು ಕ್ಷೇತ್ರಾಧ್ಯಯನದಿಂದ ಕಂಡುಬಂದ ಮಾಹಿತಿಯ ವಿವರವು ಈ ಕೆಳಕಂಡಂತಿದೆ.

**ಪೋಷಕರ ವಾರ್ಷಿಕ ಆದಾಯ ಸೂಚಿಸುವ ಕೋಷ್ಟಕ**

| ಕ್ರ.ಸಂ. | ಪೋಷಕರ ವಾರ್ಷಿಕ ಆದಾಯ | ಆವೃತ್ತಿ | ಶೇಕಡಾವಾರು |
|---|---|---|---|
| 1. | 10,000–20,000 | 00 | |
| 2. | 20,000–30,000 | 04 | 08.00 |
| 3. | 30,000–40,000 | 20 | 40.00 |
| 4. | 40,000–50,000 | 12 | 24.00 |
| 5. | 50,000–60,000 | 04 | 08.00 |
| 6. | 60,000–70,000 | 08 | 16.00 |
| 7. | 70,000–80,000 | 02 | 04.00 |
| 8. | 80,000–90,000 | 00 | 00.00 |
| 9. | 90,000–1,00,000 | 00 | 00.00 |
| 10. | 1,00,000 ಕ್ಕಿಂತ ಹೆಚ್ಚು | 00 | 00.00 |
| | ಒಟ್ಟು | 50 | 100.00 |

ಈ ಮೇಲಿನ ಕೋಷ್ಟಕದಿಂದ ತಿಳಿದು ಬರುವುದೇನೆಂದರೆ ಶೇ. 08 ರಷ್ಟು 20,000–30,000 ವಾರ್ಷಿಕ ಆದಾಯ ಹೊಂದಿದ್ದರೆ, 30,000–40,000 ವಾರ್ಷಿಕ ಆದಾಯ ಹೊಂದಿರುವವರು ಶೇ. 40 ರಷ್ಟು, 40,000–50,000 ವಾರ್ಷಿಕ ಆದಾಯ ಹೊಂದಿರುವವರು ಶೇ. 24 ರಷ್ಟು, 50,000–60,000 ವಾರ್ಷಿಕ ಆದಾಯ ಹೊಂದಿರುವವರು ಶೇ. 08 ರಷ್ಟು, 60,000–70,000 ವಾರ್ಷಿಕ ಆದಾಯ ಹೊಂದಿರುವವರು ಶೇ. 16 ರಷ್ಟು, 70,000–80,000 ವಾರ್ಷಿಕ ಆದಾಯ ಹೊಂದಿರುವವರು ಶೇ. 04 ರಷ್ಟು, ಇರುವುದು ಕಂಡು ಬಂದಿದೆ.

## ಪೋಷಕರ ವಿದ್ಯಾರ್ಹತೆಯ ವಿವರ

"ಮನೆಯೇ ಮೊದಲ ಪಾಠಶಾಲೆ ಜನನಿತಾನೆ ಮೊದಲ ಗುರು" ಎಂಬಂತೆ ಸುಶಿಕ್ಷಿತ ವಿದ್ಯಾವಂತ ಕುಟುಂಬಗಳು ಮಕ್ಕಳ ವಿದ್ಯಾಭ್ಯಾಸದ ಕಡೆಗೆ ಹೆಚ್ಚಿನ ಗಮನ ನೀಡುತ್ತ ಪ್ರೋತ್ಸಾಹಿಸುತ್ತಾರೆ. ಅವರ ವಿದ್ಯಾರ್ಹತೆಯ ಕುರಿತ ವಿವರ ಕ್ಷೇತ್ರದಿಂದ ಕಂಡು ಬಂದ ಮಾಹಿತಿಯ ಅನ್ವಯ ಈ ಕೆಳಗಿನಂತೆ ನಮೂದಿಸಲಾಗಿದೆ.

**ಪೋಷಕರ ವಿದ್ಯಾರ್ಹತೆಯ ವಿವರ ಸೂಚಿಸುವ ಕೋಷ್ಟಕ**

| ಕ್ರ.ಸಂ. | ಪೋಷಕರ ವಿದ್ಯಾರ್ಹತೆಯ ವಿವರ | ಆವೃತ್ತಿ | ಶೇಕಡಾವಾರು |
|---|---|---|---|
| 1. | ಅನಕ್ಷರತೆ | 20 | 40.00 |
| 2. | ಎಸ್.ಎಸ್.ಎಲ್.ಸಿ. | 11 | 22.00 |
| 3. | ಪಿ.ಯು.ಸಿ. | 06 | 12.00 |
| 4. | ಪದವಿ | 04 | 08.00 |
| 5. | ಟಿ.ಸಿ.ಹೆಚ್. | 00 | 00.00 |
| 6. | ಬಿ.ಇಡಿ., | 00 | 00.00 |
| 7. | 1 ರಿಂದ 9ನೇ ತರಗತಿ | 07 | 14.00 |
| 8. | ಇತರೆ | 02 | 04.00 |
| ಒಟ್ಟು | | 50 | 100.00 |

ಈ ಮೇಲಿನ ಕೋಷ್ಟಕದಿಂದ ತಿಳಿದು ಬರುವುದೇನೆಂದರೆ ಅನಕ್ಷರಸ್ಥರು ಶೇ. 40 ರಷ್ಟು, ಎಸ್.ಎಸ್.ಎಲ್.ಸಿ. ಓದಿರುವವರು ಶೇ. 22 ರಷ್ಟು, ಶೇ. 12 ರಷ್ಟು ಪಿ.ಯು.ಸಿ. ಓದಿರುವವರು, ಪದವಿ ಓದಿರುವವರು ಶೇ 08 ರಷ್ಟು, ಟಿ.ಸಿ.ಹೆಚ್. ಮತ್ತು ಬಿ.ಇಡಿ., ಮಾಡಿರುವ ಸಂಖ್ಯೆ ಕಂಡುಬರುವುದಿಲ್ಲ. 1 ರಿಂದ 9ನೇ ತರಗತಿ ಓದಿರುವವರು ಶೇ. 14 ರಷ್ಟು, ಇತರೆ ಡಿಪ್ಲೋಮ ಕೋರ್ಸನ್ನು ಮಾಡಿರುವವರು ಶೇ. 04 ರಷ್ಟು, ಕಂಡು ಬಂದಿದ್ದಾರೆ. ಆದರೆ ಇಲ್ಲಿ ಅನಕ್ಷರಸ್ಥರ ಸಂಖ್ಯೆ ಹೆಚ್ಚಿನದಾಗಿದೆ. ಏಕೆಂದರೆ ವೃತ್ತಿ ಮುಖ್ಯವಾಗಿ ವ್ಯವಸಾಯವಾಗಿದ್ದು ಹೆಚ್ಚು ಕೆಲಸಕ್ಕೆ ಜನರ ಅವಶ್ಯಕತೆಯಿದ್ದು ಅದರಲ್ಲಿಯೇ ತೊಡಗಿಕೊಳ್ಳುತ್ತಿರುವುದರಿಂದ ಓದಿನ ಕಡೆ ಅಷ್ಟೊಂದು ಗಮನಕೊಡದೆ ಅವಿದ್ಯಾವಂತರಾಗಿಯೆ ಉಳಿದಿದ್ದಾರೆ. ಪ್ರತಿಯೊಬ್ಬ ಪೋಷಕರು ಮಕ್ಕಳನ್ನು ಶಾಲೆಗೆ ದಾಖಲಿಸುವ ಮುನ್ನ ಖಾಸಗಿ ಅಥವಾ ಸರ್ಕಾರಿ ಶಾಲೆಗೆ ಎಂದು ಗೊಂದಲಕ್ಕೆ ಒಳಗಾಗುತ್ತಾರೆ. ಕ್ಷೇತ್ರ ಅಧ್ಯಯನದಿಂದ ಕಂಡುಬಂದ ಮಾಹಿತಿಯ ಪ್ರಕಾರವಾಗಿ ಶೇ. 85 ರಷ್ಟು ಖಾಸಗಿ ಶಾಲೆಯಲ್ಲಿ ಉಳಿದ 15 % ಮಕ್ಕಳು ಸರ್ಕಾರಿ ಶಾಲೆಯಲ್ಲಿ ಓದುತ್ತಿರುವುದು ಕಂಡುಬಂದಿದೆ.

## ಸರ್ಕಾರಿ ಸೌಲಭ್ಯ ಪಡೆಯುತ್ತಿರುವ ವಿವರ

ಸಾರ್ವತ್ರಿಕ ಶಿಕ್ಷಣದ ಸಲುವಾಗಿ ಸರ್ಕಾರ ಹಲವಾರು ಕಾರ್ಯಕ್ರಮಗಳನ್ನು ಕೈಗೊಂಡಿದೆ. ಆದರೆ ಈ ಎಲ್ಲಾ ಸೌಲಭ್ಯಗಳನ್ನು ಪಡೆದುಕೊಂಡಿದ್ದಾರೆಯೆ ಎಂಬುದನ್ನು ಈ ಕೆಳಕಂಡಂತೆ ನಮೂದಿಸಲಾಗಿದೆ.

| ಕ್ರ.ಸಂ. | ಸರ್ಕಾರಿ ಸೌಲಭ್ಯಗಳು | ಆವೃತ್ತಿ | ಶೇಕಡಾವಾರು |
|---|---|---|---|
| 1. | ಸರ್ಕಾರಿ ಉಚಿತ ಪಠ್ಯಪುಸ್ತಕ ಸಮವಸ್ತ್ರ | 00 | 00.00 |
| 2. | ಸೈಕಲ್ ವಿತರಣೆ | 00 | 00.00 |
| 3. | ಸರ್ಕಾರಿ ಮಧ್ಯಾನ್ಹದ ಬಿಸಿಯೂಟ ಯೋಜನೆ | 00 | 00.00 |
| 4. | ಸರ್ಕಾರಿ ವಿದ್ಯಾರ್ಥಿ ವೇತನ ಪ್ರೋತ್ಸಾಹ ಧನ | 00 | 00.00 |
| 5 | ಈ ಮೇಲಿನ ಎಲ್ಲವೂ | 50 | 100.00 |
| | ಒಟ್ಟು | 50 | 100.00 |

ಈ ಮೇಲಿನ ಕೋಷ್ಟಕದಿಂದ ತಿಳಿಯುವುದೇನೆಂದರೆ, ಸರ್ಕಾರ ನೀಡುತ್ತಿರುವ ಅಷ್ಟು ಸೌಲಭ್ಯಗಳನ್ನು ಶೇಕಡ ನೂರಕ್ಕೆ ನೂರರಷ್ಟು ಮಕ್ಕಳು ಪಡೆಯುತ್ತಿದ್ದಾರೆ. ಈ ಮಾಹಿತಿ ಕ್ಷೇತ್ರ ಅಧ್ಯಯನದಿಂದ ಕಂಡುಬಂದಿದೆ.

## ಓದಿಗೆ ಸಂಬಂಧಿಸಿದ ಸಾಮಗ್ರಿಗಳನ್ನು ತಕ್ಷಣಕೊಡಿಸುವ ವಿವರ

ಸಾಮಾನ್ಯವಾಗಿ ಸರ್ಕಾರಿ ಶಾಲೆಯಲ್ಲಿ ವಿದ್ಯಾಭ್ಯಾಸಕ್ಕೆ ಬೇಕಾದ ಹಲವಾರು ಉಚಿತ ಸೌಲಭ್ಯಗಳಿದ್ದಾಗಲೂ, ಮಗುವಿಗೆ ಕೆಲವು ಸಾಮಗ್ರಿಗಳನ್ನು ಪೋಷಕರು ಕೊಡಿಸ ಬೇಕಾಗುತ್ತದೆ. ಈ ಕುರಿತು ಕ್ಷೇತ್ರ ಅಧ್ಯಯನದಲ್ಲಿ ಕಂಡುಬಂದ ಮಾಹಿತಿಯ ವಿವರ ಈ ಕೆಳಗಿನಂತೆ ವಿವರಿಸಲಾಗಿದೆ.

ISSN : 2249-2429


**ಓದಿಗೆ ಸಂಬಂಧಿಸಿದ ಸಾಮಗ್ರಿಗಳನ್ನು ತಕ್ಷಣಕೊಡಿಸುವ ವಿವರ ಕುರಿತ ಕೋಷ್ಟಕ**

| ಕ್ರ.ಸಂ. | ಓದಿಗೆ ಸಂಬಂಧಿಸಿದ ಸಾಮಗ್ರಿಗಳನ್ನು ತಕ್ಷಣಕೊಡಿಸುವ ವಿವರ | ಆವೃತ್ತಿ | ಶೇಕಡಾವಾರು |
|---|---|---|---|
| 1. | ಹೌದು | 48 | 96.00 |
| 2. | ಇಲ್ಲ | 02 | 04.00 |
| | ಒಟ್ಟು | 50 | 100.00 |

ಈ ಮೇಲಿನ ಕೋಷ್ಟಕದಿಂದ ತಿಳಿಯುವುದೇನೆಂದರೆ, ಶೇಕಡ 96 ರಷ್ಟು ಪೋಷಕರು ತಮ್ಮ ಮಕ್ಕಳಿಗೆ ಓದಿಗೆ ಸಂಬಂಧಿಸಿದ ಸಾಮಗ್ರಿಗಳನ್ನು ತಕ್ಷಣ ಕೊಡಿಸುತ್ತಾರೆ. ಶೇ 04 ರಷ್ಟು ಪೋಷಕರು ತಕ್ಷಣ ಕೊಡಿಸಲು ಆಗದೆ ತಡಮಾಡುವುದು ಕಂಡು ಬಂದಿದೆ.

## ಪ್ರತಿದಿನ ಶಾಲೆಗೆ ಬರುವ ರೀತಿ

ಸರ್ವಶಿಕ್ಷಕ ಅಭಿಯಾನದಡಿ ಇಂತಿಷ್ಟು ಕಿಲೋಮೀಟರ್ ಒಳಗೆ ಪ್ರಾಥಮಿಕ ಹಾಗೂ ಪ್ರೌಢಶಾಲೆಯನ್ನು ಸ್ಥಾಪಿಸಿರುವುದರಿಂದ ಮಕ್ಕಳು ಶಾಲೆ ಇರುವಲ್ಲಿಗೆ ವಿದ್ಯಾಭ್ಯಾಸಕ್ಕೆ ತುಂಬ ದೂರ-ದೂರದ ಊರಿನಿಂದ ಬರಬೇಕಾಗುತ್ತದೆ. ಆಗ ಅನಿವಾರ್ಯವಾಗಿ ಇತರೆ ವಾಹನವನ್ನು ಅವಲಂಬಿಸಬೇಕಾಗುತ್ತದೆ. ಎಷ್ಟೋ ಗ್ರಾಮಗಳಲ್ಲಿ ಇಂದಿಗೂ ವಾಹನ ಸೌಲಭ್ಯ ಇಲ್ಲವೇ ಇಲ್ಲ. ಇಂತಹ ಪರಿಸ್ಥಿತಿಗೆ ಅನುಗುಣವಾಗಿ ಸರ್ಕಾರ ಕೈಗೊಂಡ ಉಚಿತ ಸೈಕಲ್ ವಿತರಣೆಯು ಸಾಕಷ್ಟು ಉಪಯೋಗ ವಾಗುತ್ತಲಿದೆ. ಇದರ ಸದುಪಯೋಗ ಪಡೆದಂತಹವರಲ್ಲಿ ಕ್ಷೇತ್ರದಿಂದ ಕಂಡುಬಂದ ಮಾಹಿತಿಯ ಪ್ರಕಾರವಾಗಿ ಶೇ. 60 ರಷ್ಟು ಮಕ್ಕಳು ಸೈಕಲ್ ಅಲ್ಲಿ ಶಾಲೆಯನ್ನು ತಲುಪಿದರೆ, ಶೇ. 20ರಷ್ಟು ಮಕ್ಕಳು ನಡೆದುಕೊಂಡು ಬರುತ್ತಾರೆ, ಶೇ. 15 ರಷ್ಟು ಮಕ್ಕಳು ಆಟೋ ಮತ್ತಿತರ ವಾಹನವನ್ನು ಅವಲಂಬಿಸಿರುವುದು ಹಾಗೂ ಶೇ. 05 ರಷ್ಟು ಮಕ್ಕಳು ಬಸ್ಸಿನಲ್ಲಿ ಬಂದು ಶಾಲೆಯನ್ನು ತಲುಪುತ್ತಿರುವುದು ಕಂಡುಬಂದಿದೆ.

ಒಟ್ಟಾರೆಯಾಗಿ ಹೇಳುವುದಾದರೆ ಈ ವಾಹನ ಸೌಲಭ್ಯದ ಕೊರತೆಯನ್ನು ನೀಗಿಸುವ ಸಲುವಾಗಿ ಉಚಿತ ಸೈಕಲ್ ನೀಡಿದರೂ ಅವುಗಳನ್ನು ಪದೇ-ಪದೇ ರಿಪೇರಿ ಮಾಡಿಸಲಾಗದೇ, ಬಸ್ಸು ಇತರೆ ವಾಹನವನ್ನು ಅವಲಂಬಿಸುತ್ತಿರುವುದು ಕಂಡುಬಂದಿದೆ.

**ಬಿಸಿಯೂಟ ಯೋಜನೆ ಲಾಭದಾಯಕವಾಗಿರುವ ಕುರಿತ ವಿವರ**

| ಕ್ರ.ಸಂ. | ಬಿಸಿಯೂಟ ಯೋಜನೆ ಲಾಭದಾಯಕವಾಗಿರುವ ಕುರಿತ ವಿವರ | ಆವೃತ್ತಿ | ಶೇಕಡಾವಾರು |
|---|---|---|---|
| 1. | ವಿದ್ಯಾಭ್ಯಾಸಕ್ಕೆ | 30 | 60.00 |
| 2. | ಉತ್ತಮ ಆರೋಗ್ಯ | 04 | 08.00 |
| 3. | ಒಗ್ಗಟ್ಟು, ಸಮಾನತೆ | 09 | 18.00 |
| 4. | ಶಿಸ್ತು | 04 | 08.00 |
| 5. | ಏಕಾಗ್ರತೆ | 03 | 06.00 |
| | ಒಟ್ಟು | 50 | 100.00 |

ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಶೈಕ್ಷಣಿಕವಾಗಿ ಹಿಂದುಳಿದ ಪ್ರದೇಶಗಳ ಶಿಕ್ಷಣದ ಏಳಿಗೆಗಾಗಿ ಜಾರಿಗೆ ತಂದ ಹಲವಾರು ಯೋಜನೆಗಳಲ್ಲಿ ಬಿಸಿಯೂಟ ಯೋಜನೆಯು ಒಂದಾಗಿದ್ದು ಇದರಿಂದ ಮಕ್ಕಳಿಗೆ ಯಾವ ರೀತಿ ಪರಿಣಾಮಕಾರಿಯಾಗುತ್ತಿದೆ ಎಂಬುದನ್ನು ಕುರಿತ ವಿವರ ಈ ಕೆಳಗಿನಂತೆ ವಿವರಿಸಲಾಗಿದೆ.

ಈ ಮೇಲಿನ ಕೋಷ್ಟಕದಿಂದ ತಿಳಿಯುವುದೇನೆಂದರೆ, ಹಿಂದುಳಿದ ವರ್ಗದ ಮಕ್ಕಳಿಗೆ ಸರ್ಕಾರ ನೀಡುತ್ತಿರುವ ಸೌಲಭ್ಯಗಳು ಯಾವ ರೀತಿ ಉಪಯುಕ್ತವಾಗುತ್ತಿವೆ ಎಂಬುದನ್ನು ಆಧರಿಸಿ ಇಲ್ಲಿ ವಿವರಿಸಲಾಗಿದೆ. ಶೇ. 60 ರಷ್ಟು ಮಕ್ಕಳಿಗೆ ವಿದ್ಯಾಭ್ಯಾಸಕ್ಕೆ ಅನುಕೂಲವಾಗಿದೆ. ಇದರ ಜೊತೆಗೆ ಶೇ08 ರಷ್ಟು ಮಕ್ಕಳು ಈ ಯೋಜನೆಯಿಂದ ಪ್ರತಿಯೊಬ್ಬರಲ್ಲೂ ಉತ್ತಮ ಆರೋಗ್ಯ ಬೆಳೆಸಿ ಕೊಳ್ಳುವಲ್ಲಿ ಉಪಯುಕ್ತವಾಗಿದೆ ಎಂದರೆ, ಶೇ. 18 ರಷ್ಟು ಮಕ್ಕಳು ಸಮಾನತೆಯನ್ನು, ಒಗ್ಗಟ್ಟು ಬೆಳೆಸಿಕೊಳ್ಳುವಲ್ಲಿ, ಶೇ08 ರಷ್ಟು ಮಕ್ಕಳು ಶಿಸ್ತನ್ನು ಮೈಗೂಡಿಸಿಕೊಳ್ಳುವಲಿ, ಶೇ. 06 ರಷ್ಟು ಮಕ್ಕಳು ಏಕಾಗ್ರತೆಯಿಂದ ಕೂಡಿರಲು ಮನಸ್ಸನ್ನು ಕೇಂದ್ರೀಕರಿಸುವಲ್ಲಿ ಸಹಕಾರಿಯಾಗಿದೆ ಎಂದಿದ್ದಾರೆ. ಬಿಸಿಯೂಟ ವ್ಯವಸ್ಥೆಯಿಂದ ಆಗುತ್ತಿರುವ ಲಾಭದಾಯಕ ಅಂಶಗಳನ್ನು ಅಂಕಿ ಅಂಶ ಸಹಿತ ತಿಳಿಸಲಾಗಿದೆ.

ಒಟ್ಟಾರೆಯಾಗಿ ಹೇಳುವುದಾದರೆ ಬಿಸಿಯೂಟದ ತರುವಾಯ ಮಕ್ಕಳಿಗೆ ಓದಿನ ಕಡೆಗೆ ಒಲವು ಇರುವುದರ ಬಗ್ಗೆ ನೋಡುವುದಾದರೆ, ಹಸಿದವರ ಮುಂದೆ ವೇದಾಂತ ಹೇಳಿದರೂ ಅದು ಫಲಿಸದು, ವ್ಯಕ್ತಿಯ ಸಕ್ರಿಯ ಚಟುವಟಿಕೆಗೆ ಮುಖ್ಯ ಪಾತ್ರವಹಿಸುವುದು ಆಹಾರ ಮಾತ್ರ. ಹೀಗೆ ಎಷ್ಟೋ ಬಡ ಹಿಂದುಳಿದ ಮಕ್ಕಳು ಹೊತ್ತಿನ ತುತ್ತಿಗೋಸ್ಕರ ಶಾಲೆಯನ್ನು ತೊರೆದು ಕೂಲಿ ಮತ್ತಿತರ ಕೆಲಸ ಕಾರ್ಯಗಳಲ್ಲಿ ತೊಡಗುತ್ತಾ ಶಾಲೆಯಿಂದ ದೂರವೇ ಉಳಿಯುತ್ತಿದ್ದರು. ಇಂತಹವರಿಗೆ ವರದಾನವಾಗಿ ಈ ಬಿಸಿಯೂಟ ಯೋಜನೆಯು ಅಸ್ತಿತ್ವಕ್ಕೆ ಬಂದಿದೆ. ಇದರಿಂದಾಗಿ ಎಷ್ಟೋ ಗ್ರಾಮೀಣ ಮಕ್ಕಳಿಗೆ ಆಶ್ರಯವಾಗಿದ್ದು ವಿದ್ಯಾಭ್ಯಾಸ ಮಾಡಲು ಸಹಕಾರಿಯಾಗಿದೆ. ಇದಕ್ಕೆ ಸಂಬಂದಿಸಿದಂತೆ ಮಾಹಿತಿಯು ಈ ಕೆಳಗಿನಂತೆ ಕೋಷ್ಟಕದಲ್ಲಿ ನಮೂದಿಸಲಾಗಿದೆ.

**ಬಿಸಿಯೂಟದ ತರುವಾಯ ಮಕ್ಕಳಿಗೆ ಓದಿನ ಕಡೆಗೆ ಒಲವು ಇರುವುದರ ಕುರಿತ ಕೋಷ್ಟಕ**

| ಕ್ರ.ಸಂ. | ಬಿಸಿಯೂಟದ ತರುವಾಯ ಮಕ್ಕಳಿಗೆ ಓದಿನ ಕಡೆಗೆ ಒಲವು ಇರುವುದರ ಕುರಿತ ವಿವರ | ಆವೃತ್ತಿ | ಶೇಕಡಾವಾರು |
|---|---|---|---|
| 1. | ಆಸಕ್ತಿಯಿಂದ ಕಲಿಯುವುದು | 24 | 48.00 |
| 2. | ಕಲಿಕೆಯಲ್ಲಿ ಕ್ರಿಯಾಶೀಲತೆ | 13 | 26.00 |
| 3. | ನಿರಂತರ ಉತ್ಸುಕತೆ | 07 | 14.00 |
| 4. | ಶಾಲೆಗೆ ಸದಾ ಬರಬೇಕೆಂಬುದು | 03 | 06.00 |
| 5. | ಕೂಲಿಯಿಂದ ದೂರ ಇರುವುದು | 03 | 06.00 |
| | ಒಟ್ಟು | 50 | 100.00 |

ಈ ಮೇಲಿನ ಕೋಷ್ಟಕದಿಂದ ತಿಳಿಯುವುದೇನೆಂದರೆ, ಶೇ. 48 ರಷ್ಟು ಮಕ್ಕಳು ಬಿಸಿಯೂಟ ನೀಡುತ್ತಿರುವುದರಿಂದ ಆಸಕ್ತಿಯಿಂದ ಕಲಿಯುತ್ತಿರುವುದಾಗಿ ತಿಳಿಸಿದ್ದಾರೆ. ಶೇ. 26 ರಷ್ಟು ಮಕ್ಕಳು ಮಧ್ಯಾಹ್ನದ ವೇಳೆ ಮನೆಗೆ ಊಟಕ್ಕೆಂದು ಹೋದರೆ, ವಾಪಸ್ಸು ಬರುವ ಸಂಭವ

ತೀರ ಕಡಿಮೆ ಇರುತಿತ್ತು. ಇದರಿಂದ ಕಲಿಕೆ ಕುಂಠಿತವಾಗುತ್ತಿತ್ತು. ಆದರೆ ಈ ಯೋಜನೆ ಜಾರಿಯಿಂದ ಪ್ರತಿಯೊಬ್ಬರು ಉಪಾಹಾರದ ನಂತರವೂ ಕ್ರಿಯಾಶೀಲತೆಯಿಂದ ಕಲಿಕೆಯಲ್ಲಿ ತೊಡಗುತ್ತಿದ್ದಾರೆ ಎಂಬುದಾಗಿ ತಿಳಿಸಿದ್ದಾರೆ.

ಶೇ. 14ರಷ್ಟು ಮಕ್ಕಳು ನಿರಂತರ ಉತ್ಸುಕರಾಗಿ ವಿದ್ಯಾಭ್ಯಾಸಕ್ಕೆ ಅಣಿಗೊಳಿಸಲು ಸಹಾಯಕವಾಗುತ್ತಿರುವುದಾಗಿ, ಈ ಬಿಸಿಯೂಟ ಯೋಜನೆಯಿಂದಾಗಿ ಶಾಲೆಗೆ ಸದಾ ಬರಬೇಕೆನ್ನಿಸುವುದಾಗಿ ತಿಳಿಸಿದ್ದಾರೆ. ಶೇ. 06 ರಷ್ಟು ಮಕ್ಕಳು ಹೊತ್ತಿನ ಕೂಳಿಗಾಗಿ ಶಾಲೆಯನ್ನು ತೊರೆದು ಕೂಲಿ ಮತ್ತಿತರ ಕೆಲಸ ಕಾರ್ಯಗಳಲ್ಲಿ ನಿತ್ಯ ಕಠಿಣ ಕೆಲಸಗಳಲ್ಲಿ ತೊಡಗ ಬೇಕಾಗುತ್ತಿತ್ತು. ಆದರೆ ಈ ಯೋಜನೆಯ ಜಾರಿಯಿಂದಾಗಿ ಈಗ ಕೂಲಿಯಿಂದ ದೂರ ಉಳಿದು ನಿತ್ಯ ಶಾಲೆಗೆ ಹಾಜರಾಗುತ್ತಿರುವುದಾಗಿ ತಿಳಿಸಿದ್ದಾರೆ.

## ಉಪಸಂಹಾರ

ಇಡೀ ಅಧ್ಯಯನದಿಂದ ತಿಳಿದು ಬರುವುದೇನೆಂದರೆ ಸರ್ಕಾರ ಈ ಯೋಜನೆಯನ್ನು ಜಾರಿಗೆ ತಂದಿರುವುದರಿಂದ ಎಷ್ಟೋ ಬಡಮಕ್ಕಳಿಗೆ ಒಂದು ವರದಾರವೇ ಆಗಿದೆ. ಪ್ರತಿಯೊಬ್ಬರಿಗೂ ಶಿಕ್ಷಣ ಪಡೆಯಲು ಅನುಕೂಲವಾಗುತ್ತಿದೆ. ಶಾಲೆ ಬಿಟ್ಟಿರುವ ಎಷ್ಟೋ ಮಕ್ಕಳು ಪುನಃ ಶಾಲೆಗೆ ಹಾಜರಾಗಿದ್ದಾರೆ. ಇದರಿಂದ ನಿರಂತರ ಕಲಿಕೆಯಲ್ಲಿ ತೊಡಗಿ ಉತ್ತಮ ಶೈಕ್ಷಣಿಕ ಪ್ರಗತಿಯನ್ನು ಹೊಂದುತ್ತಿರುವುದು ಕಂಡು ಬಂದಿದೆ. ಬಹುತೇಕವಾಗಿ ಹಿಂದುಳಿದ ವರ್ಗದ ಮಕ್ಕಳು ವಿದ್ಯಾಭ್ಯಾಸದಲ್ಲಿ ತೊಡಗಿರುವುದು ಕಂಡುಬಂದಿದೆ. ಹೊತ್ತಿನ ತುತ್ತಿಗಾಗಿ ಶಾಲೆಯಿಂದ ಹೊರಗುಳಿದ ಅದಷ್ಟೊ ಮಕ್ಕಳು ಈ ಹಿನ್ನೆಲೆಯಲ್ಲಿ ಬಿಸಿಯೂಟದ ಜೊತೆಗೆ ಮತ್ಯಾವುದೋ ಯೋಜನೆಯಾಗಿರಬಹುದು ಮಕ್ಕಳನ್ನು ಶಾಲೆಯತ್ತ ಆಕರ್ಷಿಸುವಲ್ಲಿ ಯಶಸ್ವಿಯಾಗಿದೆ. ಸಾರ್ವತ್ರಿಕ ಶಿಕ್ಷಣದ ಸಲುವಾಗಿ ನೀಡುತ್ತಿರುವ ಸೌಲಭ್ಯಗಳು ಕೆಲವರ ಕುತಂತ್ರದಿಂದ ತಲುಪುವಲ್ಲಿ ವಿಫಲವಾಗಿತ್ತಿವೆ. ದೇಶದ ಜನಸಂಖ್ಯೆಯಲ್ಲಿ ಕಾಲು ಭಾಗದಷ್ಟು ಜನರು ಹಿಂದುಳಿದ ವರ್ಗದವರಿದ್ದಾರೆ. ಇವರ ಸಂಪೂರ್ಣ ಶೈಕ್ಷಣಿಕ ಅಭ್ಯುದಯವಾಗಬೇಕಾದರೆ, ದಕ್ಷ ಪ್ರಾಮಾಣಿಕ ಕೆಲಸ ನಿರ್ವಹಿಸುವಂತಹ ನಿಷ್ಠಾವಂತ ಅಧಿಕಾರಿಗಳ ಅವಶ್ಯವಿದೆ. **ಉದಾ :** ಉಚಿತವಾಗಿ ನೀಡುವಂತಹ ಸೈಕಲ್ ವಿತರಣೆಯು ಎಷ್ಟರ ಮಟ್ಟಿಗೆ ಯಶಸ್ಸನ್ನು ಕಂಡಿದೆ ಎಂಬುದನ್ನು ಗಮನಿಸುವುದಾದರೆ, ಸೈಕಲ್ ಉಚಿತವಾಗಿ ದೊರೆತರೂ ಹತ್ತುವ ಮೊದಲೇ ಗ್ಯಾರೇಜ್ ತಲುಪುತ್ತಿವೆ. ಇಂತಹ ಸವಲತ್ತುಗಳನ್ನು ಕೊಡುವುದೊ ಎಷ್ಟು ಮುಖ್ಯವೊ ಅದರ ಗುಣಾತ್ಮಕತೆಯು ಅಷ್ಟೇ ಮುಖ್ಯವಾಗಿರುತ್ತದೆ. ಇಂತಹದ್ದರ ಕಡೆಗೆ ಸ್ವಲ್ಪ ಸಂಬಂದಪಟ್ಟವರು ಗಮನಹರಿಬೇಕಾಗುತ್ತದೆ. ಸರ್ಕಾರ ನೀಡುತ್ತಿರುವ ಉಚಿತ ಸೌಲಭ್ಯಗಳಲ್ಲಿ ಬಿಸಿಯೂಟ ಯೋಜನೆಯು ಯಶಸ್ವಿಯಾಗಿ ನಡೆಯುತ್ತದೆ. ಇದರಿಂದಾಗಿ ಅಂಗಿಕೃತ ಗುಂಪಿನ ಹಿಂದುಳಿದ ವರ್ಗದ ಮಕ್ಕಳಿಗೂ ತುಂಬ ಉಪಯುಕ್ತವಾಗಿದೆ. ಅಷ್ಟೆ ಅಲ್ಲದೆ, ಮಕ್ಕಳಲ್ಲಿ ಏಕಾಗ್ರತೆ, ಶಿಸ್ತು , ಸಮಾನತೆಯ ಭಾವನೆ, ಸ್ವಚ್ಛತೆಯನ್ನು ಮೂಡಿಸುವ ಆಸಕ್ತಿಯಿಂದ ಕಲಿಯುವಂತಹದ್ದು ಈ ಎಲ್ಲಾ ದೃಷ್ಟಿಯಿಂದ ಬಿಸಿಯೂಟ ಯೋಜನೆಯು ಒಂದು ಮಹತ್ವದ್ದಾಗಿದ್ದು ಸಾಮಾಜಿಕ ಅಭಿವೃದ್ಧಿ ಹಾಗೂ ಸಮಾನತೆಯನ್ನು ಬೆಳೆಸುವಲ್ಲಿ ಸಹಕಾರಿಯಾಗಿದೆ.

## ಸಲಹೆ ಸೂಚನೆಗಳು

- ಪ್ರತಿಯೊಬ್ಬ ಹಿಂದುಳಿದ ವರ್ಗದ ಕುಟುಂಬದವರು ಮಕ್ಕಳನ್ನು ಸಮಾನವಾಗಿ ಓದಿಸಲು ಮುಂದಾಗಬೇಕು ಉಚಿತ ಸೌಲಭ್ಯಗಳ ಸದುಪಯೋಗ ಮಾಡಿಕೊಳ್ಳಬೇಕು.
- ಪೋಷಕು ಮಕ್ಕಳಿಗೆ ವಿಷಯ ಆಯ್ಕೆಯ ಸ್ವಾತಂತ್ರ ನೀಡಬೇಕು.
- ಶಿಕ್ಷಕರು ಮಕ್ಕಳನ್ನು ಅಂಕಗಳ ಆಧಾರದ ಮೇಲೆ ಅಳೆಯದೆ, ಬೌದ್ಧಿಕತೆಗೆ ಹೆಚ್ಚಿನ ಆದ್ಯತೆ ನೀಡಬೇಕು.
- ಬಿಸಿಯೂಟಕ್ಕೆ ಸಂಬಂಧಿಸಿದಂತೆ ಗುಣಮಟ್ಟದ ಆಹಾರ ಪದಾರ್ಥ ವಿತರಣೆಯಾಗಬೇಕು. ಪ್ರತಿಯೊಂದು ಶಾಲೆಗೂ ಕುಡಿಯುವ ನೀರಿನ ಹಾಗೂ ಅಡುಗೆ ಕೊಠಡಿಯ ಸೌಲಭ್ಯ ಒದಗಿಸಬೇಕು.
- ಶಿಕ್ಷಕ ಮತ್ತು ಪೋಷಕ ವರ್ಗದವರಿಗೊಂದು ಕಿವಿಮಾತೆಂದರೆ ಮಕ್ಕಳು ಒಂದು ವೇಳೆ ಅನುತ್ತೀರ್ಣರಾದರೆ, ಅವರನ್ನು ಟೀಕೆ ಮಾಡದೆ, ಮುಂದಿನ ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹಿಸಬೇಕು.
- ಶಿಕ್ಷಕ ಮತ್ತು ಪೋಷಕ ವರ್ಗದವರು ಎಲ್ಲಾ ಮಕ್ಕಳನ್ನು ಸಮಾನವಾಗಿ ಕಾಣಬೇಕು.
- ಮಕ್ಕಳ ಮಾನಸಿಕ ಮಟ್ಟಕ್ಕೆ ಶಿಕ್ಷಕರು ಇಳಿದು ಬೋಧಿಸಬೇಕು.
- ಪೋಷರು ಹೊತ್ತಿನ ಆಹಾರ ಹಾಗೂ ತತ್ಕಾಲದ ಜೀವನಕ್ಕಾಗಿ ಮಕ್ಕಳನ್ನು ಶಾಲೆಯಿಂದ ದೂರ ಉಳಿಯುವಂತೆ ಮಾಡಿ ಕೂಲಿ ಮತ್ತಿತರ ಕೆಲಸ ಕಾರ್ಯಗಳಲ್ಲಿ ತೊಡಗಿಸಿಕೊಂಡು ಮಕ್ಕಳ ಉಜ್ವಲ ಭವಿಷ್ಯವನ್ನು ಹಾಳು ಮಾಡದೆ, ವಿದ್ಯಾಭ್ಯಾಸದಲ್ಲಿ ತೊಡಗಿಸುವತ್ತ ಗಮನಕೊಡಬೇಕು.
- ಶಿಕ್ಷಕರು ಮಕ್ಕಳಿಗೆ ವಿಷಯ ಅರ್ಥೈಸಲು ನವ-ನವೀನ ಮಾದರಿಯ ಬೋಧನಾ ವಿಧಾನಗಳನ್ನು ಬಳಸಿ ಬೋಧಿಸಬೇಕು.
- ಶಿಕ್ಷಕರು ಮಕ್ಕಳಲ್ಲಿ ಆತ್ಮವಿಶ್ವಾಸ ಪ್ರೀತಿ, ವಾತ್ಸಲ್ಯ, ಸಹಾನೂಭೂತಿಯಿಂದ ಕಾಣಬೇಕು.

## ಆಕರ ಗ್ರಂಥಗಳು


- ವೀರಪ್ಪ. ಎನ್. ಎಸ್. : **'ಶಿಕ್ಷಣಶಾಸ್ತ್ರದ ಪಾರಿಭಾಷಿಕ ನಿಘಂಟು'** ಕನ್ನಡ ಅಧ್ಯಯನ ಸಂಸ್ಥೆ ಮೈಸೂರು ವಿಶ್ವವಿದ್ಯಾಲಯ ಮೈಸೂರು 1981.
- Armand j galfo: **'interpreting educational research',** 3rd edition Mc Brown company publishers Dubuque lowa 1975.
- Carter, good : **Essentios of educational research methodology and design,** plankton century crof, division of Meredith publishing company 440 park, Avenue newyark 1966.
- Gornland Norman, E : Measurement and evaluation in teaching, Third edition Mac- Millian publishing Co- Inc, Newyark 1976.
- Gay L. R. : **Educational research-competencies for Analysis and Application,** 3rd edition merill An infront of Macmilian publishing company no866 third Avenue, Newyark 1990.
- Gilbert sax : **Foundations of educational research,** pretice-Hall, Inc, England cliffs, New yark 1968.
- Kochhar S. K. : **Educational and vocational guidence in secondary schools,** sterling publishing private limited Newdelhi 1984.
- Koul Lokesh : **Methodology of Educational research,** vikas publishing house pvt Ltd, Newdelhi 2007.
- Kothari C. R. : **Research Methodology-Methods and technics,** Second Edition wiley limited, New delhi 1987.
- Max, d engelhart : **Methods of Educational research,** Rand Mc. Nelly and company Chicago.


■■

# ಶಿಕ್ಷಣ ಸೌಧ

ತ್ರೈಮಾಸಿಕ ಶಿಕ್ಷಣ ಮತ್ತು ಸಂಶೋಧನ ಪತ್ರಿಕೆ













*ಚಂದಾ ವಿವರ :*

| | | |
|---|---|---|
| ವಾರ್ಷಿಕ ಚಂದಾ | ₹₹ 500/- | ☐ |
| ತ್ರೈವಾರ್ಷಿಕ ಚಂದಾ | ₹ 1500/- | ☐ |
| ಆಜೀವ ಸದಸ್ಯತ್ವ | ₹ 5000 /- | ☐ |

*ಚಂದಾದಾರರು* : ವಿದ್ಯಾನಿಧಿ ಪ್ರಕಾಶನ, ಗದಗ.

ಈ ಹೆಸರಿನ ಮೇಲೆ ಡಿಡಿ ತೆಗೆಯಿಸಬೇಕು.

ಡಿ.ಡಿ. ಕಳುಹಿಸಬೇಕಾದ ವಿಳಾಸ :

**ಶಿಕ್ಷಣ ಸೌಧ**

ತ್ರೈಮಾಸಿಕ ಶಿಕ್ಷಣ ಮತ್ತು ಸಂಶೋಧನ ಪತ್ರಿಕೆ

**ವಿದ್ಯಾನಿಧಿ ಪ್ರಕಾಶನ**

ಸ್ಟೇಶನ್ ರೋಡ, ಮಹೇಂದ್ರಕರ ಸರ್ಕಲ್ ಹತ್ತಿರ

ಗದಗ – 582101. ಕರ್ನಾಟಕ ರಾಜ್ಯ

ಫೋನ್ : 08372–237527

Email : shikshansoudha@gmail.com

# ಶಿಕ್ಷಣ ಸೌಧ

ತ್ರೈಮಾಸಿಕ ಶಿಕ್ಷಣ ಮತ್ತು ಸಂಶೋಧನ ಪತ್ರಿಕೆ

## ನೂತನ ಚಂದಾದಾರರ ನೋಂದಣಿ ಪ್ರತಿ

Date :

Name : ______________________

Designation : ______________________

______________________

Institution : ______________________

Address : ______________________

______________________

______________________

______________________

Phone Cell No.: ______________________

Fax No. : ______________________

e-mail : ______________________

Magazine
to be sent to : ______________________

______________________

______________________

D.D. No. : ______________________

Dated : ______________________

Amount : ______________________

Drawn on Bank : ______________________


*Institution's Signature*

ಶಿಕ್ಷಣ ತಜ್ಞರು ISSN : 2249-2429

# ಲಿಯೊ ಟಾಲಸ್ಟಾಯ್ (1828-1910)

## (LEO TOLSTOY-1828-1910)

✍ **ಡಾ. ಜೆ. ಜಿ. ರೊಡ್ಡಣ್ಣವರ,** ಕರ್ನಾಟಕ ವಿಶ್ವವಿದ್ಯಾಲಯದ ಶಿಕ್ಷಣ ಮಹಾವಿದ್ಯಾಲಯ, ಧಾರವಾಡ.



ಲಿಯೊ ಟಾಲಿಸ್ಟಾಯ್‌ರವರ ಹೆಸರು ಸಾಹಿತ್ಯ ಕ್ಷೇತ್ರಕ್ಕಿಂತ ಶಿಕ್ಷಣದಲ್ಲಿ ಸ್ಥಿರಸ್ಥಾಯಿಕವಾಗಿ ನಿಂತಿದೆ. ಅದರ ಯುದ್ಧ ಮತ್ತುಶಾಂತಿ ವಿಚಾರಗಳು ಜಾಗತಿಕ ಶಾಂತಿಗೆ ಮುಖ್ಯವಾಗಿದೆ. ಇವರೊಬ್ಬ ಕಾದಂಬರಿಕಾರ ರಾಗಿದ್ದರೂ ಸಹ ತಮ್ಮ ಸ್ವಂತ ಅನುಭವ ಗಳನ್ನು ಕ್ರೂಡಿಸಿ ಸಾಹಿತ್ಯವನ್ನು ನಿರ್ಮಿಸಿದ್ದರೆ. ಶೈಕ್ಷಣಿಕ ವಿಚಾರಗಳನ್ನು ಸಾಹಿತ್ಯದಲ್ಲಿ ಯಥೇಚ್ಛ ವಾಗಿ ಬಳಕೆ ಮಾಡಿರುವದ ರಿಂದ ಶಿಕ್ಷಣದ ಛಾಯೆ ಎಲ್ಲಡೆಗೂ ಪಸರಿಸಿದೆ.

ಟಾಲಾಸ್ಟಾಯ್‌ರವರು ಶಿಕ್ಷಣಕ್ಕೆ ಸಂಬಂಧಿಸಿದಂತೆ ಕೈಗೊಂಡ ಪ್ರಯೋಗಗಳು ಶಾಲೆಯಿಂದಲೇ ಪ್ರಾರಂಭವಾಗುತ್ತವೆ. ಇವರು ಕೈಗೊಂಡ ಕಾರ್ಯಗಳು ತಮ್ಮ ಪೂರ್ವಜರ ಗ್ರಾಮದಲ್ಲಿರುವ ಯಾಸನಾಯಾ ಪೊಲ್ಯಾನಾ ಎಂಬ ಶಾಲೆಯಲ್ಲಿ ಮಾಡಿದವುಗಳ ಅನುಭವ ಹಾಗೂ ಪ್ರಾಯೋಗಿಕ ಫಲಿತಾಂಶಗಳಾಗಿವೆ. ಆದರೇ ಪ್ರಾರಂಭಿಸಿದ ಶಾಲೆಯಲ್ಲಿ ಮೊದಲು ಸೇರ್ಪಡೆಯಾದ ವಿದ್ಯಾರ್ಥಿಗಳ ಸಂಖ್ಯೆ ಕೇವಲ 22 ಮಾತ್ರ, ಆದರೆ ನಂತರದಲ್ಲಿ ಬೃಹತ್ ಸಂಖ್ಯೆಯ ಮಕ್ಕಳನ್ನು ಆಕರ್ಷಣೆ ಮಾಡಲು ಸಾಧ್ಯವಾಯಿತು.

ಟಾಲಸ್ಟಾಯ್ ಪ್ರಾರಂಭಿಸಿದ ಶಾಲೆಯ ಕಾರ್ಯವು ಬೆಳಗಿನ 8.00 ಗಂಟೆಯಿಂದಲೇ ಪ್ರಾರಂಭವಾಗುತ್ತಿತ್ತು, ಪ್ರತಿಯೊಬ್ಬ ಶಿಕ್ಷಕನಿಂದ ದಿನಾಲೂ ಐದರಿಂದ ಆರು ಗಂಟೆಗಳ ಕಡ್ಡಾಯ ಸೇವೆಯನ್ನು ಪಡೆಯಲಾಗುತ್ತಿತ್ತು ಆ ಶಾಲೆಯಲ್ಲಿ ಓದುತ್ತಿರುವ ಮಕ್ಕಳನ್ನು ಮೂರು ಗುಂಪುಗಳಲ್ಲಿ ವಿಂಗಡಿಸಿ ಕಿರಿಯರು, ಮಧ್ಯರು ಮತ್ತು ಹಿರಿಯರೆಂದು ವಿಭಾಗಿಸಲಾಗಿತ್ತು. ಮಕ್ಕಳಿಗೆ ಮನೆಕೆಲಸ (Homework) ನ್ನು ಕೊಡುತ್ತಿರಲಿಲ್ಲ, ಇಲ್ಲಿಯ ಬೋಧನಾ ಪದ್ಧತಿ ಎಂದರೆ ಮುಖ್ಯವಾಗಿ ಮಕ್ಕಳೊಡನೆ ಮುಕ್ತವಾದ ಚರ್ಚೆ ಮಾಡುವುದು, ಓದುವದು, ಬರೆಯುವುದು, ಗಣಿತದ ಸಮಸ್ಯೆಗಳನ್ನು ಬಿಡಿಸುವುದು. ಅಲ್ಲದೆ, ವ್ಯಾಕರಣದ ನಿಯಮಗಳನ್ನು ಸರಿಯಾಗಿ ಅರ್ಥೈಸಿಕೊಂಡು ಭಾಷಾ ಶುದ್ಧತೆಯನ್ನು ಪಡೆಯುವುದು. ಇತಿಹಾಸ ಹಾಗೂ ಭೂಗೋಳವನ್ನು ಅಧ್ಯಯನ ಮಾಡುವಾಗ ಸರಿಯಾಗಿ ದಾಖಲೆ ಪುರಾವೆ ಇಲ್ಲದ್ದಲ್ಲಿ ಯಾವುದನ್ನು ನಂಬುವ ಹಾಗಿಲ್ಲ, ಶಾಲೆಯಲ್ಲಿ ಯಾವತ್ತು ಸ್ವತಂತ್ರ ವಿಚಾರಗಳಿಗೆ ಪ್ರೋತ್ಸಾಹವನ್ನು ನೀಡುವ ಮೂಲಕ ನಿಯಮಗಳನ್ನು ಬದಲಾವಣೆಗೆ ಅವಕಾಶ ಕೊಡಲಾಗಿತ್ತು, ಮಕ್ಕಳ ಬೇಡಿಕೆಗೆ ತಕ್ಕಂತೆ ಪಠ್ಯಕ್ರಮವನ್ನು ಹೊಂದಾಣಿಕೆ ಮಾಡಲು ಶಿಕ್ಷಕರಿಗೆ ಸ್ವಾತಂತ್ರ್ಯ ಕೊಡಲಾಗಿತ್ತು, ಆದಾಗ್ಯೂ ಪಾಲಕರ ಸಲಹೆ-ಸೂಚನೆಗಳನ್ನು ಮಾನ್ಯ ಮಾಡಲಾಗುತ್ತಿತ್ತು, ಟಾಲಸ್ಟಾಯ್‌ರವರೆ ಸ್ವತಃ ಇತಿಹಾಸ, ಗಣಿತ, ಭೌತಶಾಸ್ತ್ರ ಮತ್ತು ವಿಜ್ಞಾನ ವಿಷಯಗಳನ್ನು ಬೋಧಿಸುತ್ತಿದ್ದರು. ಕಿರಿಯರಿಗೆ ಕಥನ ಪದ್ಧತಿಯ ಮೂಲಕ ಬೋಧನೆಯಾದರೆ ಮಧ್ಯಮ ಮತ್ತು ಹಿರಿಯರಿಗೆ ಸಮಸ್ಯೆ ಪರಿಹಾರ ಪದ್ಧತಿಯಿಂದ ಬೋಧಿಸಲಾಗುತ್ತಿತ್ತು.

ಮಕ್ಕಳು ತಪ್ಪಿ ಮಾಡಿದಾಗ ಮತ್ತು ಕೆಳಮಟ್ಟದ ಸಾಧನೆ ಮಾಡಿದಾಗ ಲಘು ಶಿಕ್ಷೆಯನ್ನು ನೀಡಿ ಅವರ ವರ್ತನೆಯಲ್ಲಿ ಬದಲಾವಣೆ ತರಲಾಗುವಂತೆ ಮಾಡಿದೆ. ಟಾಲಸ್ಟಾಯ್‌ರವರ ವಿಚಾರದಲ್ಲಿ ''ಶಾಲಾ ಮಕ್ಕಳು ಸಹ ಪ್ರೌಢರಿದ್ದಂತೆ, ಅವರಿಗೂ ಅದರದೇ ಆದಂತಹ ಅಗತ್ಯತೆ, ವಿಚಾರ ಹಾಗೂ ಅಭಿವ್ಯಕ್ತತೆ ಇರುತ್ತದೆ. ಮಕ್ಕಳು ಯಾವತ್ತು ಹೊಸದನ್ನು ಕಲಿಯ ಬಯಸುತ್ತಾರೆ. ಅದಕ್ಕಾಗಿಯೇ ಶಾಲೆಗೆ ಬರುತ್ತಾರೆ. ಕಲಿಯಲು ಮುಜುಗರವನ್ನು ಹೊಂದಿರುವುದಿಲ್ಲ''. ಅವರ ಈ ವಿಚಾರ ಬಹಳ ಮಹತ್ವದ ಬದಲಾವಣೆಯನ್ನು ಶಿಕ್ಷಣದಲ್ಲಿ ತಂದಿದೆ. ಅಲ್ಲದೇ ಮಗುವಿನ ಆತ್ಮಗೌರವಕ್ಕೆ ಧಕ್ಕೆಯಾಗದಂತೆ ಶಿಕ್ಷಕ ನಡೆದುಕೊಳ್ಳಬೇಕೆಂದಿದ್ದಾರೆ.

ಟಾಲಸ್ಟಾಯ್‌ರ ಶಾಲೆಯಲ್ಲಿ ಕಾರ್ಯನಿರ್ವಹಿಸುವ ಶಿಕ್ಷಕರು ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ನೀಡುವವರಾಗಿದ್ದು, ಸ್ವತಂತ್ರ ಹಾಗೂ ಸೃಜನಾತ್ಮಕತೆಗೆ ಬೆಲೆಕೊಡುತ್ತಿದ್ದರು. ಮಕ್ಕಳ ಆಸಕ್ತಿದಾಯಕ ಭಾಗವಹಿಸುವಿಕೆಗೆ ಮಾನ್ಯತೆ ಇತ್ತು, ಶಿಕ್ಷಕರಾದವರು ವಿದ್ಯಾರ್ಥಿಗಳ ಆಸಕ್ತಿಸಗೆ ತಕ್ಕಂತೆ ಪಠ್ಯಕ್ರಮ ಮತ್ತು ಬೋಧನಾ ಪದ್ಧತಿಯನ್ನು ಬದಲಿಸುತ್ತಿದ್ದರು. ಟಾಲಸ್ಟಾಯ್‌ರ ಶಾಲೆ ವಿಶೇಷವಾಗಿ ಮಕ್ಕಳ ಮನೋಧೋರಣೆ, ಜ್ಞಾನ, ಪ್ರಾವಿಣ್ಯತೆ, ಕೌಶಲಕ್ಕೆ ಹೆಸರುವಾಸಿಯಾಗಿತ್ತು, ಉತ್ತಮ ನಾಗರಿಕರ ನಿರ್ಮಾಣ ಶಾಲೆಯ ಪ್ರಮುಖ ಗುರಿಯಾಗಿಸಿಕೊಂಡು ಬಾಹ್ಯ ಜಗತ್ತಿನ ಸಮಸ್ಯೆಗಳನ್ನು ಅಭ್ಯಸಿಸುವ ಹಾಗೂ ಪರಿಹರಿಸುವ ಕಾರ್ಯ ಮಾಡುತ್ತಿತ್ತು.

### ಶಿಕ್ಷಕರ ಕಾರ್ಯಗಳು

ಶಿಕ್ಷಕರ ಕಾರ್ಯಗಳು ಜಟಿಲವಾಗಿದ್ದು, ಮಕ್ಕಳಿಗೆ ಪುಸ್ತಕೀಯ ಜ್ಞಾನ ಮಾತ್ರ ನೀಡುವುದಲ್ಲ, ಮಕ್ಕಳ ಚಾರಿತ್ರ್ಯ ಮತ್ತು ಬೌದ್ಧಿಕ ಜಾಣ್ಮೆಗೆ ಲಕ್ಷವಹಿಸಬೇಕು. ಮಕ್ಕಳಲ್ಲಿ ಅಡಕವಾಗಿರುವ ಹುಟ್ಟಿನಿಂದ ಬಂದಂತಹ ಗುಣಗಳನ್ನು ಗುರುತಿಸಿ, ಪ್ರೋತ್ಸಾಹಿಸುವುದು ಕೂಡ ಅವರ ಕರ್ತವ್ಯವಾಗಿತ್ತು, ಟಾಲಸ್ಟಾಯ್‌ರ ಶಾಲೆಯು ರಶಿಯಾದಲ್ಲಿ ಬಹಳಷ್ಟು ಪ್ರಸಿದ್ಧಿಯನ್ನು ಗಳಿಸಿತು. ಇವರ ಮಾದರಿಯ ಪ್ರಾಥಮಿಕ ಶಾಲೆಯನ್ನು ನೋಡಲು ದೇಶದ ವಿವಿಧ ಭಾಗಗಳಿಂದ ಪಾಲಕರು, ಸಮಾಜ ಸುಧಾರಕರು, ತಜ್ಞರು ಆಗಮಿಸಹತ್ತಿದರು. 'ಯಾಸನಾಯಾ ಪೊಲ್ಯಾನಾ'ದ ಶಾಲೆ ಮಾನವೀಯ ಮೌಲ್ಯವುಳ್ಳ ಶಿಕ್ಷಣ ನೀಡಿಕೆಗಾಗಿ ಹೆಸರುವಾಸಿಯಾಯಿತು.

ಟಾಲಸ್ಟಾಯ್‌ರವರು ವಿದ್ಯಾರ್ಥಿಯ ಬದುಕನ್ನು ಹಸನಗೊಳಿಸಲು ಶಿಕ್ಷಣವೇ ಮುಖ್ಯವೆಂಬುದನ್ನು ಮನಗಂಡರು. ದೇಶದಲ್ಲಿ ಅನೇಕ ಜನರು ಬಡತನ, ಅಜ್ಞಾನ, ಅನಕ್ಷರತೆಯಿಂದ ಸಾಮಾಜಿಕ ಪಿಡುಗಿನಲ್ಲಿ ತೊಳಲಾಡುತ್ತಿದ್ದರು. ಅವರ ಉದ್ಧಾರದ ಕನಸನ್ನು ತಮ್ಮ ಕಾದಂಬರಿ ಹಾಗೂ ಸಾಹಿತ್ಯದಲ್ಲಿ ವ್ಯಕ್ತಪಡಿಸಿದ್ದಾರೆ.

ಟಾಲಸ್ಟಾಯ್‌ರವರು ಶ್ರೀಮಂತ ಕುಟುಂಬದ ಸದಸ್ಯನಾಗಿದ್ದರೂ ಸಹ ತಮ್ಮ 21ನೇ ವಯಸ್ಸಿನಲ್ಲಿ ಬಡಜನತೆಯ ಮಕ್ಕಳ ಏಳ್ಗೆ ಅವರ ಉದ್ದೇಶವಾಗಿತ್ತು, ದೇಶ ಸೇವೆ ಅವರ ಉದ್ದೇಶವಾಗಿತ್ತು, ಆದ್ದರಿಂದಲೇ ಸೈನ್ಯದಲ್ಲಿ ಮೂರು ವರ್ಷ ಸೇವೆಯನ್ನು ಸಹ ಮಾಡಿರುತ್ತಾರೆ.

ISSN : 2249-2429


ಲಿಯೊ ಟಾಲಸ್ಟಾಯ್ ಆವರದು ಯಾವತ್ತುತೆರದ ಮನಸ್ಸು, ಶಿಕ್ಷಣದ ಪ್ರಯೋಗಗಳನ್ನು ಸಮಾಜಕ್ಕೆ ಮುಟ್ಟಿಸಬೇಕೆಂಬ ಉದ್ದೇಶದಿಂದ. 1857 ರಲ್ಲಿ ಯರೋಪಿನಲ್ಲಿ ಪ್ರವಾಸ ಕೈಗೊಂಡು ಜರ್ಮನಿ, ಫ್ರಾನ್ಸ್, ಸಿಟ್ಜರ್ಲಂಡ್ ಮುಂತಾದ ದೇಶಗಳಿಗೆ ಭೆಟ್ಟಿಕೊಟ್ಟರು. ರಶಿಯಾದಲ್ಲಿ ವಿಫಲವಾದ ಝರಾ ಸಂತತಿಯ ಆಡಳಿತದಿಂದ ಶಿಕ್ಷಣ ಹದಗೆಟ್ಟಿತ್ತು, ಕಾರಣ ಶಿಕ್ಷಣ ಸಂಸ್ಥೆಯೊಂದಕ್ಕೆ ವಹಿಸಿಕೊಡಬೇಕೆಂಬ ಅಭಿಪ್ರಾಯ ಉಳ್ಳವರಾಗಿದ್ದರು.

ಲಿಯೋ ಟಾಲಸ್ಟಾಯ್ ಒಬ್ಬ ಶಿಕ್ಷಣ ಚಿಂತಕರಾಗಿದುದರಿಂದ ಶೈಕ್ಷಣಿಕ ಮಾಸಪತ್ರಿಕೆಯನ್ನು ಪ್ರಾರಂಭಿಸಿದರು. ಉತ್ತಮ ಲೇಖನ ಹಾಗೂ ಶಿಕ್ಷಕರ ತರಬೇತಿ ಮತ್ತು ಸಮಾಜದ ಬೇಡಿಕೆಗಾಗಿ ಶಿಕ್ಷಣವನ್ನು ಹೇಗೆ ಪೂರೈಸಬೇಕೆಂಬುದು ಅದರ ಉದ್ದೇಶವಾಗಿತ್ತು.

ಟಾಲಸ್ಟಾಯ್ ಆಗಿನ ರಶಿಯನ್ ಸಮಾಜ ಮತ್ತು ಶಿಕ್ಷಣದ ಮಧ್ಯದಲ್ಲಿಯ ಕೊಂಡಿಯಂತಿದ್ದರು. ದೇಶದ ಎಲ್ಲ ಜನರಿಗೆ ಶಿಕ್ಷಣ ಬೇಕು. ಆಗ ಮಾತ್ರ ಶೋಷಣೆಯಿಂದ ಹೊರಬರಲು ಸಾಧ್ಯವಿದೆ ಎಂದರು. ನಂತರ ಈ ಜ್ಞಾನ ಪ್ರಸಾರವೇ ರಶಿಯಾದಲ್ಲಿ ಔದ್ಯೋಗಿಕ ಬೆಳವಣಿಗೆಗೆ ಸಹಾಯವಾಯಿತು. ಟಾಲಸ್ಟಾಯ್ ತಮ್ಮ ಬರಹದಲ್ಲಿ ಸಮಾಜದ ವೈಖರಿಯನ್ನು ವಿಮರ್ಶೆಮಾಡಿ, ಬದಲಾವಣೆಯ ಹರಿಕಾರ ಏನಿಸಿದರು. ಇವರ ಬರಹದಲ್ಲಿ ವಿಜ್ಞಾನ ಹಾಗೂ ವಾಸ್ತವಕತೆಗೆ ವಿಶೇಷ ಪ್ರಾಮುಖ್ಯತೆ ನೀಡಲಾಗಿದೆ.

ಟಾಲಸ್ಟಾಯ್ ಸಹ ರೊಸೋವಿನಂತೆ ಮಗುವಿನ ಬಗ್ಗೆ ವಿಶೇಷ ಕಾಳಜಿಯುಳ್ಳವರಾಗಿದ್ದರು. ಮಗು ನಿಷ್ಕಲ್ಮಶ ಮನಸ್ಸು ಹೊಂದಿದ್ದು, ಮೂಲತಃ ಪರಿಪೂರ್ಣವಾಗಿರುತ್ತದೆ ಅದಕ್ಕೆ ಮಾರ್ಗದರ್ಶನವನ್ನು ನೀಡಬೇಕು ಎಂದಿದ್ದಾರೆ. ಇವರು ಪ್ರಾರಂಭಿಸಿದ ಶೈಕ್ಷಣಿಕ ಜರ್ನತ್ (Yasnaya Polyan) ಎಂಬ ಹೆಸರಿನಿಂದಲೇ ಪ್ರಸಿದ್ಧವಾಗಿತ್ತು, ಅಲ್ಲದೇ ಮಕ್ಕಳಿಗಾಗಿಸ 'The Primer and the New Primer' ಎಂಬ ಪುಸ್ತಕವನ್ನು ಪ್ರಕಟಿಸಿದರು. ಈ ಪುಸ್ತಕದಲ್ಲಿ ಮಕ್ಕಳ ಶೀಲ ಹಾಗೂ ಸದ್ಗುಣದ ಸೃಷ್ಟಿಗಾಗಿ ಬರೆಯಲಾಗಿದೆ.

■■

---

– 10 ನೇ ಪುಟದಿಂದ ಮುಂದುವರೆದುದು

ಸಂದರ್ಶನದ ತಂತ್ರಗಳನ್ನು ಅನುಸರಿಸಬಹುದು. ಕಾರಣಗಳನ್ನು ಕಂಡು ಹಿಡಿದ ಮೇಲೆ ಪರಿಹಾರೋಪಾಯಗಳನ್ನು ಸೂಚಿಸಬೇಕು.

**3. ವೈಯಕ್ತಿಕ ಮಾರ್ಗದರ್ಶನ ನೀಡಿಕೆ :** ಮಾರ್ಗದರ್ಶಕನು ಪರಿಹಾರೋಪಾಯಗಳನ್ನು ಸೂಚಿಸಿದ ನಂತರ ವ್ಯಕ್ತಿಯು ತನ್ನ ಸಮಸ್ಯೆಯ ಕಾರಣಗಳನ್ನು ತಿಳಿಯುವಂತೆ ಮಾಡುವನು. ಇದಕ್ಕಾಗಿ ವ್ಯಕ್ತಿಯ ಕೆಲ ಕಾಲ ವರ್ತನೆಯಲ್ಲಿ ಬದಲಾವಣೆ ತರಲು ಪ್ರಯತ್ನಿಸುವನು. ಇದಕ್ಕಾಗಿ ಮಾರ್ಗದರ್ಶಕ ಮನೋವಿಶ್ಲೇಷಣಾ ತಂತ್ರಗಳನ್ನು ಅನುಸರಿಸುವನು. ಇದರ ಉದ್ದೇಶ, ವ್ಯಕ್ತಿಯು ತನ್ನ ವರ್ತನೆಯ ಬದಲಾವಣೆಯಿಂದ ಅಥವಾ ಪರಿಸರದ ಬದಲಾವಣೆಯಿಂದ ಸಮಸ್ಯೆಗಳಿಂದ ಹೊರಬರಲು ಸಹಾಯ ಮಾಡುತ್ತದೆ.

**4. ಉತ್ತರ ಕ್ರಮ ಸೇವೆ :** ವ್ಯಕ್ತಿಗೆ ಮಾರ್ಗದರ್ಶನ ನೀಡಿದ ನಂತರ, ಅದರ ಪ್ರಯೋಜನ ಆ ವ್ಯಕ್ತಿಗೆ ಎಷ್ಟರ ಮಟ್ಟಿಗೆ ಆಗಿದೆ ಎಂಬುದನ್ನು ಮೌಲ್ಯಮಾಪನ ಮಾಡಬೇಕಾದುದು ಅವಶ್ಯಕ, ಇದನ್ನು ಉತ್ತರ ಕ್ರಮ ಎನ್ನುವರು ಇದನ್ನು ಸಂದರ್ಶನದ ಮುಖಾಂತರ ಮಾಡಲಾಗುವದು. ಇದರಿಂದ ವ್ಯಕ್ತಿಯ ಆಸಕ್ತಿ, ಸಾಮರ್ಥ್ಯ, ತಿಳಿದುಕೊಂಡು ಮುಂದಿನ ಮಾರ್ಗದರ್ಶನದ ರೀತಿಯನ್ನು ನಿರ್ದರಿಸಲಾಗುವುದು.

## ಉಪಸಂಹಾರ

ಒಟ್ಟಿನಲ್ಲಿ ''ಮಾರ್ಗದರ್ಶನ''ವನ್ನು ಶಾಲೆಯಲ್ಲಿ ಶಿಕ್ಷಕರು ಮತ್ತು ಮುಖ್ಯೋಪಾಧ್ಯಾಯರು ಅದರ ಬಗ್ಗೆ ಆಸಕ್ತಿ ವಹಿಸಿ ಮಕ್ಕಳ ಸಮಸ್ಯೆಗಳಿಗೆ, ತೊಂದರೆಗಳಿಗೆ ಕಾರಣಗಳನ್ನು ತಿಳಿದು ಪರಿಹಾರೋಪಾಯಗಳನ್ನು ಸೂಚಿಸಲು/ನೀಡಲು ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು. ಈ ನಿಟ್ಟಿನಲ್ಲಿ ಪಾಲಕರ ಮಾರ್ಗದರ್ಶನ, ಸೇವಾ ಸಿಬ್ಬಂದಿಯ ನೆರವನ್ನು ಪಡೆದು ಮಾರ್ಗದರ್ಶನ ಕಾರ್ಯಕ್ರಮಗಳನ್ನು ಯೋಜಿಸಿ, ಸಂಯೋಜಿಸಿ, ಸಂಘಟಿಸುವುದರ ಮೂಲಕ ಈ ಕಾರ್ಯಕ್ರಮದ ಯಶಸ್ಸಿಗೆ ಪ್ರಯತ್ನಿಸ ಬೇಕಾದುದು,ಅವರ ಆದ್ಯ ಕರ್ತವ್ಯವಾಗಿದೆ.

## ಆಕರ ಗ್ರಂಥಗಳು


- ಡಾ. ಎನ್. ಬಿ. ಕೊಂಗವಾಡ (1999) : ಶೈಕ್ಷಣಿಕ ಮನೋವಿಜ್ಞಾನ, ವಿದ್ಯಾನಿಧಿ ಪ್ರಕಾಶನ, ಗದಗ.
- ಜಿ. ಎನ್. ದೇಸಾಯಿ ಮತ್ತು ಡಾ. (ಶ್ರೀಮತಿ) ಎಸ್. ಜಿ. ದೇಸಾಯಿ (1999) : ಶೈಕ್ಷಣಿಕ ಮನೋವಿಜ್ಞಾನ ಮತ್ತು ಮೌಲ್ಯಮಾಪನ ಮತ್ತು ಅಳತೆಗಳು, ವಿದ್ಯಾನಿಧಿ ಪ್ರಕಾಶನ, ಗದಗ.
- ಡಾ. ಐ. ಎ. ಲೋಕಾಪೂರ : ಶೈಕ್ಷಣಿಕ ಮತ್ತು ವೃತ್ತಿ ಮಾರ್ಗದರ್ಶನ, ವಿದ್ಯಾನಿಧಿ ಪ್ರಕಾಶನ, ಗದಗ.
- ಡಾ. ಜಗದೀಶ ಬಸಾಪೂರ : ಶೈಕ್ಷಣಿಕ ಮನೋವಿಜ್ಞಾನ
- ಆರ್. ಜಿ. ಪ್ರಭು : ಶೈಕ್ಷಣಿಕ ಮಾರ್ಗದರ್ಶನ ಸಮಾಲೋಚನೆ , ವಿದ್ಯಾನಿಧಿ ಪ್ರಕಾಶನ, ಗದಗ.


■■

---

– 12 ನೇ ಪುಟದಿಂದ ಮುಂದುವರೆದುದು

ಸರ್ವತೋಮುಖ ಬೆಳವಣಿಗೆಗಾಗಿ ಹಾಗೂ ಶಿಕ್ಷಣದ ಗುಣಾತ್ಮಕ ಮತ್ತು ಪರಿಣಾಮಾತ್ಮಕ ಅಭಿವೃದ್ಧಿಗಾಗಿ ಉತ್ತಮ ರೀತಿಯಲ್ಲಿ ಮಾರ್ಗದರ್ಶನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಬೇಕು.

## ಆಕರ ಗ್ರಂಥಗಳು


- **Kochhar S. K.** (1996) - Educational and Vocational Guidance in Secondary Schools, Streling Publishers Private Limited.
- **Neclannavar C. M.** (1999) - Principles of Management
- **Kochhar S. K.** (1979) - Guidance in Indian Education
- ಡಾ.ಎನ್. ಬಿ. ಕೊಂಗವಾಡ (2004) – 'ಶೈಕ್ಷಣಿಕ ಮನೋವಿಜ್ಞಾನ' ವಿದ್ಯಾನಿಧಿ ಪ್ರಕಾಶನ, ಗದಗ.
- ಡಾ. ಆಯ್. ಎ. ಲೋಕಾಪುರ (2004) – ''ಶೈಕ್ಷಣಿಕ ಮತ್ತುವೃತ್ತಿಮಾರ್ಗ ದರ್ಶನ'', ವಿದ್ಯಾನಿಧಿ ಪ್ರಕಾಶನ, ಗದಗ.
- ಕೆ.ಎನ್. ರಾಜಶೇಖರಯ್ಯ (2004) – ''ಶಿಕ್ಷಣದಲ್ಲಿವೃತ್ತಿಮಾರ್ಗದರ್ಶನ ಮತ್ತುಸಲಹೆ''
- ಡಾ.ಬಿ.ಜಿ. ಬಾರ್ಕಿ ಮತ್ತು ಡಾ.ಬಿ.ಎಮ್. ಮುಖ್ಯೋಪಾಧ್ಯಾಯ (2004) – ''ಮಾರ್ಗದರ್ಶನ ಮತ್ತುಸಲಹೆ''


■■